ಮಹಿಳಾ ಕಥಾ ಸಾಹಿತ್ಯ : ತಾತ್ವಿಕ ಸ್ವರೂಪ

(ಹೊಸ ತಲೆಮಾರಿನ ಕಥೆಗಾರ್ತಿಯರನ್ನು ಅನುಲಕ್ಷಿಸಿ)

(ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್. ಪದವಿಗಾಗಿ ಸಲ್ಲಿಸಿರುವ ಸಂಪ್ರಬಂಧ)

ಸಂಶೋಧನಾ ವಿದ್ಯಾರ್ಥಿನಿ
ಶಕೀಲಾ.ಕೆ

ಮಾರ್ಗದರ್ಶಕರು
ಡಾ.ಎನ್.ಅಮರೇಶ
ಪ್ರಾಧ್ಯಾಪಕರು
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
೨೦೦೮-೦೯

"ಮಹಿಳಾ ಕಥಾಸಾಹಿತ್ಯ : ತಾತ್ವಿಕ ಸ್ವರೂಪ"

(ಹೊಸ ತಲೆಮಾರಿನ ಕಥೆಗಾರ್ತಿಯರನ್ನು ಅನುಲಕ್ಷಿಸಿ)

(ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್. ಪದವಿಗಾಗಿ ಸಾದರ ಪಡಿಸಿರುವ ಸಂಪ್ರಬಂಧ)

ಸಂಶೋಧನಾ ವಿದ್ಯಾರ್ಥಿನಿ

ಶಕೀಲಾ.ಕೆ

ಮಾರ್ಗದರ್ಶಕರು

ಡಾ.ಎನ್.ಅಮರೇಶ

ಪ್ರಾಧ್ಯಾಪಕರು

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ಭಾಷಾ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೦೮-೦೯

ಮಾರ್ಗದರ್ಶಕರ ದೃಢೀಕರಣ ಪತ್ರ

"ಮಹಿಳಾ ಕಥಾಸಾಹಿತ್ಯ : ತಾತ್ವಿಕ ಸ್ವರೂಪ" (**ಹೊಸ ತಲೆಮಾರಿನ ಕಥೆಗಾರ್ತಿಯರನ್ನು ಅನುಲಕ್ಷಿಸಿ**) ಎಂಬ ಸಂಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್, ಪದವಿಗಾಗಿ **ಶಕೀಲಾ.ಕೆ** ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ಸಂಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ :

ಸ್ಥಳ : ಕನ್ನಡ ವಿಶ್ವವಿದ್ಯಾಲಯ, ಹಂಪಿ

ಡಾ.ಎನ್.ಅಮರೇಶ
ಮಾರ್ಗದರ್ಶಕರು
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

<u>ಸಂಶೋಧಕರ ಪ್ರಮಾಣ ಪತ್ರ</u>

"ಮಹಿಳಾ ಕಥಾಸಾಹಿತ್ಯ : ತಾತ್ವಿಕ ಸ್ವರೂಪ" (ಹೊಸ ತಲೆಮಾರಿನ ಕಥೆಗಾರ್ತಿಯರನ್ನು ಅನುಲಕ್ಷಿಸಿ) ಎಂಬ ಸಂಪ್ರಬಂಧವನ್ನು ಡಾ. ಎನ್.ಅಮರೇಶ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಎಂ.ಫಿಲ್, ಪದವಿಗಾಗಿ ಭಾಷಾನಿಕಾಯದ ಕನ್ನಡ ಸಾಹಿತ್ಯ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಸಂಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಲಿ, ಸಲ್ಲಿಸಿರುವುದಿಲ್ಲವೆಂದು ಪ್ರಮಾಣಿಕರಿಸುತ್ತೇನೆ.

ದಿನಾಂಕ : ೦೮. ೧೦. ೨೦೦೯

ಸ್ಥಳ : ಕನ್ನಡ ವಿಶ್ವವಿದ್ಯಾಲಯ, ಹಂಪಿ

ಶಕೀಲಾ. ಕೆ

ಸಂಶೋಧನಾ ವಿದ್ಯಾರ್ಥಿನಿ

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

ಪರಿವಿಡಿ

ಅಧ್ಯಾಯ - ಒಂದು

ಅಧ್ಯಯನದ ಉದ್ದೇಶ, ಮಹತ್ವ, ವ್ಯಾಪ್ತಿ ಮತ್ತು ವಿಧಾನ

ಅಧ್ಯಾಯ - ಒಂದು

ಅಧ್ಯಯನದ ಉದ್ದೇಶ, ಮಹತ್ವ, ವ್ಯಾಪ್ತಿ ಮತ್ತು ವಿಧಾನ

ಪ್ರಸ್ತಾವನೆ

ಆಧುನಿಕ ಕನ್ನಡ ಸಾಹಿತ್ಯವು ಹಲವಾರು ಪ್ರಕಾರಗಳಲ್ಲಿ ಬೆಳೆದಿದೆ, ಬೆಳೆಯುತ್ತಲೂ ನಡೆದಿದೆ. ಆಧುನಿಕ ಕನ್ನಡದ ಮೊದಲ ತಲೆಮಾರಿ ಲೇಖಕರು ಬಹುಪ್ರಕಾರಗಳಲ್ಲಿ ಸಾಹಿತ್ಯ ರಚಿಸಿ ಕನ್ನಡ ಸಾಹಿತ್ಯವನ್ನು ಬಲಪಡಿಸದ್ದಾರೆ.ಲೇಖಕರು ತಮ್ಮ ಜೀವನಾನುಭವವನ್ನು ಚಿಂತನೆಗಳನ್ನು ಅಭಿವ್ಯಕ್ತಿಸಲು ಬಹುಪ್ರಕಾರಗಳಲ್ಲಿ ಸಾಹಿತ್ಯ ರಚಿಸಿದ್ದರೂ, ಸಾಮಾನ್ಯವಾಗಿ ಅವರ ಒಲವು ಕಾವ್ಯದ ಕಡೆಗೆ ಆಧುನಿಕರಾಗಿದ್ದಾರೂ, ಪ್ರಾಚೀನ ಅಥವಾ ಸಾಹಿತ್ಯ ಪರಂಪರೆಯ ಹಿನ್ನಲೆಯಲ್ಲಿ ಮಹಾಕಾವ್ಯವನ್ನು ರಚಿಸುವುದು ಅವರ ಗುರಿಯಾಗಿತ್ತು. ಏಕೆಂದರೆ ಕಾವ್ಯಕ್ಕೆ ದೊಡ್ಡ ಪರಂಪರೆಯಿದೆ. ಕಾವ್ಯವು ಜೀವನಾನುಭವಗಳ ಅಭಿವ್ಯಕ್ತಿಗೆ ಸೂಕ್ತವಾದ ಪ್ರಕಾರವೆಂದು ಭಾವಿಸಿದ್ದರು, ಆದ್ದರಿಂದ ಆಧುನಿಕ ಕನ್ನಡ ಮೊದಲ ತಲೆಮಾರಿನ ಲೇಖಕರು ಕಾವ್ಯವನ್ನು ಮುಖ್ಯ ಅಭಿವ್ಯಕ್ತಿ ಪ್ರಕಾರವೆಂದು ಭಾವಿಸಿ ಕಾವ್ಯ ರಚಿಸಿದರು. ಕಾವ್ಯ ಬಿಟ್ಟರೆ ಕಾದಂಬರಿ ಒಂದು ಮಹತ್ವದ ಪ್ರಕಾರವಾಗಿ ನಿಂತಂತೆ ಕಾಣುತ್ತದೆ. ದೈತ್ಯ ಲೇಖಕರು ಎಲ್ಲಾ ಪ್ರಕಾರಗಳಲ್ಲಿ ಬರೆಯುತ್ತಾರೆ. ಬೇಂದ್ರೆ, ಕುವೆಂಪು, ಮಾಸ್ತಿ, ಕಾರಂತ, ಡಿ.ವಿ.ಜಿ ಮುಂತಾದವರು ಇದಕ್ಕೆ ಉದಾಹರಣೆ.

ಆಧುನಿಕ ಸಾಹಿತ್ಯ ಪ್ರಕಾರಗಳಲ್ಲಿ ಸಣ್ಣಕಥೆಯು ಒಂದು ಇದನ್ನು 'ಮೈನರ್ ಫಾರ್ಮ್' ಎಂದು ಕರೆಯುತ್ತಾರೆ. ವಿಸ್ತಾರವಾದ ಬದುಕಿನ ಅನುಭವವುಳ್ಳವರು ಆಳ, ಅಗಲದ ಚಿಂತನೆವುಳ್ಳವರು ಕಾವ್ಯ ಕಾದಂಬರಿ ಪ್ರಕಾರದಲ್ಲಿ ಬರೆಯುತ್ತಾರೆ. ಸಣ್ಣ ಕಥೆ ಪ್ರಕಾರದಲ್ಲಿ ವಿಸ್ತಾರವಾದ ಜೀವನಾನುಭವವುಳ್ಳವರು ತಮ್ಮ ಅನುಭವಗಳನ್ನು ಅಭಿವ್ಯಕ್ತಿಸಲು ಕಥೆ ಪ್ರಕಾರ ಸೂಕ್ತವಲ್ಲವೆಂದು ಭಾವಿಸುತ್ತಾರೆ. ಈ ಕಾರಣದಿಂದ ನವೋದಯ ಸಾಹಿತ್ಯ ಸಂದರ್ಭದಲ್ಲಿ ಬೇರೆ ಪ್ರಕಾರಗಳು ಬೆಳೆದಂತೆ ಸಣ್ಣ ಕಥಾ ಸಾಹಿತ್ಯ ಪ್ರಕಾರ ಬೃಹತ್ ಆಗಿ ಬೆಳೆಯಲಿಲ್ಲ. ಹಾಗೆಂದು ಈ ಪ್ರಕಾರವನ್ನು ನಿರ್ಲಕ್ಷಿಸಿಲ್ಲ. ಕುವೆಂಪು, ಬೇಂದ್ರೆ,

ಕಾರಂತ ಮುಂತಾದ ದೊಡ್ಡ ಲೇಖಕರು ಕೂಡ ಸಣ್ಣ ಕಥೆಗಳನ್ನು ಬರೆದಿದ್ದಾರೆ. ಮಾಸ್ತಿಯವರು ಮಾತ್ರ ಸಣ್ಣಕಥಾ ಪ್ರಕಾರವನ್ನು ನೆಚ್ಚಿಕೊಂಡರು, ತಮ್ಮ ಲೋಕಾನುಭವವನ್ನು ಅಭಿವ್ಯಕ್ತಿಸಲು ಸಣ್ಣಕಥೆಯೇ ಸೂಕ್ತವಾದ ಪ್ರಕಾರವೆಂದು ಭಾವಿಸಿದರು. ನೂರು ಕಥೆಗಳನ್ನು ಬರೆದು ಕನ್ನಡದಲ್ಲಿ 'ಸಣ್ಣಕಥೆಗಳ ಜನಕ' ಎಂದು ಕರೆಸಿಕೊಂಡಿದ್ದಾರೆ.

ವಸಾಹತುಶಾಹಿ ಆಡಳಿತ ಆರಂಭವಾದ ಮೇಲೆ ನಾಡು, ನಾಡಿನಲ್ಲಿ ಅನೇಕ ಬದಲಾವಣೆಗಳು ಆರಂಭವಾದವು. ಆಧುನೀಕತೆ ಬೆಲೆಯಲಾರಂಭಿಸಿತು. ಸಮಾಜ ಹೊಸ ಆಲೋಚನೆಗಳಿಗೆ ಒಳಗಾಯಿತು. ಅನೇಕ ಕ್ಷೇತ್ರಗಳಲ್ಲಿ ಹೊಸ ಬೆಳವಣಿಗಳು ಕಂಡವು. ಇದರಿಂದ ಸಂಪ್ರದಾಯ, ಸಮಾಜ, ಸಮುದಾಯಗಳು ಆಧುನೀಕತೆಗೆ ಎದುರಾದವು. ಅನೇಕ ಸಂಘರ್ಷಗಳುಂಟಾದವು. ಇದರ ಪರಿಣಾಮಗಳನ್ನು ಮಾಸ್ತಿ ಆದಿಯಾಗಿ ಆ ಕಾಲದ ಲೇಖಕರು ತಮ್ಮ ಕಥೆಗಳಲ್ಲಿ ಅಭಿವ್ಯಕ್ತಿಸಿದ್ದಾರೆ. ಸಮಾಜದಲ್ಲಾಗುವ ಬದಲಾವಣೆಗಳನ್ನು ಬಿಕ್ಕಟ್ಟು, ಸಂಘರ್ಷಗಳೊಂದಿಗೆ ಚಿತ್ರಿಸಿದ್ದಾರೆ.

ಎರಡನೇ ತಲೆಮಾರಿನ ಲೇಖಕರು ಅಭಿವೃದ್ಧಿಯಾಗುತ್ತಿರುವ ಸಮಾಜದಲ್ಲಿ ವ್ಯಕ್ತಿ ಮತ್ತು ಸಮಾಜದ ಸಂಬಂಧವನ್ನು ಕುರಿತು ಆಲೋಚಿಸಿದರು, ವ್ಯಕ್ತಿ ವಿಶಿಷ್ಟತೆಯನ್ನು ಎತ್ತಿ ಹಿಡಿದರು. ಇವರ ಸಾಹಿತ್ಯವನ್ನು ಕನ್ನಡದಲ್ಲಿ ನವ್ಯ ಸಾಹಿತ್ಯ ಎಂದು ಗುರುತಿಸಲಾಗಿದೆ. ಮುಖ್ಯವಾಗಿ ಯು.ಆರ್.ಅನಂತಮೂರ್ತಿ, ಲಂಕೇಶ್, ಚಿತ್ತಾಲ, ಬಿ.ಸಿ.ರಾಮಚಂದ್ರಶರ್ಮ, ದೇಸಾಯಿ ಮುಂತಾದ ಕಥಾ ಲೇಖಕರು ನಗರ ಕೇಂದ್ರಿತ ಆಧುನಿಕ ಪ್ರಜ್ಞೆಯ ವ್ಯಕ್ತಿಯನ್ನು ಅವನ ಉಸಿರುಗಟ್ಟುವ ಅನುಭವಗಳನ್ನು ಕಥೆಗಳಲ್ಲಿ ಅಭಿವ್ಯಕ್ತಿಸಿದ್ದಾರೆ.

ಮುಂದುವರೆದಂತೆ ಕನ್ನಡದಲ್ಲಿ ಬಂಡಾಯ, ದಲಿತ ಸಾಹಿತ್ಯ ಚಳುವಳಿ ಕಾಣಿಸಿಕೊಂಡಿತು. ಬಡವರು, ಅಲಕ್ಷಿತರು ಸಮಾಜದ ಅಂಚಿನಲ್ಲಿರುವವರು ಮುಂತಾದವರು ಅಕ್ಷರ ಕಲಿತು ಮೊದಲ ಬಾರಿಗೆ ತಮ್ಮ ವಿಶಿಷ್ಟ ಅನುಭವಗಳನ್ನು ಸಾಹಿತ್ಯ ಲೋಕಕ್ಕೆ ಪರಿಚಯಿಸಿದರು. ಈ ಸಾಹಿತ್ಯ ಚಳುವಳಿಯಲ್ಲಿ ದೇವನೂರು ಮಹಾದೇವ, ಕುಂ. ವೀರಭದ್ರಪ್ಪ, ಬೋಳವಾರು, ಬಾನುಮುಷ್ತಾಕ, ಬಿ.ಟಿ.ಲಲಿತನಾಯಕ್, ರಾಮಣ್ಣ ಮುಂತಾದವರು ನಿಕೃಷ್ಟ ಬದುಕನ್ನು ತಮ್ಮ ಕಥಾ ಲೋಕದ ಮೂಲಕ ಅಭಿವ್ಯಕ್ತಿಸಿ ಹೊಸ ಸಂವೇದನೆಯನ್ನು ತಂದರು. ಕಥಾ ಸಾಹಿತ್ಯ ಇವರಿಂದ ಹೊಸ ಆಯಾಮಾ ಪಡೆಯಿತು.

ಎಂಭತ್ತು ಮತ್ತು ತೊಂಭತ್ತರ ದಶಕದವರೆಗೆ ದಲಿತ ಬಂಡಾಯ ಸಾಹಿತ್ಯ ಚಳುವಳಿಯ ಪ್ರಭಾವ ಕಾಣುತ್ತದೆ. ತೊಂಭತ್ತರಿಂದ ಈಚೆಗೆ ಪ್ರಭಾವ ಕಡಿಮೆಯಾಗಿ ಚಳುವಳಿಗಳೇ ಇಲ್ಲದಂತಾದವು ಚಳುವಳಿಗಳು ಇದ್ದರೆ ಸಾಹಿತ್ಯಕ್ಕೆ ಒಂದು ರೂಪ ಬರುವುದನ್ನು ಕಂಡಿದ್ದೇವೆ. ಆದರೆ ಚಳುವಳಿಗಳು ಇಲ್ಲದ ಕಾಲದಲ್ಲಿಯೂ ಸಾಹಿತ್ಯ ರಚನೆ ನಿಂತಿಲ್ಲ. ಈ ದಶಕಗಳಲ್ಲಿ ಹೊಸ ತಲೆಮಾರಿನವರು ತಮ್ಮದೇ ತಾತ್ವಿಕ ನೆಲೆಯಲ್ಲಿ ಸಾಹಿತ್ಯ ರಚಿಸುತ್ತಿದ್ದಾರೆ. ಅದರಲ್ಲೂ ಕಥಾ ಸಾಹಿತ್ಯ ಪ್ರಕಾರ ಹೆಚ್ಚು ವಿಶಿಷ್ಟವಾಗಿ

ಬೆಳೆಯುತ್ತಾ ಬರುತ್ತಿದೆ. ಈ ದಶಕಗಳಲ್ಲಿ ಕಥೆಗಾರ್ತಿಯರು ಮುಂಚೂಣಿಯಲ್ಲಿದ್ದಾರೆ. ಪ್ರಮುಖವಾಗಿ ರೇಖಾರಾಣಿ, ಬಿ.ಟಿ.ಜಾಹ್ನವಿ, ಸುನಂದಾ ಪ್ರಕಾಶ ಕಡಮೆ, ಸುಮಂಗಲ, ಸಂಧ್ಯಾ ಹೊನಗುಂಟಿಕರ್, ಶಾಂತಕುಮಾರಿ, ಕೆ.ರಾಜಲಕ್ಷ್ಮಿ, ಹೆಚ್.ನಾಗವೇಣಿ, ಮುಂತಾದ ಮಹಿಳೆಯರು ಕಥಾ ಸಾಹಿತ್ಯದಲ್ಲಿ ಉತ್ತಮ ಸಾಧನೆ ಮಾಡುತ್ತಿದ್ದಾರೆ.

ಅಧ್ಯಯನದ ಉದ್ದೇಶ

ಈ ಅಧ್ಯಯನಕ್ಕೆ ಒಳಪಡುವ ಹೊಸ ತಲೆಮಾರಿನ ಕಥೆಗಾರ್ತಿಯರನ್ನು ಮತ್ತು ಅವರ ಸಾಹಿತ್ಯ ಕಳೆದ ಒಂದು ಒಂದೂವರೆ ದಶಕದಲ್ಲಿರಚನೆಗೊಂಡಿದೆ. ಈ ಕಾಲಾವಧಿಯಲ್ಲಿ ಯಾವುದೇ ಸಾಹಿತ್ಯಿಕ ಚಳುವಳಿಗಳು ಕ್ರಿಯಾಶೀಲವಾಗಿಲ್ಲ. ಹೆಸರಿನಿಂದ ಗುರುತಿಸುವ ಯಾವ ಸಾಹಿತ್ಯಿಕ ಚಳುವಳಿ ಹುಟ್ಟಿಕೊಂಡಿಲ್ಲ, ಹುಟ್ಟಿಕೊಳ್ಳುವ ಸೂಚನೆಗಳು ಕಂಡು ಬರುವುದಿಲ್ಲ ಎಂದು ತೋರುತ್ತವೆ. ಆದರೂ ಕಥಾ ಸಾಹಿತ್ಯ, ರಚನೆಯಾಗುತ್ತಿದೆ. ಈ ಕಥಾ ಸಾಹಿತ್ಯದ ಒಲವು ನಿಲುವುಗಳು ದೃಷ್ಟಿಧೋರಣೆಗಳು ಮತ್ತು ಕಥನ ಕ್ರಮದ ವಿಧಾನಗಳನ್ನು ಅಧ್ಯಯನಕ್ಕೆ ಒಳಪಡಿಸುವ ಉದ್ದೇಶದಿಂದ ಕಥೆಗಾರ್ತಿಯರ ಕಥಾ ಸಾಹಿತ್ಯವನ್ನು ಪರಿಗಣಿಸಲಾಗಿದೆ.

ಅಧ್ಯಯನದ ಮಹತ್ವ

ಸಾಮಾನ್ಯವಾಗಿ ಆಧುನಿಕ ಸಾಹಿತ್ಯ ಸಂದರ್ಭದಲ್ಲಿ ಮತ್ತು ಸಾಹಿತ್ಯ ಚಳುವಳಿಗಳ ಸಂದರ್ಭದಲ್ಲಿ ಮಹಿಳೆ ಇವುಗಳಲ್ಲಿ ಭಾಗಿಯಾಗಿ ಬರೆದದ್ದು ಕಡಿಮೆ. ನವೋದಯ, ನವ್ಯ ಪ್ರಗತಿಶೀಲ ಮುಂತಾದ ಸಾಹಿತ್ಯಿಕ ಚಳುವಳಿಗಳ ಕಾಲದಲ್ಲಿ ಮಹಿಳೆಯರು ಬರೆಯುತ್ತಿದ್ದರು. ಈ ಚಳುವಳಿಗಳ ನೆಲೆಯಿಂದ ಅವರ ಸಾಹಿತ್ಯ ರಚನೆಯಾಗಿಲ್ಲವೆಂದು ಹೇಳಬಹುದು. ಆದರೆ ಶತಮಾನದ ಉದ್ದಕ್ಕೂ ಮಹಿಳೆಯರು ತಮ್ಮದೇ ಆದ ಅನುಭವಗಳ ಚಿಂತನೆಗಳ ಹಿನ್ನಲೆಯಲ್ಲಿ ಮಹಿಳೆಯರ ಸಮಸ್ಯೆಗಳನ್ನು ಕುರಿತು ಸಾಹಿತ್ಯ ರಚಿಸಿದ್ದಾರೆ. ದಲಿತ ಬಂಡಾಯ ಸಂದರ್ಭದಲ್ಲಿ ಕಾಣಿಸಿಕೊಂಡ ಸ್ತ್ರೀ ಬರಹಗಾರರು ಆ ಚಳುವಳಿಯ ಹಿನ್ನಲೆಯಲ್ಲಿ ಬರೆದಿರುವುದನ್ನು ಕಾಣಬಹುದು. ಪ್ರಸ್ತುತ ಸಂದರ್ಭದಲ್ಲಿ ಕಾಣಿಸಿಕೊಂಡ ಸುನಂದಾ ಪ್ರಕಾಶ ಕಡಿಮೆ, ರೇಖಾರಾಣಿ, ಬಿ.ಟಿ.ಜಾಹ್ನವಿ, ಸಂಧ್ಯಾ ಹೊನಗುಂಟಿಕರ, ಎಚ್.ನಾಗವೇಣಿ, ಶಾಂತಕುಮಾರಿ, ಡಾ.ವಿನಯಾ, ಎಂ.ಎಸ್.ವೇದಾ, ಸುಮಂಗಲಾ, ಕೋಡಿಬೆಟ್ಟು ರಾಜಲಕ್ಷ್ಮಿ ಮುಂತಾದವರು ಭಿನ್ನ ಸಮುದಾಯದ, ಭಿನ್ನ ವೃತ್ತಿ, ಭಿನ್ನ ಸಾಂಸ್ಕೃತಿಕ ನೆಲೆಯಿಂದ ಸಾಹಿತ್ಯ ಲೋಕವನ್ನು ಪ್ರವೇಶಿಸಿದವರು. ಸಾಹಿತ್ಯ ಸಾಹಿತ್ಯೇತ್ತರ ವಲಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರೂ ಕಥಾ ರಚನೆ ಇವರ ಹವ್ಯಾಸವಾಗಿದೆ. ಮಹಿಳೆಯನ್ನು ಕುರಿತು ಹೊಸ ಬಗೆಯಲ್ಲಿ ಇವರು ಯೋಚಿಸುವವರಾಗಿದ್ದಾರೆ. ಮಹಿಳೆಯ ಬದುಕು, ಭವಿಷ್ಯ ಸಮಕಾಲೀನ ಸಂದರ್ಭದೊಂದಿಗೆ ಚಿತ್ರಿಸುವ ಇವರ ಕಥಾಸಾಹಿತ್ಯ ಕನ್ನಡ ಕಥಾಸಾಹಿತ್ಯಕ್ಕೆ ಹೊಸ ಸೇರ್ಪಡೆಯಾಗಿದೆ. ಇವರುಗಳ ಕಥೆಗಳ ಮೂಲಕ ಇವರ ಚಿಂತನಾ ಕ್ರಮವನ್ನು ಗ್ರಹಿಸಲು ಈ ಅಧ್ಯಯನದಲ್ಲಿ ಪ್ರಯತ್ನಿಸಲಾಗುವುದು.

ಅಧ್ಯಯನದ ವ್ಯಾಪ್ತಿ ಮತ್ತು ವಿಧಾನ

ಇತ್ತೀಚೆಗೆ ಅಧ್ಯಯನಕ್ಕೆ ಒಳಗೊಳ್ಳುವ ಕಥೆಗಾರ್ತಿಯರು ರೇಖಾರಾಣಿ "ಪ್ರೀತಿಯಲ್ಲಿ ಕ್ಷಮೆಯಿರಲಿ", ಬಿ.ಟಿ.ಜಾಹ್ನವಿ "ಹುಡುಕಾಟ", "ಕಳೆದುಕೊಂಡವರು ಮತ್ತು ಇತರ ಕಥೆಗಳು", ಎಚ್.ನಾಗವೇಣಿ "ನಾಕನೇ ನೀರು", "ಮೀಯುವ ಆಟ", ಕೋಡಿಬೆಟ್ಟು ರಾಜಲಕ್ಷ್ಮಿ "ಒಂದು ಮುಷ್ಠಿ ನಕ್ಷತ್ರ", ಸುಮಂಗಲ "ಜುಮುರುಮಳೆ", ಸುನಂದಾ ಪ್ರಕಾಶ ಕಡಮೆ "ಪುಟ್ಟಪಾದದ ಗುರುತು", "ಗಾಂಧೀ ಚಿತ್ರದ ನೋಟು", ಶಾಂತಕುಮಾರಿ "ಮುಟ್ಟು", ಎಂ.ಎಸ್.ವೇದಾ "ಪ್ರೀತಿ ಮತ್ತುಸಾವು", "ಪಾಲು", ಸಂಧ್ಯಾ ಹೊನೆಗುಂಟಿಕರ "ಹರಿದ ಹಾಸಿಗೆ ಹಂಬಲ" ಇತ್ಯಾದಿ. ಹೊಸ ತಲೆಮಾರಿಗೆ ಸೇರಿದ ಈ ಕಥೆಗಾರ್ತಿಯರ ಕಥಾಸಾಹಿತ್ಯವನ್ನು ಅಧ್ಯಯನ ಮಾಡುವಾಗ ಸ್ತ್ರೀವಾದವನ್ನು ಗಮನದಲ್ಲಿರಿಸಿಕೊಳ್ಳಲಾಗುವುದು. ಈವತ್ತಿನ ಮಹಿಳೆಯರ ಸಮಸ್ಯೆಗಳು, ಬಿಕ್ಕಟ್ಟುಗಳು, ಪರಿಹಾರಗಳನ್ನು ಕುರಿತು ಯೋಚಿಸುತ್ತಾ ಸಂಭವನೀಯ ಜಗತ್ತಿನಲ್ಲಿ ಮಹಿಳೆಯ ಸ್ಥಾನಮಾನಗಳನ್ನು ಗ್ರಹಿಸುವುದಕ್ಕೆ ಪ್ರಯತ್ನಿಸಲಾಗುವುದು. ಬಹಳ ಮುಖ್ಯವಾಗಿ ಕಥೆಗಳ ಆಶಯಕ್ಕಿಂತ ಭಿನ್ನವಾಗಿ ಕಥಾರಚನೆಯ ಸಂವಿಧಾನದ ತಾತ್ವಿಕತೆಯನ್ನು ಗುರುತಿಸಲಾಗುವುದು. ಕಥಾ ಶರೀರದ ಕಡೆಗೆ ಶರೀರದ ರಚನೆಗಳಿಗೆ ಹೆಚ್ಚು ಗಮನ ಕೊಡಲು ಪ್ರಯತ್ನಿಸಲಾಗುವುದು ಅಂದರೆ ಅಭಿವ್ಯಕ್ತಿ ವಿಧಾನವನ್ನು ಶೋಧಿಸಲಾಗುವುದು.

ಅಧ್ಯಾಯ - ಎರಡು

ಕಥೆಗಳನ್ನು ಕುರಿತ ಅಧ್ಯಯನಗಳ ತಾತ್ವಿಕ ಸಮೀಕ್ಷೆ

ಮಹಿಳೆ ಬರೆಯಬಲ್ಲಳೇ ಎಂಬ ಪ್ರಶ್ನೆಗೆ ಸಂಶಯವೇ ಕಾಣಲಾಗಿತ್ತು. ಆದರೆ ಮಹಿಳೆ ಇಪ್ಪತ್ತನೆಯ ಶತಮಾನದಲ್ಲಿ ತನ್ನನ್ನು ಸಾಹಿತ್ಯದಲ್ಲಿ ತೊಡಗಿಸಿಕೊಂಡು ವಿವಿಧ ಪ್ರಕಾರಗಳಾದ ಕಥೆ ಕಾದಂಬರಿಗಳಲ್ಲಿ ತನ್ನದೇ ಆದ ಸಾಧನೆಯನ್ನು ತೋರಿದ್ದಾರೆ. ೨೦ನೇ ಶತಮಾನದ ಮೂರನೇ ದಶಕದಿಂದ ಕಥಾ ಸಾಹಿತ್ಯದಲ್ಲಿ ಲೇಖಕಿಯರ ಸಾಧನೆಯನ್ನು ಗುರುತಿಸಲಾಗಿದೆ. ಮಹಿಳಾ ಕಥಾ ಸಾಹಿತ್ಯಕ್ಕೆ ಒಂದು ಪರಂಪರೆ ನಿರ್ಮಾಣವಾಗಿದ್ದು, ಈ ಪರಂಪರೆಯಲ್ಲಿ ನಾಲ್ಕು ಪೀಳಿಗೆಗಳನ್ನು ಸ್ಪಷ್ಟವಾಗಿ ಗುರುತಿಸಲಾಗಿದೆ. ಶ್ಯಾಮಲಾ ಬೆಳಗಾಂವಕರ, ಸರಸ್ವತಿ ರಾಜವಾಡೆ, ಗೌರಮ್ಮ ಇತ್ಯಾದಿ ಮೊದಲನೆಯ ಪೀಳಿಗೆಯ ಲೇಖಕಿಯರು ಇವರು ಎದುರಿಸಿದ ಮುಖ್ಯ ಪ್ರಶ್ನೆ ಸಾಮಾಜಿಕವಾದದ್ದು, ಈ ಸಂದರ್ಭದಲ್ಲಿ ಪುರುಷಪ್ರಧಾನ ಸಮಾಜದಲ್ಲಿ ಸ್ತ್ರೀ ಒಬ್ಬ ವ್ಯಕ್ತಿಯಾಗಿ ಗುರುತಿಸಲ್ಪಡದೆ ಪತ್ನಿ, ವಿಧವೆ, ವೇಶ್ಯೆ ಹೀಗೆ ಪುರುಷನ ಸಂಬಂಧದಲ್ಲಿಯೇ ಗುರುತಿಸಲ್ಪಡುವುದರಿಂದ ಅವಳಿಗೆ ಸ್ವತಂತ್ರ್ಯವಾದ ಅಸ್ತಿತ್ವವಾಗಲಿ, ಅದರ ಕಲ್ಪನೆಯಾಗಲಿ ಇರಲಿಲ್ಲ, ಈ ಪೀಳಿಗೆಯ ಲೇಖಕಿಯ ಕತೆಗಳಲ್ಲಿಬರುವ ಸ್ತ್ರೀಯರು ಈ ಅವಸ್ಥೆಯ ಸಂಕೇತಗಳಾಗಿದ್ದು ಇಂತಹ ಪರಿಕಲ್ಪನೆಯನ್ನು ಲೇಖಕಿಯ ಬರವಣಿಗೆಯ ಮೂಲಕ ಕೃತಿಯಲ್ಲಿಮೂಡಿಸುವುದೇ ಪ್ರತಿಭಟನಾತ್ಮಕವಾಗಿ ಕಂಡು ಬರುತ್ತದೆ.

ಇವರ ನಂತರ ಬಂದ ಎರಡನೆಯ ಪೀಳಿಗೆಯ ಲೇಖಕಿಯರಲ್ಲಿ ಕ್ರಾಂತಿಕಾರಕ ಬದಲಾವಣೆ ಕಾಣದೇ ಹೋದರು, ಅಸ್ಮಿತತೆಯ ತಿಳಿವು ಜಾಗೃತವಾಗಿ ವ್ಯವಸ್ಥೆಯ ವಿರುದ್ಧ ಧನಿ ಎತ್ತಿ, ಪ್ರತಿಭಟನೆಯನ್ನು ಕೃತಿಯ ಮೂಲಕ ಕಾಣಿಸಿದರು. ಈ ಪೀಳಿಗೆಯ ಲೇಖಕಿಯರಲ್ಲಿ ಅನುಪಮ ನಿರಂಜನ ಮತ್ತು ತ್ರಿವೇಣಿಯರು ಪ್ರಧಾನವಾಗಿ ಕಂಡು ಬರುತ್ತಾರೆ. ವೈಜ್ಞಾನಿಕ ಹಾಗೂ ಮನೋಜ್ಞಾನಿಕ ಒಳನೋಟಗಳನ್ನು ಹೊಂದಿದ ಈ ಲೇಖಕಿಯರು ಸಣ್ಣಕತೆಯ ಮಾಧ್ಯಮಕ್ಕೆ ಹೊಸ ಆಳ ವಿಸ್ತಾರಗಳನ್ನು ಒದಗಿಸಿದರು. ಸ್ತ್ರೀಯನ್ನು ಕೇವಲ ಬಲಿಪಶುವಾಗಿ ಕಾಣದೆ ಅವಳಲ್ಲಿ ಸ್ವತಂತ್ರ್ಯ, ಸ್ವಯಂ ಶಕ್ತಿಯನ್ನು ಗುರುತಿಸುವುದರ ಮೂಲಕ ಹೊಸ ಪ್ರತಿಮೆಗಳನ್ನು ನೀಡಿದರು.

ಸ್ವಾತಂತ್ರ್ಯೋತ್ತರದ ಕಾಲದಲ್ಲಿ ಬರೆಯ ತೊಡಗಿದ ಲೇಖಕಿಯರಲ್ಲಿ ವೀಣಾ ಹಾಗೂ ರಾಜಲಕ್ಷ್ಮಿ ಪ್ರಮುಖರಾಗಿದ್ದಾರೆ. ಇವರು ತಮ್ಮ ಕಥೆಗಳಲ್ಲಿ ಬದುಕಿನ ಸಂಕೀರ್ಣತೆಯನ್ನು ಮೂಡಿಸಿದ್ದರು. ಸೂಕ್ಷ್ಮ ಮನಸ್ಸಿನ ಹೆಣ್ಣೊಬ್ಬಳು ತನ್ನೊಳಗಿನ ಭಾವನೆಗಳಿಗೆ ಮುಖಾಮುಖಿಯಾಗುವ ತಾನು ಬಯಸಿದ ಆದರ್ಶಗಳನ್ನು ವಾಸ್ತವತೆಗೆ ತರುವ ಆಧುನಿಕ ಹೆಣ್ಣೊಬ್ಬಳ ಚಿತ್ರಣ ವೀಣಾ ಅವರ ಕಥೆಗಳಲ್ಲಿ ವ್ಯಕ್ತವಾಗಿದೆ. ಇವರ ಕಥೆಗಳಲ್ಲಿ ಬಹುಪಾಲು ನಾಯಕಿಯರು ಆತ್ಮವಿಶ್ವಾಸ ಪ್ರತಿಭಟನೆ ಧನಿಯಿರುವವರಾಗಿದ್ದಾರೆ. ಎಪ್ಪತ್ತರ ದಶಕದ ಕೊನೆಯಲ್ಲಿ ಕಾಣಿಸಿಕೊಂಡ ವೈದೇಹಿ ಕಥೆಗಳಲ್ಲಿ ಸಾಂಪ್ರದಾಯಿಕ ಕುಟುಂಬ ವ್ಯವಸ್ಥೆಯಲ್ಲಿ ಹೆಣ್ಣು ಅನುಭವಿಸುವ ಹಿಂಸೆ, ಕ್ರೌರ್ಯ ಮುಖ್ಯವಾಗಿದೆ. ಸ್ವಾಭಿಮಾನಿ ಸ್ತ್ರೀ ಪಾತ್ರಗಳಿರುವಂತೆ, ಗಟ್ಟಿಯಾದ ಪುರುಷ ಚಿತ್ರಗಳ ಕೊರತೆಯಿದೆ. ಅಸ್ಮಿತತೆಯ ಹುಡುಕಾಟದಲ್ಲಿ ಎರಡನೇ ಹಂತದಲ್ಲಿ ಕಾಣಿಸಿಕೊಂಡ ಹೊಸ ತಲೆಮಾರಿನ ಕತೆಗಾರ್ತಿಯಾದ ನೇಮಿಚಂದ್ರ

ಕಥೆಗಳಲ್ಲಿ ಸ್ವಾವಲಂಭಿ, ಸ್ವಂತಿಕೆಯುಳ್ಳ, ಆತ್ಮವಿಶ್ವಾಸದ ಕಥಾನಾಯಕಿಯರಿದ್ದಾರೆ ಎಂಬತ್ತರ ದಶಕದ ನಂತರ ಕನ್ನಡ ಸಾಹಿತ್ಯದಲ್ಲಿ ಮುಸ್ಲಿಂ ಹಾಗೂ ದಲಿತ ಹಿನ್ನೆಲೆಯ ಲೇಖಕಿಯರು ಕಂಡು ಬಂದು ಮುಸ್ಲಿಂ ಸಂಪ್ರದಾಯ, ಪದ್ಧತಿ ಮುಸ್ಲಿಂ ಸ್ತ್ರೀಯರ ಅಭದ್ರ ವೈವಾಹಿಕ ಜೀವನ, ವಿಚ್ಛೇದನ ಸಮಸ್ಯೆ, ಅನಕ್ಷರತೆ ಇತ್ಯಾದಿ ಸ್ತ್ರೀಯರ ಸಮಸ್ಯೆಗಳನ್ನು ಕಥೆಯಲ್ಲಿ ಕಾಣಿಸಿದ್ದಾರೆ. ಲಂಬಾಣಿ ಸಂಸ್ಕೃತಿಯ ಹಿನ್ನಲೆಯಿಂದ ಬಂದ ಬಿ.ಟಿ.ಲಲಿತಾನಾಯಕರು ತಮ್ಮ ಕಥೆಗಳಲ್ಲಿ ಲಂಬಾಣಿ ಜನಾಂಗದ ಸಾಂಸ್ಕೃತಿಕ ವಿವರಗಳಿಗಿಂತ ಈ ಸಮುದಾಯದಲ್ಲಿ ಕಂಡು ಬರುವ ಸ್ತ್ರೀಯರ ಶೋಷಣೆ, ಹಸಿವು, ಅನಕ್ಷರತೆ ಮುಂತಾದ ಸಾಮಾಜಿಕ ಸಮಸ್ಯೆಗಳು ಪ್ರಧಾನವಾಗಿವೆ. ಇವರ ನಂತರ ಇಪ್ಪತ್ತೊಂದನೆಯ ದಶಕದಲ್ಲಿ ಕಾಣಿಸಿಕೊಂಡ ಹೊಸ ತಲೆಮಾರಿನ ಕಥೆಗಾರ್ತಿಯರಾದ ಸುನಂದಾ, ಎಂ.ಎಸ್.ವೇದಾ, ನಾಗವೇಣಿ, ಬಿ.ಟಿ.ಜಾಹ್ನವಿ ಇತ್ಯಾದಿ ಲೇಖಕಿಯರು ಸ್ತ್ರೀವಾದದಿಂದ ಹೊರತಾಗಿ ತಮ್ಮದೇ ಆದ ಹೊಸ ಅಭಿವ್ಯಕ್ತಿಯ ನೆಲೆಯಲ್ಲಿ ಸಮಕಾಲೀನ ಸಮಾಜದ ಸ್ತ್ರೀಯರ ಸಮಸ್ಯೆಗಳು ಕುರಿತು ಕಥೆಯಲ್ಲಿ ಅಭಿವ್ಯಕ್ತಿಸಿದ್ದಾರೆ. ಈ ಕಥೆಗಾರ್ತಿಯರ ಕಥಾ ಸಾಹಿತ್ಯವನ್ನು ಕುರಿತು ವಿವಿಧ ವಿಮರ್ಶಕರು ಲೇಖನವನ್ನು ರಚಿಸಿದ್ದಾರೆ. ಈ ವಿಮರ್ಶಕರ ಅಭಿಪ್ರಾಯಗಳು ಹಾಗೂ ತಾತ್ವಿಕ ವಿಚಾರಗಳನ್ನು ಈ ಅಧ್ಯಯನದಲ್ಲಿ ಚರ್ಚಿಸಲಾಗಿದೆ. ಸುನಂದಾ ಪ್ರಕಾಶ ಕಡಿಮೆ, ಎಂ.ಎಸ್.ವೇದಾ, ಎಚ್.ನಾಗವೇಣಿ, ಬಿ.ಟಿ.ಜಾಹ್ನವಿ, ಸುಮಂಗಲಾ, ಶಾಂತಕುಮಾರಿ, ವಿನಯಾ ಇತ್ಯಾದಿ ಲೇಖಕಿಯರ ಕಥೆಗಳನ್ನು ಕುರಿತು ವಿಮರ್ಶಕರ ಅಭಿಪ್ರಾಯಗಳನ್ನು ಈ ಅಧ್ಯಯನದಲ್ಲಿ ಮಾಡಲಾಗಿದೆ.

ಕೋಡಿ ಬೆಟ್ಟು ರಾಜಲಕ್ಷ್ಮಿಯವರ 'ಒಂದು ಮುಷ್ಟಿ ನಕ್ಷತ್ರ' ಎಂಬ ಕಥಾ ಸಂಕಲನವನ್ನು ಕುರಿತು ವಿದ್ಯಾರಶ್ಮಿ ಪೆಲತ್ತಡ್ಕ ಅವರು 'ಮುಷ್ಟಿಯೊಳಗೆ ನಗುವ ನಕ್ಷತ್ರಗಳು' ಎಂಬ ಶೀರ್ಷಿಕೆಯಲ್ಲಿಲೇಖನವನ್ನು ರಚಿಸಿದ್ದಾರೆ. ಈ ಲೇಖನವನ್ನು ಕುರಿತು ಈ ಅಧ್ಯಯನದಲ್ಲಿ ಚರ್ಚಿಸಲಾಗಿದೆ. ಈ ಕಥಾ ಸಂಕಲನದಲ್ಲಿ ೧೧ ಕಥೆಗಳಿವೆ. ಇದು ಕಥೆಗಾರ್ತಿಯ ಬುದ್ಧಿ ಭಾವಗಳ ಬೆಳವಣಿಗೆಗೆ ಅನುಸಾರವಾಗಿ ಚಿತ್ರಿತವಾಗಿದೆ . ಎಂದು ಲೇಖಕಿಯ ಅಭಿಪ್ರಾಯ. ಇದು ಅನುಭವ ಭಾವನೆಗಳಿಂದ ಕೂಡಿದ ಕಥೆಯಾಗಿದೆ. ಮೊದಲ ಕಥೆ 'ಪಟ್ಟೆಹುಲಿಯಲ್ಲಿ' ಪುಷ್ಪ ಹನೀಪರ ಪ್ರೇಮ, ಅಂತರ ಜಾತಿವಿವಾಹ, ಕೋಮುಗಲಭೆ ಎಲ್ಲಾ ಆತಂಕಗಳನ್ನು ಮೀರಿ ಕಥೆ ಅಂತ್ಯದಲ್ಲಿಸುಖಾಂತವಾಗುತ್ತದೆ. ಇಲ್ಲಿ ಲೇಖಕಿಯ ಸಾಮಾಜಿಕ ಕಳಕಳಿ ವ್ಯಕ್ತವಾಗಿದೆ. ಈ ಸಾಮಾಜಿಕ ಒತ್ತಡ ಲೇಖಕಿಯ ಸರಳೀಕರಣಗೊಳಿಸಲು ಸಾಧ್ಯವಾಗಿದೆ ಎಂದು ಅಭಿಪ್ರಾಯ ಪಡುತ್ತೇನೆ. 'ಬುದ್ಧಿ ಇಲ್ಲದ ಹುಡುಗನ' ಕಥೆಯು ಭ್ರಷ್ಟಾಚಾರ ಮುಕ್ತ ರಾಜಕೀಯ ಅಂಶಗಳು ಚರ್ಚೆಯಾಗಿ, ರಾಜಕಾರಣಿಗಳ ಮೋಸ ಮುಗ್ಧ ಜನರ ಮೌಢ್ಯತೆ ಈ ಅಂಶಗಳು ಇಲ್ಲಿ ವ್ಯಕ್ತವಾಗಿಲ್ಲವಾಗಿದೆ. 'ಪ್ರೋಕ್ರಿ ಕಿಟ್ಟಪ್ಪ' ಕಥೆಗಾರ್ತಿಯ ಹೊಸ ಪ್ರಯೋಗಶೀಲ ಕಥೆ ಎಂಬ ಲೇಖಕಿಯ ಅಭಿಪ್ರಾಯ ಸಮಂಜಸವಾಗಿದೆ. ಆದರೆ ಈ ಕಥೆಯಲ್ಲಿ ಕಂಡು ಬರುವ ಬಾಲ್ಯದ ಅನುಭವ, ಮನುಷ್ಯನ ಬೆಳವಣಿಗೆಗೆ ತಕ್ಕಂತೆ ಪಡೆಯುವ ಜವಾಬ್ದಾರಿ ಅಂತಸ್ತುಗಳು ಅಂಶಗಳು ಚರ್ಚೆಯಾಗಿಲ್ಲ 'ಹಸನ

ಬ್ಯಾರಿ' ಕಥೆಯು ಈ ವ್ಯಕ್ತಿಯ ಅಪ್ರಾಮಾಣಿಕತೆಯನ್ನು ಕುರಿತು ಹೇಳಿ, ಇಲ್ಲಿ ಬರುವ ಕೋಮು ಸೌಹಾರ್ದತೆ, ಮುಸ್ಲಿಂ ಹೆಣ್ಣಿನ ಶೋಷಣೆ, ಬಡತನ, ಅರಬ್ಬರಿಂದ ಮುಸ್ಲಿಂ ಹೆಣ್ಣಿಗೆ ಆಗುವ ಅನ್ಯಾಯ ದುಸ್ಥಿತಿ ಅಂಶಗಳು ಚರ್ಚೆಯಾಗಿಲ್ಲ, 'ಕೃಷ್ಣಪಕ್ಷ ಚಂದ್ರಮನಿಗೆ' ಕಥೆಯು ಕಾವ್ಯಾತ್ಮಕವಾಗಿದೆ. ನಡುಘಟ್ಟದ ಮೌನ ಕಥೆಯಲ್ಲಿ ಬಂಜೆತನ, ತಾಯ್ತನ, ಹೆಣ್ಣಿನ ಅನೈತಿಕ ಸಂಬಂಧಕ್ಕೆ ಕಾರಣವಾಗುವ ಹೆಣ್ಣಿನ ಒಳಮನಸ್ಸಿನ ತಲ್ಲಣಗಳು, ದಿಟ್ಟತನ ಇಲ್ಲಿ ಚರ್ಚೆಯಾಗಿಲ್ಲವಾಗಿದೆ. 'ಕಂಪಾಸ್ ಬಾಕ್ಸ' ಕಥೆಯಲ್ಲಿ ಬಾಲ್ಯದ ನೆನಪುಗಳ ಚಿತ್ರಣವಿದೆ. ಆದರೆ ಇಲ್ಲಿ ಕಂಡು ಬರುವ ವರ್ಗ ತಾರತಮ್ಯ ಅಂಶಗಳು ಚರ್ಚೆಯಾಗಿಲ್ಲ 'ಅವಳ ಪ್ರಶ್ನೆ' ಕಥೆಯಲ್ಲಿ ಶಕುಂತಲೆಯ ಮನೋವ್ಯಾಕುಲತೆ ಕಣ್ವಾಶ್ರಮದ ಪರಿಸರ, ದುಷ್ಯಂತನ ಮೋಸ ಅಂಶಗಳು ಚರ್ಚೆಯಾಗಿವೆ. ಶಕುಂತಲೆ ಸಲಾಕೆಯ ಪಂಜರದೊಳಗೆ ಸೇರಿಕೊಂಡು ಬಾಗಿಲೆಳೆದು ಕೊಂಡಳು ಎಂಬ ಲೇಖಕಿಯ ಅಭಿಪ್ರಾಯ ಸರಿ ಅಲ್ಲ ಇಲ್ಲಿ ಶಕುಂತಲೆ ತನ್ನನ್ನು ಆಹ್ವಾನಿಸಿದ ದುಷ್ಯಂತನನ್ನು ತಿರಸ್ಕರಿಸಿ, ರಾಜಮಾತೆ ಪೀಠವನ್ನು ದಿಕ್ಕರಿಸಿ ಸ್ವತಂತ್ರವಾಗಿ ಬದುಕುವ ಹೆಣ್ಣಿನ ದಿಟ್ಟತನವನ್ನು ತೋರಿದ್ದಾಳೆ. ಹಾಗಾಗಿ ಶಕುಂತಲೆ ರಾಜಮಾತೆ ಪೀಠವನ್ನು ಸ್ವೀಕರಿಸಿದ್ದರೆ ಅದು ಪಂಜರವಾಗಿ ಭಾಸವಾಗುತ್ತಿತ್ತು. ಆದರೆ ಅದನ್ನು ತಿರಸ್ಕರಿಸಿ ಶಾಶ್ವತವಾಗಿ ಪಂಜರದಿಂದ ದುಷ್ಯಂತನಿಂದ ಮುಕ್ತಿಯನ್ನು ಹೊಂದಿದ್ದಾಳೆ ಎಂದು ಅಭಿಪ್ರಾಯ ಪಡುತ್ತೇನೆ. 'ಬದುಕಿನ ಸನ್ನಿವೇಶವನ್ನು ಸ್ವಲ್ಪ ಹಿಂದೆ ಸರಿದು ನೋಡಲು ಯತ್ನಿಸುತ್ತಾರೆ ಆ ಯತ್ನ ಸನ್ನಿವೇಶದ ಒಳ ಸೇರುವಂತೆ ಮಾಡುತ್ತದೆ. ಆಗ ಕ್ರೂರವಾಗುವ ಬದುಕು ಹೂವಾಗುತ್ತದೆ. ಮಾನವೀಯವಾಗುತ್ತದೆ'. ಇಲ್ಲಿನ ಕಥೆಗಳಲ್ಲಿ ಮನುಷ್ಯತ್ವದ ತಿರುಳು ಕಾಣುತ್ತವೆ, ಎಂದು ವ್ಯಾಖ್ಯಾನ ನೀಡಿದ 'ಅಮರೇಶ ನುಗಡೋಣಿ'ಯವರ ಅಭಿಪ್ರಾಯ ಸಮಂಜಸವಾಗಿದೆ. ಹೀಗೆ ಲೇಖಕಿ ಸಾಕಷ್ಟು ಅಂಶಗಳನ್ನು ಚರ್ಚಿಸಿದ್ದಾರೆ. ಆದರೂ ಇಲ್ಲಿ ಚರ್ಚಿಸಿಲ್ಲದ ಕೆಲವು ಅಂಶಗಳಿವೆ ರಾಜಲಕ್ಷ್ಮಿಯವರ ಕಥೆಗಳು ಖಾಸಾ ಅನುಭವದ ಕಥೆಗಳಾಗಿವೆ. ಈ ಕಥೆಗಳಲ್ಲಿ ದಕ್ಷಿಣ ಕನ್ನಡ ಜೀವನದ ಚಿತ್ರಣವಿದೆ 'ಪಟ್ಟೆಹುಲಿ' ಕಥೆ ಎಲ್ಲಿಂದಲೋ ಆರಂಭವಾಗಿ, ಎಲ್ಲಿಗೋ ಮುಕ್ತಾಯವಾಗುತ್ತದೆನಿಸುತ್ತದೆ. ಯಾವುದೇ ಮಹತ್ವಾಕಾಂಕ್ಷೆಯಿಲ್ಲದೆ ಮನಸ್ಸಿನ ಮೇಲೆ ಬಿದ್ದ ಭಾವನೆಗಳು ಕಥೆಯಾಗಿವೆ ಎಂದು ಭಾಸವಾಗುತ್ತದೆ. ಹೀಗೆ ಭಿನ್ನ ವಸ್ತು, ಪ್ರಯೋಗಕ್ಕೆ ತಕ್ಕ ಭಾಷೆ ವಿಶಿಷ್ಟ ಅನುಭವಗಳಿಂದ ಕೂಡಿದ ಈ ಕಥೆಗಳು ಮುಷ್ಠಿಯನ್ನೂ ಮೀರಿ ಬೆಳೆಯಬಲ್ಲವಾಗಿದೆ. ಹಾಗೂ ಕಥೆಯಲ್ಲಿ ಚಿತ್ರಿತವಾಗಿರುವ ಒಳ ಚಿತ್ರಗಳು ಕಥೆಗಳ ಮಹತ್ವವನ್ನು ಮತ್ತಷ್ಟು ಹಿಮ್ಮಡಿಗೊಳಿಸುತ್ತದೆ ಎಂದು ಅಭಿಪ್ರಾಯ ಪಡುತ್ತೇನೆ.

ಹೊಸ ತಲೆಮಾರಿನ ಕಥೆಗಾರ್ತಿಯರಲ್ಲಿ ಸುನಂದಾ ಪ್ರಕಾಶ ಕಡಿಮೆ ಪ್ರಮುಖರು ಇವರು **'ಪುಟ್ಟಪಾದದ ಗುರುತು'**, **'ಗಾಂಧೀ ಚಿತ್ರದ ನೋಟು'** ಎಂಬ ಎರಡು ಕಥಾ ಸಂಕಲನಗಳನ್ನು ರಚಿಸಿದ್ದಾರೆ. ಈ ಸಂಕಲನದ ಕುರಿತು ಅನೇಕ ಲೇಖಕರು ತಮ್ಮ ಅಭಿಪ್ರಾಯಗಳನ್ನು ಮಂಡಿಸಿದ್ದಾರೆ. ಈ ಲೇಖಕರ ಅಭಿಪ್ರಾಯಗಳನ್ನು ಕುರಿತು ನನ್ನ ಅಧ್ಯಯನದಲ್ಲಿ ಚರ್ಚಿಸಿದ್ದೇನೆ.

ಪ್ರಖ್ಯಾತ ವಿಮರ್ಶಕರಾದ ಜಿ.ಎಸ್.ಆಮೂರವರು, **'ಪುಟ್ಟಪಾದದ ಗುರುತು'** ಎಂಬ ಕಥಾ ಸಂಕಲನಕ್ಕೆ **'ಪ್ರೀತಿಯ ಮೂಲ ಲಯ'** ಎಂಬ ಶೀರ್ಷಿಕೆಯಲ್ಲಿ ಲೇಖನವನ್ನು ಪ್ರಕಟಿಸಿದ್ದಾರೆ. "ಸುನಂದಾ ಅವರು ಕಥೆಗಳಲ್ಲಿ ಹೊಸತನ್ನು ಕಾಣಬಹುದು. ಇಲ್ಲಿ ವಿವರಗಳ ಸಮೃದ್ಧಿ ಇದೆ. ಆದರೆ ಈ ವಿವರಗಳನ್ನು ಇಟ್ಟಿಗೆಗಳಂತೆ ಉಪಯೋಗಿಸಿ ಸುಂದರ ಶಿಲ್ಪಗಳನ್ನು ಕಟ್ಟುವುದರಲ್ಲಿ ಸುನಂದಾ ಅವರಿಗೆ ಆಸ್ಥೆಯಿಲ್ಲ" ಎಂಬ ಲೇಖಕರ ವ್ಯಾಖ್ಯಾನವನ್ನು ಕುರಿತು ವಿವರಣೆ ನೀಡಲು ಇಚ್ಛಿಸುತ್ತೇನೆ. ಇಲ್ಲಿ ಲೇಖಕಿಯ ವಿವರಗಳು ಅನಗತ್ಯವಾಗಿದ್ದು ನಿಷಪ್ರಯೋಜಕವಿದೆ ಎಂದೆನಿಸದಂತೆ ಭಾಸವಾಗುತ್ತಿದೆ. ಆದರೆ ಇಲ್ಲಿನ ಕಥೆಗಳಲ್ಲಿ ವಿವರಗಳು ಅನಗತ್ಯವಾಗಿದ್ದು ವಾಸ್ತವ ಪರಿಣಾಮವನ್ನುಂಟು ಮಾಡುವುದರಲ್ಲಿ ಮಹತ್ವದ ಪಾತ್ರ ನಿರ್ವಹಿಸುತ್ತವೆ ಎಂದು ಅಭಿಪ್ರಾಯ ಪಡುತ್ತೇನೆ. ಉದಾಹರಣೆಗೆ 'ಮಗು ಚಿತ್ರ ಬರೆಯಿತು' ಕಥೆಯಲ್ಲಿ ಆಗ ಮಾಲತಿ ಕಂಕುಳಲ್ಲಿ ಹೊಲಿಗೆ ಬಿಟ್ಟಿದ್ದ ನಲವತ್ತೈದು ರೂಪಾಯಿಯ ನೈಟಿಯಲ್ಲಿದ್ದಳು." (ಪು-೧) ಇಲ್ಲಿ ಮಾಲತಿಯ ವಯಸ್ಸು, ಸೌಂದರ್ಯದ ಬಗ್ಗೆ ಇರುವ ನಿಷ್ಕಾಳಜಿ, ವರ್ಗ ಇತ್ಯಾದಿ ಸ್ವಭಾವಗಳು ಈ ವಿವರದಲ್ಲಿದೆ. 'ನೋ ಎಂಟ್ರಿ' ಕಥೆಯೂ ಈ ವಿವರಣೆಗೆ ಸೂಕ್ತವಾಗಿದೆ. ಹೀಗೆ ಸುನಂದಾ ಅವರ ಕಥೆಗಳಲ್ಲಿ ಅನಗತ್ಯ ವಿವರಣೆ ಕಂಡು ಬಂದರೂ ಅವು ಸಮರ್ಥವಾದ ವಾಸ್ತವಿಕೆಯನ್ನು ನೀಡಲು ಯಶಸ್ವಿಯಾಗಿದೆ ಎಂದು ಅಭಿಪ್ರಾಯ ಪಡುತ್ತೇನೆ. ಸುನಂದಾ ಅವರ ಕಥೆಗಳ ಸ್ಥಾಯಿ ಪ್ರೀತಿ ಈ ವ್ಯಾಖ್ಯಾನವನ್ನು ಸಮರ್ಥಿಸುತ್ತೇನೆ ಏಕೆಂದರೆ ಕಥೆಯ ಪಾತ್ರಗಳಲ್ಲಿ ಕಂಡುಬರುವ ಭಯದ ಆತಂಕ ನೋವಿನ, ಸೋಲಿನ ಹೀಗೆ ವಿವಿಧ ಪಾತ್ರಗಳು ಕತೆಯ ಅಂತ್ಯದಲ್ಲಿ ಪ್ರೀತಿಯಿಂದ ವಿರಮಿಸುತ್ತವೆ ಹೊರತು ಸಂಘರ್ಷಕ್ಕಿಳಿಯುವುದಿಲ್ಲ ಮನುಷ್ಯ ಜೀವನಕ್ಕೆ ಸಂದೇಶ ನೀಡುವಲ್ಲಿ ಕಥೆ ಅಂತ್ಯ ಕಾಣುತ್ತದೆ. ಹಾಗಾಗಿ 'ಪ್ರೀತಿಯ ಮೂಲ ಲಯ' ಎಂಬ ಶೀರ್ಷಿಕೆಯು ಔಚಿತ್ಯ ಪೂರ್ಣವಾಗಿದೆ ಸುನಂದಾ ಅವರ ಬಹುಪಾಲು ಕಥೆಗಳು ಬದುಕು ಪ್ರೀತಿಯನ್ನು, ಉತ್ಸಾಹವನ್ನು ತುಂಬುವಲ್ಲಿ ಸಾರ್ಥಕವಾಗಿದೆ. ಹೀಗೆ ಲೇಖಕರು ಕಥೆಯ ತಂತ್ರವನ್ನು ಕುರಿತು ಚರ್ಚಿಸುತ್ತಾ ಕಥೆಯಲ್ಲಿ ವ್ಯಕ್ತವಾಗುವ ಸ್ತ್ರೀ ಸಮಸ್ಯೆಗಳಲ್ಲಿ ಮಾನಸಿಕ ತೊಳಲಾಟ, ಯಾಂತ್ರಿಕ ಬದುಕು, ನಾಗರೀಕತೆಯ ಪ್ರಭಾವ ಹೆಣ್ಣಿನ ನೈಸರ್ಗಿಕ ಸಮಸ್ಯೆಗಳು, ಅತ್ತೆ ಸೊಸೆಯರ ಸಂಬಂಧ, ವಯಸ್ಕರ ಏಕಾಂಗಿತನದ ಪ್ರಭಾವ, ಸ್ತ್ರೀಯ ಸ್ವಾಭಿಮಾನ, ದಾಂಪತ್ಯ ಜೀವನ, ಅಂತರಜಾತಿ ವಿವಾಹ, ಕೋಮುಗಲಭೆ, ಸಂಪ್ರದಾಯಿಕತೆ, ಮೌಢ್ಯ ಆಚರಣೆಗಳು ವಿಧವೆ ಸಮಸ್ಯೆ ಇತ್ಯಾದಿ ಅಶಂಗಳು ಇಲ್ಲಿ ಚರ್ಚೆಯಾಗಿಲ್ಲ ಎಂದು ಅಭಿಪ್ರಾಯ ಪಡುತ್ತೇನೆ.

ಓ.ಎಲ್.ನಾಗಭೂಷಣಸ್ವಾಮಿ 'ಕಾಮನ ಬಿಲ್ಲಿನ ಬಣ್ಣ' ಎಂಬ ಶೀರ್ಷಿಕೆಯಲ್ಲಿ ತಮ್ಮ ಅಭಿಪ್ರಾಯಗಳನ್ನು ಮಂಡಿಸಿದ್ದಾರೆ. ಇಲ್ಲಿ ಲೇಖಕರು 'ಕಥೆಗಾರರು ಕಟ್ಟುವ ಲೋಕ ಮಾತಿನಲ್ಲಿ ಕಟ್ಟಿದ ಲೋಕವೇ ಹೊರತು ಅದು ನಿಜವಲ್ಲ' ಎಂಬ ಹೇಳಿಕೆ ಸರಿಯಲ್ಲ ಎಂದು ಈ ವ್ಯಾಖ್ಯಾವು ಚರ್ಚಾರ್ಹವಾಗಿದೆ. ಇಲ್ಲಿ ಯಾವುದೇ ಕಥೆಗಾರರಾಗಲಿ ಕಟ್ಟುವ ಕಥೆ ತಮ್ಮ ಅನುಭವ ಹಾಗೂ

ಲೋಕಾನುಭವಗಳನ್ನು ಕಂಡು ಕಾಣಿಸಿದ ಲೋಕವನ್ನು ಕಥೆಯಲ್ಲಿ ಚಿತ್ರಿಸಿದ್ದಾರೆ. ಹೀಗಾಗಿ ಕಥೆಯಲ್ಲಿನ ವಸ್ತುಗಳು ವಾಸ್ತವಾಂಶಗಳನ್ನು ಹೊಂದಿರುವುದರಿಂದ ಅದು ಕೇವಲ ಕಲ್ಪನಾಲೋಕ ಎಂಬುದನ್ನು ಸಮರ್ಥಿಸಲಾಗುವುದಿಲ್ಲ.

ಸುನಂದಾ ತಮ್ಮ ಸಂವೇದನೆಗಳನ್ನು ಅವಲಂಬಿಸಿಕೊಂಡು ತಮ್ಮ ಕಥಾ ಲೋಕವನ್ನು ನಿರ್ಮಿಸಿಕೊಂಡಿದ್ದಾರೆ. ಎಲ್ಲ ಕಥೆಗಳಲ್ಲಿ ಎಲ್ಲ ಪಾತ್ರಗಳಲ್ಲಿ ಕಥೆಗಾರ್ತಿಯ ನೋಟ ಭಾವಗಳೇ ಪ್ರತಿಬಿಂಬಿತವಾಗುತ್ತದೆ ಎಂಬ ಲೇಖಕರ ಅಭಿಪ್ರಾಯವನ್ನು ವಿವರಣೆ ನೀಡುವುದಾದರೆ ಸುನಂದಾ ಅವರು ಕೌಟುಂಬಿಕ ದಿನನಿತ್ಯದ ಘಟನೆಗಳನ್ನು ಸೂಕ್ಷ್ಮವಾಗಿ ಗ್ರಹಿಸಿ ಕಥೆಯಾಗಿ ಚಿತ್ರಿಸಿದ್ದಾರೆ. ಸ್ತ್ರೀ ಸಂವೇದನೆಗಳನ್ನು ಕುರಿತು ಹೇಳುವಲ್ಲಿ ಹೊಸ ಅಭಿವ್ಯಕ್ತಿಯನ್ನು ತೋರಿದ್ದಾರೆ ಎಂದೆನಿಸುತ್ತದೆ. ಸುನಂದಾ ಅವರು ನೇಪಥ್ಯದಲ್ಲಿ ನಿಂತು ಕಥೆ ಮಾತ್ರ ಓದುಗರಿಗೆ ಉಳಿಯುವಂತೆ ವ್ಯಕ್ತಿಗಳಲ್ಲಿನ ಭಾವನೆ ಸೂಕ್ಷ್ಮತೆಗಳು ಗ್ರಹಿಸಿ ಹೊಸ ಬಗೆಯ ಕಥನ ತಂತ್ರವನ್ನು ಬಳಸಿದ್ದಾರೆ ಹೊರತು ವೈಯಕ್ತಿಕವಾದ ಲೋಕ ನಿರ್ಮಾಣವಾಗಿದೆ ಎಂದೆನಿಸುವುದಿಲ್ಲ. 'ಮಗು ಚಿತ್ರ ಬರೆಯಿತು', 'ಕಿಚನ ಪ್ಯಾರಡೈಸ್', 'ನಕ್ಷತ್ರದ ಬೆಳಕು' ಹಿಡಿದು ಕಥೆಗಳಲ್ಲಿ ಹೆದ್ದಾರಿಯ, ಮನೆಯ ಲೈನ್ ಬಜಾರಿನ ಮುಂತಾದ ಪದಗಳಲ್ಲಿ ಷಷ್ಠಿ ವಿಭಕ್ತಿಗಳು ಬಳಕೆಯಾಗಿವೆ. ಇಲ್ಲಿ ಹೆದ್ದಾರಿಯು ಕಾರವಾರದ ಮುಂಬೈ ಹೆದ್ದಾರಿ ಈ ರೀತಿ ಅದರ ವಿಶಿಷ್ಟತೆಯನ್ನು ಕುರಿತು ಹೇಳುತ್ತದೆ. ಇಲ್ಲಿ ಲೇಖಕರು ಕಥೆಯನ್ನು ಕುರಿತು ಒಂದೊಂದು ಸಂಬಂಧವನ್ನು ಖಚಿತಗೊಳಿಸುವ, ಗಟ್ಟಿಗೊಳಿಸುವ ಈ ವಾಕ್ಯಗಳು ರಚನೆಗೊಂಡು ಇದು ಕವಿತೆಯ ದಾರಿ ಇದು ಮಗು ನೋಡುವ ರೀತಿ ಎಂದು ಲೇಖಕರ ಅಭಿಪ್ರಾಯಗಳನ್ನು ಸಮರ್ಥಿಸುವುದಿಲ್ಲ. ಸುನಂದಾ ಅವರ ಕಥೆಗಳು ಕೆಲವು ಕಡೆ ಕಾವ್ಯಾತ್ಮಕವಾಗಿದೆ ಆದರೆ ಅದನ್ನು ಮಗು ನೋಡುವ ರೀತಿ ಎಂದು ಅಪಾದಿಸುವುದು ಸರಿ ಅಲ್ಲ, ಸುನಂದಾ ಅವರ ಕಥೆಗಳಲ್ಲಿ ವೈದೇಹಿ, ನಾಗವೇಣಿಯರ ಕಥೆಗಳಲ್ಲಿರುವಂತೆ ಸ್ತ್ರೀ ಸಂವೇದನೆಯ ಅಂಶಗಳಿವೆ. ಜಯಂತ್ ಕಾಯ್ಕಿಣಿ, ವೈದೇಹಿ, ನಾಗವೇಣಿಯಂತೆ ಸುನಂದಾ ಅವರು ಸಹ ನೇಪಥ್ಯದಲ್ಲಿ ನಿಂತು ಕಥೆಯನ್ನು ಹೇಳುತ್ತಾರೆ. ಇಲ್ಲಿಯ, ಕಥೆಗಳಲ್ಲಿ ತಲ್ಲೀನತೆ ಹೆಚ್ಚು 'ನೋ ಎಂಟ್ರಿ' ಕಥೆಯಲ್ಲಿ ಮಧ್ಯಮ ವರ್ಗದ ಸಾಮಾನ್ಯ ಹೆಣ್ಣು ಎದುರಿಸುವ ಸಾಮಾನ್ಯ ಘಟನೆಗಳು, ನಗರೀಕರಣ ವಿಕಾರತೆ, ತನ್ನೂರಿನ ಸಾಂಸ್ಕೃತಿಕ ಪರಿಸರ ಪ್ರೀತಿಯ ಅಂಶಗಳು ಇಲ್ಲಿ ಕಾಣಬಹುದಾಗಿದೆ. 'ವಶ' ಕಥೆಯಲ್ಲಿ ಗೃಹ ಪ್ರವೇಶ ಸಂದರ್ಭದಲ್ಲಿಕನ್ನಿಕಾ ಊಟ ಮಾಡಿದಳೋ ಇಲ್ಲವೊ ಎಂದು ಯಾರೂ ಗಮನಿಸದೆ ಹೋದಾಗ ಅವಳ ಮನಸ್ಸಿನಲ್ಲಿ ಹುಟ್ಟುವ ಭಾವನೆಗಳು, ಸಂಕೋಚ ಹೀಗೆ ಸಾಮಾನ್ಯ ಘಟನೆಗಳನ್ನು ಅಸಮಾನ್ಯವಾದ ಭಾವುಕತೆಯಲ್ಲಿ ಕಥೆಯು ಚಿತ್ರಿತವಾಗಿರುವ ಅಂಶಗಳು ಚರ್ಚೆಯಾಗಿವೆ. ಈ ಸಂಕಲದ ಕಥೆಗಳನ್ನು ಕುರಿತು ಏನೂ ಆಗುವುದಿಲ್ಲ ಎಂಬ ಲೇಖಕರ ಅಭಿಪ್ರಾಯವನ್ನ ಸಮರ್ದಿಸುವುದಿಲ್ಲ ಕಾರಣ ಇಲ್ಲಿ ಸುನಂದಾ ಅವರು ಸ್ತ್ರೀ ಸಂವೇದನೆಯನ್ನು ಕುರಿತು ಹೇಳಿದ್ದಾರೆ. ಗಂಡ, ಮಕ್ಕಳು, ಕುಟುಂಬ ಎನ್ನುವ ಕೌಟುಂಬಿಕ ಚೌಕಟ್ಟಿನಲ್ಲಿ, ಸೆರೆಮನೆಯಲ್ಲಿ ಕೊಳೆಯುತ್ತಿರುವ

ಹೆಣ್ಣಿನ ಸೂಕ್ಷ್ಮ ಭಾವನೆಗಳನ್ನು ಹೆಣ್ಣು ಜೀವನದ ಮಹತ್ವವನ್ನು ಅರ್ಥಮಾಡಿಕೊಂಡು ಮಾನವೀಯತೆಯಿಂದ ವರ್ತಿಸಬೇಕೆಂದು ಹೇಳುತ್ತಾ ಪುರುಷರಿಗೆ ತಿಳುವಳಿಕೆಯನ್ನು ನೀಡುವ ಕಥೆಗಳಾಗಿವೆ. ಹೀಗೆ ಲೇಖಕರು ಕಥೆಯಲ್ಲಿರುವ ಎಲ್ಲಾ ಅಂಶಗಳು ಚರ್ಚೆಯಾಗದೆ. ಕೆಲವು ಅಂಶಗಳಾದ ವ್ಯಾಕರಣ ಸಂಬಂಧ ಸೂಕ್ಷ್ಮತೆಗಳು, ಜಟಿಲತೆಯ ಅಂಶಗಳು ವ್ಯಕ್ತವಾಗಿದೆ. ಇಲ್ಲಿಯ ಕಥೆಗಳನ್ನು ತನ್ಮಯತೆ, ಭಾವುಕತೆಯ ಅಂಶಗಳು ಕಂಡು ಬರುತ್ತವೆ.

ಒಟ್ಟಾರೆ ಕಾಮನ ಬಿಲ್ಲಿನ ಬಣ್ಣದಂತೆ ಸುನಂದಾ ಅವರ ಕಥೆಗಳು ಮೃದುವಾದ ಹೊಸ ಅಭಿವ್ಯಕ್ತಿಯ ರಚನೆಯಲ್ಲಿ ವಿವಿಧ ಬಣ್ಣಗಳಂತೆ ಕಂಗೊಳಿಸಿ ವಿಶಿಷ್ಟತೆಯನ್ನು ಒಳಗೊಂಡಿದೆ.

ಡಾ.ಬೈರಮಂಗಲ ರಾಮೇಗೌಡ ಅವರು 'ಆಪ್ತವಾಗಿ ತಟ್ಟುವ ಗೃಹಿಣೀಗೀತ' ಎಂಬ ಶೀರ್ಷಿಕೆಯಲ್ಲಿ ತಮ್ಮ ಲೇಖನವನ್ನು ಪ್ರಕಟಿಸಿದ್ದಾರೆ. 'ಸಾಂಸಾರಿಕ ಬದುಕಿನ ಆಗು-ಹೋಗುಗಳನ್ನು ಅದ್ಭುತ ಮಾತುಗಾರಿಕೆಯಲ್ಲಿ ಕತೆಯನ್ನು ಕಟ್ಟುವ ಈ ಶೈಲಿ ಕನ್ನಡ ಕಥಾಲೋಕದಲ್ಲಿ ಒಂದು ವಿಶಿಷ್ಟ 'ಗೃಹಿಣಿ ಗೀತ' ದಂತೆನಿಸುತ್ತದೆ ಎಂಬ ಲೇಖಕರ ವ್ಯಾಖ್ಯಾನ ಸಮಂಜಸವಾಗಿದೆ. ಇಂದಿನ ಯಾಂತ್ರಿಕ ಯುಗದಲ್ಲಿ ಹೆಂಡತಿ ಮಕ್ಕಳೊಂದಿಗೆ ಕೆಲವು ಘಳಿಗೆಗಳನ್ನು ಕಳೆಯದೆ ಇರುವ ಪುರುಷರು ಹೆಣ್ಣಿನ ಸೂಕ್ಷ್ಮ ಭಾವನೆಗಳನ್ನು ಅರಿಯಲು ಕುಟುಂಬದ ಸಾಮರಸ್ಯವನ್ನು ಹೆಚ್ಚಿಸುವಲ್ಲಿ ಈ ಮೇಲಿನ ವಾಕ್ಯ ಸಮಂಜಸವಾಗಿದೆ ಎಂದು ಅಭಿಪ್ರಾಯಪಡುತ್ತೇನೆ. ಹೆಣ್ಣಿನ ಕುರಿತಾದ ಪುರುಷರ ಮೂಲಭೂತಭಾವನೆಗಳನ್ನು ಸುಧಾರಿಸುವಲ್ಲಿ ಕಥೆಗಾರ್ತಿಯ ಜಾಣ್ಮೆ, ದರ್ಶನ ಶಕ್ತಿ ಅದ್ಭುತವಾಗಿದೆ. ಇಲ್ಲಿ ಕಥೆಗಳಲ್ಲಿ ವಿವರಗಳು ಅಗತ್ಯಕ್ಕಿಂತ ಹೆಚ್ಚಾಗಿದೆ ಆದರೂ ಈ ವಿವರಗಳು ವಾಸ್ತವದ ಪರಿಣಾಮವನ್ನು ಹೇಳುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಈ ಎಲ್ಲಾ ಅಂಶಗಳು ಚರ್ಚೆಯಾಗಿವೆ. 'ಮಗು ಚಿತ್ರ ಬರೆಯಿತು'. 'ನಕ್ಷತ್ರದ ಬೆಳಕು ಹಿಡಿದು', 'ಕಿಚನ್ ಪ್ಯಾರಡೈಸ್', 'ವಶ', 'ಕಂದೀಲು', 'ಪುಟ್ಟಪಾದದ ಗುರುತು', 'ಗ್ಲಾಸ್ ಹೌಸ್' ಇತ್ಯಾದಿ ಕಥೆಗಳಲ್ಲಿ ಮಾಧ್ಯಮ ವರ್ಗದ ಹೆಣ್ಣಿನ ಬದುಕಿನ ಚಿತ್ರಣವನ್ನು, ಹೆಣ್ಣಿನ ಗುಣ ಸ್ವಭಾವಗಳು, ದಾಂಪತ್ಯದ ಸರಸ ವಿರಸ, ವೃದ್ಧಾಪ್ಯದ ಸಮಸ್ಯೆ, ಅತ್ತೆ ಸೊಸೆಯರ ಸಂಬಂಧ ಬಂಜೆತನ, ಅಂತರ್‌ಜಾತಿ ವಿವಾಹ, ಹೆಣ್ಣಿನ ತಿಂಗಳ ಸಮಸ್ಯೆ ಇತ್ಯಾದಿ ಕಥೆಯ ವಸ್ತು ಕಥೆಗಾರ್ತಿಯ ಧೋರಣೆಯನ್ನು ಕುರಿತು ಎಲ್ಲಾ ಅಂಶಗಳು ಚರ್ಚೆಯಾಗಿವೆ. ಕಥೆಗಾರ್ತಿ ನೇಪಥ್ಯಕ್ಕೆ ಸರಿದು ಕಥೆಯೇ ಓದುಗರನ್ನು ಹಿಡಿದುಕೊಳ್ಳುವಂತೆ ತನ್ಮಯತೆಯನ್ನು 'ನೋ ಎಂಟ್ರಿ', 'ಬಣ್ಣದ ಕೌದಿ', ಕಥೆಗಳಲ್ಲಿ ಕಾಣಬಹುದಾಗಿದೆ. ನಾಗರೀಕತೆಯ ವಿಕಾರತೆ 'ನೋ ಎಂಟ್ರಿ', ಕಥೆಯಲ್ಲಿದ್ದಾರೆ. ಸಾಂಸಾರಿಕ ಬದುಕಿನ ವಂಚಕ ಗಂಡನನ್ನು ಮೌನವಾಗಿ ಶಪಿಸುತ್ತಲೇ ಅನ್ಯಾಯದ ವಿರುದ್ಧ ಶಾಂತವಾಗಿ ಸೇಡುತೀರಿಸಿಕೊಳ್ಳುವ ವೇದಾಳ ದೃಢ ನಿರ್ಧಾರವನ್ನು 'ಬಣ್ಣದ ಕಾದಿ' ಕಥೆಯಲ್ಲಿ ಕಾಣಬಹುದಾಗಿದೆ. ಅಲ್ಲದೆ ಪುಸ್ತಕದಲ್ಲಿ ಮೂಡಿರುವ ಚಿತ್ರಗಳನ್ನು ಆಕರ್ಷಣೀಯವಾಗಿದೆ. ಇತ್ಯಾದಿ ಅಂಶಗಳು ಈ ಲೇಖನದಲ್ಲಿ ಚರ್ಚೆಯಾಗಿದೆ.''[19]

ಈ ಕಥಾ ಸಂಕಲನವನ್ನು ಕುರಿತು ಶೇಷಗಿರಿ ಹಾರನಹಳ್ಳಿಯವರು 'ಭಾವನಾ ಪ್ರಧಾನ, ಅಂತರ್ಮುಖಿ, ಪ್ರಾಯೋಗಿಕ ಕಥಾ ಸಂಕಲನ' ಎಂಬ ಶೀರ್ಷಿಕೆಯಲ್ಲಿಲೇಖನವನ್ನು ರಚಿಸಿದ್ದಾರೆ. ಈ ಲೇಖನದಲ್ಲಿ ಹೆಣ್ಣು ನಿರ್ವಹಿಸುವ ವಿವಿಧ ಪಾತ್ರಗಳಾದ ತಾಯಿ, ಅಕ್ಕ, ಗೆಳತಿ, ಪ್ರೇಯಸಿ ಇತ್ಯಾದಿ ಸೂಕ್ಷ್ಮ ಬಂಡಾರವಾಗುತ್ತಾಳೆ. ಸಮಾಜ ಅವಳ ಮೇಲೆ ಹೆಚ್ಚಿನ ಬಂಧನ ಹೇರುತ್ತದೆ. ಅವಳು ಅದನ್ನು ಸಹಿಸುತ್ತಾಳೆ. ಏಕೆ? ಸ್ತ್ರೀ ಪ್ರಕೃತಿ ಅವಳು ಹುಟ್ಟಿಸಬೇಕು, ಹುಟ್ಟಿಸಿದನ್ನು ಬೆಳೆಸಬೇಕು ಸಂರಕ್ಷಿಸಬೇಕು ಎಂಬ ಲೇಖಕರ ಈ ವ್ಯಾಖ್ಯಾನವನ್ನು ಚರ್ಚಿಸಬಹುದು. ಇದು ಸ್ತ್ರೀ ಪ್ರಕೃತಿಯಲ್ಲಿ ಪುರುಷ ಪ್ರಧಾನ ವ್ಯವಸ್ಥೆ ಹೆಣ್ಣನ್ನು ತನ್ನ ಅಡಿಯಾಳನ್ನಾಗಿ ಮಾಡಿ ತನ್ನ ಸ್ವಾರ್ಥತನವನ್ನು ಅಧಿಕಾರವನ್ನು ಸ್ತ್ರೀಯರ ಮೇಲೆ ಹಾಕಿರುವ ನಿರ್ಬಂಧವಾಗಿದೆ. ಹಾಗಾಗಿ ಇದು ಪುರುಷರು ಹಾಕಿದ ಬಾರವಲ್ಲ, ನಿಸರ್ಗ ಅವಳನ್ನು ಹಾಗೆ ಮಾಡಿದೆ ಎಂಬುದನ್ನು ಸಮರ್ಥಿಸಲಾಗುವುದಿಲ್ಲ 'ಪುಟ್ಟಪಾದದ ಗುರುತು' ಕಥೆಯಲ್ಲಿಅತ್ತೆ ಸೊಸೆಯರ ಸಂಬಂಧ, ವೈಮನಸ್ಸು ಗುಣಸ್ವಭಾವಗಳನ್ನು, ಹಾಗೂ ವೃದ್ಧಾಪ್ಯದಲ್ಲೂ ಸಂಗಾತಿಯನ್ನು ಹರಸುವ ಸೂಕ್ಷ್ಮ ಸಂಬಂಧದ ವಿವೇಚನೆ ಏಕಾಂಗಿತನೆಯನ್ನು ಭಾವಪೂರ್ಣವಾಗಿ ಚಿತ್ರಿಸಿರುವ ಅಂಶಗಳು ವ್ಯಕ್ತವಾಗಿದೆ. ಅಂತರ್‌ಜಾತಿ ವಿವಾಹದ ವಿರೋಧ ಕಾಲಾನುಕ್ರಮದಲ್ಲಿ ತಾಯಿ ಮಗಳು, ಅಕ್ಕ, ತಮ್ಮ ಇಂತಹ ನೈಸರ್ಗಿಕ ಸಂಬಂಧಗಳು ಮತ್ತೆ ಚಿಗುರುತ್ತವೆ. ಇಂತಹ ಸಂಬಂಧಗಳ ಜೊತೆಗೆ ನೆರೆಹೊರೆಯರ ಸಾಮಾಜಿಕ ಸಂಬಂಧದ ಅನಿವಾರ್ಯತೆಯ ಅಂಶಗಳನ್ನು 'ಗುಬ್ಬಿಗೂಡು' ಕಥೆಯಲ್ಲಿ ಕಾಣಬಹುದಾಗಿದೆ. ಆದರೆ ಇಲ್ಲಿ ಕೋಮುಗಲಭೆ ಪ್ರಮುಖವಾಗಿದ್ದು ಮುಗ್ಧರನ್ನು ಅಪರಾಧಿಯಾಗಿ ನಿರೂಪಿಸುವಲ್ಲಿ ಪೋಲೀಸರ ನಿರ್ಲಕ್ಷ್ಯತನವನ್ನು ಕುರಿತ ಅಂಶಗಳು ಚರ್ಚೆಯಾಗಿಲ್ಲ, 'ಪ್ರಕೃತಿ ದಾವಂತ'ದಲ್ಲಿ ಸಂಪ್ರದಾಯಗಳ ಶಿಥಲತೆಗೆ ಚಿಕ್ಕ ಕುಟುಂಬ ಪದ್ಧತಿ, ತಲೆಮಾರಿನ ಅಂತರ, ಮಹಿಳೆಯ ಶಿಕ್ಷಣ ಪ್ರಮುಖ ಕಾರಣಗಳನ್ನು ನೀಡಲಾಗಿದೆ ಆದರೆ ಈ ಕಥೆಯಲ್ಲಿ ನಿರ್ದಿಷ್ಟ ತೀರ್ಮಾನಗಳಲ್ಲಿ ಎಂದು ಅಭಿಪ್ರಾಯ ಪಡುತ್ತೇನೆ. 'ನಕ್ಷತ್ರದ ಬೆಳಕು ಹಿಡಿದು' ಕಥೆಯಲ್ಲಿಪ್ರೀತಿಯ ತಾರತಮ್ಯ ಕಂಡು ಬಂದಿದ್ದು, ಇಲ್ಲಿ ಉಪಕಥೆಯ ತಂತ್ರವನ್ನು ಕಥೆಗಾರ್ತಿ ಪ್ರಯೋಗಿಸಿದ್ದಾರೆ. ಕಿಚ್ಚನ್ ಪ್ಯಾರಡೈಸ್, ಬಂಜೆತನ ಸಮಸ್ಯೆ ಇದರಿಂದ ಹೆಣ್ಣಿನ ಮನಸ್ಸಿನ ಮೇಲೆ ಆಗುವ ಪರಿಣಾಮಗಳು, ಸಮಾಜ ನಿಂದನೆಯನ್ನು ಕುರಿತು ಅಂಶಗಳು ವ್ಯಕ್ತವಾಗಿದೆ. ಇಲ್ಲಿ ನಾಯಕಿಯ ತಂಗಿ ತನ್ನ ಮಗುವನ್ನು ಕೊಡಲು ತೀರ್ಮಾನಿಸಿದಾಗ ಗಂಡ ಒಪ್ಪದಿರಲು ಮೂರು ಪ್ರಶ್ನೆಗಳು ಉದ್ಭವಿಸುತ್ತವೆ. ಈ ಮೂರು ಪ್ರಶ್ನೆಗಳು ಓದುಗರನ್ನು ಚಿಂತನೆಗೆ ಒಳಗಾಗುವಂತೆ ಮಾಡುತ್ತವೆ. ರಕ್ತ ಸಂಬಂಧಗಳಲ್ಲಿ ಉಂಟಾಗುವ ವಿವಾಹದಲ್ಲಿ ಪ್ರೇಮ ಅಂಕುರಿಸದೆ ಈ ಪ್ರೇಮ ಸಮಾಜ ಬಂಧನಗಳನ್ನು ಮೀರುತ್ತವೆ ಎಂಬುದನ್ನು 'ಬಣ್ಣದ ಕೌದಿ' ಕಥೆಯಲ್ಲಿ ಕಾಣಬಹುದಾಗಿದೆ. ಮಗು ಚಿತ್ರ ಬರೆಯಿತು. ಕಥೆಯಲ್ಲಿ ಮಧ್ಯಮ ವರ್ಗದ ಜೀವನವನ್ನು ಕುರಿತು ಹೇಳುತ್ತಾ ಹೊಸ ವಸ್ತುಗಳು ಅನಿವಾರ್ಯವಾದಾಗ ಹಳೆಯ ವಸ್ತುಗಳು ವಿನಾಕಾರಣ ಹೊರ ಹೋಗುವುದು ಇಲ್ಲಿ ವೃದರ ಸ್ಥಿತಿಯನ್ನು ಕುರಿತು ಚಿಂತಿಸುವಂತೆ ಕಥೆಗಾರ್ತಿ ಪ್ರಯತ್ನಿಸಲಾಗಿದೆ ಎಂಬ ಸಂಶಯ ಬರುತ್ತದೆ. ಕಥೆಯಲ್ಲಿ

ರೂಪಕಗಳ ಪ್ರಯೋಗವಿದೆ. ದಿ'ಢೀರನೆ ಹಣಗಳಿಸಲು ಮಾಡಿದ ಪ್ರಯತ್ನ ಹುಲಿಯಾಗಿ ಅವನನ್ನೇ ಕಬಳಿಸಿದ್ದು, ವಿವಾಹದ ಮೊದಲಿನ ಪ್ರೇಮ, ಸಂಸಾರದ ಭಾರಬಿದ್ದಾಗ ಗ್ಲಾಸು ಒಡೆದ ಫೋಟೋದಂತೆ ಆದದ್ದು 'ಗ್ಲಾಸ್‌ಹೌಸ್' ಇತ್ಯಾದಿ ರೂಪಕಗಳು ಪ್ರಯೋಗವಾಗಿದೆ. ಇತ್ಯಾದಿ ಅಂಶಗಳು ಈ ಲೇಖನದಲ್ಲಿ ಚರ್ಚೆಯಾಗಿವೆ. ಇಲ್ಲಿನ ಬಹುಪಾಲು ಕಥೆಗಳು ಮಹಿಳೆಯರ ಸಮಸ್ಯೆಗಳನ್ನು ಕುರಿತು ಚಿಂತಿಸಿದರೂ ಆದರೆ ಈ ಸಂಕಷ್ಟಗಳು ಪುರುಷ ಪ್ರಧಾನ ಸಮಾಜದಿಂದಲೇ ಬಂದದ್ದು ಎಂಬ ಭಾವ ಬರದಂತೆ ಕಥೆಗಾರ್ತಿ ಕಾಳಜೀ ವಹಿಸಿದ್ದಾರೆ. ಹೀಗೆ ಸುನಂದಾ ಅವರ ಎಲ್ಲಾ ಕಥೆಗಳು ನಾವು ದಿನ ನಿತ್ಯ ನೋಡುವ, ಅನುಭವಿಸುವ ಪುರುಷ, ಸ್ತ್ರೀ ಮಕ್ಕಳ ಪಾತ್ರಗಳಿದ್ದು ಅವು ಎದುರಿಸಬೇಕಾದ ಘಟನೆಗಳು ಕಥೆಯನ್ನು ನಿರ್ಮಿಸಿವೆ. ಹೀಗೆ ಇವರ ಕಥೆಗಳಲ್ಲಿ ಸಹಜತೆ, ಸ್ವಾಭಾವಿಕತೆ, ವಾಸ್ತವಿಕತೆ, ಪ್ರಾಮಾಣಿಕತೆ, ನಾವಿನ್ಯತೆ ಇದ್ದು ಒಂದು ಉತ್ತಮ ಪ್ರಾಯೋಗಿಕ ಕಥಾಸಂಕಲನವಾಗಿದೆ ಎಂದು ಅಭಿಪ್ರಾಯ ಪಡುತ್ತೇನೆ.

ಹೊಸ ತಲೆಮಾರಿನ ಕಥೆಗಾರ್ತಿಯರಲ್ಲಿ ಸುನಂದಾ ಪ್ರಕಾಶ್ ಕಡಿಮೆ ಪ್ರಮುಖರು ಇವರು 'ಪುಟ್ಟಪಾದದ ಗುರುತು', 'ಗಾಂಧೀ ಚಿತ್ರದ ನೋಟು' ಎಂಬ ಎರಡು ಕಥಾ ಸಂಕಲನಗಳನ್ನು ರಚಿಸಿದ್ದಾರೆ. ಇವರ ಕಥೆಗಳು ದಿನನಿತ್ಯದ ಘಟನೆಗಳನ್ನು ಕಥೆಯ ವಸ್ತುವಾಗಿಸುವ ಮಧ್ಯಮ ವರ್ಗದ ಜನರ ಜೀವನವನ್ನು ಕುರಿತು ಹೇಳುತ್ತವೆ. ಸುನಂದಾ ಅವರ ಗಾಂಧೀ ಚಿತ್ರದ ನೋಟು ಕಥಾ ಸಂಕಲನವನ್ನು ಕುರಿತು ಅನೇಕ ವಿಮರ್ಶಕರು ಲೇಖನಗಳನ್ನು ಪ್ರಕಟಿಸಿದ್ದಾರೆ. ಅವರಲ್ಲಿ ಟಿ.ಅವಿನಾಶ, ಲಕ್ಷ್ಮಣ ಕೊಡಸೆ, ವಿದ್ಯಾರಶ್ಮಿ ಅವರ ಲೇಖನಗಳನ್ನು ಕುರಿತು ಈ ಅಧ್ಯಯನದಲ್ಲಿ ಚರ್ಚಿಸಲಾಗಿದೆ.

ಟಿ.ಅವಿನಾಶ್ ಎಂಬ ಲೇಖಕರು 'ಬದುಕಿನ ಪರಾಮರ್ಶೆಯ ಪ್ರಪಂಚ' ಎಂಬ ಲೇಖನವನ್ನು ಪ್ರಕಟಿಸಿದ್ದಾರೆ ಈ ಲೇಖನದ ಮೇಲೆ ನನ್ನ ಅಭಿಪ್ರಾಯಗಳನ್ನು ಗುರುತಿಸಲಾಗಿದೆ. ಸುನಂದಾ ಅವರು ಯಾವುದೇ ನಿಶ್ಚಿತ ಪೂರ್ವ ಪಕ್ಷಕಟ್ಟಿಕೊಳ್ಳದೆ, ಸಿದ್ಧಾಂತಗಳ ಬಾರವಿಲ್ಲದೆ ಬರೆಯುತ್ತಿರುವ ಕತೆಗಾರ್ತಿಯರಲ್ಲಿ ಒಬ್ಬರಾಗಿದ್ದಾರೆ ಎಂಬ ಲೇಖಕರ ಅಭಿಪ್ರಾಯ ಸರಿಯಾಗಿದೆ. ಸುನಂದೆ ಅವರ ಎರಡನೇ ಕಥಾ ಸಂಕಲನ 'ಗಾಂಧಿ ಚಿತ್ರದ ನೋಟು' ೧೩ ಕಥೆಗಳನ್ನೊಳಗೊಂಡಿರುವ ಕಥಾ ಸಂಕಲನವಾಗಿದೆ. ಇವರ ಕಥೆಗಳಲ್ಲಿ 'ಬದುಕಿನ ಪರಾಮರ್ಶೆಯಿದೆ ಆದರೆ ನಿರ್ದಿಷ್ಟ ತೀರ್ಮಾನಗಳಿಲ್ಲ' ಎಂಬ ಲೇಖಕರ ಅಭಿಪ್ರಾಯ ಒಪ್ಪಲಾಗುವುದಿಲ್ಲ ಏಕೆಂದರೆ 'ಜರಿಯಂಚಿನ ಪ್ರಾಕು', 'ತಂಕಿ', 'ಅಪ್ಪಿ' ಮುಂತಾದ ಕಥೆಗಳಲ್ಲಿ ರಸ್ತೆಯ ಅಗಲೀಕರಣ ಸಮಸ್ಯೆ, ಏಡ್ಸ್‌ನಂತಹ ಮಾರಕ ಕಾಯಿಲೆ, ಪುಟ್ಟ ಬಾಲೆಯ ಮಾನಸಿಕ ಅಸ್ವಸ್ಥತೆ ಇತ್ಯಾದಿ ಸಮಸ್ಯೆಗಳು ನಿರ್ದಿಷ್ಟ ಕಾರಣಗಳನ್ನು ನೀಡುವುದರ ಮೂಲಕ ಸಮಸ್ಯೆಗಳಿಗೆ ಪರಿಹಾರ ನೀಡುವಲ್ಲಿ ನಿರ್ದಿಷ್ಟ ತೀರ್ಮಾನಗಳಿಲ್ಲ ಎಂದೆನಿಸುವುದಿಲ್ಲ. ಸುನಂದಾ ಅವರ ಕಥೆಗಳು ವರ್ತಮಾನ ಸಮಾಜದ ಎಲ್ಲಾ ಸಂಕಟ ವೈರುದ್ಯ ವೈಪರೀತ್ಯಗಳ ಪ್ರಧಾನ ಕೇಂದ್ರವಾಗಿಟ್ಟು ಕತೆ ಕಟ್ಟಿಲ್ಲವೆಂದು ಆಪಾದಿಸುತ್ತಾರೆ ಇದು ಸರಿಯಲ್ಲ, ಏಕೆಂದರೆ ಬಹುಪಾಲು ಕಥೆಗಳು ಸಮಕಾಲೀನ ಸಮಾಜದ ಪರಿಸ್ಥಿತಿಯನ್ನು,

ವರ್ತಮಾನದ ಸಮಸ್ಯೆಗಳನ್ನು ತನ್ನದೇ ಆದ ಅನುಭವ, ಲೋಕಾನುಭವದ ಹಿನ್ನಲೆಯಲ್ಲಿ ಪಾತ್ರಗಳ ಮೂಲಕ ಕಥೆಗಾರ್ತಿ ಕಥೆಯನ್ನು ಕಟ್ಟಿಕೊಟ್ಟಿದ್ದಾರೆ. ಇದಕ್ಕೆ 'ಜರಿಯಂಚಿನ ಪ್ರಾಕು' ಕಥೆಯನ್ನು ಉದಾಹರಿಸಬಹುದು. ಈ ಕಥೆಯಲ್ಲಿ ಗುರ್‍ಯಾ ಮತ್ತೊಬ್ಬ ಶ್ರಮಿಕನ ಕಬ್ಬಿನ ಹಾಲಿನ ಮಿಷಿನನ್ನು ಕಾಪಾಡುವುದನ್ನು ತೋರುವುದು ಕಥೆಗಾರ್ತಿ ಸ್ವಲ್ಪ ಬಲವಂತವಾಗಿ ತಂದಿರುವಂತೆ ಕಾಣುತ್ತದೆ? ಎಂಬ ಲೇಖಕರ ಅಭಿಪ್ರಾಯ ಒಪ್ಪದೇ, ಇಲ್ಲಿ ಸುನಂದಾ ಕಥೆಯಲ್ಲಿ ಅಧಿಕಾರಿಗಳ ಕ್ರೌರ್ಯ, ಕೆಳವರ್ಗದ ಮಾನವೀಯತೆಯನ್ನು, ಪರಿಸ್ಥಿತಿಗಳ ನೈಜತೆಯನ್ನು ಚಿತ್ರಿಸುವುದರ ಮೂಲಕ ಸನ್ನಿವೇಶ ಸಂದರ್ಭಗಳಿಗೆ ತಕ್ಕಂತೆ ಈ ಘಟನೆಯನ್ನು ತಂದಿರಬಹುದು ಇದು ಕಥೆಗಾರ್ತಿಯ ಕಥನ ಕೌಶಲ್ಯಗಳನ್ನು ಕುರಿತು ಹೇಳುತ್ತದೆ ಇಲ್ಲಿ ಚಿನ್ನಮ್ಮನ ಆಸೆಯಂತಹ ಒಡವೆಯ ಆಸೆ ಆಕಾಂಕ್ಷೆ ಹೆಣ್ಣಿನ ಬಯಕೆಗಳು ಚರ್ಚೆಯಾಗಿಲ್ಲ ಅಲ್ಲದೆ ಪೀಳಿಗೆಯ ಅಂತರ ಸಂಬಂಧಗಳು, ಗುರ್‍ಯಾ ಪಾಲಿಕೆಯ ನೌಕರನಾಗಿ ಭಾಗಿಯಾಗುವ ಪ್ರಸಂಗ ವ್ಯಂಗ್ಯ ದುರಂತಗಳನ್ನು ಪ್ರತಿನಿಧಿಸುತ್ತದೆ. ಹೀಗೆ ಲೇಖಕರು ಕೆಲವು ಅಂಶಗಳನ್ನು ಕುರಿತು ಚರ್ಚೆಯಾಗಿಲ್ಲ, 'ಅಪ್ಪಿ' ಕಥೆಯಲ್ಲಿಮಗುವಿನ ಮಾನಸಿಕ ಅಸ್ವಸ್ಥೆಯನ್ನು ಕುರಿತು ಹೇಳುತ್ತದೆ. ನಗರ ಜೀವನದಲ್ಲಿ ಸ್ವಯಂ ಸೃಷ್ಟಿಗೊಂಡ ಅನಿವಾರ್ಯತೆ ಮಾನವೀಯ ಸಂಬಂಧಗಳನ್ನು ಶಿಥಿಲಗೊಳಿಸುವುದು ಎಂಬ ನೈತಿಕ ತಿಳುವಳಿಕೆಯಿಲ್ಲದೆ ಎಂಬ ಲೇಖಕರ ಅಭಿಪ್ರಾಯ ಸರಿಯಾಗಿದೆ. ಆದರೆ ಈ ಸಿದ್ಧಾಂತ ಕತೆಗಳಾಗದಿರುವುದೇ ಇವುಗಳ ಯಶಸ್ಸಿಗೆ ಕಾರಣವಾಗಿದೆ. ಇಲ್ಲಿಯ ಕಥೆಗಳು ಸ್ತ್ರೀವಾದಿ ನೆಲೆಯಿಂದ ರಚಿಸದೆ ಸ್ತ್ರೀವಾದೋತ್ತರ ಕಥೆಗಳನ್ನು ಇಲ್ಲಿ ಕಾಣಬಹುದಾಗಿದೆ. ಫಮಿನಿಸಮ್ಮಿನ ಮತ್ತೊಂದು ಆಯಾಮವನ್ನು ಇವರ ಕತೆಗಳು ಶೋಧಿಸುತ್ತವೆ ಎಂಬ ಲೇಖಕರ ಅಭಿಪ್ರಾಯ ಸಮಂಜವಾಗಿದೆ. ಇಲ್ಲಿ ಕೆಲವು ಕಥೆಗಳು ಮಾತ್ರ ಚರ್ಚೆಗೊಳಪಟ್ಟಿವೆ. 'ಚಿನ್ನಿದಾಂಡು', 'ಕೋಲು ಸಂಪಿಗೆ ಮರ', 'ಚೌಕ ಮತ್ತು ಗೋಲ', ಇತ್ಯಾದಿ ಪ್ರಯೋಗ ಶೀಲ ಕಥೆಗಳಲ್ಲಿ ಕಂಡುಬರುವ ವಿಚ್ಛೇದನ, ವೇಶ್ಯೆ ಸಮಸ್ಯೆ, ಏಡ್ಸ್ ರೋಗ. ಇತ್ಯಾದಿ ಅಂಶಗಳು ಚರ್ಚೆಯಾಗಿಲ್ಲ. ಹೀಗೆ ಯಾವುದೇ ಸಾಂಪ್ರದಾಯಿಕವಾದ ಚೌಕಟ್ಟಿಲ್ಲದೆ ಕಥನ ಕಲೆಯನ್ನು ಸೃಷ್ಟಿಸುವುದರಲ್ಲಿ ಸುನಂದಾ ಯಶಸ್ವಿಯಾಗಿದ್ದಾರೆ ಎಂಬುದಕ್ಕೆ 'ಗಾಂಧಿ ಚಿತ್ರದ ನೋಟು' ಸಾಕ್ಷಿಯಾಗಿದೆ.

ಲಕ್ಷ್ಮಣ ಕೊಡಸೆ ಈ ಕಥಾ ಸಂಕಲನವನ್ನು ಕುರಿತು 'ಭರವಸೆಯ ಕಲೆಗಾರಿಕೆ' ಎಂಬ ಶೀರ್ಷಿಕೆಯಲ್ಲಿ ಲೇಖಕರ ಅಭಿಪ್ರಾಯಗಳನ್ನು ಕಾಣಲಾಗಿದೆ. ಇವರ ಲೇಖನವನ್ನು ಈ ಅಧ್ಯಯನದಲ್ಲಿ ಚರ್ಚಿಸಿದ್ದೇನೆ. ಸುನಂದಾ ಅವರು ಕಥೆಗಳಲ್ಲಿ ವಾಸ್ತವ ಘಟನೆಗಳ ಹಿನ್ನಲೆಯಲ್ಲಿ ಪಾತ್ರಗಳ ನಡವಳಿಕೆಯನ್ನು ಮಮಕಾರವಿಲ್ಲದೆ ನಿರೂಪಿಸಲಾಗಿದೆ ಎಂಬ ಲೇಖಕರ ಅಭಿಪ್ರಾಯಕ್ಕೆ ವಿವರಣೆಯನ್ನು ನೀಡಲು ಬಯಸುತ್ತೇನೆ. ಒಂದು ಘಟನೆಯ ಹಿನ್ನಲೆಯಲ್ಲಿ ಅದಕ್ಕೆ ಸಂಬಂಧಿಸಿದ ಪಾತ್ರಗಳ ಗುಣಸ್ವಭಾವಗಳನ್ನು ನವಿರಾಗಿ ಅನಾವರಣಗೊಳಿಸುವ ಪ್ರಯತ್ನಗಳು ಸುನಂದಾ ಅವರ ಕಥೆಯಲ್ಲಿದೆ ಎಂದು ಅಭಿಪ್ರಾಯಪಡುತ್ತೇನೆ.

ಗ್ರಾಮೀಣ ಹಿನ್ನೆಲೆಯ ಶ್ರೀಮಂತ ಬಾಲ್ಯದ ಅನುಭವಗಳು ಕಥೆಗಳಿಗೆ ಸಾಮಾಗ್ರಿಯನ್ನು ಒದಗಿಸಿವೆ ಎಂದಿದ್ದಾರೆ. ಆದರೆ ಸುನಂದಾ ಅವರ ಬಹುಪಾಲು ಕಥೆಗಳು ನಗರ ಪರಿಸರವನ್ನು ಕುರಿತು ಮಧ್ಯಮ ವರ್ಗದವರ ಬದುಕನ್ನು ಹಾಗೂ ಕೆಳವರ್ಗದ ಜನರ ಶ್ರಮಿಕರ ಬದುಕಿನ ಚಿತ್ರಣ ಇವರ ಕಥೆಯಲ್ಲಿ ಕಾಣಬಹುದಾಗಿದೆ. ಬಾಲ್ಯದ ಅನುಭವ ಕಥೆಗಳಿಗೆ ಲೇಖಕರು ಉದಾಹರಿಸದಾಗುತ್ತಾರೆ. ಇದು ಎಲ್ಲಾ ಕಥೆಗಳು ಬಾಲ್ಯದ ಅನುಭವ ಕಥೆಗಳೆ ಎಂಬ ಚರ್ಚೆಗೆ ಆಸ್ಪದ ಉಂಟಾಗುತ್ತದೆ. ಸುನಂದಾ ಚಿತ್ರಿಸುವ ಜಗತ್ತು ಮಧ್ಯಮ, ಕೆಳಮಧ್ಯಮ ಹಾಗೂ ಬಡತನ ಬದುಕಿನ ಚಿತ್ರಣವಿದೆ ಆದರೆ ಬದುಕಿಗಾಗಿ ನಡೆಸುವ ಹೋರಾಟವಾಗಲೀ, ಸಂಘರ್ಷವಾಗಲೀ ಇಲ್ಲಿ ಕಥೆಯ ವಸ್ತುವಾಗಿಲ್ಲ ಎಂಬ ಲೇಖಕರ ಅಭಿಪ್ರಾಯ ಇದು ಸರಿ. ಏಕೆಂದರೆ ಜರಿಯಂಚಿನ 'ಪ್ರಾಕು', ಎನ್ನಪೊರೆವ ತೊಟ್ಟಿಲು ಕಥೆಗಳಲ್ಲಿ ಬರುವ ಪಾತ್ರಗಳು ಜೀವನೋತ್ಸಾಹದ ಚಿತ್ರಣವನ್ನು ಕಾಣಬಹುದಾಗಿದೆ. ಅಪ್ಪಿ ಕಥೆಯನ್ನು ಕುರಿತು ಮಗುವಿನ ಮಾನಸಿಕ ಅಸ್ತವ್ಯಸ್ಥತೆಗೆ ಅವಿವೇಕಿ ಮಹಿಳೆ ಪ್ರಮುಖ ಕಾರಣವಾಗಿದ್ದು ಆದರೆ ಈ ಮಹಿಳೆಯನ್ನು ಕುರಿತು ಲೇಖಕರು ಸ್ವಂತ ದುಡಿಮೆಯಿಂದ ಪ್ರಾಪ್ತವಾಗುವ ಅಹಂಕಾರದ ಅವಿವೇಕಿ ಮಹಿಳೆ ಎಂಬ ವ್ಯಾಖ್ಯಾನದ ಬಗ್ಗೆ ವಿರೋಧ ವ್ಯಕ್ತಪಡಿಸುತ್ತೇನೆ. ಏಕೆಂದರೆ ಇವರ ಈ ವ್ಯಾಖ್ಯಾನದಲ್ಲಿ ಪುರುಷ ಪ್ರಧಾನತೆಯ ವಾಸನೆ ಕಂಡುಬರುವಂತಿದೆ. 'ಗಾಂಧೀ ಚಿತ್ರದ ನೋಟು' ಕಥೆಯಲ್ಲಿ ಬರುವ ತಾರಕ್ಕನ ಪಾತ್ರದ ವಿರೋಧವಿದೆ ಆದರೆ ಈ ಕಥೆಯಲ್ಲಿ ಮನುಷ್ಯನ ಸ್ವಾರ್ಥ, ಬಡತನ, ಹಣದ ವಿಫುಲತೆ ಇತ್ಯಾದಿ ವಿಷಯಗಳು ಚರ್ಚೆಯಾಗಿಲ್ಲ. 'ಕೋಲು ಸಂಪಿಗೆ ಮರ', 'ಚಕ್ರ ಮತ್ತು ಗೋಲ' ಕಥೆಗಳನ್ನು ಭಾವ ಗೀತೆಯಂತಿದೆ ಎಂಬ ಲೇಖಕರ ಅಭಿಪ್ರಾಯವನ್ನು ಒಪ್ಪಲಾಗುವುದಿಲ್ಲ 'ಎನ್ನ ಪೊರೆವ ತೊಟ್ಟಿಲು' ಕಥೆಯಲ್ಲಿತಾಯ್ತನದಿ ಹಂಬಲ ವ್ಯಕ್ತವಾಗಿದೆ ಆದರೆ ಮಲತಾಯಿಯ ತ್ಯಾಗ ಈ ಅಂಶಗಳು ಚರ್ಚೆಯಾಗಿಲ್ಲ ಜರಿಯಂಚಿನ ಪ್ರಾಕು ಕಥೆಯಲ್ಲಿ ಗುರ್ರ್ಯಾನ ವ್ಯಂಗ್ಯದ ಚಿತ್ರಣವಿದೆ ಅಧಿಕಾರಿಗಳ ದರ್ಪ, ರಸ್ತೆ ಅಗಲೀಕರಣ ಸಮಸ್ಯೆ ಶ್ರಮಿಕರ ಸಂಕಷ್ಟಗಳು ಚರ್ಚೆಯಾಗಿಲ್ಲವಾಗಿದೆ. ಏಡ್ಸ್ ಕಾಯಿಲೆಗೆ ಒಳಗಾದ ವ್ಯಕ್ತಿಯ ಚಿತ್ರಣ 'ತೆಂಕಿ' ಕಥೆಯಲ್ಲಿ ವ್ಯಕ್ತವಾಗಿದೆ. ಹೆತ್ತತಾಯಿಯ ವಾತ್ಸಲ್ಯ ಹೆಣ್ಣಿನ ಅಸ್ವಸ್ಥ ಮನಸ್ಥಿತಿ ಸ್ವಾರ್ಥ ಇತ್ಯಾದಿ ಅಂಶಗಳು ಚರ್ಚೆಯಾಗಿಲ್ಲ ಸುನಂದಾ ಅವರು ಕುಟುಂಬದ ಚೌಕಟ್ಟಿನಲ್ಲಿ ತಾಯಿ ಮಗಳು, ಗಂಡ, ಹೆಂಡತಿ, ಅತ್ತೆ ಸೊಸೆಯ ಪಾತ್ರಗಳಿಂದ ಕಥೆಯನ್ನು ಆಕರ್ಷಿತವಾಗಿ ಕಲೆಗಾರಿಕೆಯಿಂದೆ. ಆದ್ದರಿಂದ ಅವರ ಬರವಣಿಗೆ ಭರವಸೆಯ ಕಲೆಗಾರಿಕೆ ಎಂಬ ವಿಮರ್ಶಕರ ಅಭಿಪ್ರಾಯವನ್ನು ಸಮರ್ಥಿಸಬಹುದಾಗಿದೆ. ಇಲ್ಲಿ ಸುನಂದಾ ಅವರು ಜಟಿಲ ಸಂದರ್ಭಗಳನ್ನು ಸಹನೆಯಿಂದ ಅತಿರೇಕಕ್ಕೆ ವಶವಾಗದಂತೆ ನಿರ್ವಹಿಸುವುದರಿಂದ ಇವರ ಕಥೆಗಳು ಮೆಚ್ಚುಗೆಗೆ ಪಾತ್ರವಾಗಿ ಭರವಸೆಯನ್ನು ಹುಟ್ಟಿಸುತ್ತವೆ. ಆದರೂ ಇಲ್ಲಿನ ಕೆಲವು ಕಥೆಗಳು ಲೇಖಕರ ಪ್ರಭಾವದಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗಿಲ್ಲ.

ವಿದ್ಯಾರಶ್ಮಿ ಪೆಲತ್ತಡ್ಕ ಎಂಬ ಲೇಖಕಿ ಸುನಂದಾ ಅವರ ಕಥಾ ಸಂಕಲನವನ್ನು ಕುರಿತು **'ಮನೆಮನದ ಕತೆಗೆ ಅಕ್ಕರೆಯ ಕುಸುರಿ'** ಎಂಬ ಶೀರ್ಷಿಕೆಯಡಿಯಲ್ಲಿ ಲೇಖನವನ್ನು ಪ್ರಕಟಿಸಿದ್ದಾರೆ

ಸುನಂದಾ ಅವರು ಹೊಸ ಪ್ರಯೋಗಶೀಲತೆಯ ಕಥೆಯನ್ನು ರಚಿಸಿದ್ದಾರೆ. ಈ ಕಥೆಗಳಲಲ್ಲಿ ಶೈಲಿ ಹಿಂದಿಗಿಂತಲೂ ಪ್ರಬುದ್ಧವಾಗಿ ಓದುಗರ ಗಮನ ಸೆಳೆಯುತ್ತವೆ. ಎಂಬ ಲೇಖಕಿಯ ಅಭಿಪ್ರಾಯ ಸಮಂಜಸವಾಗಿದೆ. ಸಂಕಲನದ ಮೊದಲ ಕತೆ 'ಪತ್ರೊಡೆ' ಕಥೆಯಲ್ಲಿ ಸಫಲತೆಯನ್ನು ಹೇಳಿ. ಈ ಕಥೆಯಲ್ಲಿ ಕಂಡುಬರುವ ಅತ್ತೆ ಸೊಸೆ ಸಂಬಂಧ, ಸತ್ತವರೊಡನೆಯಿರುವ ಮುಗಿಯದ ಲೌಕಿಕ ಸೆಳೆತಗಳು ಮನುಷ್ಯನ ದೌರ್ಬಲ್ಯಗಳು ಇತ್ಯಾದಿ ಅಂಶಗಳು ಚರ್ಚೆಯಾಗಿಲ್ಲ. ಹಾಗೂ ಚಿನ್ನಿದಾಂಡ ಕಥೆಯು ಸ್ತ್ರೀ ಪುರುಷರ ದೈಹಿಕ ವ್ಯವಹಾರಕ್ಕೆ ಸಂಕೇತವಾಗುತ್ತದೆ. ಹಾಗೂ ಚಿನ್ನಿದಾಂಡಿನಾಟದ ಪ್ರಸಂಗಗಳ ನಿರೂಪಣೆಯ ವೇಳೆಯ ನಿರ್ಲಿಪ್ತತೆ ಆರೋಪಿಸಿಕೊಂಡಂತೆ ಭಾಸವಾಗುತ್ತದೆ. 'ಮಳೆ ಹೊಯ್ದು ನಿಂತ ಕ್ಷಣ' ಕಥೆಯು ಮಕ್ಕಳಾಟದ ಕಥೆ ಎಂದು ವ್ಯಾಖ್ಯಾನಿಸಿದ್ದಾರೆ. ಇದು ನಿರೂಪಕಿಯ ಬಾಲ್ಯದ ಅನುಭವದ ಕಥೆಗಳಾಗಿದ್ದವು ಎಂದು ಅಭಿಪ್ರಾಯ ಪಡುತ್ತೇರೆ. ಈ ಕಥೆಯು ಎಳೆ ಮಕ್ಕಳ ದೈಹಿಕ ಆಕರ್ಷಣೆಯ ಸಮಸ್ಯೆಗೆ ಪೋಷಣೆ ಸಿಗದೆ ಓದುಗರ ಮನವನ್ನು ಕಾಡುತ್ತಾ ಅಪೂರ್ಣತೆ ಬಾಸವಾಗುತ್ತದೆ ಎಂದು ಅಭಿಪ್ರಾಯ ಪಡುತ್ತಾರೆ. 'ಚೌಕ ಮತ್ತು ಗೋಲ', 'ಕೋಲು ಸಂಪಿಗೆ ಮರ' ಪ್ರಯೋಗಶೀಲ ಕಥೆಯಾಗಿದ್ದು ಕೌಟುಂಬಿಕ ಪರಿಸರದಲ್ಲಿನ ಮನುಷ್ಯ ವರ್ತನೆಯ ಹಲವು ಮುಖಗಳನ್ನು ಸೆರೆಹಿಡಿಯಲಾಗಿದೆ. 'ಕೋಲುಸಂಪಿಗೆ ಮರ' ಕಥೆಯಲ್ಲಿ ನಿರ್ದಿಷ್ಟ ತೀರ್ಮಾನಗಳಿಲ್ಲದೆ ಸಹೃದಯರ ತೀರ್ಮಾನ ಮುಕ್ತಾಯವಾಗುತ್ತದೆ. 'ಕಾಯದೊಳಗಣ ಆತ್ಮ' ಕಥೆಯು ಕಥೆಗಾತಿಯ ಸೃಷ್ಟಿ ಜಗತ್ತು ವಾಸ್ತವಿಕ ಜಗತ್ತಿನ ಸಂಘರ್ಷವನ್ನು ಹೇಳುವ ಚಿನ್ನ ನಿರೂಪಣೆಯ ಕಥೆಯಾಗಿದೆ ಎಂಬ ವ್ಯಾಖ್ಯಾನ ಸಮರ್ಥಿಸುತ್ತೇನೆ ಏಕೆಂದರೆ ಈ ಕಥೆಗಳಲ್ಲಿ ವಾಸ್ತವ ಮಾರ್ಗಕ್ಕೆ ದಕ್ಕದ ಅನುಭವ ಸೂಕ್ಷ್ಮತೆಗಳನ್ನು ಚಿತ್ರಿಸುವ ಮಹಾತ್ವಾಕಾಂಕ್ಷೆ ಲೇಖಕಿಯಲ್ಲಿದೆ. 'ನಿನ್ನದೊಂದು ನೋಟ ಬೇಕು' ಕಥೆಯಲ್ಲಿ ಭಾವನಾತ್ಮಕ ಪೊರೆ ಆವರಿಸಿಕೊಳ್ಳುತ್ತದಾದರೂ ಆ ಹಳದಿ ಸೀರೆಯ ಆವರಣದಲ್ಲಿ ಅಮ್ಮನನ್ನು ಕಾಣುವ ತವಕ ತಣ್ಣಗಾಗಬಹುದೇ ಎಂಬ ಮಾತ್ರ ಬಗೆಹರಿಯುವುದಿಲ್ಲ ಎಂಬ ವಿಮರ್ಶಕರ ಅಭಿಪ್ರಾಯಕ್ಕೆ ವಿವರಣೆ ನೀಡಲು ಇಚ್ಛಿಸುತ್ತೇನೆ. ಈ ಕಥೆಯಲ್ಲಿ ಚಿನ್ನುವಿನ ಚಿಂತನೆಯನ್ನು ಊಹಿಸಿದ ಚಿಕ್ಕಮ್ಮ ಅವಳ ತಾಯಿಯನ್ನು ತೋರಿಸಿದಾಗ ಅಮ್ಮ ಎಂಬ ಪ್ರೀತಿ ಉದ್ದೀಪನವಾಗದೆ ಚಂದ್ರಿಕಾ ಚಿಕ್ಕಮ್ಮನನ್ನು ಸ್ವೀಕರಿಸುತ್ತಾಳೆ ಎಂದು ಸಮರ್ಥನೆ ನೀಡುತ್ತೇನೆ. 'ತಂಕಿ', 'ನನ್ನ ಪೊರೆವ ತೊಟ್ಟಿಲು' ಕಥೆಯ ಅಂಶಗಳು ಚರ್ಚೆಯಾಗಿದ್ದು ಈ ಕಥೆಯಲ್ಲಿ ವೇಶ್ಯಾ ಸಮಸ್ಯೆ ಅಂಶಗಳು ಚರ್ಚೆಯಾಗಿಲ್ಲ, ಅಣ್ಣ ತಂಗಿಯ ಮಧ್ಯೆ ಅನೈತಿಕ ಭಾವನೆಗಳನ್ನು ಕಲ್ಪಿಸಿಕೊಂಡು ತಲ್ಲಣಿಸುವ ತಾಯಿಯ ಅಸ್ಪಷ್ಟ ಮನಸ್ಸಿನ ಚಿತ್ರಣವನ್ನು 'ಜೇಡ ಬಲೆ ನೇಯುತ್ತಿದೆ' ಕಥೆಯಲ್ಲಿ ಕಾಣಬಹುದು. 'ಗಾಂಧಿ ಚಿತ್ರದ ನೋಟು', 'ಜರಿಯಂಚಿನ ಪ್ರಾಕು' ಇತ್ಯಾದಿ ಕಥೆಯಲ್ಲಿ ಕಂಡು ಬರುವ ಅಂಶಗಳು ಚರ್ಚೆಯಾಗಿವೆ. 'ಸುನಂದಾ ಅವರ ಕತೆಗಳ ಶಕ್ತಿಯಿರುವುದು ಅವುಗಳ ನಿರೂಪಣೆಯಲ್ಲಿ ಈ ಕಾರಣದಿಂದ ಅವರಿಗೆ ಪಾತ್ರಗಳೊಡನೆ ತಾದಾತ್ಮ್ಯ ಸಹಜವಾಗಿ ಒದಗಿದೆ[2] ವಿವೇಕ ಶಾನಭಾಗರ ಈ ಹೇಳಿಕೆ ಸಮಂಜಸವಾಗಿದೆ. ಕಾರಣ ಬಹುತೇಕ ಕತೆಗಳಲ್ಲಿ

ಸುನಂದಾ ತಾಳ್ಮೆಯಿಂದ ತನ್ಮಯತೆಯಿಂದ ಪಾತ್ರಗಳ ಒಳಬದುಕನ್ನು ನೋಡಿ ಅವರ ಮಾತುಗಳನ್ನು ಆಲಿಸಿ ಬರೆಯುವ ಸಹನೆಯಿಂದ ತಮ್ಮ ಕಥಾ ಲೋಕದ ವಿಸ್ತಾರವನ್ನು ಓದುಗರಿಗೆ ಮುದನೀಡುತ್ತವೆ. ಹೀಗೆ ಕೌಟುಂಬಿಕ ವಸ್ತುಗಳನ್ನು ಕಥೆಯಾಗಿಸುವ ಸುನಂದಾ ಅವರ ಕಥಾ ಕೌಶಲ್ಯ ಮನೆ ಮನದ ಕತೆಗೆ ಅಕ್ಕರೆಯ ಕುಸುರಿ ಎಂಬ ಶೀರ್ಷಿಕೆಯಲ್ಲಿ ವಿದ್ಯಾರಶ್ಮಿ ಪೆಲತ್ತಡ್ಕ ಹೇಳಿರುವ ಅಭಿಪ್ರಾಯಗಳು ಔಚಿತ್ಯ ಪೂರ್ಣವಾಗಿದೆ.

ಶಾಂತ ಕುಮಾರಿಯವರು 'ಮುಟ್ಟು' ಕಥಾ ಸಂಕಲನವನ್ನು ಕುರಿತು ಬಿ.ವಿ. ಕೆದಿಲಾಯ ಅವರು ಬರೆದಿರುವ ಲೇಖನವನ್ನು ಕುರಿತು ಈ ಅಧ್ಯಯನದಲ್ಲಿ ಚರ್ಚಿಸಲಾಗಿದೆ. ಮುಟ್ಟು ಕಥೆಯು ಸಹೃದಯರ ಮನಸ್ಸನ್ನು ಮುಟ್ಟುವ, ತಟ್ಟುವ ಬೆರಗುಗೊಳಿಸುವ ಅಸಮಾನ್ಯ ಕತೆಗಳ ಸಂಕಲನ. ಈ ಸಂಕಲನದಲ್ಲಿ ೧೭ ಕಥೆಗಳು ಲೇಖಕಿಯ ಸೃಜನಶೀಲತೆ ವ್ಯಕ್ತವಾಗಿದೆ. ಕುಟುಂಬ, ದಾಂಪತ್ಯ ಜೀವನ ಲೈಂಗಿಕತೆ, ಹದಿಹರೆಯ ಮನಸ್ಸಿನ ತಲ್ಲಣಗಳು, ಜಾಗತೀಕರಣದಲ್ಲಿ ಕಂಡು ಬರುವ ವ್ಯಾಪಾರೀಕರಣ ಇತ್ಯಾದಿ ವಸ್ತುಗಳನ್ನೊಳಗೊಂಡ ಈ ಎಲ್ಲಾ ಕತೆಗಳಲ್ಲಿ ಹೊಸತನ, ಅನುಭವದ ವಿಶಿಷ್ಟತೆಯನ್ನು ಕಾಣಬಹುದಾಗಿದೆ. ಪುರುಷ ದ್ವೇಷವಿಲ್ಲದ ಮಹಿಳಾ ಪ್ರಜ್ಞೆಯನ್ನು ಇಲ್ಲಿ ಕಾಣಬಹುದಾಗಿದೆ. ಗಂಡಿನ ಮನಸ್ಸಿನ ಸೂಕ್ಷ್ಮಗಳನ್ನು ಸೂಕ್ಷ್ಮವಾಗಿ ಗ್ರಹಿಸುವಲ್ಲಿ ಲೇಖಕಿಗೆ ಸಾಧ್ಯವಾಗಿರುವುದು ಇಲ್ಲಿ ಗಮನಿಸಬಹುದಾಗಿದೆ. ಇಲ್ಲಿ ಸಾಂಪ್ರಾದಾಯಿಕ ನೈತಿಕ ಮೌಲ್ಯಗಳು ಆಧುನಿಕತೆಯಲ್ಲಿ ತನ್ನ ಮೌಲ್ಯವನ್ನು ಕಳೆದು ಕೊಳ್ಳುವ ಪ್ರಸಂಗವನ್ನು ಈ ಕಥೆಗಳು ಹೊಂದಿವೆ. 'ವಾಸನೆ', 'ಮೀಸೆ' ಕಥೆಯಲ್ಲಿ ವಿಶಿಷ್ಟವಾದ ವಾಸ್ತವತೆಯ ತಂತ್ರಗಳನ್ನು ಬಳಸಿದ್ದಾರೆ. 'ಒಂದು ಹೇನಿನ ಕಥಾ ಪ್ರಸಂಗ' ಇಲ್ಲಿ ಹೆಣ್ಣಿನ ಸಂಶಯ ಪ್ರವೃತ್ತಿಯ ಪರಿಣಾಮಗಳನ್ನು ಕೌಶಲ್ಯಪೂರ್ಣವಾಗಿ ಹೆಣೆಯಲಾಗಿದೆ ಎಂದೆನಿಸುತ್ತದೆ. 'ಮುಟ್ಟು' ಕಥೆಯಲ್ಲಿ ಹೆಣ್ಣಿನ ತಿಂಗಳ ಸಮಸ್ಯೆಯಲ್ಲಿನ ಹಿಂದಿರುವ ನೋವು, ನರಳಾಟ ಈ ಸಂದರ್ಭದಲ್ಲಿ ಹೆಣ್ಣಿನ ಮಾನಸಿಕ ಸ್ಥಿತಿಗತಿಗಳನ್ನು ಕುರಿತು ಹೇಳಲಾಗಿದೆ. 'ಮಾತಾ ಆನಂದ ಮಾಯಿ' ಜಾಗತೀಕರಣಕ್ಕೆ ಸಿಲುಕಿರುವ ಪ್ರಪಂಚದ ವ್ಯಾಪಾರೀಕರಣದ ಹಿಂದಿರುವ ಕ್ರೌರ್ಯ ಆಧ್ಯಾತ್ಮಿಕ ವೇಷದಲ್ಲಿ ಹೆಣ್ಣಿನ ಎರಡು ವಿರುದ್ಧ ಮುಖಗಳನ್ನು ಏಕಕಾಲದಲ್ಲಿ ಅನಾವರಣಗೊಳ್ಳುವ ಅಂಶಗಳು ವ್ಯಕ್ತವಾಗಿದೆ. ಇತ್ಯಾದಿ ಅಂಶಗಳು ಈ ಲೇಖನದಲ್ಲಿ ವ್ಯಕ್ತವಾಗಿದೆ. ಇಲ್ಲಿ ಕೆಲವು ಕಥೆಗಳನ್ನು ಮಾತ್ರ ಹೆಸರಿಸಿ, ಉಳಿದ ಕಥೆಗಳಲ್ಲಿನ ಅಂಶಗಳಾದ ಬಾಹ್ಯ ಸಮಾಜದ ಮಡಿಮೈಲಿಗೆ, ಹೆಣ್ಣಿನ ಲೈಂಗಿಕ ಆಸಕ್ತಿ, ಪ್ರೀತಿಯ ತ್ಯಾಗಕ್ಕೆ ಕಾರಣವಾಗುವ ಕೌಟುಂಬಿಕ ಜವಾಬ್ದಾರಿ, ವರದಕ್ಷಿಣೆ ಸಮಸ್ಯೆ ಹೆಣ್ಣಿನ ಅಸ್ಮಿತ್ತದ ಪ್ರಶ್ನೆ, ಇತ್ಯಾದಿ ಅಂಶಗಳು ಚರ್ಚೆಯಾಗಿಲ್ಲ ಎಂದೆನಿಸುತ್ತದೆ.

'ಮುಟ್ಟು' ಕಥಾ ಸಂಕಲನವನ್ನು ಕುರಿತು ಡಾ.ಸಿ.ಎನ್.ರಾಮಚಂದ್ರನ್ ಅಭಿಪ್ರಾಯಗಳನ್ನು ಕುರಿತು ಈ ಅಧ್ಯಯನದಲ್ಲಿ ಚರ್ಚಿಸಲಾಗಿದೆ. ಮುಟ್ಟು ಕಥೆಯು ಸ್ತ್ರೀ ಪುರುಷರ ಸಂಬಂಧ, ಸಂಶಯ, ಅಪನಂಬಿಕೆ, ಪ್ರೀತಿ ಇತ್ಯಾದಿ ಭಾವನೆಗಳನ್ನು ಅತ್ಯಂತ ಸಹಜವಾಗಿ ಸಿದ್ಧಾಂತದ ಭಾರವಿಲ್ಲವೆ

ಚಿತ್ರಿತವಾಗಿದೆ. 'ಹೀಗೊಂದು ವಾದವೂ' ಪರಂಪರಾಗತ ನೆಲೆಯಲ್ಲದೆ ಸ್ತ್ರೀ ಪುರುಷರ ಸಂಬಂಧವನ್ನು ವಿಶ್ಲೇಷಿಸಲಾಗಿದೆ. ಮನೆ, ಕಥೆಯು ಆಧುನೀಕತೆಯ ಪ್ರಭಾವದಲ್ಲಿ ಜೀವನಧಾರಕ ಮೌಲ್ಯಗಳು ಕಳೆದು ಹೋಗುತ್ತಿರುವ ಅಂಶವನ್ನು ಹೇಳಲಾಗಿದೆ. 'ಮೀಸೆ' ಗಂಡು ಹೆಣ್ಣಿನ ಪರಂಪರಾಗತ ದೃಷ್ಟಿಕೋನವನ್ನು ಸೂಕ್ಷ್ಮವಾಗಿ ಗ್ರಹಿಸಿರುವ ಇತ್ಯಾದಿ ಅಂಶಗಳು ಈ ಲೇಖನದಲ್ಲಿ ಸಮಂಜಸವಾಗಿ ಪ್ರಕಟವಾಗಿವೆ. ಒಟ್ಟಾರೆ ಈ ಎರಡೂ ಲೇಖನಗಳಲ್ಲಿನ ಅಭಿಪ್ರಾಯಗಳು ಸಮಂಜಸವಾಗಿದ್ದು ಕೆಲವು ಮುಖ್ಯ ಅಂಶಗಳನ್ನು ಮಾತ್ರ ಚರ್ಚಿಸಿ ಉಳಿದ ಅಂಶಗಳನ್ನು ಕೈಬಿಟ್ಟಿದ್ದಾರೆ ಎಂದೆನಿಸುತ್ತದೆ. ೨೦-೩೦ ವರ್ಷಗಳಲ್ಲಿ ಮಧ್ಯಮ ವರ್ಗದ ಸ್ತ್ರೀಯರ ಜೀವನದ ಸ್ಥಿತ್ಯಂತರಗಳನ್ನು ವಾಸ್ತವತೆಯಲ್ಲಿ ವಿವಿಧ ಮನೋಭಾವನೆಗಳಲ್ಲುಂಟಾದ ವಿವಿಧ ಆಯಮಗಳನ್ನು ತಕ್ಕ ಭಾಷೆಯಲ್ಲಿ ಸೆರೆಹಿಡಿಯುವುದರಲ್ಲಿ ಶಾಂತಕುಮಾರಿ ಕಥೆಗಳು ಯಶಸ್ವಿಯಾಗಿದೆ.

ಹೊಸ ತಲೆಮಾರಿನ ಕಥೆಗಾರ್ತಿಯರಲ್ಲಿ ವಿನಯಾ ರವರು ಪ್ರಮುಖರಾಗಿದ್ದು ಅವರು ರಚಿಸಿದ ಊರ ಒಳಗಣ ಬಯಲು ಕಥಾ ಸಂಕಲನವನ್ನು ಕುರಿತು ನೇಮಿಚಂದ್ರ, ಗಿರೀಶ್. ವಿ.ವಾಘ ಅವರು ಬರೆದ ಲೇಖನಗಳನ್ನು ಕುರಿತು ಈ ಅಧ್ಯಯನದಲ್ಲಿ ಚರ್ಚಿಸಿದ್ದೇನೆ.

ನೇಮಿಚಂದ್ರ ಅವರು **'ಬದುಕು ಪ್ರೀತಿಯ ಕಥೆಗಳು'** ಎಂಬ ಶೀರ್ಷಿಕೆಯಲ್ಲಿ ಲೇಖನವನ್ನು ಪ್ರಕಟಿಸಿದ್ದಾರೆ. ವಿನಯಾ ಅವರ **'ಊರ ಒಳಗಣ ಬಯಲು'** ಕಥಾ ಸಂಕಲನದಲ್ಲಿ ಹನ್ನೊಂದು ಕಥೆಗಳಿದ್ದು ಮಾನವೀಯ ಸಂಬಂಧಗಳು, ಬದುಕು ಪ್ರೀತಿಯನ್ನು ಹುಟ್ಟಿಸುವಂತಹಕಥೆಗಳಿವೆ. ವಿನಯಾ ಅವರು ನಿರುದ್ವೇಗದ ಹಾಗೂ ನಿರಾಯಾಸದ ಶೈಲಿಯಲ್ಲಿ ಕಥೆಯನ್ನು ಚಿತ್ರಿಸಿದ್ದಾರೆ.

ಹಿಂದೂ ಮುಸ್ಲಿಂ ಕೋಮು ಸೌಹಾರ್ದ, ಹೆಣ್ಣಿನ ಮಾನಸಿಕ ಹಾಗೂ ಲೈಂಗಿಕ ಹಿಂಸೆಗೆ ಕಾರಣವಾಗುವ ಪುರುಷರ ನೀಚತನವನ್ನು 'ಅರೆ ಇದು ನಾನು ಬರೆಯಬೇಕಿದ್ದ ಕತೆ ಎನಿಸುವಂತೆ ನಮ್ಮೊಳಗಿನ ಮಾತುಗಳನ್ನು ಚಿತ್ರಿಸಿದ್ದಾರೆ ಎಂಬ ವ್ಯಾಖ್ಯಾನವನ್ನು ಸಮರ್ಥಿಸಲಾಗಿದೆ. 'ಒಂದು ಖಾಸಗಿ ಪತ್ರ' ಕಥೆಯಲ್ಲಿ ಹೆಣ್ಣು ಮಕ್ಕಳ ಎದೆಯ ಭಾವನೆಗಳನ್ನು ಎಳೆ ಎಳೆಯಾಗಿ ತೆರೆದು, ಗಂಡನನ್ನು ಅನಾವರಣಗೊಳಿಸುವ ನಮ್ಮಂತಹ ಹೆಣ್ಣು ಮಕ್ಕಳ ಬಾಲ್ಯದ ಕಥೆಗಳಂತೆ, ತಮ್ಮ ಅನುಭವಗಳೇ ಎನ್ನುವಂತೆ ಈ ಕಥೆಗಳು ಚಿತ್ರಣಗೊಂಡಿದೆ. ತೋರಲಾಗದ ಹೆಣ್ಣು ನೋವುಗಳು ಇಲ್ಲಿಯ ಕಥೆಗಳಲ್ಲಿ ಕಂಡು ಬಂದು, ಮಹಿಳೆಯರು ಎದುರಿಸುವ ಮಾನಸಿಕ ಹಾಗೂ ಲೈಂಗಿಕ ಕಿರುಕುಳ ಪರಿಣಾಮಕಾರಿಯಾಗಿ ಚಿತ್ರಿತವಾಗಿದೆ.

'ಊರ ಒಳಗಣ ಬಯಲು' ಕಥೆಯಲ್ಲಿ ಅಂತರ್ ಜಾತಿವಿವಾಹ, ಕೋಮುಗಲಭೆ ಅಂಶಗಳನ್ನು ಒಳಗೊಂಡಿದ್ದು ಪಾಪ ಪ್ರಜ್ಞೆಯನ್ನು ವ್ಯಕ್ತಿಯನ್ನು ಮೂಡಿಸಿ ಬದುಕು ಪ್ರೀತಿಯಲ್ಲಿ ಪರಿಹಾರ ಸೂಚಿಸುವ 'ಜೀವ ಸೆಳೆಯ ಕತೆ'ಗಳಾಗಿವೆ. 'ಕಡಿತನ ಕಾಯೋ ಅಭಿಮಾನ' ಕಾದಂಬರಿಯ ವಸ್ತುವನ್ನು ಸಣ್ಣಕತೆಯಾಗಿಸುವಲ್ಲಿ ವಿನಯಾ ಯಶ್ವಸಿಯಾಗಿದ್ದಾರೆ. ಇಲ್ಲಿ ಮೂರು ತಲೆಮಾರಿನ ಕತೆಯಿದ್ದು

ಉಪಕಥೆಗಳಂತೆ ಭಾಸವಾಗುತ್ತದೆ. ಇಲ್ಲಿ ತಾಯಿಯನ್ನು ಕಳೆದುಕೊಂಡು ಹತ್ತು ವರ್ಷಕ್ಕೆ ಸೋದರ ಮಾನವ ಮನೆಗೆ ಬಂದ ಗಂಗಿಯ ಬದುಕು, ಸ್ವಾತಂತ್ರ ಸಂಗ್ರಾಮಾ ಉಪ್ಪಿನ ಸತ್ಯಾಗ್ರಹ, ಬೆಂಗಳೂರು ಸೇರಿದ ಮಗಳೂ ಮೊಮ್ಮಕಳಾಚೆಗೆ ಮಗಳ ಸಾವಿನವರೆಗೂ ನಿರಾಯಸವಾಗಿ ಕಥೆ ಅಂತ್ಯಗೊಳುತ್ತದೆ. ಇಲ್ಲಿ ಹೆಣ್ಣಿನ ದಿಟ್ಟತನ, ಪುರುಷರ ಸಂಶಯ ಪ್ರವೃತ್ತಿಯಿಂದ ಸಾವಿಗೀಡಾದ ಹೆಣ್ಣಿನ ಚಿತ್ರಣವಿದೆ. ಆದರೆ ಇಲ್ಲಿ ಕರಿಯಮ್ಮನ ಸಾವು ಅನಿವಾರ್ಯವಿತ್ತೇ? ಎಂದೆನಿಸುತ್ತದೆ ಇದು ದುರಂತ ಕಥೆಯಾಗಿಸಿ ಸಂಬಂಧಗಳ, ಮಾನವೀಯ ಸಂಬಂಧಗಳು ಬದುಕನ್ನು ಕಟ್ಟಿಕೊಡುವ ಬಗೆಯನ್ನು ಇಲ್ಲಿ ಕಾಣಬಹುದಾಗಿದೆ. 'ಎಲ್ಲ ಆರಾಮ' ಕಥೆಯಲ್ಲಿ ನೂರಾರು ವಿದ್ಯಾರ್ಥಿನಿಯರಿಗೆ ಜೀವ ತುಂಬಿದ, ವ್ಯಕ್ತಿತ್ವ ನಿರ್ಮಿಸಿರುವ ಸಾವಿತ್ರಿ ಟೀಚರ್ ನೂರಾರು ಶಿಕ್ಷಕಿಯರಿಗೆ ಮಾದರಿಯಾಗಿ ಬೋಧನೆ ನಿರಾಸಕ್ತಿಯ ಅನಿವಾರ್ಯದ ಉದ್ಯೋಗವಾಗಿ ವಿದ್ಯಾರ್ಥಿಯ ಬದುಕನ್ನು, ವ್ಯಕ್ತಿತ್ವವನ್ನು ನಿರ್ಮಿಸುವಲ್ಲಿ ವಿಫಲವಾಗಿರುವ ಇಂದಿನ ಶಿಕ್ಷಣ, ಬೋಧನೆಯನ್ನು ಕುರಿತು ಶಿಕ್ಷಕರ ಕರ್ತವ್ಯವನ್ನು ಎಚ್ಚರಿಸುವಂತೆ ಈ ಕಥೆ ಚಿತ್ರಿತವಾಗಿವೆ ಎಂದೆನಿಸುತ್ತದೆ. ಇಲ್ಲಿ ಲೇಖಕರು 'ಸ್ವಯ', 'ದಣಿವು ಕಾಡುವ ಹೊತ್ತು', 'ಕ್ಷಮೆಯಿರಲಿ ಕಂದಾ' ಇತ್ಯಾದಿ ಕಥೆಗಳಲ್ಲಿನ ವಿಷಮದಾಂಪತ್ಯ, ರಾಜಕೀಯತೆಯಿಂದ ಯುವಕರ ಮೇಲೆ ಬೀಳುವ ಪರಿಣಾಮ, ಶಿಕ್ಷಕಿಯ ಅಸಹಾಯಕತೆ, ದಾಂಪತ್ಯ ಜೀವನ ಇತ್ಯಾದಿ ಅಂಶಗಳು ಈ ಲೇಖನದಲ್ಲಿ ಚರ್ಚೆಯಾಗಿಲ್ಲ. ಕೆಲವು ಕತೆಗಳು ಬರೆಯಲೇಬೇಕೆಂಬ ಒತ್ತಡದಲ್ಲಿ ಮೂಡಿದೆ. ಎನ್ನುವ ಕಥೆಗಳಿವೆ, ನಿರಾಯಾಸದ ಕಥೆಗಳು ಇಲ್ಲಿವೆ. ಈ ಮಾತು ಸಮಂಜಸವಾಗಿದ್ದು ಇಂತಹ ಕಥೆಗಳಲ್ಲಿ 'ಪ್ರೀತಿ', 'ಜಾಣ್ಮೆಯಾಗಿರು ಮಲ್ಲಿಗೆ', 'ಹತ್ತು ವರ್ಷದ ಹಿಂದೆ' ಕೆಲವು ಉದಾಹರಣೆಗಳನ್ನು ನೀಡಲು ಇಚ್ಛಿಸುತ್ತೇನೆ. ಹೀಗೆ 'ಬದುಕು ಪ್ರೀತಿಯ ಕತೆಗಳು' ಎಂಬ ವ್ಯಾಖ್ಯಾನ ಈ ಸಂಕಲನಕ್ಕೆ ಸಮಂಜಸವಾಗಿದೆನಿಸುತ್ತದೆ.

ಗಿರೀಶ್ ವಿ.ವಾಘ ಅವರು ಈ ಸಂಕಲನವನ್ನು ಕುರಿತು **'ಬದುಕಿಗೆ ಬದ್ಧವಾದ ಕಥೆಗಳು'** ಎಂಬ ಶೀರ್ಷಿಕೆಯಲ್ಲಿ ತಮ್ಮ ಲೇಖನವನ್ನು ಪ್ರಕಟಿಸಿದ್ದಾರೆ. ಈ ಲೇಖನದಲ್ಲಿನ ಕೆಲವು ಅಂಶಗಳನ್ನು ಅಧ್ಯಯನದಲ್ಲಿ ಚರ್ಚಿಸಲಾಗಿದೆ. ಇಲ್ಲಿನ ಕಥೆಗಳು ಉತ್ತರ ಕನ್ನಡ ಜಿಲ್ಲೆಯ ಹಳ್ಳಿ ಮತ್ತು ಪಟ್ಟಣಗಳ ಜೀವನದ ಹಿನ್ನೆಲೆಯನ್ನು ಹೊಂದಿದೆ. ಇಲ್ಲಿ ವಿವರಣೆ ಅನಗತ್ಯವಾಗಿದ್ದು ಓದುಗರನ್ನು ಏಕಾಗ್ರತೆಯಿಂದ ಓದಿದರೆ ಮಾತ್ರ ಅವುಗಳಲ್ಲಿನ ಸ್ವಾರಸ್ಯವನ್ನು ಸವಿಯಲು ಸಾಧ್ಯ ಲೇಖಕರ ಈ ವ್ಯಾಖ್ಯಾನ ನನ್ನ ಅನುಭವದಲ್ಲಿ ಕಾಣಿಸಿದೆ. 'ಸ್ವಯ', 'ಕ್ಷಮೆಯಿರಲಿ ಕಂದಾ', 'ಎಲ್ಲಾ ಆರಾಮ' ಕಥೆಗಳು ನಿರಾಯಾಸದ, ಸಾಮಾನ್ಯ ಕಥೆಗಳಂತೆ ಕಂಡು ಬರುತ್ತವೆ. 'ಒಂದು ಖಾಸಗಿ ಪತ್ರ' ಅತ್ಯುತ್ತಮ ಕಥೆಯಾಗಿದ್ದು ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆಯರು ಎದುರಿಸಬೇಕಾಗಿರುವ ಮಾನಸಿಕ ಹಾಗೂ ಲೈಂಗಿಕ ಹಿಂಸೆಗಳನ್ನು ಪರಿಣಾಮಕಾರಿಯಾಗಿ ನಮ್ಮ ಅನುಭವದ ಕಥೆಯಂತೆ ಚಿತ್ರಿತವಾಗಿದೆ. 'ನೋಯದವರೆತ್ತ ಬಲ್ಲರೂ' ಕಥೆಯು ಕುಟುಂಬಕ್ಕಾಗಿ ದುಡಿದು ಅವರಿಂದಲೇ ಅನ್ಯಾಯಕ್ಕೆ ಒಳಗಾಗಿ ಆತ್ಮಹತ್ಯೆಗೆ ಶರಣಾದ ಹೆಣ್ಣಿನ ದುರಂತ ಕಥೆಯನ್ನು ಮತ್ತೊಂದು ಪಾತ್ರದ ಮೂಲಕ ನಿರೂಪಿಸುವುದರಿಂದ ಪರಿಣಾಮಕಾರಿಯಾಗಿ

ಓದುಗರಿಗೆ ಮುಟ್ಟುವಂತಿದೆ. 'ದಣಿವು', 'ಊರ ಒಳಗಣ ಬಯಲು' ಕಥೆಯಲ್ಲಿ ವ್ಯಕ್ತಿಯ ವ್ಯಕ್ತಿತ್ವದ ಬದಲಾವಣೆ, ಅಧಿಕಾರ ದರ್ಪ, ಕೊನೆಗೆ ಮಾನವೀಯತೆಯನ್ನು ಹೊಂದುವ ಕಥೆಗಳಾಗಿವೆ. ಇಲ್ಲಿ ಹೆಣ್ಣಿನ ಲೈಂಗಿಕ ಕಿರುಕುಳ, ಭ್ರೂಣ ಹತ್ಯೆ ಇತ್ಯಾದಿ ಅಂಶಗಳು ಚರ್ಚೆಯಾಗಿಲ್ಲ. ಇಲ್ಲಿವ್ಯಕ್ತವಾಗಿರುವ ಭಾಷೆಯೂ ಬಹಳ ಆಕರ್ಷಕವಾಗಿದೆ. ಇದಕ್ಕೆ 'ಸ್ವಯ' ಕಥೆಯಲ್ಲಿ ಬರುವ ಒಳಗಿದ ಕೆರೆಯಲ್ಲುಳಿವ ತಗ್ಗು ನೀರಿನಂತೆ ಹೊಲಸುಗಟ್ಟಿದ ಸಂಬಂಧ ವಾಕರಿಕೆ ಅನಿಸುತಿತ್ತು ಈ ಮಾತುಗಳು ಸಾಕ್ಷಿಯಾಗಿದೆ. ಹೀಗೆ ಎರಡೂ ಲೇಖನಗಳು ವಿನಯಾ ಅವರ ಕಥೆಗಳಲ್ಲಿನ ಮಾನವೀಯ ಸಂಬಂಧಗಳು, ಬದುಕು ಪ್ರೀತಿಯ ಬದ್ಧವಾದ ಕಥೆಗಳಾಗಿವೆ ಎಂಬ ಶೀರ್ಷಿಕೆಯಲ್ಲಿ ಸಮಂಜಸವಾಗಿ ತಮ್ಮ ಅಭಿಪ್ರಾಯಗಳನ್ನು ನೀಡಿದ್ದಾರೆ. ಇಲ್ಲಿ 'ಖಾಸಗಿಪತ್ರ' ಕಥೆಯು ಸ್ತ್ರೀವಾದವನ್ನು ವ್ಯಕ್ತಪಡಿಸಿದಂತಿದೆ. 'ಪ್ರೀತಿ', ಜಾಣೆಯಾಗಿರು ನನ್ನ ಮಲ್ಲಿಗೆ', 'ಹತ್ತುವರ್ಷದ ಹಿಂದೆ ಮುತ್ತೂರ ತೇರಿನಲ್ಲಿ ಎಂಬ ಕಥೆಗಳು ಕಾವ್ಯಾತ್ಮಕವಾಗಿದೆ ಎನಿಸುತ್ತದೆ. 'ದಣಿವು ಕಾಡುವ ಹೊತ್ತು' ಕಥೆಯಲ್ಲಿ ಸಾವು ಎಂದುರಾದಾಗ ದುಃಖವನ್ನು ವರ್ಣಿಸುವ ಬಗ್ಗೆ, ಸಾಂತ್ವಾನದ ಮಾತುಗಳು ಬದುಕಿನ ಅವಾಸ್ತವ ಚಿಂತನೆಗಳು ವಾಸ್ತವದಂತೆ ಚಿತ್ರಿಸುವ ಪರಿ ಆಶ್ಚರ್ಯವಾಗಿದೆ. ಹೀಗೆ ವಿನಯಾ ಅವರ ಊರ ಒಳಗಣ ಬಯಲು ಬಯಲಾಗದೆ ಬದುಕಿನ ಸಾರವಾಗಿದೆ. ಇಲ್ಲಿನ ಪ್ರತಿಯೊಂದು ಕಥೆಯೂ ವಿಶಿಷ್ಟ ಅನುಭವ ನೋವುಗಳನ್ನು ಹೊಂದಿದ್ದು, ಅವುಗಳನ್ನು ಓದಿದಾಗ ತಮ್ಮದೇ ಆದ ಅನುಭವಗಳಂತೆ ಭಾಸವಾಗುವ ವಿನಯಾ ಅವರ ಅಂತರ್ಮುಖತೆ, ಸರಳವಾದ ಶೈಲಿಯಲ್ಲಿ ಅಭಿವ್ಯಕ್ತಗೊಂಡಿದೆ.

ಇತ್ತೀಚಿನ ಕಥೆಗಾರ್ತಿಯಲ್ಲಿ ಒಬ್ಬರಾದ ಎಂ.ಎಸ್.ವೇದಾ ಅವರು 'ಪ್ರೀತಿ ಮತ್ತು ಸಾವು', 'ಪಾಲು' ಎಂಬ ಕಥಾ ಸಂಕಲನಗಳನ್ನು ರಚಿಸಿದ್ದು ಈ ಕಥಾ ಸಂಕಲನಗಳ ಮೇಲೆ ಕರೀಗೌಡ ಬೀಚನಹಳ್ಳಿ, ಜಿ.ಪಿ.ಬಸವರಾಜು, ಡಾ.ಸಿ.ಜಿ.ಉಷಾದೇವಿ, ಡಾ.ಗಿರಿಜಾಶಾಸ್ತ್ರಿಯವರು ಲೇಖನವನ್ನು ಪ್ರಕಟಿಸಿದ್ದು ಈ ಲೇಖನವನ್ನು ಕುರಿತು ನನ್ನ ಅಭಿಪ್ರಾಯಗಳನ್ನು ಅಧ್ಯಯನದಲ್ಲಿ ಚರ್ಚಿಸಿದ್ದೇನೆ.

'ಪ್ರೀತಿ ಮತ್ತು ಸಾವು' ಕಥೆಯನ್ನು ಕುರಿತು ಕರೀಗೌಡ ಬೀಚನಹಳ್ಳಿಯವರು ಅಭಿಪ್ರಾಯಗಳು ಕುರಿತು ಚರ್ಚಿಸಿದಾಗ ಮೊದಲ ಕಥೆ 'ಪ್ರೀತಿ ಮತ್ತು ಸಾವು' ಕಥೆಯಲ್ಲಿನಾಯಕ ಸ್ಫೂರ್ತಿ ಕ್ಯಾನ್ಸರ್‌ನಿಂದ ನರಳುತ್ತ ಸಾವಿನ ಸಮೀಪವಿದ್ದರೂ ಪ್ರೀತಿಗಾಗಿ ಹಂಬಲಿಸುವ ಪರಿ ವ್ಯಕ್ತವಾಗಿದೆ, 'ಪಾರೋತಿಯೂ ಪ್ಯಾದೆಯೂ', ಕಥೆಯಲ್ಲಿ ಹೆಣ್ಣಿನ ಸೌಂದರ್ಯ ಮಾರಕವಾಗಿ ಕಾಮುಕ ವ್ಯಕ್ತಿಗಳಿಗೆ ಬಲಿಯಾಗುತ್ತಾ, ಅನೈತಿಕ ಸಂಬಂಧವನ್ನು ಮುಕ್ತವಾಗಿ ಒಪ್ಪಿಕೊಳ್ಳುವ ಹೆಣ್ಣಿನ ದಿಟ್ಟತನವನ್ನು ಪ್ರಶಂಸಿಸಲಾಗಿದೆ. ಚೆಲುವೆ ಮುತ್ತಮ್ಮನ ಪರಸಂಗ ಕಥೆಯಲ್ಲಿ ಕುಡುಕ ಗಂಡನನ್ನು ತಿರಸ್ಕರಿಸಿದ ಹೆಣ್ಣಿನ ಚಿತ್ರಣವನ್ನು ಅಹಂಕಾರದಿಂದ ಮದದಿಂದ ಉಂಟಾಗುವ ಪರಿಣಾಮದ ಅಂಶಗಳನ್ನು ಚರ್ಚಿಸಿಲ್ಲ. 'ಕುರುಕ್ಷೇತ್ರವೂ ಕುಂಯ್ಯನೆಂಬ ಬಾಲಕನ ಕತ್ತಲ ಲೋಕವೂ' ಕಥೆಯಲ್ಲಿಮೇಲು ಜಾತಿಯವರು, ಕೆಳಜಾತಿಯವರ ಮೇಲೆ ನಡೆಸುವ ದೌರ್ಜನ್ಯ. ಹೆಣ್ಣಿನ ಮೇಲೆ ನಡೆಯುವ ಅತ್ಯಾಚಾರ ಇತ್ಯಾದಿ ಅಂಶಗಳು ಚರ್ಚೆಯಾಗಿವೆ. 'ನಗರ

ಮಧ್ಯಮ ವರ್ಗದ ಜನರ ಬದುಕಿಗಿಂತ, ಹಳ್ಳಿಯ ದಲಿತ ಲೋಕದ, ಸ್ತ್ರೀ ಲೋಕದ ಬದುಕನ್ನು ನಿರ್ವಹಿಸುವಲ್ಲಿ ವೇದಾ ತತ್ಪರರಾಗಿದ್ದಾರೆ'. ಲೇಖಕರ ಈ ಹೇಳಿಕೆಯು ಸಮಂಜಸವಾಗಿದೆ. ವೇದಾ ಅವರ ಕಥೆಗಳ ಮೇಲೆ ದಲಿತ ಕಥೆಗಾರರ ಭಾಷೆಯ ದಟ್ಟ ಪ್ರಭಾವವಿದೆ. ಇದು ಬರವಣಿಗೆ ಓದಿಗೆ ಸಲೀಸಾಗಿಲ್ಲ. ಈ ಅಭಿಪ್ರಾಯವನ್ನು ಸಮರ್ಥಿಸುತ್ತೇನೆ. ಇದಕ್ಕೆ ಕಥೆಯ ಪ್ರಾದೇಶಿಕತೆ ಕಾರಣವಾಗಿರಬಹುದು ಆದರೂ ಪ್ರಾದೇಶಿಕ ಭಾಷೆಯ ಸಾಂಸ್ಕೃತಿಕ ಸತ್ವವು ಇವರ ಕಥೆಗಳಿಗೆ ಹೆಚ್ಚು ಮಹತ್ವನೀಡುತ್ತವೆ. ವೇದಾ ಅವರ ಕಥೆಗಳು ಸ್ತ್ರೀ ಸಂವೇದನೆಯನ್ನು ಒಳಗೊಂಡಂತಹ ಕಥೆಗಳಾಗಿವೆ ಲೇಖಕರ ಅಭಿಪ್ರಾಯವನ್ನು ಸಮರ್ಥಿಸುತ್ತೇನೆ ಹೀಗೆ ನಗರ ಮಧ್ಯಮ ವರ್ಗದ ವಿದ್ಯಾವಂತ ತರುಣತಣೆಯರ ನಡುವಿನ ಪ್ರೀತಿ, ಪ್ರೇಮ ದ್ವೇಷ ಸಾವು ಹಳ್ಳಿಗಾಡಿನ ಅಶಿಕ್ಷಿತ ಸಮಾಜದಲ್ಲಿ ಹೆಣ್ಣಿನ ಮೇಲೆ ನಡೆಯುವ ಅತ್ಯಾಚಾರ ಶೋಷಣೆಯನ್ನು ಕುರಿತು ಈ ಕಥೆಗಳು ಚಿಂತಿಸುತ್ತವೆ.

'ಪಾಲು' ಕಥಾಸಂಕಲನವನ್ನು ಕುರಿತು ಜಿ.ಪಿ.ಬಸವರಾಜು 'ಗ್ರಾಮೀಣ ಭಿತ್ತಿಯ ಕಥಾಲೋಕ' ಎಂಬ ಶೀರ್ಷಿಕೆಯಲ್ಲಿಲೇಖನವನ್ನು ಪ್ರಕಟಿಸಿದ್ದಾರೆ. ಎಂ.ಎಸ್.ವೇದಾ ಅವರ ಈ ಕಥಾ ಸಂಕಲನ ಹತ್ತು ಕಥೆಗಳನ್ನು ಒಳಗೊಂಡಿದೆ. ಗ್ರಾಮೀಣ ಹಾಗೂ ನಗರ ಜೀವನವನ್ನೊಳ ಗೊಂಡ ಸಾಂಸ್ಕೃತಿಕ ಚಿತ್ರಣವನ್ನು ಇವರ ಕಥೆಯಲ್ಲಿ ಕಂಡರೂ ಗ್ರಾಮೀಣ ಸಂಸ್ಕೃತಿಯನ್ನು ಇವರ ಕಥೆಗಳಲ್ಲಿ ಹೆಚ್ಚಾಗಿ ಕಾಣಬಹುದಾಗಿದೆ. ನಗರಭಿತ್ತಿ ಇರುವ ಕತೆಗಳಲ್ಲಿ ಬೌಧಿಕ ಕಸರತ್ತು, ವೈಚಾರಿಕತೆ ಸಂಘರ್ಷಗಳು ಬಲಾತ್ಕಾರದಿಂದ ಒಳತಂದಂತೆ ಕಾಣಿಸುತ್ತವೆ ಎಂಬ ಈ ವ್ಯಾಖ್ಯಾನಕ್ಕೆ 'ಸೃಷ್ಠಿ' ಕಥೆಯನ್ನು ಉದಾಹರಿಸುತ್ತೇನೆ ಗ್ರಾಮೀಣ ಭಿತ್ತಿಯ 'ಪಾಲು', 'ಕಾಲುವೆ' ಮತ್ತು 'ಗೌರಿ ಬಂದಳು ಯಾತರ ಮೇಲೆ' ಕತೆಗಳು ಪ್ರಮುಖವಾಗಿದೆ. ಈ ಕಥೆಯಲ್ಲಿ ಹೆಣ್ಣು ಸಾಂಸಾರಿಕ ಜೀವನದಲ್ಲಿ ಅನುಭವಿಸುವ ಸಂಕಷ್ಟಗಳನ್ನು ಕುರಿತು ಹೇಳುತ್ತಾ ವಿಡಂಬನೆಯನ್ನು ಸೂಚಿಸುತ್ತದೆ. ಈ ಎಲ್ಲಾ ಕಥೆಗಳಲ್ಲಿ ಆಡು ಭಾಷೆಯ ಸೊಗಡು ಸೊಗಸು ಜೀವಂತಿಕೆಯು ತುಂಬಿದೆ. ಗ್ರಾಮೀಣ ಬದುಕಿನ ಘಟನೆಗಳನ್ನು ಅತ್ಯಂತ ಸೂಕ್ಷ್ಮವಾಗಿ ಚಿತ್ರಿಸಿರುವುದರಲ್ಲಿ ವೇದಾ ಯಶಸ್ವಿಯಾಗಿದ್ದಾರೆ. ಈ ಕಥಾಸಂಕಲನದ ಹೆಚ್ಚು ಕಥೆಗಳು ಹೆಣ್ಣನ್ನು ಕುರಿತ ಕಥೆಗಳಾಗಿದ್ದು 'ಹೋಗಿ ಬರಲೇ ಭರತ', 'ಮರಳಿ ಬಾರದ ಶಕುಂತಲೆ' ಕಥೆಯು ಮುಖ್ಯ ಉದಾಹರಣೆಯಾಗಿದೆ. ಈ ಎರಡೂ ಕಥೆಗಳು ಹೆಣ್ಣಿಗೆ ಪುರುಷರಿಂದ ಉಂಟಾಗುವ ಮೋಸ, ವಂಚನೆ ಮತ್ತು ಅಸಹಾಯಕತೆಯನ್ನು ಪರಾಂಪರಗತವಾಗಿ ಹೆಣ್ಣನ್ನು ಶೋಷಿಸಿರುವ ಪರಿಯನ್ನು ಚಿತ್ರಿಸುತ್ತದೆ. ಇಲ್ಲಿ ಲೇಖಕರು 'ಪಾಲು' ಒಂದು ಅತ್ಯುತ್ತಮವಾದ ಕಥೆಯಾಗಿದ್ದು ಪ್ರಮುಖ ಪಾತ್ರವಾದ ತಾಯವ್ವ ಮಕ್ಕಳಿಂದ ತಿರಸ್ಕೃತಗೊಂಡು 'ಒಡಲಾಳ' ಕಾದಂಬರಿಯ ಸಾಕವ್ವನಂತೆ ದಿಟ್ಟತನದಿಂದ ಬದುಕನ್ನು ನಡೆಸುತ್ತಾಳೆ ಎಂದು ಅಭಿಪ್ರಾಯ ಪಡುತ್ತಾರೆ. 'ಪರಕೀಯರು' ಕಥೆಯಲ್ಲಿ ಗ್ರಾಮೀಣ ನಗರ ಸಂಸ್ಕೃತಿಯ ಮುಖಾಮುಖಿ ಇತ್ಯಾದಿ ಅಂಶಗಳನ್ನು ಈ ಲೇಖನದಲ್ಲಿ ಚರ್ಚಿಸಿಲ್ಲ ವೇದಾ ಅವರ ಬಹುಪಾಲು ಕಥೆಗಳು ಗ್ರಾಮೀಣ ಸಂಸ್ಕೃತಿಯ ಛಾಯೆಯನ್ನು ಹೊಂದಿದ್ದು ಲೇಖಕರ 'ಗ್ರಾಮೀಣ ಭಿತ್ತಿಯ ಕಥೆಗಳು' ಶೀರ್ಷಿಕೆ ಔಚಿತ್ಯವಾಗಿದೆ ಎಂದು ಅಭಿಪ್ರಾಯ ಪಡುತ್ತೇನೆ.

ಡಾ.ಸಿ.ಜಿ.ಉಷಾದೇವಿಯವರು ಈ ಕಥಾ ಸಂಕಲವನ್ನು ಹಿಡಿಯಾಗಿ ಗ್ರಹಿಸಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ವೇದಾ ಅವರ ಕಥೆಗಳು ಸಾಂಸ್ಕೃತಿಕ ವಿವರಗಳಿಂದ ಬದುಕನ್ನು ಚಿತ್ರಿಸುವ ಪರಿಯಾಗಿದೆ. ಗ್ರಾಮ ಸಮಾಜದ ಮಹಿಳಾ ಲೋಕದ ಪ್ರತಿಯಾಗಿ 'ಸಾಂತವ್ವನೆಂಬ ಅವ್ವನೂ ರುದ್ರೇಶಿಯೆಂಬ ಕಂದನೂ' ಕಥೆಯಲ್ಲಿ ಸಾಂತವ್ವ ಮುಖ್ಯವಾಗಿ ಕಂಡುಬರುತ್ತಾಳೆ ಹಾಗೂ 'ಪಾಲು' ಕತೆಯಲ್ಲಿನ ತಾಯವ್ವ ದೇವನೂರು ಮಹಾದೇವರ 'ಒಡಲಾಳದ' ಸಾಕವ್ವನಷ್ಟೆ ಗಟ್ಟಿಪಾತ್ರವಾಗಿದೆ ಎಂಬ ಲೇಖಕಿಯ ಅಭಿಪ್ರಾಯ ಸಮಂಜಸವಾಗಿದೆ. ಏಕೆಂದರೆ ಸಾಕವ್ವನಂತೆ, ತಾಯವ್ವಳು ಶ್ರಮ ಜೀವಿಯಾಗಿದ್ದು, ಸ್ವತಂತ್ರ್ಯವಾಗಿ ದಿಟ್ಟತನದಿಂದ ತನ್ನ ವ್ಯಕ್ತಿತ್ವವನ್ನು ರೂಪಿಸಿಕೊಂಡಿದ್ದಾಳೆ. ಮತ್ತೊಬ್ಬ ಲೇಖಕಿ ಡಾ.ಗಿರಿಜಾಶಾಸ್ತ್ರೀಯವರು ಸಹ ಪಾಲು ಕಥೆಯಲ್ಲಿ ಮತ್ತೊದಬ್ಬ ಸಾಕವ್ವನನ್ನು ಸೃಷ್ಟಿಸಿದ್ದಾರೆ ಎಂಬ ವ್ಯಾಖ್ಯಾನ ಸಮಂಜಸವಾಗಿದೆ. ಏಕೆಂದರೆ ತಾಯಕ್ಕ ಸಾಕವ್ವನಂತೆ ದಿಟ್ಟ ಹೆಣ್ಣು ಮಕ್ಕಳ ಸ್ವಾರ್ಥದಿಂದಾಗಿ ಬೀದಿಪಾಲಾದಾಗ ದೇವರನ್ನು ಶಪಿಸುತ್ತಾ ಕೂರದೆ ಸ್ವಾಭಿಮಾನಿಯಾಗಿ ಅನ್ನ ಸಂಪಾದಿಸಿಕೊಳ್ಳಲು ಹೊರಟು ಹೋಗುತ್ತಾಳೆ ಇಲ್ಲಿ ಮೈಸೂರ ಪರಿಸರದ ದಲಿತ ಭಾಷೆ ಸಮರ್ಥವಾಗಿದೆ ಎಂದು ಹೇಳಬಹುದು.

ಇಲ್ಲಿ ಈ ಲೇಖಕಿಯರು 'ಪಾಲು' ಕಥೆಯಲ್ಲಿನ ಅಂಶಗಳನ್ನು ಮಾತ್ರ ಚರ್ಚಿಸಿ ಉಳಿದ ಕಥೆಗಳಲ್ಲಿ ಕಂಡು ಬರುವ ಬರಗಾಲ, ಅಧಿಕಾರಿಗಳ ಮೋಸಕ್ಕೆ ಒಳಗಾಗಿರುವ ಗ್ರಾಮೀಣ ಜನತೆ, ಪ್ರೀತಿಯ ಮಹತ್ವ ಗಂಡು ಹೆಣ್ಣಿನ ಪರಸ್ಪರ ನಂಬಿಕೆ, ಪ್ರಾಮಾಣಿಕತೆ ತ್ಯಾಗವನ್ನು ಬದುಕಿನ ಪರಿಪೂರ್ಣತೆಯ, ಹೆಣ್ಣಿನ ಸಂಸಾರಿಕ ಜೀವನದಲ್ಲಿ ಅನುಭವಿಸುವ ಸಂಕಷ್ಟಗಳು ಇತ್ಯಾದಿ ವಿಷಯಗಳು ಚರ್ಚೆಯಾಗಿಲ್ಲ ಎಂದು ಅಭಿಪ್ರಾಯಪಡುತ್ತೇನೆ. ಒಟ್ಟಾರೆ ವೇದಾ ಅವರ ಈ ಕಥಾ ಸಂಕಲನಗಳಲ್ಲಿ ಕಂಡು ಬರುವ ಮಾನವ ಸಮಾಜದಲ್ಲಿ ಕಂಡು ಬರುವಂತಹ ಪ್ರೀತಿ, ಪ್ರೇಮ, ಮೋಸ, ವಂಚನೆ, ಸುಳ್ಳು ಸತ್ಯ, ಅನ್ಯಾಯ ನೀತಿ, ಧರ್ಮ, ನಿಯಮಗಳು ನಂಬಿಕೆಗಳು ಸಂಪ್ರದಾಯಗಳು, ಆಚರಣೆಗಳು ವಿದಿವಿಧಾನ ನಿಯಮಗಳು ಇತ್ಯಾದಿ ಅಂಶಗಳು ಕಥೆಯಲ್ಲಿ ಚಿತ್ರಿತವಾಗಿವೆ.

ಇತ್ತೀಚಿನ ಕಥೆಗಾರ್ತಿಯರಲ್ಲಿ ಒಬ್ಬರಾದ ಬಿ.ಟಿ.ಜಾಹ್ನವಿಯವರು ಕಳೆದುಕೊಂಡವಳು ಮತ್ತು ಇತರ ಕಥೆಗಳು ಮತ್ತು ಹುಡುಕಾಟ ಎಂಬ ಕಥಾಸಂಕಲನವನ್ನು ರಚಿಸಿದ್ದು ಈ ಕಥೆಗಳನ್ನು ಕುರಿತು ಪಿ.ಲಂಕೇಶ. ಅವರ ತಾತ್ವಿಕ ಚರ್ಚೆಯನ್ನು ಈ ಅಧ್ಯಯನದಲ್ಲಿ ಒಳಪಡಿಸಿದ್ದೇನೆ. 'ಕಳೆದುಕೊಂಡವಳು ಮತ್ತು ಇತರ ಕಥೆಗಳಲ್ಲಿ' ಲಂಕೇಶವರು 'ವಿಮುಖ' ಕಥೆಯನ್ನು ರಸಿಕ ಕತೆ ಎಂದಿದ್ದಾರೆ. ಇಲ್ಲಿ ಕಾಮುಕ ವ್ಯಕ್ತಿ ಲೈಂಗಿಕ ಬಿರುಗಾಳಿಗೆ ಸಿಕ್ಕಿ ಸದಾ ಗೆಲ್ಲುತ್ತಾನೆ ಎನ್ನಲಾಗುವುದಿಲ್ಲ. ಹೆಣ್ಣಿನ ಸ್ಪರ್ಶದಿಂದ ತನ್ನ ಪಶುವಿನ ವರ್ತನೆಯನ್ನು ಬಿಟ್ಟು ಮಾನವೀಯ ಗುಣವನ್ನು ಹೊಂದುತ್ತಾನೆ. ಬಲತ್ಕಾರದಿಂದ ನಡೆಯುವುದೊ ಅದೇ, ಒಪ್ಪಿಕೊಂಡರೂ ನಡೆಯುವುದು ಅದೇ ಇಲ್ಲಿ ದುರಾಶೆ ಪ್ರಾಣಿ ಸಹಜವಾದ ಕಾಮುಕತೆಯನ್ನು ಸರಳವಾದ ಭಾಷೆಯಲ್ಲಿ ಕುತೂಹಲ ಕೆರಳಿಸಿದಂತಿದೆ 'ವಿಮುಖ' ಕಥೆ ಮಧ್ಯಮ ವರ್ಗದ

ಬದುಕನ್ನೊಳಗೊಂಡ ಕಥೆಯಾಗಿದೆ. ವ್ಯಭಿಚಾರ ಕಥೆಯಲ್ಲಿ ಲೀಲಾವತಿ ದೈಹಿಕವಾಗಿ 'ವ್ಯಭಿಚಾರಿ' ಎನಿಸಿಕೊಂಡರೆ, ಇದಕ್ಕೆ ವಿರುದ್ಧವಾದ ಧೈರ್ಯವಿಲ್ಲದ ಸುಜಿ ಮಾನಸಿಕ ವ್ಯಭಿಚಾರಿಯಾಗಿ ಕಂಡು ಬರುತ್ತಾಳೆ. ಇಲ್ಲಿ ಹೆಣ್ಣಿನ ವಿರಹದ ಒಂಟಿತನದ ತಲ್ಲಣಗಳನ್ನು ಕುರಿತ ಸಹಜ ಲೈಂಗಿಕ ಆಸಕ್ತಿಯನ್ನು ಕುರಿತದಾಗಿದೆ. ಈ ಎರಡೂ ಕಥೆಗಳಿಗೆ ಭಿನ್ನವಾದ 'ಕಳುಬಳ್ಳಿ' ಕತೆ ದಲಿತ ಹುಡುಗನ ಜೀತಪದ್ಧತಿಯನ್ನು ಕುರಿತು ಹೇಳುತ್ತದೆ ಅಲ್ಲದೆ ಬಾಲ ಕಾರ್ಮಿಕ ಪದ್ಧತಿಯನ್ನು ಸ್ವಜಾತಿಯ ಮನೆಯಲ್ಲಿ ಜೀತದಾಳನ್ನು ಚಿತ್ರಿಸುವ ಕಥೆಯಾಗಿದೆ. ಈ 'ಕಳ್ಳುಬಳ್ಳಿ' ಕತೆ ಜೀತ ಎಂಬುದು ದೈಹಿಕ ಮಟ್ಟದ್ದು ಎಂಬ ಮಾತು ಸಮಂಜಸವಾಗಿದೆ. ಏಕೆಂದರೆ ಇಲ್ಲಿ ತಿಪ್ಪನ ನೋವು ದೈಹಿಕ ಮಟ್ಟ ಮೀರಿದ್ದು ಮತ್ತು ಅವನ ಅವ್ವನ ಪರದಾಟ ತಾಯಿಯ ಪ್ರೀತಿಯನ್ನು ಮೀರಿದ್ದಾಗಿದೆ. ಈ ಅಂಶಗಳು ಇಲ್ಲಿ ಚರ್ಚೆಯಾಗಿವೆ ಆದರೆ ಉಳಿದ 'ಆಸರೆ', 'ತಾಯ್ತನ' ಇತ್ಯಾದಿ ಕಥೆಗಳಲ್ಲಿ ಕಂಡು ಬರುವ ಹೆಣ್ಣಿನ ತಲ್ಲಣಗಳು, ಪುರುಷರ ದೌರ್ಜನ್ಯ, ಬಸವಿ ಕಥೆಯಲ್ಲಿ ಕಂಡುಬರುವ ಮೌಢ್ಯತೆ, ಹೆಣ್ಣಿನ ದಿಟ್ಟತನ ಇತ್ಯಾದಿ ವಿಷಯಗಳು ಚರ್ಚೆಗೊಂಡಿಲ್ಲ ಎನ್ನಬಹುದು.

'ಹುಡುಕಾಟ' ಕಥಾ ಸಂಕಲನವನ್ನು ಕುರಿತು ಬಿ.ಟಿ.ಲಲಿತಾನಾಯಕ್ ಅಭಿಪ್ರಾಯವನ್ನು ಚರ್ಚಿಸಿದ್ದೇನೆ 'ಹುಡುಕಾಟ' ಕಥೆಯು ಹದಿಮೂರು ಕಥೆಗಳನ್ನೊಳಗೊಂಡ ಗ್ರಾಮೀಣ ನಗರ ಬದುಕಿನ ಚಿತ್ರಣವನ್ನು ಕುರಿತ ಕಥೆ. 'ದೇವರ ಬಂದಾವ ಬನ್ನಿರೋ' ಕಥೆಯಲ್ಲಿ ಚಿಕ್ಕಮ್ಮ ಪ್ರಾಯದ ಹೆಣ್ಣಿನ ಸಹಜ ಬಯಕೆಗಳು, ಕನಸುಗಳು ಮೌಢ್ಯ ಜನತೆಯಿಂದ ತನ್ನ ಬಯಕೆಗಳ ಸಮಾದಿಯ ಮೇಲೆ ತನ್ನನ್ನು ತಾನೇ ಆರೋಪಿಸಿಕೊಂಡು ದೇವರಾಗಿಯೇ ಉಳಿದು ಬಿಡುವ ಚಿತ್ರಣವಿದೆ. ವಿದ್ಯೆ-ಆಧುನಿಕತೆ-ಜನ ಮುಖಿಯಾಗದೆ. ಮುಗ್ಧತೆ ಮಾನವೀಯತೆಯ ಅಂಶಗಳು ಕರಗಿ ಹೋಗುವುದು ಎಂಬುದಕ್ಕೆ 'ಅವ್ವಯ್ಯನ ಹಂಡೇವು' ಕಥೆ ಸಾಕ್ಷಿಯಾಗಿದೆ. 'ಬೋರಜ್ಜಿ ಬಸವ, ಹಂದಿ ಹಿಂಡು', ಜೀವ ಸಂಬಂಧಗಳನ್ನೊಳಗೊಂಡ ಅಪರೂಪದ ಕಥೆಯಾಗಿದೆ. ಈ ಎಲ್ಲಾ ಕಥೆಗಳು ವಸ್ತುಸ ಶೈಲಿ, ಭಾಷೆಯಿಂದ ಗ್ರಾಮೀಣ ನಗರ ಸಂಸ್ಕೃತಿಯನ್ನು ಮುಖಾಮುಖಿಯಾಗಿಸುವ ಚಿತ್ರಣವಿದೆ ಎಂದು ಅಭಿಪ್ರಾಯ ಪಡಲಾಗಿದೆ. ಇಲ್ಲಿ 'ನೆಪ', 'ಹುಯ್ಯಾ, ಹುಯ್ಯಾ ಮಳೆರಾಯ', 'ಹುಡುಕಾಟ' ಇತ್ಯಾದಿ ಕಥೆಗಳಲ್ಲಿ ದಲಿತಹೆಣ್ಣಿನ ಮೇಲೆ ನಡೆಯುವ ಶೋಷಣೆ, ಶ್ರೀಮಂತಿಕೆಯ ದರ್ಪ, ಬಡತನ, ಮಾನವ ಸ್ವಾರ್ಥ, ಹೆಣ್ಣನ್ನು ಪ್ರದರ್ಶನ ಗೊಂಬೆಯಂತೆ, ಭೋಗದ ವಸ್ತುವಾಗಿ ಶೋಷಿಸುವ ಪುರುಷರ ದೌರ್ಜನ್ಯ, ಜನಸಂಖ್ಯಾ ಸ್ಫೋಟ, ಕುಟುಂಬ ಕಲ್ಯಾಣ ಯೋಜನೆ, ಲೈಂಗಿಕ ಕಿರುಕುಳ ಇತ್ಯಾದಿ ಅಂಶಗಳು ಚರ್ಚೆಯಾಗಿಲ್ಲ.

ಸುಮಂಗಲಾ ಅವರ 'ಜಮುರುಮಳೆ' ಕಥಾ ಸಂಕಲನವನ್ನು ಕುರಿತು ಜಿ.ಎಸ್.ಸದಾಶಿವ ಅವರ ತಾತ್ವಿಕ ಚರ್ಚೆಯನ್ನು ಕುರಿತು ಈ ಅಧ್ಯಯನದಲ್ಲಿ ಕಾಣಬಹುದಾಗಿದೆ. 'ಜುಮುರು ಮಳೆ' ೧೨ ಕಥೆಗಳನ್ನೊಳಗೊಂಡಿದ್ದು ಪ್ರಯೋಗಶೀಲ ಕಥೆಗಳಾಗಿವೆ. ಈ ಕಥೆಗಳಲ್ಲಿ ನವ್ಯದ ಪ್ರಭಾವವಿದೆ. ಇದಕ್ಕೆ 'ಪ್ರಾಜಕ್ತಾ ಡೈರಿ ಬರೆಯಲಿಲ್ಲ, 'ಬೆಳದಿಂಗಳಲ್ಲಿ ಹುಡುಕಿದ ಹಾಡು', 'ಆಯಿ ಬರೆದ ಬಾಷ', ಮುಖ್ಯ ಉದಾಹರಣೆಯಾಗಿದೆ. ವ್ಯಕ್ತಿಯ ಅಂತರಂಗದ ದರ್ಶನ ಈ ಕಥೆಗಳಲ್ಲಿವೆ. ಗಂಡು ಹೆಣ್ಣಿನ ವಿಫಲ

ಪ್ರೇಮ, ಭಗ್ನ ದಾಂಪತ್ಯವನ್ನು 'ಥಂಯ್ಯಾ, ಥಂಯ್ಯಾ', 'ಬೆಳದಿಂಗಳಲ್ಲಿ ಹುಡುಕಿದ ಹಾಡು' ಕಥೆಗಳಲ್ಲಿ ಕಾಣಲಾಗಿದೆ. 'ಲಿಂಕಿ ನಂಬರ್ ಬಸ್ಸಿನ ಡ್ರೈವರ್', 'ಎದೆಯಲೊಂದು ಬಳಚೂರು', 'ಅಲಿಕಲ್ಲು', ಮಹತ್ವಕಾಂಕ್ಷೆಯ ಕಥೆಗಳಾಗಿವೆ. ಚೌಕಟ್ಟಿನಿಂದ ಹೊರಬಂದ ಚಿತ್ರದಲ್ಲಿಬದುಕಿನ ಜೀವ ಚೈತನ್ಯವನ್ನು ನೀಡುವಲ್ಲಿ ಬಾವಿ ಸಂಕೇತವಾಗಿದೆ. 'ಪಾತೀಮಾಗೆ ಮಳೆಯೆಂದರೆ ಇಷ್ಟ' ಕಥೆಯು ಮಾನವೀಯತೆಯ ಅಂಶವನ್ನು ಒಳಗೊಂಡಿದೆ. ಹೀಗೆ ಸುಮಂಗಲಾ ಅವರು ತಮ್ಮ ಅನುಭವ ದ್ರವ್ಯದಿಂದ ಕಥೆಯಾಗಿಸುವ ಕಲೆಯನ್ನು ಸುಮಂಗಲಾ ಸಾಧಿಸಿದ್ದಾರೆ. ಎಂಬ ವ್ಯಾಖ್ಯಾನ ಸಮರ್ಥವಾಗಿದೆ ಸುಮಂಗಲಾ ಪ್ರಬುದ್ಧ ಕಥೆಗಾರ್ತಿಯಾಗಲು 'ಜುಮುರುಮಳೆ' ಸಾಕ್ಷಿಯಾಗಿದೆ. ಆದರೆ ಸುಮಂಗಲಾರವರ ಕಥೆಯ ವಸ್ತು ದ್ವಂದ್ವಗಳಿಂದ ಕೂಡಿದ್ದು ಏಕಾಗ್ರತೆಯಿಂದ ಓದಿದಾಗ ಮಾತ್ರ ಕಾಣಿಸುವಂತಿದ್ದಾಗಿದೆ ಎಂದು ಅಭಿಪ್ರಾಯಪಡುತ್ತೇನೆ.

ಹೊಸ ತಲೆಮಾರಿನ ಕಥೆಗಾರ್ತಿಯರಲ್ಲಿ ಎಚ್.ನಾಗವೇಣಿ ಪ್ರಮುಖರು ಇವರು 'ನಾಕನೇ ನೀರು', 'ಮೀಯುವ ಆಟ' ಎಂಬ ಎರಡು ಕಥಾ ಸಂಕಲನವನ್ನು ರಚಿಸಿದ್ದಾರೆ. ಈ ಸಂಕಲನವನ್ನು ಖ್ಯಾತ ಎಡ ಪಂಥೀಯ ವಿಮರ್ಶಕರಾದ ರಹಮತ್ ತರೀಕೆರೆಯವರು **'ತುಳು ಸಂಸ್ಕೃತಿಯ ಜಗತ್ತು'** ಎಂಬ ಶೀರ್ಷಿಕೆಯಲ್ಲಿ ತಮ್ಮ ಲೇಖನವನ್ನು ಪ್ರಕಟಿಸಿದ್ದಾರೆ. ನಾಗವೇಣಿಯವರ ಈ ಕಥಾ ಸಂಕಲನವು ತುಳು ಮಣ್ಣಿನಿಂದ ದೂರವಾದ ನಂತರ ಅನುಭವಗಳ ಮರುಕಳಿಸಿಕೊಂಡು ಬರೆದ ಕತೆಗಳಾಗಿವೆ. ಇಲ್ಲಿ ವಿವರಗಳು ಅನಗತ್ಯವಾಗಿದೆ ಎಂಬುದು ಸಮರ್ಥನೀಯವಾಗಿದೆ. ನಾಗವೇಣಿಯವರು 'ಮೀಯುವ ಆಟ' 'ತುಳುನಾಡಿನ ತಳಲೋಕದ ಅನುಭವಗಳ ಮಂಡನೆ' ಎಂಬ ಲೇಖಕರ ವ್ಯಾಖ್ಯಾನ ಸಮಂಜಸವಾಗಿದೆ ಏಕೆಂದರೆ ಇಲ್ಲಿ ಕರಾವಳಿಯ ಕೃಷಿಕನ ಬದುಕು ಹಾಗೂ ಕಳಸ್ತರದ ಜನರ ಸಮುದಾಯದ ಬದುಕಿದೆ. 'ಇಲ್ಲಿನ ಕಥೆಗಳು ಪ್ರಾದೇಶಿಕ ವಿಶಿಷ್ಟವಾದ ಅನುಭವಗಳ ಸಮೃದ್ಧ ಲೋಕವಿದೆ ಎನ್ನುವುದು ಒಂದು ದೊಡ್ಡ ಸಂಗತಿಯಲ್ಲ, ಇದರ ಪ್ರಮಾಣವು ಕಥನದ ಹಂದರಕ್ಕೆ ಅಗತ್ಯವಾಗಿ ಬಂದಿದೆಯೋ ಅನಗತ್ಯವಾಗಿ ಹೇರಿಕೊಂಡಿದೆಯೋ ಇದು ಯಾವ ದೃಷ್ಟಿಕೋನದಲ್ಲಿ ಮಂಡನೆಯಾಗಿದೆ. ಲೇಖಕರ ಈ ವಾದವನ್ನು ಮಂಡಿಸುತ್ತೇನೆ. ಇಲ್ಲಿನ ಕಥೆಗಳಲ್ಲಿನ ಪಾತ್ರಗಳಲ್ಲಿ ತುಳು ಭಾಷೆ ವ್ಯಕ್ತವಾಗಿದೆ ಉದಾಹರಣೆ 'ಬಾಲೆದ ಬರಿ ಪಗಪುನ' ಈ ಭಾಷೆ ತುಳು ಅರಿಯದ ಓದುಗರಿಗೆ ಅರ್ಥಮಾಡಿಕೊಳ್ಳಲು ಕಷ್ಟವಾಗುತ್ತದೆ, ಪಾಪೆ ಮಣಿಕಟ್ಟಲೆ ಬೋಗ ಏತೆನ್ನುವುದು ಸ್ಥಾನ ಕಟ್ಟಿಸುವುದು ಇವೆಲ್ಲ ತುಳು ಸಂಸ್ಕೃತಿಯ ವಿಶಿಷ್ಟ ಆಚರಣೆ ಮತ್ತು ನಂಬಿಕೆಗಳು ಇತ್ಯಾದಿಗಳು ತುಳು ನಾಡಿನಾಚೆ ಇರುವ ಓದುಗರಿಗೆ ವಿವರಣೆ ಬೇಕಾಗುತ್ತದೆ. ಹೀಗಾಗಿ ಇವರ ಕಥೆಗಳಲ್ಲಿ ಪ್ರಾದೇಶಿಕ ಅನುಭವ ಅನಗತ್ಯವಾಗಿ ವ್ಯಕ್ತವಾಗಿದೆ ಎಂದೆನಿಸುತ್ತದೆ. ಕಥೆಗಳಲ್ಲಿ ಚಲನಶೀಲ ದೃಷ್ಟಿಕೋನವಿದೆ. ಈ ವ್ಯಾಖ್ಯಾನ ಸಮಂಜಸವಾಗಿದ್ದು ಇದಕ್ಕೆ 'ಮೀಯುವ ಆಟ', 'ಒಡವೆ' ಕಥೆಯು ಮುಖ್ಯ ಉದಾಹರಣೆಯಾಗಿದೆ. ನಿರ್ಲಕ್ಷ್ಯಕ್ಕೆ ಒಳಗಾದವರು ಇರಿಸಿಕೊಂಡಿರುವ ಖಾದ್ರಿ ಬ್ಯಾರಿಯ ಬಿಸಿ ನೀರು ಮಿಯುವ ಆಸೆ, ದಾರವಿಗೆ ತನ್ನ ಗಂಡನ ಜೊತೆ ಪ್ರೀತಿಯಿಂದ ಮಾತನಾಡುವ ಆಸೆ ಸಾಕ್ಷಿಯಾಗಿದೆ ಇಲ್ಲಿ ಮಾನವೀಯ ಆವರಣವನ್ನು ಕಾಣಬಹುದಾಗಿದೆ. ಉಚ್ಚಜಾತಿಯವರ ಬಗ್ಗೆ ಇರುವ ವಿಮರ್ಶಾತ್ಮಕ ನಿಲುವು ಕರಾವಳಿಯ ಜಿಲ್ಲೆಯ ಭೂಮಾಲೀಕ

ವರ್ಗವನ್ನು ಕುರಿತು ಇದ್ದಂತಿಲ್ಲ ಇದಕ್ಕೆ 'ದಾನ' ಕಥೆಯಲ್ಲಿನ 'ಅಜಲುಪದ್ಧತಿ' ಸಾಕ್ಷಿಯಾಗಿದೆ. ಅಂತರ ಧರ್ಮಿಯ ಮಾನವ ಸಂಬಂಧಗಳನ್ನು ಈ ಕಥೆಯಲ್ಲಿ ಕಾಣಲಾಗಿದೆ ಇದಕ್ಕೆ ತಾಯ್ತನ ಕಥೆಯಲ್ಲಿನ ಐಸಂಬ್ಯಾರಿ; ಬಾಣಂತಿಗೆ ನೀರುಕಾಯಿಸಿಕೊಡುವ ಖಾದ್ರಿಬ್ಯಾರಿ (ಮೀಯುವ ಆಟ), ತಾಯಿಸತ್ತ ಕೇಶವನನ್ನು ತನ್ನದೇ ಹಾಲು ಕುಡಿಸಿ ಸಾಕುವ ನಫೀಸಮ್ಮ ಒಡಲು ಮುಂತಾದ ಸೌಹಾರ್ಧ ಪಾತ್ರಗಳ ಚಿತ್ರಣವಿದೆ. ಈ ಕಥೆಗಳಲ್ಲಿ ಸಾಮಾಜಿಕ ಕಳಕಳಿ ವ್ಯಕ್ತವಾಗಿದೆ. 'ಧೀಮಂತ ಮಹಿಳೆಯ ಚಿತ್ರಣ' ಈ ಕಥೆಗಳಲ್ಲಿ ವ್ಯಕ್ತವಾಗಿದೆ. ದಾರು, ಸೇವಂತಿ, ಚಿನ್ನಮ್ಮ, ಸಿರಿ ಮುಖ್ಯವಾದ ಧೀಮಂತ ಪಾತ್ರಗಳಾಗಿ ಕಂಡು ಬರುತ್ತಾರೆ. ಇದಕ್ಕೆ ಲೇಖಕಿಯ ಆಧುನಿಕ ಮನಸ್ಸು ಅಥವಾ ತುಳು ನಾಡಿನ ತಾಯಿ ಕೇಂದ್ರಿತ ಕುಟುಂಬ ಪದ್ಧತಿಯೂ ಕಾರಣವಿರಬಹುದು ಎಂಬುದು ಒಪ್ಪಬಹುದಾಗಿದೆ. ಇಲ್ಲಿ ಕಥೆಗಳಲ್ಲಿ ಪ್ರಾಣಿ ರೂಪಕ ಭಾಷೆ ವ್ಯಕ್ತವಾಗಿದೆ. ಇದಕ್ಕೆ **'ತಗಣೆ ಮನೆಗೆ ಹೇನು ನಂಟನಾಗಿ ಬಂದಂತಾಯಿತು', 'ಹಕ್ಕಿ ತಿನ್ನಲು ಹಕ್ಕಿಗಟ್ಟಿಕೆ ಕಲಿಸಬೇಕು'** ಇತ್ಯಾದಿ ಪ್ರಾಣಿ ರೂಪಕದ ಭಾಷೆ ವ್ಯಕ್ತವಾಗಿದೆ. ಇಲ್ಲಿನ ಕತೆಗಳು ಸಾಂಸ್ಕೃತಿಕ ಅನುವಾದ ಕಷ್ಟ ಎಂಬ ವ್ಯಾಖ್ಯಾನ ಸಮಂಜಸವಾಗಿದೆ ಏಕೆಂದರೆ ತುಳುನಾಡಿನ ವಿಶಿಷ್ಟ ಆಚರಣೆ ಮತ್ತು ನಂಬಿಕೆಯ ಕತೆಗಳು ಇಲ್ಲಿದ್ದು, ತುಳುನಾಡಿನಾಚೆ ಇರುವ ಓದುಗರಿಗೆ ಈ ಪದ್ಧತಿಗಳ ವಿವರಣೆ ಬೇಕಾಗುತ್ತದೆ. ಉದಾಹರಣೆಗೆ 'ದಾನ' ಕತೆಯಲ್ಲಿ ಬರುವ ಅಜಲು ಪದ್ಧತಿ ಇದಕ್ಕೆ ಸಮಾಜ ಶಾಸ್ತ್ರೀಯ ವಿವರಣೆ ಕೊಡಬೇಕಾಗುತ್ತದೆ. ಹೀಗೆ ಇಲ್ಲಿನ ಕತೆಗಳು ಸಾಂಸ್ಕೃತಿಕವಾಗಿ ಅನುವಾದ ಮಾಡುತ್ತವೆ. ಉದಾ:- ಕೆಲವು ಕಡೆ ಕತೆಯಲ್ಲಿನ ಪಾತ್ರಗಳು ಕನ್ನಡದ ಅನುವಾದವಿಲ್ಲದೆ ನೇರ ತುಳು ಮಾತುಕತೆಯನ್ನು ತರುವುದುಂಟು ಈ ಅಭಿಪ್ರಾಯ ಸಮಂಜಸವಾಗಿದೆ. ಇಂದರಿಂದ ನಮ್ಮಂತಹ ಓದುಗರಿಗೆ ಕಥೆ ಕ್ಲಿಷ್ಟವಾಗಿ ಕಾಣಿಸುವುದುಂಟು. 'ಸಖಿಗೀತ', ಕಥೆ ಕಾವ್ಯಾತ್ಮಕವಾಗಿದ್ದು ಮುದ್ದಣ್ಣ ಮನೋರಮೆಯ ಸಲ್ಲಾಪವನ್ನು ನೆನೆಸುತ್ತದೆ. ದಾಂಪತ್ಯ ಗೀತೆಯಂತಿದೆ ಎನ್ನಬಹುದು. ಹೀಗೆ ಕೌಟುಂಬಿಕ ಸಮಸ್ಯೆಗಳಾಚೆ ವಿಶಿಷ್ಟವಾದ ಸಾಮಾಜಿಕ ಅನುಭವಗಳನ್ನು ಕಥೆಯನ್ನಾಗಿಸಿ ಬರೆಯುವ ಪ್ರತಿಭಾವಂತ ಕಥೆಗಾರ್ತಿಯರಲ್ಲಿ ನಾಗವೇಣಿ ಪ್ರಮುಖರಾಗಿದ್ದಾರೆ. ಒಟ್ಟಾರೆ ಮೀಯುವ ಆಟ ಕಥೆಯನ್ನು ಕುರಿತು ರಹಮತ್ ತರೀಕೆರೆಯವರು ಕಥೆಯಲ್ಲಿ ವ್ಯಕ್ತವಾಗುವ ಎಲ್ಲಾ ಅಂಶಗಳು ಔಚಿತ್ಯ ಪೂರ್ಣವಾದ ತಾತ್ವಿಕ ವಿಮರ್ಶೆಯನ್ನು ಒಳಗೊಂಡಿದೆ.

ಒಟ್ಟಾರೆ ಹೊಸ ತಲೆಮಾರಿನ ಕಥೆಗಾರ್ತಿಯರ ಕಥೆಗಳನ್ನು ಕುರಿತು ವಿವಿಧ ವಿಮರ್ಶಕರ ತಾತ್ವಿಕ ಅಭಿಪ್ರಾಯಗಳನ್ನು ಇಲ್ಲಿ ಸಮೀಕ್ಷೆ ಮಾಡಲಾದೆ. ಹೊಸ ತಲೆಮಾರಿನ ಕಥೆಗಾರ್ತಿಯರ ಕಥೆಗಳನ್ನು ಕುರಿತು ಹೆಚ್ಚಿನ ಚರ್ಚೆಗೆ ಅವಕಾಶಗಳಿವೆ. ಆದರೆ ಪತ್ರಿಕಾ ವಿಮರ್ಶೆಗೆ ಮಾತ್ರ ಸೀಮಿತವಾಗಬಾರದು. ಮಹಿಳಾ ಸಾಹಿತ್ಯವನ್ನು ಅದರಲ್ಲೂ ಕಥಾ ಸಾಹಿತ್ಯವನ್ನು ಹೆಚ್ಚಿನ ಚರ್ಚೆಗೆ ವಿಮರ್ಶಕರು ಮುಂದಾಗಬೇಕು. ಯಾಕೆಂದರೆ, ೨೧ನೇ ಶತಮಾನದಲ್ಲಿ ಮಹಿಳೆ ವಿಚಾರ ಮಾಡುವ ಕ್ರಮ ಯಾವ ಬಗೆಯದೆಂದು ತಿಳಿಯಲು ವಿಮರ್ಶೆ ಬೇಕು. ಮಹಿಳೆ ಕೂಡ ಚಿಂತನೆ ಮಾಡಬಲ್ಲಳು ಎಂಬುದನ್ನು ಈ ಕಥೆಗಳು ತೋರಿಸಿವೆ.

ಅಡಿಟಿಪ್ಪಣಿ

೦೧. ವಿದ್ಯಾರಶ್ಮಿ ಪೆಲತ್ತಡ್ಕ, ಮುಷ್ಟಿಯೊಳಗೆ ನಗುವ ನಕ್ಷತ್ರಗಳು

೦೨. ಅಮೂರ ಜಿ.ಎಸ್. ಪ್ರೀತಿ ಮೂಲ ಲಯ, ದೇಶಕಾಲ, ಪು.೫೧,೫೨

೦೩. ನಾಗಭೂಷಣ ಸ್ವಾಮಿ ಓ.ಎಲ್, ಕಾಮನ ಬಿಲ್ಲಿನ ಬಣ್ಣ, ದೇಶಕಾಲ, ಪು.೫೨,೫೩

೦೪. ಭೈರ ಮಂಗಲ ರಾಮೇಗೌಡ, ಆಪ್ತವಾಗಿ ತಟ್ಟುವ ಗೃಹಿಣೀಗೀತ, ಪ್ರಜಾವಾಣಿ, ೨೦೦೫ ಪು.೦೫

೦೫. ಅವಿನಾಶ ಟಿ, ಬದುಕಿನ ಪರಾಮರ್ಶೆಯ ಪ್ರಪಂಚ, ವಿಕ್ರಾಂತ ಕರ್ನಾಟಕ, ೨೦೦೮, ಪು.೨೭

೦೬. ರಂಗನಾಥ ರಾವ್ ಜಿ.ಎನ್, ಸಾಹಿತ್ಯ ಲೋಕದ ಭರವಸೆಯ ನೋಟು, ದ ಸಂಡೆ, ಇಂಡಿಯನ್, ೨೦೦೮, ಪು. ೩೮

೦೭. ಗಿರೀಶ ವಿ ವಾಘ, ಬದುಕಿಗೆ ಬದ್ಧವಾದ ಕತೆಗಳು, ದ ಸಂಡೆ, ಇಂಡಿಯನ್, ೨೦೦೮, ಪು. ೪೦

೦೮. ಬಸವರಾಜ ಜಿ.ಪಿ, ೯೦ರ ದಶಕದ ಬರಹಗಾರ್ತಿಯರ ಹುಡುಕಾಟ, ಸುಧಾ, ಯುಗಾದಿ ವಿಶೇಷಾಂಕ, ೨೦೦೧, ಪು.೨೦೪

೦೯. ರಹಮತ್ ತರೀಕೆರೆ, ತುಳು ಸಂಸ್ಕೃತಿಯ ಜಗತ್ತು, ಮಯೂರ, ಆಗಸ್ಟ್, ೨೦೦೫

ಅಧ್ಯಾಯ - ಮೂರು

ಮಹಿಳಾ ಕಥಾ ಸಾಹಿತ್ಯ ಪರಂಪರೆಯ ಸಮೀಕ್ಷೆ

ಅಧ್ಯಾಯ - ಮೂರು

ಮಹಿಳಾ ಕಥಾ ಸಾಹಿತ್ಯ ಪರಂಪರೆಯ ಸಮೀಕ್ಷೆ

ಆಧುನಿಕ ಕನ್ನಡ ಸಾಹಿತ್ಯದ ಪ್ರಕಾರಗಳಲ್ಲಿ ಸಣ್ಣ ಕಥೆ ಪ್ರಬಲವಾಗಿದೆ. ಈ ಪ್ರಕಾರವು ಸಾಹಿತ್ಯ ಚಳುವಳಿಗಳಾದ ನವೋದಯ, ಪ್ರಗತಿಶೀಲ, ನವ್ಯ, ದಲಿತ ಬಂಡಾಯ ಚಳುವಳಿಗಳ ಹಿನ್ನಲೆಯಲ್ಲಿ ಬೆಳೆದು ಬಂದಿದೆ. ೧೯೨೦ರ ನಂತರ ಈ ಪ್ರಕಾರಕ್ಕೆ ಮಾಸ್ತಿಯವರಿಂದ ವಿಶೇಷ ಮನ್ನಣೆ ದೊರೆತು ಬೆಳವಣಿಗೆ ಹೊಂದಿತು. ಈ ಸಂದರ್ಭದಲ್ಲಿ ಇಂತಹ ಚಳುವಳಿಯ ಪ್ರಭಾವ ಲೇಖಕಿಯರಿಗೆ ಹೊರತಾಗಿಲ್ಲದಿಲ್ಲ. ಪರಂಪರಾಗತವಾಗಿ ಮಹಿಳೆಯರು ಕಥೆಗಾರ್ತಿಯರಾಗಿದ್ದರು. ಆದರೆ ಅವರ ಕಥೆಗಳು ಪುರಾಣ ಕಥೆಗಳಿಗಿಂತ ಭಿನ್ನವಾಗಿವೆ. ಆದ್ದರಿಂದ ಇದನ್ನು ಕಥಾ ಸಾಹಿತ್ಯ ಎಂದು ಕರೆಯಲಾಗುವುದಿಲ್ಲ. ಮಹಿಳಾ ಕಥಾ ಸಾಹಿತ್ಯ ಪರಂಪರೆ ಒಂದು ಗಂಭೀರ ಸಾಹಿತ್ಯವಾಗಿ ಸ್ಪಷ್ಟ ರೂಪ ತಾಳಿದ್ದು ಇಪ್ಪತ್ತನೆಯ ಶತಮಾನದಲ್ಲಿ ಈ ಸಂದರ್ಭದಲ್ಲಿ ಈ ಪರಂಪರೆಯ ಪ್ರಥಮ ಕಥೆಗಾರ್ತಿಯಾಗಿ ತಿರುಮಲಾಂಬ ಪ್ರಮುಖರಾಗಿದ್ದಾರೆ. ಆದರೆ ಅವರ ಕಥೆಗಳು ಈ ಪ್ರಕಾರಕ್ಕಿಂತ ಭಿನ್ನವಾಗಿದ್ದವು. ಆದ್ದರಿಂದ ಮೊದಲನೆಯ ಪೀಳಿಗೆಯ ಲೇಖಕಿಯರೆಂದು ಶ್ಯಾಮಲಾ ಬೆಳಗಾಂವಕರ, ಕೊಡಗಿನ ಗೌರಮ್ಮ ಹಾಗೂ ಸರಸ್ವತಿ ರಾಜವಡೆಯವರು ಮುಖ್ಯವಾಗಿದ್ದು ಅವರನ್ನು ಈ ಪ್ರಕಾರದ ಆದ್ಯರೆಂದು ಗುರಿತಿಸಲಾಗಿದೆ. ಈ ಕಾಲಾವಧಿಯಲ್ಲಿ ಪುರುಷ ಪ್ರಧಾನ ಸಮಾಜದಲ್ಲಿ ಸ್ತ್ರೀಯನ್ನು ಒಬ್ಬ ವ್ಯಕ್ತಿಯಾಗಿ ಗುರುತಿಸಲ್ಪಟ್ಟಿದೆ. ಪತ್ನಿ ವಿಧವೆ, ವೇಶ್ಯೆ ಹೀಗೆ ಪುರುಷನ ಸಂಬಂಧದಲ್ಲಿಯೇ ಗುರುತಿಸಲ್ಪಟ್ಟಿದರಿಂದ ಅವಳಿಗೆ ಸ್ವತಂತ್ರ್ಯವಾದ ಅಸ್ತಿತ್ವದಿಂದ ಸಾಂಪ್ರದಾಯಿಕ ದೃಷ್ಟಿಕೋನದಲ್ಲಿ ಪುರುಷ ಹಿತಾಸಕ್ತಿಗಳ ಮಾದರಿಯಲ್ಲಿ ಸ್ತ್ರೀಯ ಸಮಸ್ಯೆಗಳನ್ನು ಚರ್ಚಿಸುತ್ತಾ, ಅದರ ಮೂಲ ಕಾರಣಗಳನ್ನು ಶೋಧಿಸುವ ಪ್ರಯತ್ನ ಮಾಡದೆ. ವಾಸ್ತವತೆಯನ್ನು ಒಪ್ಪಿಕೊಳ್ಳುವ ಸಂಪ್ರಾದಾಯಿಕ ದೃಷ್ಟಿಕೋನ ಲೇಖಕಿಯರಲ್ಲಿ ಕಾಣಬಹುದಾಗಿದೆ. ಒಟ್ಟಾರೆ ಮಹಿಳಾ ಕಥಾ ಸಾಹಿತ್ಯ ಪರಂಪರೆಯ ಸಮೀಕ್ಷೆಯನ್ನು ನವೋದಯ ಪ್ರಗತಿಶೀಲ, ನವ್ಯ, ದಲಿತ, ಬಂಡಾಯ, ಹೊಸ ತಲೆಮಾರಿನ ಸಂದರ್ಭದಲ್ಲಿ ಬಂದ ಕಥೆಗಾರ್ತಿಯರೆಂದು ಗುರುತಿಸಲಾಗಿದೆ. ಈ ಕಥೆಗಾರ್ತಿಯರ ಕಥೆಗಳ ದೃಷ್ಟಿ ಧೋರಣೆಗಳನ್ನು ಗುರುತಿಸಲು ಪ್ರಯತ್ನಿಸಲಾಗುವುದು.

ನವೋದಯ ಪಂಥ

ಕನ್ನಡ ಸಾಹಿತ್ಯದ ಬೆಳವಣಿಗೆಯ ಸಂದರ್ಭದಲ್ಲಿ ನವೋದಯ ಕಾಲಾವಧಿ ಮಹಿಳಾ ಬರವಣಿಗೆಗೆ ಒಂದು ವಿಶಿಷ್ಟವಾದ ಕಾಲ ಘಟ್ಟವಾಗಿದೆ. ಈ ನವೋದಯ ಸಂದರ್ಭದಲ್ಲಿ ಸ್ತ್ರೀ ಶಿಕ್ಷಿತಳಾಗಬೇಕೆಂಬ ಆಶಯ ಪ್ರಮುಖವಾಗಿದ್ದು, ಈ ಕಾಲಾವಧಿಯಲ್ಲಿನ ಪ್ರಮುಖ ಸಮಸ್ಯೆಗಳಾದ ವಿಧವಾ ವಿವಾಹ, ಪ್ರೇಮವಿವಾಹ ಶಿಕ್ಷಣದ ಅವಶ್ಯಕತೆ, ಮೌಢ್ಯ ಸಂಪ್ರದಾಯಗಳನ್ನು ಪ್ರಶ್ನಿಸುವ ತಾತ್ವಿಕತೆ ನವೋದಯ ಕಥೆಗಾರ್ತಿಯರ ಕಥೆಗಳ ವಸ್ತುವಾಗಿತ್ತು. ಅಂತಹ ಕಥೆಗಾರ್ತಿಯರಲ್ಲಿ ತಿರುಮಲಾಂಬ, ಶ್ಯಾಮಲಾ ದೇವಿ ಬೆಳಗಾಂವಕರ್, ಸರಸ್ವತಿ ಬಾಯಿ ರಾಜವಾಡೆ, ಶಾಂತದೇವಿ ಮಾಳವಾಡ, ಕೊಡಗಿನ ಗೌರಮ್ಮ, ವಾಣಿ ಪ್ರಮುಖರಾಗಿದ್ದಾರೆ.

ತಿರುಮಲಾಂಬ (ಕ್ರಿ.ಶ.೧೮೮೭-೧೯೮೨)

ನಂಜನಗೂಡು ತಿರುಮಲಾಂಬ ಇಪ್ಪತ್ತನೆಯ ಶತಮಾನದ ಮೊದಲ ಲೇಖಕಿಯಾಗಿದ್ದಾರೆ. ಅವರು ಬಾಲ್ಯದಲ್ಲೇ ವೈಧವ್ಯ ಉಂಟಾಗಿ, ಸ್ವತಃ ವಿಧವೆ ಸಮಸ್ಯೆಗಳನ್ನು ಉಂಡು, ತಂದೆಯ ಪ್ರೋತ್ಸಾಹದಿಂದ ಈ ವೈದವ್ಯದ ಕಟ್ಟುಪಾಡುಗಳು, ಸಮಸ್ಯೆಗಳನ್ನು ತಮ್ಮ ಕಥಾ ಬರವಣಿಗೆಯಲ್ಲಿ ಮೂಲ ಪ್ರೇರಣೆಯಾಗಿ ಚಿತ್ರಿಸಿದ್ದಾರೆ. ಅವರು, 'ಸಚ್ಚರಿತ ಸುಧಾರ್ಣವ' ಎಂಬ ಕಥಾ ಸಂಕಲನವನ್ನು ರಚಿಸಿದ್ದಾರೆ. ಇಲ್ಲಿ ಪೌರಾಣಿಕ ವಸ್ತುವಿದ್ದು, ಪುರಾಣದ ಘಟನೆ ಸನ್ನಿವೇಶಗಳನ್ನು ತಮ್ಮ ಶೈಲಿಯಲ್ಲಿ ಸಣ್ಣಕಥೆಗಳಂತೆ ಚಿತ್ರಿಸಿದ್ದಾರೆ. ಈ ಕಥೆಯಲ್ಲಿ ರಾಮ, ಪರಶುರಾಮ, ಭೀಷ್ಮ, ಪುರು, ಸುಕನ್ಯ, ಶರ್ಮಿಷ್ಟೆ ಹಾಗೂ ಲೋಪಾ ಮುದ್ರೆಯರನ್ನು ಕುರಿತು ಏಳು ಕಥೆಗಳಿವೆ. ಇಲ್ಲಿ ಪೌರಾಣಿಕ ವ್ಯಕ್ತಿಗಳ ಆದರ್ಶವನ್ನು ಎತ್ತಿ ಹಿಡಿಯಲಾಗಿದೆ. ಒಟ್ಟಾರೆ ತಿರುಮಲಾಂಬವರು ವಿಧವೆಯರ ಸ್ಥಿತಿ ಸಮಸ್ಯೆಗಳು, ಪರಿಹಾರಗಳು, ಸ್ತ್ರೀ ಶಿಕ್ಷಣ ಇತ್ಯಾದಿ ಕುರಿತು ಹೇಳಿದರು. ಮರುಮಧುವೆಯ ಪ್ರಸ್ತಾಪವನ್ನು ಮಾಡುವುದಿಲ್ಲ. ಹೀಗೆ ಅವರ ತಾತ್ವಿಕತೆ ಸಂಪ್ರದಾಯ ನಿಷ್ಟವಾಗಿದೆ.

ಶ್ಯಾಮಲಾ ದೇವಿ ಬೆಳಗಾಂವಕರ (೧೯೧೩-೧೯೫೩)

ಸ್ವಾತಂತ್ರ್ಯ ಪೂರ್ವದ ಲೇಖಕಿಯರಲ್ಲಿ ಶ್ಯಾಮಲಾದೇವಿ ಬೆಳಗಾಂವಕರ ಪ್ರಮುಖರು. ಉತ್ತರ ಕರ್ನಾಟಕದ ಪ್ರಥಮ ಕಥೆಗಾರ್ತಿಯಾಗಿದ್ದಾರೆ. ಅವರು 'ಹೂಬಿಸಿಲು' (೧೯೩೬), 'ಹೊಂಬಿಸಿಲು' ಎಂಬ ಕಥಾ ಸಂಕಲನಗಳನ್ನು ರಚಿಸಿದ್ದಾರೆ. ಅವರ ಕಥೆಗಳಲ್ಲಿ ಸಾಂಪ್ರಾದಾಯಿಕ ಮನೋಧರ್ಮ ಮುಖ್ಯವಾಗಿದೆ. 'ನೀಲೆಯ ಸಂಸಾರ' ಕಥೆಯಲ್ಲಿ ಸಾಂಪ್ರಾದಾಯಿಕ ಪರಿಸರ, ಪ್ರಸ್ತುತ ಸ್ಥಿತಿಯನ್ನು ಒಪ್ಪಿದ ಮನೋಧರ್ಮ ಪ್ರಧಾನವಾಗಿದ್ದು, ಆಧುನಿಕ ದೃಷ್ಟಿಯಿಲ್ಲದಾಗಿದೆ. ಮನುಷ್ಯನ ಸ್ವಾರ್ಥ ಹೆಣ್ಣುಹೆಣ್ಣಿಗೆ ಶತ್ರುವಿನೋಪಾದಿಯಲ್ಲಿ ವ್ಯವಹರಿಸುವ ಬಗೆ ದೊಡ್ಡಮ್ಮ ನೋಡಿದ 'ವರ' ಕಥೆಯಲ್ಲಿ ಚಿತ್ರಿತವಾಗಿದೆ. ಅಲ್ಲದೆ ಹಣದ ದಾಹಕ್ಕೆ ಮಗಳನ್ನೇ, ಬಲಿಕೊಡುವ ಕ್ರೂರತ್ವ, ವೇಶ್ಯಾವೃತ್ತಿಯಿಂದ ಮುಕ್ತವಾಗಬೇಕಾದ ರೀತಿಯನ್ನು 'ಕರುಳು ಕತ್ತರಿ' ಕಥೆಯಲ್ಲಿ ಕಾಣಬಹುದು. ಶ್ಯಾಮಲಾದೇವಿಯರ ಎಲ್ಲಾ ಕಥೆಗಳಲ್ಲಿ

ವರದಕ್ಷಿಣೆ, ವಿಷಮ ವಿವಾಹ, ವೈವಾಹಿಕ ಬಿಕ್ಕಟ್ಟುಗಳು ಮುಖ್ಯವಾಗಿವೆ. ವಿವಾಹೇತರ ಸಂಬಂಧಗಳ ಪ್ರತಿಪಾದನೆ ಅವರ ಕಥೆಗಳಲ್ಲಿ ಕಂಡುಬರುವ ವೈಶಿಷ್ಟ್ಯವಾಗಿದೆ. ಗಂಡನ ಹಿಂಸೆಯನ್ನು ಅನುಭವಿಸಿ ರೋಸಿಹೋದ ಹೆಣ್ಣು ಮತ್ತೊಬ್ಬಾತನನ್ನು ಬಯಸಿದಾಗ ಮೊದಲು ಮಧುವೆಯಾದವನಿಂದ ವಿಚ್ಛೇದನ ಕೊಡಿಸಿ ಅವಳ ಮತ್ತು ಮಗನ ಬದುಕನ್ನು ಸುಗಮಗೊಳಿಸಲು ನೆರವಾಗುವ ಚಿತ್ರ 'ನಡೆದು ಬಂದ ಲಕ್ಷ್ಮಿ' ಕಥೆಯಲ್ಲಿದೆ ಅವರು ತಮ್ಮ ಕಥೆಗಳಲ್ಲಿ ಉತ್ತರ ಕರ್ನಾಟಕದ ಜನಪದ ಆಡು ಭಾಷೆಯನ್ನು ಬಳಸಿದ್ದಾರೆ. ಇವರು ಕೇವಲ ಮೇಲ್‌ವರ್ಗದ ಮಧ್ಯಮವರ್ಗದವರನ್ನು ಮಾತ್ರ ಚಿತ್ರಿಸದೆ ಕೆಳವರ್ಗದ ಜನರ ನೋವು ನಲಿವುಗಳನ್ನು ಕುರಿತು ಚಿಂತಿಸಿದ್ದಾರೆ. ಒಟ್ಟಾರೆ ಅವರ ಎಲ್ಲಾ ಕಥೆಗಳು ಹೆಣ್ಣಿನ ಶೋಷಣೆಯ ವಿವಿಧ ಮುಖಗಳನ್ನು ಚಿತ್ರಿಸುತ್ತವೆ.

ಸರಸ್ವತಿ ಬಾಯಿ ರಾಜವಾಡೆ (ಗಿರಿ ಬಾಲೆ) (೧೯೧೩-೧೯೯೪)

ಕನ್ನಡದ ಹಿರಿಯ ಲೇಖಕಿಯರಲ್ಲಿ ಸರಸ್ವತಿ ಬಾಯಿ ರಾಜವಾಡೆ ಪ್ರಮುಖರು. ಅವರು ಮೂಲತಃ ಮರಾಠಿಯವರಾಗಿದ್ದು ಕನ್ನಡ ಭಾಷೆಯಲ್ಲಿ ತಮ್ಮ ಅನುಭವ ಹಾಗೂ ಅಭಿವ್ಯಕ್ತಿಯನ್ನು ಹಂಚಿಕೊಂಡಿದ್ದಾರೆ. ಅವರು **'ಆಹುತಿ ಇತ್ಯಾದಿ ಕಥೆಗಳು'** (೧೯೩೪), **'ಕದಂಬ ಸಂಕಲನ'** (೧೯೪೨) ಎಂಬ ಎರಡು ಕಥಾ ಸಂಕಲನಗಳನ್ನು ರಚಿಸಿದ್ದಾರೆ. ಗಂಡು ಹೆಣ್ಣುಗಳ ವಿಭಿನ್ನ ರೀತಿಯ ಜೀವನ ಗ್ರಹಿಕೆಗಳನ್ನು ಅವರ ಕಥೆಯಲ್ಲಿ ಕಾಣಬಹುದಾಗಿದೆ. ಸಂತಾನದ ಅಪೇಕ್ಷೆಯಿಂದ ಮೂರು ಜೀವಿಗಳ ಅಂತ್ಯವಾಗುವ ಬಗೆ 'ಆಹುತಿ' ಕಥೆಯಲ್ಲಿದ್ದರೆ, ಸ್ತ್ರೀ ಪುರುಷರ ಅನೈತಿಕ ಸಂಬಂಧವನ್ನು 'ಜಾತಿ' ಹೆಸರಿನಲ್ಲಿ ನಾಶಗೊಳ್ಳುವ ಬಗೆಯನ್ನು 'ಕಾಳಿ' ಕಥೆಯಲ್ಲಿ ಚಿತ್ರಿಸಲಾಗಿದೆ. ಬೇಜವಾಬ್ದಾರಿ ಗಂಡನೊಂದಿಗೆ ಬದುಕಬೇಕಾದ ಹೆಣ್ಣಿನ ಶೋಚನೀಯ ಸ್ಥಿತಿ ಸಾವಿಗೆ ಕಾರಣವಾಗುವುದನ್ನು 'ತಾಯೇ ಶಾಂತಿ' ಕಥೆಯಲ್ಲಿದೆ. ವಿಧವೆಯೊಬ್ಬಳ ಸಹಜ ಕಾಮನೆಗಳು ಅವಳನ್ನು ನಿರ್ಗತಿಕಳನ್ನಾಗಿ ಮಾಡುವುದನ್ನು ಆ ಭಿಕ್ಷುಕಿ ಕಥೆಯಲ್ಲಿದ್ದು ಮನುಷ್ಯನ ಸಹಜ ಭಾವನೆಗಳಿಗೆ ಮಾನ್ಯತೆ ದೊರಕಬೇಕೆಂಬುದನ್ನು ಒತ್ತಾಯಿಸುತ್ತದೆ. ಹೀಗೆ ಹೆಣ್ಣು ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಒಂದಲ್ಲಾ ಒಂದು ರೀತಿಯಲ್ಲಿ ಶೋಷಣೆಗೆ ಒಳಗಾಗುವ ಪರಿಯನ್ನು ಕುರಿತು ಈ ಕಥೆಯಲ್ಲಿ ಚಿಂತಿಸಲಾಗಿದೆ. ಪುರುಷ ಪ್ರಧಾನ ಸಮಾಜದ ವಿರುದ್ಧ ಹೋರಾಡುವುದು ಸಾಮಾಜಿಕವಾದ ಸಮಸ್ಯೆಗಳನ್ನು ಎದುರಿಸುವುದು ಅವರ ಮುಖ್ಯ ಗುರಿಯಾಗಿತ್ತು.

ಕೊಡಗಿನ ಗೌರಮ್ಮ (೧೯೧೨-೧೯೩೯)

ಕನ್ನಡದ ಹೆಸರಾಂತ ಕಥೆಗಾರ್ತಿಯರಲ್ಲಿ ಗೌರಮ್ಮನವರು ಪ್ರಮುಖರು. ಅವರು **'ಕಂಬನಿ'** (೧೯೩೯), **'ಚಿಗುರು'** ಎಂಬ ಎರಡು ಕಥಾ ಸಂಕಲನಗಳನ್ನು ರಚಿಸಿದ್ದಾರೆ. ವಿಧವೆಯೊಬ್ಬಳ ಅಸಹಾಯಕ ಸ್ಥಿತಿ, ಹೆಣ್ಣಿನ ಬಾಳಿನ ವೈಫಲ್ಯತೆಯ ಚಿತ್ರಣ 'ವಾಣಿಯ ಸಮಸ್ಯೆ' ಕಥೆಯಲ್ಲಿದೆ. ಇಲ್ಲಿ ಮುಖ್ಯಪಾತ್ರವಾದ ಇಂದು ವಿಧವೆಯಾದರೂ ಅಸಹಾಯಕಳಲ್ಲ ಗಂಡನಿಲ್ಲದಿದ್ದರೂ ಮನೆಯ ಆಶ್ರಯ ಅವಳಿಗಿದೆ ಹೀಗೆ ಹೆಣ್ಣಿನ ಸ್ವಾಲಂಬನೆಯನ್ನು ಕುರಿತು ಹೇಳುತ್ತದೆ. ಅವರ 'ಮನುವಿನರಾಣಿ' ಕಥೆಯು ಪರಂಪರೆಯಿಂದ

ಬಂದ ವೃತ್ತಿ ಧರ್ಮಕ್ಕೆ ಶರಣು ಹೊಡೆದು ವೇಶ್ಯೆಯೆಂಬ ಪಟ್ಟವನ್ನು ದಿಕ್ಕರಿಸಿ ಬದುಕಿದ ವ್ಯಕ್ತಿತ್ವ ಚಿತ್ರಣವಿದೆ. ವರದಕ್ಷಿಣೆಯ ಕಾರಣದಿಂದ ರೋಗಿಷ್ಟನನ್ನು ಮದುವೆಯಾದ ಸ್ಥಿತಿ 'ಅವಳ ಭಾಗ್ಯ' ಕಥೆಯಲ್ಲಿದೆ. ಅವರ ಪುನರ್ವಿವಾಹ ಕಥೆಯಲ್ಲಿ ಹೆಣ್ಣೊಬ್ಬಳನ್ನು ಪ್ರೀತಿಸಿದ ವಿದುರನಿಗೆ ತಾನು ಪ್ರೀತಿಸಿದ ಹೆಣ್ಣು ವಿಧವೆಯೆಂದರಿತಾಗ ದೂರವಾಗುವ ವಿಕೃತ ಮನೋಧರ್ಮ ಚಿತ್ರಣವಿದೆ. ಅವರ ಕಥೆಗಳು ಸಹಾ ಪಾರಂಪರಿಕ ದೃಷ್ಟಿಕೋನದಿಂದ ಹೊರತಾಗಿಲ್ಲ ಹೀಗೆ ಗೌರಮ್ಮನವರು ಹೆಣ್ಣಿನ ದಿಟ್ಟತನ ಮತ್ತು ಪ್ರತಿರೋಧವನ್ನು ಆಧುನಿಕವಾಗಿ ತಮ್ಮ ಕಥೆಗಳಲ್ಲಿ ಚಿತ್ರಿಸಲಾಗಿದೆ.

ವಾಣಿ (೧೯೭೧-೧೯೮೮)

ಶ್ರೀಮತಿ ಸುಬ್ಬಮ್ಮ ಅವರು ಸಾಹಿತ್ಯ ಲೋಕಕ್ಕೆ 'ವಾಣಿ' ಎಂಬ ಕಾವ್ಯನಾಮದಿಂದ ಚಿರಪರಿಚಿತರು. ಅವರು ಸಣ್ಣ ಕಥೆ ಪ್ರಕಾರ ಮೂಲಕ ಸಾಹಿತ್ಯ ಕ್ಷೇತ್ರವನ್ನು ಪ್ರವೇಶಿಸಿದರು. ಅವರು ನೂರ ಇಪ್ಪತ್ತಕ್ಕೂ ಹೆಚ್ಚು ಸಣ್ಣ ಕಥೆಗಳನ್ನು ರಚಿಸಿದ್ದಾರೆ. ಅವುಗಳಲ್ಲಿ **'ಕಸ್ತೂರಿ'** (೧೯೪೪), **'ಅರ್ಪಣೆ'** (೧೯೫೭), **'ನಾಣಿಯ ಮದುವೆ'** (೧೯೬೩), **'ಅಪರೂಪದ ಅತಿಥಿ'**, **'ಬಾಬು ಬರ್‍ತಾನೆ'** (೧೯೫೭) ಇತ್ಯಾದಿ ಕಥಾ ಸಂಕಲನಗಳನ್ನು ರಚಿಸಿದ್ದಾರೆ. ಅವರ ಎಲ್ಲಾ ಕಥೆಗಳಲ್ಲಿ ಸ್ತ್ರೀಪರ ಕಾಳಜಿಯನ್ನು ಕಾಣಬಹುದಾಗಿದೆ. ಇಲ್ಲಿ ಪುರುಷ ಸ್ತ್ರೀಯರ ಬಗ್ಗೆ ಇರುವ ಅನೈತಿಕ ಸಂಬಂಧಗಳು, ಪುರುಷನ ಶೀಲದ ಪಾವಿತ್ರ್ಯತೆ ಕುರಿತು ಮಡಿವಂತಿಕೆಯ ಧೋರಣೆ 'ಮುರುಳಿ' ಕಥೆಯಲ್ಲಿದೆ. ಪುರುಷನ ಅನ್ಯಾಯಕ್ಕೆ ಒಳಗಾಗಿ ವಿವಾಹ ಪೂರ್ವದಲ್ಲೇ ತಾಯಿಯಾಗಿ ಪರಿತಪಿಸುತ್ತಾ, ಕಾಲಾಂತರದಲ್ಲಿ ಬಂದ ಆತನನ್ನು ನಿರಾಕರಿಸಿ ಸ್ವತಂತ್ರ ಬದುಕನ್ನು ಬಯಸುವ ಹೆಣ್ಣಿನ ಚಿತ್ರಣವನ್ನು 'ತುಂಗಭದ್ರ', 'ಪಯಣ', ಕಥೆಯಲ್ಲಿದೆ. ಅಲ್ಲದೆ 'ಎರಡು ಚಿತ್ರ' ಕಥೆಯು ಜಮೀನ್ದಾರಿ ವರ್ಗದ ಹಿಡಿತದಲ್ಲಿ ನರಳುವ ಕೂಲಿ ಕಾರ್ಮಿಕರ ಸ್ಥಿತಿಗತಿಯನ್ನು ಚಿತ್ರಿಸಲಾಗಿದೆ. ಹೀಗೆ ವಾಣಿಯವರು ಮಧ್ಯಮ ವರ್ಗದ ಸಾಂಸಾರಿಕ ಚಿತ್ರಣವನ್ನು ನೈಜವಾಗಿ ಚಿತ್ರಿಸಿ, ಹೆಣ್ಣಿನ ಶೋಷಣೆ, ವೈರಾಗ್ಯ ಶ್ರೀಮಂತರ ದಬ್ಬಾಳಿಕೆ, ವಾತ್ಸಲ್ಯ ಇತ್ಯಾದಿ ವಸ್ತುಗಳನ್ನು ಆಧರಿಸಿ ಕಥೆಯನ್ನು ಚಿತ್ರಿಸಲಾಗಿದೆ.

ಹೀಗೆ ನವೋದಯ ಲೇಖಕಿಯರು ಲೇಖಕರಿಗೆ ಸಾಧ್ಯವಾಗದ ಸ್ತ್ರೀ ಸಂವೇದನೆಯ ವಿವಿಧ ಮಗ್ಗುಲುಗಳನ್ನು ಶೋಧಿಸಲಾಗಿದೆ. ಅವರ ಕಥಾ ಸಾಹಿತ್ಯದಲ್ಲಿ ಮಧ್ಯಮ ವರ್ಗದ ಜನರ ಬದುಕಿನ ಚಿತ್ರಣವನ್ನು ಕಾಣಬಹುದಾಗಿದೆ.

ಪ್ರಗತಿಶೀಲ ಪಂಥ

ಕನ್ನಡ ನವೋದಯದ ಸಾಹಿತ್ಯದ ವಿರೋಧ ಹುಟ್ಟಿಕೊಂಡ ಸಾಹಿತ್ಯ ಪ್ರಗತಿ ಶೀಲ. ಈ ಕಾಲಾವಧಿಯಲ್ಲಿ ವೇಶ್ಯೆಯರು, ವಿಧವೆಯರು, ಭಿಕ್ಷುಕಿಯರು, ಹೆಣ್ಣು ಜೀತದಾಳುಗಳು, ಸ್ತ್ರೀ ಕಾರ್ಮಿಕರು, ವೈವಾಹಿಕ ಚೌಕಟ್ಟಿನಾಚೆಗಿರುವ ಅತೃಪ್ತ ಗೃಹಿಣಿಯರು ಪ್ರಗತಿಶೀಲದ ಕಥಾವಸ್ತುವಾಗಿದೆ. ಇಲ್ಲಿ ಹೆಣ್ಣಿನ ಶೋಷಣೆ ಮುಖ್ಯ ವಸ್ತುವಾಗಿ ಕಂಡು ಬಂದಿದೆ. ಈ ಸಂದರ್ಭದಲ್ಲಿ ಪ್ರಗತಿಶೀಲ

ಲೇಖಕರ ಸಮಕಾಲೀನರಾದ ' ಲೇಖಕಿಯರು ಅನೇಕ ಕಥೆಗಳನ್ನು ರಚಿಸಿದರು. ಈ ಕಥೆಗಾರ್ತಿಯರು ಮಧ್ಯಮ ವರ್ಗದ ಹೆಣ್ಣು ಕುಟುಂಬದ ಚೌಕಟ್ಟಿನೊಳಗೆಯಿರುವ ಸ್ತ್ರೀಯ ಸಂವೇದನೆಗಳನ್ನು ಕುರಿತು ಚಿಂತಿಸಲಾಗಿದೆ. ಹಾಗೂ ಪುರುಷ ಪ್ರಧಾನ ವ್ಯವಸ್ಥೆಯ ವಿರೋಧ ಹಾಗೂ ಅಸಮಾನ ಆರ್ಥಿಕ ವ್ಯವಸ್ಥೆಯಡಿಯಲ್ಲಿ ಬಲಿಯಾಗುವ ಹೆಣ್ಣಿನ ಸಮಸ್ಯೆಗಳನ್ನು ಗುರುತಿಸಲಾಗಿದೆ. ಅಂತಹ ಪ್ರಗತಿಶೀಲ ಕಥೆಗಾರ್ತಿಯರಲ್ಲಿ ತ್ರಿವೇಣಿ, ಸುಶೀಲ ಕೊಪ್ಪರ, ಅನುಪಮಾ ನಿರಂಜನ, ವಾಣಿ, ಮುಂತಾದವರನ್ನು ಗಮನಿಸಲಾಗಿದೆ. ಇಲ್ಲಿ ಸ್ತ್ರೀವಾದದ ಪ್ರಥಮ ಮೆಟ್ಟಿಲಾಗಿ ಇಲ್ಲಿನ ಕಥೆಗಳು ಚಿತ್ರಣಗೊಂಡಿವೆ.

ತ್ರಿವೇಣಿ (೧೯೩೭-೬೩)

ಪ್ರಗತಿ ಶೀಲ ಕರ್ಥೆಗಾರ್ತಿಯರಲ್ಲಿ ತ್ರಿವೇಣಿಯರು ಪ್ರಮುಖರು, ಅವರು ಬದಲಾಗುತ್ತಿರುವ ಸಮಾಜವನ್ನು, ಸೂಕ್ಷ್ಮವಾಗಿ ಕಂಡು ಕೇಳಿದ ಅನುಭವಗಳನ್ನು, ಕಲ್ಪನೆಯನ್ನು ಕಥೆಗಳಲ್ಲಿ ಚಿತ್ರಿಸಿದ್ದಾರೆ. ಅವರು 'ಹೆಂಡತಿಯ ಹೆಸರು', 'ಎರಡು ಮನಸ್ಸು', 'ಸಮಸ್ಯೆಯ ಮಗು' ಎಂಬ ಮೂರು ಕಥಾ ಸಂಕಲನಗಳನ್ನು ರಚಿಸಿದ್ದಾರೆ. ಅವರ ಕಥೆಗಳಲ್ಲಿ ಲಿಂಗಭೇದ ನೀತಿಯ ವಿರೋದವನ್ನು ಪ್ರಶ್ನಿಸಲಾಗಿದೆ. ಅವರ ಕಥೆಗಳನ್ನು ಮನೋವಿಶ್ಲೇಷಣಾತ್ಮಕ, ಕೌಟುಂಬಿಕ, ಸಾಮಾಜಿಕ ಕಥೆಗಳೆಂದು ಗುರುತಿಸಲಾಗಿದೆ. ಅವರ ಮೊದಲ ಕಥಾಸಂಕಲನದ 'ಹೆಂಡತಿಯ ಹೆಸರು' ಕಥೆಯಲ್ಲಿ ಹೆಣ್ಣಿನ ಒಳಮನಸ್ಸಿನ ಸಂವೇದನೆಯ ಸೂಕ್ಷ್ಮತೆಗಳನ್ನು ಚಿತ್ರಿಸಿದ್ದಾರೆ.

ಇದೇ ಸಂಕಲನದ 'ಚಂಪಿ' ಕಥೆಯಲ್ಲಿ ಹೆಣ್ಣಿನ ಶೋಷಣೆಯನ್ನು ಗುರುತಿಸಲಾಗಿದೆ. ಅವರ 'ಕೊನೆಯ ನಿರ್ಧಾರ' ಕಥೆಯಲ್ಲಿ ವೈವಾಹಿಕ ಜೀವನದಲ್ಲಿನ ಸ್ವಾರ್ಥ ಹಾಗೂ ನಿಜವಾದ ಪ್ರೀತಿಯ ಕೊರತೆಯನ್ನು ಕಾಣಲಾಗಿದೆ.

ಹೀಗೆ ಅವರ ಕಥೆಗಳಲ್ಲಿ ನಾಯಕಿ ಸ್ವತಂತ್ರ ಬದುಕಿನ ಹುಡುಕಾಟದಲ್ಲಿರುತ್ತಾಳೆ. ಇಲ್ಲಿನ ಪಾತ್ರಗಳು ಆತ್ಮವಿಶ್ವಾಸದಿಂದ ಕೂಡಿದ್ದು, ಅವರ ಮುಂದೆ ಪುರುಷ ಪಾತ್ರಗಳ ಸೋಲನ್ನು ಕಾಣಬಹುದಾಗಿದೆ. ಇದಕ್ಕೆ 'ಬೆಡ್ ನಂ-೭' ಕಥೆಯು ನಿದರ್ಶನವಾಗಿದೆ. ಒಟ್ಟಾರೆ ತ್ರಿವೇಣಿಯರ ಕಥೆಗಳು ಸ್ತ್ರೀಯ ಪ್ರಸವದ ಸಮಸ್ಯೆ, ಸ್ವಾತಂತ್ರ, ಸಮಾನತೆಯ ತುಡಿತ, ವಿದೇಶದ ವ್ಯಾಮೋಹ ಪ್ರಮುಖ ವಸ್ತುವಾಗಿದೆ.

ನವೋದಯ ಕಥೆಗಾರ್ತಿಯರಿಗೆ ಹೋಲಿಸಿದರೆ ಪ್ರಗತಿಶೀಲ ಕಥೆಗಾರ್ತಿಯರು ಸ್ತ್ರೀ ಪರಿಕಲ್ಪನೆಯಲ್ಲಿ ಗಮನಾರ್ಹ ಬೆಳವಣಿಗೆಯನ್ನು ಕಾಣಬಹುದಾಗಿದೆ. ಸುಶೀಲಕೊಪ್ಪರ ಹಾಗೂ ತ್ರಿವೇಣಿಯರ ಹೊರತುಪಡಿಸಿದ ಉಳಿದ ಕಥೆಗಾರ್ತಿಯರು ಸಾಂಸಾರಿಕ ಚಿತ್ರಣ ಪ್ರಮುಖ ವಸ್ತುವಾಗಿ ಕಾಣಲಾಗಿದೆ.

ಸಾವಿತ್ರಮ್ಮ ಎಚ್.ವಿ. (೧೯೧೩- ೧೯೯೯)

ಕನ್ನಡ ನವೋದಯ, ಪ್ರಗತಿಶೀಲ ಚಳುವಳಿಗಳ ಸಂದರ್ಭದಲ್ಲಿ ಬರೆಯಲಾರಂಭಿಸಿದ ಹಿರಿಯ ಲೇಖಕಿಯಾಗಿದ್ದಾರೆ. ಅವರು, **'ನಿರಾಶ್ರಿತಾ'** (೧೯೪೯), **'ಮರುಮದುವೆ'** (೧೯೫೪), **'ಸರಿದ ನೆರಳು'**, **'ಲಕ್ಷ್ಮೀ ಮತ್ತು ಪ್ರತಿಜ್ಞೆ'** (೧೯೬೦) ಇತ್ಯಾದಿ ಕಥಾ ಸಂಕಲನಗಳನ್ನು ರಚಿಸಿದ್ದಾರೆ. ಅವರ ಬಹಿಷ್ಕೃತೆ ಕಥೆಯಲ್ಲಿ ವಿಧವೆ ಹೆತ್ತ ಮಗುವನ್ನು ಯಾರೂ ವರಿಸಲು ಮುಂದೆ ಬರದಾಗ ಅವಳನ್ನು ಬಯಸಿ ಬಂದ

ಕ್ರಿಶ್ಚಿಯನ್ ವರನಿಗೆ ಮಧುವೆ ಮಾಡಿಕೊಡುವುದನ್ನು ಕಾಣಬಹುದು ಇಲ್ಲಿ ಅಂತರ ಜಾತಿ ವಿವಾಹವನ್ನು ಒಪ್ಪಿಕೊಳ್ಳುವುದರ ಮೂಲಕ ಮದುವೆ ಎನ್ನುವ ಸಂಸ್ಥೆಯ ಪೊಳ್ಳು ಮೌಲ್ಯವನ್ನು ಲೆಕ್ಕಿಸದ ಪಾತ್ರಗಳಾಗಿ ಗಮನ ಸೆಳೆಯುತ್ತವೆ. ಒಟ್ಟಾರೆ ವಿವಾಹದ ಚೌಕಟ್ಟಿನಲ್ಲಿ ಉಸಿರುಗಟ್ಟಿ ಬದುಕಿನ ನಿರ್ವಹಣೆಯಲ್ಲಿ ಒದ್ದಾಡಿ ಸೋಲುವ, ವಿವಾಹದ ಪರಿಧಿಯಿಂದಾಚೆ ನಿಂತರೂ ಪ್ರೇಮದ ಸೆಲೆಯನ್ನು ಬತ್ತಿಸಲಾಗದ, ವೃದ್ಧಾಪ್ಯದ ಅಸಹಾಯಕತೆಯಲ್ಲಿ ತೊಳಲಾಡುವ ಸಮಾಜದಲ್ಲಿ ಅಧೀರತೆಗೆ ಒಳಗಾಗಿರುವ ಹೆಣ್ಣುಮಕ್ಕಳ ಬದುಕಿನ ಚಿತ್ರಣಗಳನ್ನು ಅವರ ಕಥೆಯಲ್ಲಿ ಗುರುತಿಸಲಾಗಿದೆ.

ಡಾ.ಅನುಪಮಾ ನಿರಂಜನ (೧೯೩೪-೧೯೯೧)

ಪ್ರಗತಿಶೀಲ ಕಥೆಗಾರ್ತಿಯರಲ್ಲಿ ಡಾ. ಅನುಪಮಾ ನಿರಂಜನರು ಪ್ರಮುಖರು ವೃತ್ತಿಯಲ್ಲಿ ವೈದ್ಯರಾಗಿದ್ದರು. ಅವರು ಸಣ್ಣ ಕಥೆಗಳ ಮೂಲಕ ಸಾಹಿತ್ಯ ಲೋಕವನ್ನು ಪ್ರವೇಶಿಸಿದರು. 'ಕಣ್ಮಣಿ', 'ರೂವಾರಿಯ ಲಕ್ಷ್ಮೀ', 'ನೀರಿಗೆ ನೈದಿಲೆ ಶೃಂಗಾರ', 'ಏಳು ಸುತ್ತಿನ ಮಲ್ಲಿಗೆ', 'ಗಿರಧಾಮ' ಇತ್ಯಾದಿ ಕಥಾ ಸಂಕಲನಗಳನ್ನು ರಚಿಸಿದ್ದಾರೆ. ಹೆಣ್ಣಿನ ಮೇಲೆ ನಡೆಯುವ ಅತ್ಯಾಚಾರದ ಕುರಿತ ಕಥೆ 'ರುವಾರಿಯ ಲಕ್ಷ್ಮಿ' ಐತಿಹಾಸಿಕ ವಸ್ತುವನ್ನು ಒಳಗೊಂಡಿದ್ದು ಆಳುವ ವರ್ಗದ ದೌರ್ಜನ್ಯ, ದುಡಿಯುವ ವರ್ಗದ ಅಸಹಾಯಕತೆಯನ್ನು, ಹೆಣ್ಣಿನ ಶೋಷಣೆಯನ್ನು ಕುರಿತು ಹೇಳುತ್ತದೆ. ಮಕ್ಕಳನ್ನು ಹಿಂದೆಯೂ ಅವುಗಳನ್ನು ಪೋಷಿಸುವುದರ ಮೂಲಕ ಸಿದ್ಧಿಸುವ ತಾಯ್ತನದ ಹಂಬಲವನು 'ವಿಳಾಸವಿಲ್ಲದ ಮಗು' ಕಥೆಯಲ್ಲಿ ಕಾಣಬಹುದಾಗಿದೆ. ಅನುಪಮಾ ಅವರ 'ಒಂದು ಘಟನೆ ಹಾಗೂ ಅನಂತರ' ಕತೆಯಲ್ಲಿ ಸ್ತ್ರೀಯ ದಿಟ್ಟತನವನ್ನು ತೋರುತ್ತಾರೆ. ಇಲ್ಲಿ ವಿವಾಹಿತ ಹೆಣ್ಣು ಅತ್ಯಾಚಾರಕೊಳಗಾಗಿದ್ದು ಇದಕ್ಕೆ ಗಂಡನೇ ಜವಾಬ್ದಾರನಾಗಿರುತ್ತಾನೆ. ಈ ಪ್ರಕರಣದ ನಂತರ ಹೆಂಡತಿಯನ್ನು ಸ್ವೀಕರಿಸಲು ಸಾಂಪ್ರಾದಾಯಿಕ ಮನೋಧರ್ಮ ಎದುರಾಗಿ ಅವಳನ್ನು ತಿರಸ್ಕರಿಸುತ್ತಾನೆ. ಹೆಂಡತಿಯನ್ನು ರಕ್ಷಿಸಲಾಗದ ಇವನು ಗಂಡನೋ? ಎಂಬ ಪ್ರಶ್ನೆಯು 'ಹಂಗು ಇಲ್ಲದ ಬದುಕ'ನ್ನು ಹುಡುಕಿಕೊಂಡು ಮನೆಯಿಂದ ಹೊರಬೀಳುವ ನಿರ್ಧಾರದಿಂದ ಕಥೆಯು ಅಂತ್ಯವಾಗುತ್ತದೆ ಹೀಗೆ ಇಲ್ಲಿನ ನಾಯಕಿಯರು ಸ್ವತಂತ್ರ ಬದುಕನ್ನು ದಿಟ್ಟತನವನ್ನು ಕಾಣಲಾಗಿದೆ. ಅವರ 'ಸುವರ್ಣ ರೇಖೆ' ಕಾರ್ಮಿಕರ ಸಮಸ್ಯೆಗಳನ್ನ ಕುರಿತು ಚಿಂತಿಸುತ್ತದೆ. ಹೀಗೆ ಅವರ ಕಥೆಗಳು ಅತ್ಯಾಚಾರಕ್ಕೆ ಒಳಗಾದ ಮಹಿಳೆಯರು, ಬಂಜೆಯರ ಸಮಸ್ಯೆಗಳು, ಅವಿಭಕ್ತ ಕುಟುಂಬಗಳಲ್ಲಿ ಕಂಡುಬರುವ ಸಮಸ್ಯೆಗಳು, ವರಾನ್ವೇಷಣೆಯಲ್ಲಿ ಪ್ರದರ್ಶನಕ್ಕೆ ಕುಳಿತು ಅವಮಾನಿತರಾಗುವ ಹುಡುಗಿಯರು, ಅವಿವಾಹಿತ ಹೆಣ್ಣುಳ ಸಮಸ್ಯೆಗಳು ಹೀಗೆ ಹೆಣ್ಣಿನ ಹತ್ತು ಹಲವು ಕಥೆಯಲ್ಲಿ ಚಿತ್ರಿಸಲಾಗಿದೆ. ಒಟ್ಟಾರೆ ನವೋದಯ ಕಥೆಗಾರ್ತಿಯರಿಗೆ ಹೋಲಿಸಿದರೆ ಪ್ರಗತಿಶೀಲ ಕಥೆಗಾರ್ತಿಯರು ಸ್ತ್ರೀ ಪರಿಕಲ್ಪನೆಯಲ್ಲಿ ಗಮನಾರ್ಹವಾದ ಬದಲಾವಣೆಯನು ಕಾಣಬಹುದಾಗಿದೆ. ಈ ಕಾಲಾವಧಿಯಲ್ಲಿ ಸ್ತ್ರೀ ಶಿಕ್ಷಿತಳಾಗಿದ್ದು ಸ್ವತಂತ್ರ ಆಲೋಚನೆಯನ್ನು ಒಳಗೊಂಡು ಸ್ತ್ರೀಯ ಸಮಸ್ಯೆಗಳ ಮೂಲ ಕಾರಣವನ್ನು ಶೋಧಿಸಲಾಗಿದೆ. ಸುಶೀಲ ಕೊಪ್ಪರ ಹಾಗೂ ತ್ರಿವೇಣಿಯರನ್ನು ಹೊರತುಪಡಿಸಿ ಉಳಿದ ಕಥೆಗಾರ್ತಿಯರ ಕಥೆಯ ವಸ್ತುಗಳು ಸಾಂಸಾರಿಕ ಚಿತ್ರಣದಿಂದ ಕೂಡಿದೆ.

ನವ್ಯ ಪಂಥ

ನವ್ಯ ಪಂಥದ ಬರಹಗಾರರ ಮೇಲೆ ಪ್ರಾಯ್ಡನ ಲೈಂಗಿಕತೆ, ಮಾರ್ಕ್ಸ್, ಏಂಗೆಲ್ಸ್ ಆರ್ಥಿಕ ಸಿದ್ಧಾಂತ ನೇರವಾಗಿ ಹಾಗೂ ಪರೋಕ್ಷವಾಗಿ ಪ್ರಭಾವ ಬೀರಿದೆ. ಇಂತಹ ಪ್ರಭಾವಕ್ಕೆ ಲೇಖಕಿಯರು ಹೊರತಾಗಿಲ್ಲದಿಲ್ಲ. ಪುರುಷ ಕೇಂದ್ರಿತ ನೆಲೆಯಿಂದ ಸ್ತ್ರೀಯರನ್ನು ಕಾಣುವ ನವ್ಯದ ಕಥೆಗಾರರಿಗೂ, ಸ್ತ್ರೀಯನ್ನು ಸ್ತ್ರೀಕೇಂದ್ರಿತ ನೆಲೆಯಿಂದ ನೋಡುವ ನವ್ಯದ ಕಥೆಗಾರ್ತಿಯರ ಕಥೆಗಳು ವಿಶಿಷ್ಟವಾಗಿದ್ದು, ಈ ಕಥೆಗಳಲ್ಲಿ ಸ್ತ್ರೀಯ ಗಟ್ಟಿತನವನ್ನು ಮೂಲ ಹೆಣ್ಣಿನ ಸಮಸ್ಯೆಗಳಿಗೆ ಕಾರಣವನ್ನು ಶೋಧಿಸಿ, ಪುರುಷ ಕೇಂದ್ರಿತ ವೈಚಾರಿಕ ಚೌಕಟ್ಟಿನಾಚೆ ಇರುವ ಸ್ವಪ್ರಜ್ಞೆಯ ನೆಲೆಯೊಂದನ್ನು ನವ್ಯ ಕಥೆಗಳಲ್ಲಿ ಕಾಣಬಹುದಾಗಿದೆ. ಅವರ ಎಲ್ಲಾ ಕಥೆಗಳು ಸ್ತ್ರೀವಾದಿತನವನ್ನು ಗುರುತಿಸಲಾಗಿದೆ. ಇಂತಹ ತಾತ್ವಿಕ ಆಲೋಚನೆ ಹೊಂದಿರುವ ನವ್ಯ ಕಥೆಗಾರ್ತಿಯರಲ್ಲಿ ರಾಜಲಕ್ಷ್ಮಿ ಎನ್.ರಾವ್, ವೈದೇಹಿ, ವೀಣಾಶಾಂತೇಶ್ವರ ಮುಖ್ಯವಾಗಿದ್ದಾರೆ.

ರಾಜಲಕ್ಷ್ಮಿ ಎನ್.ರಾವ್ (೧೯೩೪)

ನವ್ಯದ ಕಥೆಗಾರ್ತಿಯರಲ್ಲಿ ರಾಜಲಕ್ಷ್ಮಿ ಮೊದಲಿಗರು. ಅವರು 'ಸಂಗಮ' ಎಂಬ ಕಥಾಸಂಕಲನವನ್ನು ರಚಿಸಿದ್ದಾರೆ. ಅವರ ಎಲ್ಲಾ ಕಥೆಗಳಲ್ಲಿ ವ್ಯಕ್ತಿಯ ಮನಸ್ಸಿನ ನರಳಾಟ, ನೋವುಗಳು ವಸ್ತುವಾಗಿ ಮೂಡಿ ಬಂದಿದೆ. ಅವರ 'ಕಲ್ಯಾಣಿ' ಕಥೆಯಲ್ಲಿ ಮೂವರು ಪುರುಷರು ಒಂದು ಹೆಣ್ಣನ್ನು ನೋಡುವ ಕ್ರಮಕ್ಕೂ ಹೆಣ್ಣೊಬ್ಬಳು ಗಂಡನ್ನು ಅಪೂರ್ಣವಾಗಿ ಕಂಡು ಯಾರನ್ನೂ ಒಪ್ಪಿಕೊಳ್ಳದೆ ತಿರಸ್ಕರಿಸುತ್ತಾಳೆ. ಅವರ ಕಥೆಯಲ್ಲಿ ಹೆಣ್ಣಿಗೆ ತನ್ನದೇ ಆದ ವ್ಯಕ್ತಿತ್ವವಿದ್ದು ಪುರುಷರ ದೌರ್ಬಲ್ಯ, ಕೊರತೆಯನ್ನು ಕಂಡು ಹಿಡಿಯಲು ಸಮರ್ಥಳಾಗಿದ್ದಾಳೆ. ಇಲ್ಲಿ ಸ್ತ್ರೀಯ ಅಸ್ತಿತ್ವವನ್ನು ಗುರುತಿಸಿದ್ದಾರೆ. ಅವರ 'ಪ್ರೀಡಾ' ಕಥೆಯಲ್ಲಿ ವಿವಾಹೇತರ ಕಾಮಕ್ಕೆ ಒಳಗಾದ ಮಹಿಳೆಯ ಆಂತರಿಕ ತೊಳಲಾಟದ ಚಿತ್ರಣ ಮುಖ್ಯವಾಗಿದೆ. ಅವರ ಮತ್ತೊಂದು ಪ್ರಮುಖ ಕಥೆ 'ಇಲ್ಲ ಇಲ್ಲ' ಕಥೆಯಲ್ಲಿ ಒಬ್ಬನನ್ನು ಪ್ರೀತಿಸಿ, ಮತ್ತೊಬ್ಬನನ್ನು ಮದುವೆಯಾದ ಹೆಣ್ಣಿನ ದ್ವಂದ್ವತೆ ಈ ಕತೆಯ ವಸ್ತುವಾಗಿದೆ. ಇಲ್ಲಿ ಸ್ವಾತಂತ್ರ್ಯಾ ನಂತರ ಭಾರತೀಯರು ಭ್ರಮನಿರಸತೆಗೆ ಒಳಗಾಗಿ ದುರಂತತೆಯನ್ನು ಕುರಿತು ಹೇಳುತ್ತದೆ. ಒಟ್ಟಾರೆ 'ಸಂಗಮ' ಕಥೆಯಲ್ಲಿ ಗಂಡಿನ ಅನುಮಾನ, ಸಂಶಯ ಪ್ರವೃತ್ತಿಗಳು ಕಥೆಯ ವಸ್ತುವಾಗಿದ್ದರೆ, 'ನನಗೊಂದು ಬಿಳಿ ಗುಲಾಬಿ' ಕಥೆಯಲ್ಲಿ ಹೆಣ್ಣಿನ ಸಂಕಷ್ಟ, ಮಾನಸಿಕ ತಲ್ಲಣವನ್ನು ಗುರುತಿಸಲಾಗಿದೆ ಹೀಗೆ ಅವರ ಕಥೆಗಳಲ್ಲಿ ಹೆಣ್ಣಿನ ಅಸಹಾಯಕತೆ, ಹತಾಶೆಗಳನ್ನು ಕಥೆಯಲ್ಲಿ ವಿಶಿಷ್ಟವಾಗಿಸಿದ್ದಾರೆ.

ವೀಣಾ ಶಾಂತೇಶ್ವರ

ನವ್ಯ ಕಥೆಗಾರ್ತಿಯರಾಗಿ ವೀಣಾ ಅವರು ಪ್ರಸಿದ್ಧರಾಗಿದ್ದಾರೆ. ಅವರು ಮೂಲತಃ ಉತ್ತರ ಕರ್ನಾಟಕದವರು. ಅವರು ಅರವತ್ತರ ದಶಕದ ಕೊನೆಯ ಭಾಗದಲ್ಲಿ ನವ್ಯ ಚಳುವಳಿ ಉತ್ಕೃಷ್ಟ ಸ್ಥಿತಿಯಲ್ಲಿದ್ದಾಗ ತಮ್ಮ 'ಮುಳ್ಳುಗಳು' ಕಥಾ ಸಂಕಲನದ ಮೂಲಕ ಸಾಹಿತ್ಯ ಜಗತ್ತನ್ನು ಪ್ರವೇಶಿಸಿದರು.

ಅವರು ನವ್ಯ ಚಳುವಳಿಯಿಂದ ಪ್ರಭಾವಿತರಾಗಿದ್ದರು. ಅವರು 'ಮುಳ್ಳುಗಳು' (೧೯೬೯), 'ಕೊನೆಯ ದಾರಿ' (೧೯೭೨), 'ಕವಲುಗಳು' (೧೯೭೬) ಎಂಬ ಕಥಾ ಸಂಕಲನಗಳನ್ನು ರಚಿಸಿದ್ದಾರೆ. ಅವರ ಮುಳ್ಳುಗಳು ಸಂಕಲನವು ಸ್ತ್ರೀ ಪುರುಷರ ಸಂಬಂಧಗಳನ್ನು ಲೈಂಗಿಕ ಹಿನ್ನಲೆಯಲ್ಲಿ ಚಿತ್ರಿಸಲಾಗಿದೆ. ಪುರುಷ ನಿರ್ಮಿತ ಸಂಸ್ಕೃತಿಗೆ ವಿರೋಧವಾದ ಹೆಣ್ಣನ್ನು ಇಲ್ಲಿ ಚಿತ್ರಿಸಿದ್ದಾರೆ. ಅವರ ಬಹುಪಾಲು ಕಥೆಗಳಲ್ಲಿಹೆಣ್ಣು ಸ್ವತಂತ್ರವಾಗಿದ್ದು, ತನ್ನ ಬಾಳ ಸಂಗಾತಿಯನ್ನು, ತಾಯ್ತನವನ್ನು ಆಯ್ಕೆ ಮಾಡಿಕೊಳ್ಳುವ ದೃಡ ಮನಸ್ಸಿನ ಹೆಣ್ಣಾಗಿ ಚಿತ್ರಿತವಾಗಿದೆ. ಅವರ 'ಬಿಡುಗಡೆ', ಕಥೆಯ ನಾಯಕಿ ಗಂಡನ ಕ್ರೌರ್ಯ ಹಿಂಸೆ ದಬ್ಬಾಳಿಕೆಗಳಿಂದ ನೊಂದು, ಆತನಿಗೆ ಒದಗಿದ ಸಾವಿನಿಂದ ಬಿಡುಗಡೆಯನ್ನು ಹೊಂದುತ್ತಾಳೆ. ಅವರ 'ಕೊನೆಯ ದಾರಿ' ಕಥೆಯಲ್ಲಿನ ನಾಯಕಿ ಬಯಸುವುದು ತಾಯ್ತನ ಇದಕ್ಕಾಗಿ ಗಂಡನಿಲ್ಲದೆ ತನ್ನ ಜೀವನದಲ್ಲಿ ಪ್ರವೇಶಿಸಿದ ಅನೇಕ ಪುರುಷರಿಂದ ಆಕೆ ನಿರೀಕ್ಷಿಸುವುದು ಮಗುವನ್ನು ಆದರೆ ಸ್ವಾರ್ಥ ತಡೆಯಿಂದ ಕೂಡಿದ ಪುರುಷರಲ್ಲಿ ಹೆಣ್ಣು ಕೇವಲ ಬೋಗವಸ್ತುವಾಗಿ ಬಳಸಿ ಅವಳ ಆಸೆಯನ್ನು ಈಡೇರಿಸುವಲ್ಲಿ ಸಮಾಜದ ಕಟ್ಟುಪಾಡುಗಳಿಗೆ ಹೆದರಿ ನಿರಾಕರಿಸುತ್ತಾರೆ. ಹೆಣ್ಣಿನ ಲೈಂಗಿಕ ಸಂಬಂಧವನ್ನು ನಿರಾಕರಿಸಿದ ಪುರುಷರು, ಹೆಣ್ಣಿನ ಅಗತ್ಯವಾದ ಬಯಕೆಯನ್ನು ಈಡೇರಿಸಲು ಆದರ್ಶ ಅಡ್ಡಗಾಲಾಗುತ್ತದೆ. ಅವರ ಕಥೆಗಳಲ್ಲಿ ಕಾಣಿಸಿಕೊಳ್ಳುವ ಬಹುಪಾಲು ನಾಯಕಿಯರು ಉದ್ಯೋಗಸ್ಥರು, ಮುಂಬಯಿಯ ಜಗತ್ತಿನ ಬದುಕುತ್ತಿರುವ ನಾಗರಿಕರಾಗಿದ್ದು, ಆರ್ಥಿಕ ಸ್ವಾತಂತ್ರ್ಯ ಹಾಗೂ ಸ್ವಾಲಂಬಿಗಳಾಗಿದ್ದು ತಮ್ಮ ಮೇಲೆ ಆಗುತ್ತಿರುವ ಶೋಷಣೆಯನ್ನು ಅರ್ಥಮಾಡಿಕೊಂಡು ಸ್ವತಂತ್ರ್ಯವಾದ ಆಯ್ಕೆಯನ್ನು, ನಿರ್ಧಾರವನ್ನು ಕಾಣಬಹುದಾಗಿದೆ. ಇದು ಹೆಣ್ಣಿನ ಬಾಳ ಸಂಗಾತಿಯ ಅಥವಾ ತಾಯ್ತನದ ಆಯ್ಕೆಯಾಗಿದೆ. ಇದಕ್ಕೆ 'ಹೀಗೊಂದು ಕಥೆಯು' ಮುಖ್ಯ ನಿದರ್ಶನವಾಗಿದೆ. ಅವರ ಎಲ್ಲಾ ಕಥೆಗಳಲ್ಲಿ ಪುರುಷರ ದೌರ್ಜನ್ಯವನ್ನು ವಿರೋಧವನ್ನು ಹೆಣ್ಣಿನ ತಾಯ್ತನದ ಹಕ್ಕನ್ನು ಸ್ವತಂತ್ರವಾಗಿ ಆಯ್ದುಕೊಳ್ಳುವ ಪರಿಯನ್ನು ಕಾಣಬಹುದಾಗಿದೆ. ಅವರ ಬಹುಪಾಲು ಕಥೆಗಳು ನವ್ಯ ಪುರುಷ ಲೇಖಕರು ಚಿತ್ರಿಸುವ ಸ್ತ್ರೀಪಾತ್ರಗಳಿಗೆ ವಿರುದ್ಧವಾಗಿ ಹೆಣ್ಣನ್ನು ಚಿತ್ರಿಸಲಾಗಿದೆ. ಇಲ್ಲಿ ವೀಣಾ ಅವರು ಸಂಪ್ರಾದಾಯಿಕತೆಯಿಂದ ದೂರವಾಗಿ ಆಧುನಿಕ ಮಹಿಳಾ ಚಿತ್ರಣವನ್ನು ನೀಡಿದ್ದಾರೆ. ಇಲ್ಲಿನ ಕಥೆಗಳಲ್ಲಿ ಹೆಣ್ಣಿನ ಘನತೆಯನ್ನು ಬೇರೆ ಬೇರೆ ನೆಲೆಯಲ್ಲಿ ಚಿತ್ರಿಸಿದ್ದಾರೆ. ಅವರು ಆಧುನಿಕ ಮಹಿಳೆಯರ ಅಂತರಂಗ ಹಾಗೂ ಅನುಭವಗಳು ಯಶಸ್ವಿಯಾಗಿ ತಮ್ಮ ಕಥೆಗಳಲ್ಲಿ ಚಿತ್ರಿಸಿದ್ದಾರೆ.

ವೈದೇಹಿ (೧೯೪೫)

ವೈದೇಹಿ ಎಂಬ ಕಾವ್ಯ ನಾಮದಿಂದ ಪ್ರಸಿದ್ಧರಾದ ಜಾನಕಿಯವರು ಸಣ್ಣಕತೆ ಕ್ಷೇತ್ರದ ಮೂಲಕ ತಮ್ಮನ್ನು ಗುರುತಿಸಿಕೊಂಡರು. ಅವರ ಕತೆಗಳಲ್ಲಿ ದಕ್ಷಿಣ ಕನ್ನಡದ ಪರಿಸರದ ವೈಶಿಷ್ಟ್ಯತೆ ಹಾಗೂ ಕುಂದಾಪುರದ ಆಡುನುಡಿಯನ್ನು ಕಾಣಬಹುದು ಅವರ ಬಹುಪಾಲು ಕಥೆಗಳು ಗ್ರಾಮೀಣ ಅವಿಭಕ್ತ ಕುಟುಂಬ ಪರಿಸರ ಹಾಗೂ ಆಧುನಿಕ ಸ್ತ್ರೀ ವ್ಯಕ್ತಿತ್ವದ ಸೂಕ್ಷ್ಮ ಚಿತ್ರಗಳು ಕೇಂದ್ರವಾಗಿವೆ. ಅವರು

'ಅಂತರಂಗದ ಪುಟಗಳು' (೧೯೮೪), **'ಮರಗಿಡ ಬಳ್ಳಿ', 'ಗೋಲ'** (೧೯೮೬), **'ಅಮ್ಮಚ್ಚಿ ಎಂಬ ನೆನಪು'** (೨೦೦೦), ಇತ್ಯಾದಿ ಕಥಾ ಸಂಕಲನಗಳನ್ನು ರಚಿಸಿದ್ದಾರೆ. ಮಾನವೀಯ ಸಂಬಂಧ ಸ್ವಭಾವ, ಸಮಸ್ಯೆಗಳು ವೈದೇಹಿಯವರ ಕಥೆಯ ವಸ್ತುವಾಗಿದೆ. ಉದಾಹರಣೆಗೆ ಅವರ ಪ್ರಮುಖ ಕಥೆಯಾದ 'ಅವಲಂಬಿತರು' ಕಥೆಯು ಒಂದು ಶೋಷಣೆಯ ಕಥೆಯಾಗಿದೆ. ಮಾನವೀಯ ಮೌಲ್ಯಗಳನ್ನು ಕಳೆದುಕೊಂಡ ಮಧ್ಯಮ ವರ್ಗದ ಕುಟುಂಬ ಅಮಾಯಕ ಹುಡುಗಿಯನ್ನು ಸ್ವಾರ್ಥಕ್ಕಾಗಿ ಬಳಸಿಕೊಳ್ಳುವ ವಿಧಾನದ ಅನಾವರಣ ಈ ಕಥೆಯಲ್ಲಿದೆ ಹೀಗೆ ಸಾಂಪ್ರಾದಾಯಿಂಕ ಕುಟುಂಬ ವ್ಯವಸ್ಥೆಯಲ್ಲಿ ಹೆಣ್ಣು ಅನುಭವಿಸುವ ಹಿಂಸೆ, ಕ್ರೌರ್ಯಗಳು ವೈದೇಹಿಯವರ ಕಥೆಗಳಲ್ಲಿ ಕಾಣಿಸಿಕೊಳ್ಳುತ್ತದೆ. ಗ್ರಾಮೀಣ ಪರಿಸರಕ್ಕೆ, 'ಸಿನೆಮಾ ಟಾಕೀಸ್ ಬಂದಾಗ' ಸ್ತ್ರೀಜನಗತ್ತಿನಲ್ಲಿ ಆಗುವ ಪರಿವರ್ತನೆಗಳನ್ನು 'ಗುಲಾಬಿ ಟಾಕೀಸ್' ಕಥೆಯಲ್ಲಿಕಾಣಲಾಗಿದೆ. ಅವರ 'ಶಕುಂತಲೆಯೊಂದಿಗೆ ಕಳೆದ ಅಪರಾಹ್ನ' ಕತೆಯಲ್ಲಿ ಕಾಳಿದಾಸ ಚಿತ್ರಿಸಿದ ಶಕುಂತಲೆಯ ಸ್ವಾಭಿಮಾನಿ ಶಕುಂತಲೆಯಗಾಗಿ, ಪಿತೃಪ್ರಧಾನ ವ್ಯವಸ್ಥೆಯ ತಾರತಮ್ಯವನ್ನು ಪ್ರತಿಭಟಿಸುವ ಮನೋಧರ್ಮದವಳಾಗಿದ್ದಾಳೆ. ಹೀಗೆ ವೈದೇಹಿಯ ಕಥೆಗಳಲ್ಲಿ ಸ್ವಾಭಿಮಾನಿ ಸ್ತ್ರೀ ಪಾತ್ರಗಳು ಹೆಚ್ಚಾಗಿ ಕಂಡುಬರುತ್ತವೆ.

ದಲಿತ ಬಂಡಾಯ ಮತ್ತು ಮುಸ್ಲಿಂ ಸ್ತ್ರೀ ಸಂವೇದನೆ

ಎಪತ್ತರ ದಶಕದಲ್ಲಿನಡೆದ ಹೋರಾಟಗಳು ದೇಶದ ರಾಜಕೀಯ, ಸಾಮಾಜಿಕ ಬದುಕಿನಲ್ಲಿ ಉಂಟಾದ ಬದಲಾವಣೆ ಸಾಹಿತ್ಯ ಕ್ಷೇತ್ರದಲ್ಲಿ ಮಹತ್ತರ ಬದಲಾವಣೆಯಾದ ಪರಿಣಾಮ ದಲಿತ ಮುಸ್ಲಿಂ, ಬಂಡಾಯ ಸಾಹಿತ್ಯ ಪರಂಪರೆ ಆರಂಭವಾಯಿತು. ಈ ಪರಂಪರೆಯಲ್ಲಿ ಶೋಷಿತ ಕೆಳವರ್ಗದ ಕೆಳಜಾತಿಗಳ ಸ್ಥಿತಿಯನ್ನು ಬದಲಾವಣೆಯ ಆಶಯವನ್ನು ಈ ಸಾಹಿತ್ಯ ಪ್ರತಿಪಾದಿಸಿತು. ಈ ಸಾಹಿತ್ಯದ ದಟ್ಟ ಪ್ರಭಾವ ಲೇಖಕಿಯ ಮೇಲೆ ಉಂಟಾಗಿ ಕೆಳವರ್ಗದಿಂದ ಬಂದ ಮಹಿಳೆಯರು ತಾವು ಕಂಡು ಕೇಳಿದ ಅನುಭವಗಳನ್ನು ಬರಹಗಳ ಮೂಲಕ ಪ್ರತಿಪಾದಿಸಿದರು ಅಂತಹ ಲೇಖಕಿಯಲ್ಲಿ ಮುಖ್ಯವಾಗಿ ಗೀತನಾಗಭೂಷಣ, ಬಿ.ಟಿ.ಲಲಿತಾನಾಯಕ, ಭಾನು ಮುಷ್ತಾಕ, ಸಾರಾಅಬೂಬಕ್ಕರ್ ಪ್ರಮುಖರಾಗಿದ್ದಾರೆ.

ಗೀತಾ ನಾಗಭೂಷಣ (೧೯೪೨)

ಕನ್ನಡದ ಹೆಸರಾಂತ ದಲಿತ ಲೇಖಕಿ ಗೀತಾ ನಾಗಭೂಷಣ್‌ರವರು **'ಜ್ವಲಂತ'** (೧೯೮೯), **'ಅವ್ವ ಮತ್ತು ಇತರ ಕಥೆಗಳು'** (೧೯೯೩) ಎಂಬ ಕಥಾಸಂಕಲನಗಳನ್ನು ರಚಿಸದ್ದಾರೆ. ಅವರ ಕಥೆಗಳ ನಾಯಕಿ ಕೊಳಗೇರಿಯ, ಜೋಪಡಿ ಪಟ್ಟಿಯ ಬಡ ಮುಗ್ಧ ಮಹಿಳೆಯರಾಗಿದ್ದಾರೆ. ಈ ಹೆಣ್ಣುಗಳು ಉಳಿಗಮಾನ್ಯ ವ್ಯವಸ್ಥೆಯ ಮೇಲ್‌ವರ್ಗದಿಂದ ಅನುಭವಿಸು ಲೈಂಗಿಕ, ಮಾನಸಕ ದೌರ್ಜನ್ಯಗಳ ವಿವಿಧ ಮುಖಗಳನ್ನು ಕಾಣಬಹುದು. ಶೂದ್ರ ಸಮುದಾಯದ ಕೆಳವರ್ಗದ ಹೆಣ್ಣಿನ ನೋವು, ಸಂಕಟ ಅಪಮಾನಗಳನ್ನು ಸಮಸ್ಯೆಗಳನ್ನು ಅವರ ಕಥೆಗಳಲ್ಲಿ ಕಾಣಲಾಗಿದೆ. ಅವರ 'ಹುಲಗ್ಯಾ' ಕಥೆಯು ದಲಿತರ ಬದುಕಿನ ಚಿತ್ರಣವನ್ನು ನೀಡುತ್ತದೆ. ಇಲ್ಲಿಯ ದಲಿತ ಹೆಣ್ಣು ಮೇಲ್‌ವರ್ಗದವರ ಭೋಗವಸ್ತುವಾಗಿ ಅತ್ಯಾಚಾರಕ್ಕೆ

ಒಳಗಾಗಿದ್ದಾರೆ. ಇಲ್ಲಿ ದಲಿತರು ಅವರನ್ನು ಕೊಲ್ಲುವುದರ ಮೂಲಕ ಪ್ರತಿಭಟನೆಯನ್ನು ವ್ಯಕ್ತಪಡಿಸಿದ್ದಾರೆ. ಅವರ ಮತ್ತೊಂದು ಕಥೆ 'ಗೌಡನ ಗೋರಿ' ಕಥೆಯು ಹೆಣ್ಣಿನ ತಾಯ್ತನದ ಹಂಬಲದ ಚಿತ್ರಣವನ್ನು ನೀಡುತ್ತದೆ. ಈ ಹಿನ್ನಲೆಯಲ್ಲಿ ಪರಪುರುಷನೊಂದಿಗೆ ಸಂಬಂಧ ಬೆಳಸಿ ಮಗುವನ್ನು ಪಡೆಯುವ ಹೆಣ್ಣಿನ ತಾಯ್ತನದ ಆಯ್ಕೆ ಸ್ವತಂತ್ರ್ಯ ಮನೋಭಾವ ವ್ಯಕ್ತವಾಗಿದೆ. ಒಟ್ಟಾರೆ ಗೀತಾನಾಗಭೂಷಣರವರ ಕಥಾ ಸಾಹಿತ್ಯವು ಸಂಪ್ರದಾಯಿಕದಿಂದ ದೂರವಾಗಿ ಸರಳವಾದ ಜನಪದ ಮಾತಿನಲ್ಲಿ ಹೆಣ್ಣುಗಂಡಿನ ಸಂಬಂಧಗಳನ್ನು ಕಥೆಗಳಲ್ಲಿ ಚಿತ್ರಿಸಲಾಗಿದೆ.

ಬಿ.ಟಿ.ಲಲಿತನಾಯಕ್ (೧೯೪೫)

ಲಂಬಾಣಿ ಸಂಸ್ಕೃತಿಯ ಹಿನ್ನೆಲೆಯಲ್ಲಿ ಕನ್ನಡದಲ್ಲಿ ಕಥೆಗಳನ್ನು ರಚಿಸಿದ ಏಕೈಕ ಲೇಖಕಿ ಬಿ.ಟಿ.ಲಲಿತಾನಾಯಕ ಪ್ರಮುಖರು. ಅವರು 'ಲೂಟಿ', 'ಉಪಚಾರ', 'ಕೊಲೆ', 'ಹಬ್ಬ ಮತ್ತು ಬಲಿ', 'ತಾಯಿ ಸಕ್ಕೂಬಾಯಿ', ಮುಂತಾದ ಕಥೆಗಳನ್ನು ರಚಿಸಿದ್ದಾರೆ. ಅವರ ಹಬ್ಬ ಮತ್ತು ಬಲಿ ಕಥೆಯಲ್ಲಿ ಸಾಂಪ್ರಾದಾಯಿಕ ಮೂಢ ನಂಬಿಕೆಯ ಆಚರಣೆಯ ವಿರೋಧವನ್ನು ಕಾಣಬಹುದಾಗಿದೆ. ಇಲ್ಲಿ ಕಥೆಯ ವಸ್ತು ಗ್ರಾಮೀಣ ಜನರ ಬದುಕಾಗಿದೆ. ಈ ಕಥೆಯಲ್ಲಿ ಕಂಡು ಬರುವ ಮುಖ್ಯ ಅಂಶಗಳು ಹಬ್ಬ ಆಚರಣೆ ಮಾಡದಿದ್ದರೆ 'ಅಮ್ಮ' (ದೇವತೆ) ತಮ್ಮ ಮನೆತನವನ್ನು ನಾಶಮಾಡಿ, ಜನ ಜಾನುವಾರುಗಳಿಗೆ ಆಪತ್ತು, ಸಂಭವಿಸಬಹುದೆಂದು ಗ್ರಾಮೀಣ ಜನ ಸಾಲ ಮಾಡಿ ಅಮ್ಮ ನಿಗೆ ಪ್ರಾಣಿ ಬಲಿಕೊಟ್ಟು ಹಬ್ಬ ಆಚರಿಸುತ್ತಾರೆ. ನಂತರ ಸಾಲತೀರಿಸಲಾಗದೆ ಧಣಿಯ ಮನೆಯಲ್ಲಿ ಜೀತದಾಳಾಗಿ ದುಡಿಯಲಾರಂಭಿಸುವುದನ್ನು ಕಾಣಬಹುದು ಇದು ಈ ಕಥೆಯ ವಸ್ತುವಾಗಿದೆ. ಇಲ್ಲಿ ಗ್ರಾಮೀಣ ಜನರ ಮೌಢ್ಯತೆ, ಪ್ರಾಣಿ ಹಿಂಸೆಯನ್ನು ಕುರಿತು ಹೇಳಿದ್ದಾರೆ. ಅವರ 'ತಾಯಿ ಸಾಕೀಬಾಯಿ' ಕಥೆಯಲ್ಲಿ ಕೆಳಜಾತಿಯ ಹೆಣ್ಣಿನ ಶ್ರಮ ಜೀವನ ವ್ಯಕ್ತವಾಗಿದೆ. ಹೀಗೆ ಅವರ ಎಲ್ಲಾ ಕಥೆಗಳಲ್ಲಿ ಸಮುದಾಯದಲ್ಲಿ ಹೆಣ್ಣಿನ ಶೋಷಣೆಯನ್ನು ಕುರಿತು ಚಿಂತಿಸಲಾಗಿದೆ.

ಸಾರಾ ಅಬೂಬಕ್ಕರ್ (೧೯೩೬)

ಮುಸ್ಲಿಂ ಮಹಿಳೆಯರ ಒಳ ಜಗತ್ತನ್ನು ಪರಿಚಯಿಸಿದ ಪ್ರಥಮ ಲೇಖಕಿ ಸಾರಾ ಅಬೂಬಕರ್ ಅವರು 'ಚಪ್ಪಲಿಗಳು' (೧೯೮೫), 'ಪಯಣ ಮತ್ತು ಇತರ ಕಥೆಗಳು', 'ಅರ್ಧ ರಾತ್ರಿಯಲ್ಲಿ ಹುಟ್ಟಿದ ಕೂಸು' (೧೯೯೬), 'ಖೆಡ್ಡಾ' (೧೯೯೯) ಎಂಬ ಕಥಾ ಸಂಕಲನಗಳನ್ನು ರಚಿಸಿದರು. ಸಾರಾ ಅವರ ಕಥೆಗಳಲ್ಲಿ ಕಾಸರಗೋಡು ಪ್ರದೇಶದ ಬ್ಯಾರಿ ಸಮುದಾಯದ ಸಾಂಸ್ಕೃತಿಕ ಚಿತ್ರಣವಿದೆ. ಅವರ ಕಥೆಗಳು ಮುಸ್ಲಿಂ ಮಹಿಳೆಯ ಎದುರಸುವ ಸಮಸ್ಯೆಗಳಾದ ತಲಾಕ್ ಪದ್ಧತಿ, ಬಹುಪತ್ನಿತ್ವ, ಬಹುಸಂತಾನ, ಬುರ್ಖಾ ಪದ್ಧತಿಯ ಮೂಲಖ ಮುಸ್ಲಿಂ ಮಹಿಳೆಯ ಮೇಲೆ ಪುರುಷರು ನಡೆಸುವ ಶೋಷಯನ್ನು ಕುರಿತು ಚಿತ್ರಿಸಿದ್ದಾರೆ. ಮುಸ್ಲಿಂ ಹೆಣ್ಣಿಗೆ ವಿದ್ಯೆ ನಿಷಿದ್ಧ ಎನ್ನುವ ಸಾಮಾಜಿಕ ವ್ಯವಸ್ಥೆಯಲ್ಲಿ ಮುಸ್ಲಿಂ ಬಾಲೆ ದಿಟ್ಟತನದಿಂದ ವಿದ್ಯೆಕಲಿಯಲು ಮುಂದಾಗ ಎದುರಿಸುವ ಸಮಸ್ಯೆಗಳನ್ನು 'ಮುಸ್ಲಿಂ ಹುಡುಗಿ ಶಾಲೆ ಕಲಿತದ್ದು' ಕಥೆಯಲ್ಲಿ ಕಾಣಲಾಗಿದೆ.

ಅವರ 'ಚಪ್ಪಲಿಗಳು' ಕಥೆಯು ಮುಸ್ಲಿಂ ಸಮುದಾಯದಲ್ಲಿನ ಗಂಡ ಹೆಂಡತಿಯ ಸಂಬಂಧದ ಸೌಹಾರ್ದ, ಪ್ರೀತಿ, ಗೌರವಗಳಿಂದ ಕೂಡಿದ್ದು ಮತ್ತೊಂದೆಡೆ ಚಪ್ಪಲಿಗಳು ಹಳೆಯದಾದಂತ ಬೇರೆ ಬೇರೆ ಹೊಸ ಚಪ್ಪಲಿಗಳಿಗಾಗಿ ಆಸೆಪಡುವ ಪುರುಷ ವರ್ಗದ ಚಂಚಲತೆ, ಇಂತಹ ವ್ಯವಸ್ಥೆ, ನಂಬಿಕೆಯಡಿಯಲ್ಲಿ ಹುದುಗಿರುವ ಹೆಣ್ಣಿನ ಅಸಹಾಯಕತೆಯನ್ನು ಈ ಕಥೆಯು ಚಿತ್ರಿಸುತ್ತದೆ. ಅವರ 'ಪಯಣ' ಸಂಗ್ರಹದ 'ಅಂಕುರ' ಕಥೆಯು ಪುರಷ ಪ್ರಧಾನ ವ್ಯವಸ್ಥೆಯಲ್ಲಿ ಹೆಣ್ಣನ್ನು ಶಂಕಿಸುವ ಹಾಗೂ ಲೈಂಗಿಕ ನಿಂಯತ್ರಣದಡಿಯಲ್ಲಿಡುವ ಮೂಲಕ ಹೆಣ್ಣು ಅನುಭವಿಸುವ ಕೌಟುಂಬಿಕ ಹಿಂಸೆಯನ್ನು ಕುರಿತು ಹೇಳುತ್ತದೆ. ಅವರ ಪಯಣ ಕಥೆಯಲ್ಲಿ ಹೆಣ್ಣಿನ ಅಭದ್ರತೆ ಹಾಗೂ ಅತಂತ್ರ ಸ್ಥಿತಿಯ ದಟ್ಟ ಚಿತ್ರಣವಿದೆ. ಅವರ 'ಗಗನ ಸಖಿ' ಕಥೆಯಲ್ಲಿ ಗಂಡನ ಸಂಶಯ ಪ್ರವೃತ್ತಿಯಿಂದಾಗಿ ಹೆಂಡತಿಯೊಬ್ಬಳು ಅನುಭವಿಸುವ ಮಾನಸಿಕ ಚಿತ್ರಹಿಂಸೆ ಹಾಗೂ ಆಕೆ ಕಂಡುಕೊಂಡ ಪರಿಹಾರ ಈ ಕತೆಯ ವಸ್ತುವಾಗಿದೆ. ಅವರ ಮತ್ತೊಂದು ಕಥೆ 'ಧರ್ಮ ಬಲೆ ಬೀಸಿದಾಗ' ಈ ಕತೆಯ ನಾಯಕಿ ಖತೀಜಾ ಜಮಾತನ್ನೇ ತನ್ನ ಅಧೀನದಲ್ಲಿಟ್ಟುಕೊಂಡು ಇಬ್ರಾಹಿಮ್ ಹಾಜಿಯನ್ನು ಎದುರಿಸಿದ ಹೆಣ್ಣಿನ ಕ್ರಿಯಾಶೀಲ ವ್ಯಕ್ತಿತ್ವವನ್ನು ಕುರಿತು ಹೇಳುತ್ತದೆ. ಹೀಗೆ ಸಾರಾ ಅವರ ಎಲ್ಲಾ ಕಥೆಗಳು ಮುಸ್ಲಿಂ ಸಮುದಾಯದಲ್ಲಿನ ತಲಾಖ್, ಬಹುಪತ್ನಿತ್ವದಂಥ ಅಮಾನವೀಯ ಸಮಸ್ಯೆಗಳನ್ನು ಗಂಭೀರವಾಗಿ ಚಿಂತಿಸಿ, ಆ ಮೂಲಕ ಮಹಿಳೆಯರಿಗೆ ಇಂತಹ ಅನ್ಯಾಯ ಶೋಷಣೆ ವಿರುದ್ಧ ಪ್ರತಿಭಟಿಸುವ ಮನೋಭಾವನೆಯನ್ನು ಸ್ತ್ರೀಯರಲ್ಲಿ ಒಡಮೂಡಿಸಿದ್ದಾರೆ. ಸಾರಾ ಮುಸ್ಲಿಂ ಸ್ತ್ರೀಯರ ಅಭದ್ರವೈವಾಹಿಕ ಜೀವನ, ವಿಚ್ಛೇದನ ಸಮಸ್ಯೆ ಅನಕ್ಷರತೆ, ಧಾರ್ಮಿಕ ನಂಬಿಕೆಗಳಿಂದ ಶೋಷಣೆಗೆ ಒಳಗಾಗುವ ಮುಸ್ಲಿಂ ಹೆಣ್ಣಿನ ಚಿತ್ರಣವನ್ನು ಕಥೆಯಲ್ಲಿ ಮುಖ್ಯವಾಗಿಸಿದ್ದಾರೆ.

ಬಾನು ಮುಷ್ತಾಕ್

ಸಾರಾ ನಂತರ ಕಂಡು ಬರುವ ಮುಸ್ಲಿಂ ಲೇಖಕಿ 'ಬಾನು ಮುಷ್ತಾಕ್' ಅವರು 'ಹೆಜ್ಜೆ ಮೂಡಿದ ಹಾದಿ' (೧೯೯೦), 'ಬೆಂಕಿಮಳೆ' (೧೯೯೯) ಎಂಬ ಕಥಾ ಸಂಕಲನಗಳನ್ನು ರಚಿಸಿದರು. ಇವರ ಎಲ್ಲಾ ಕಥೆಗಳಲ್ಲಿ ಹೆಣ್ಣಿನ ಅಸಹಾಯಕತೆ ನೋವು, ಸಂಕಟಗಳಿಂದ ಕೂಡಿವೆ. ಇಲ್ಲಿ ಹೆಣ್ಣು ಪುರುಷ ಪ್ರಧಾನ ವ್ಯವಸ್ಥೆಯ ಸ್ವಾರ್ಥತನದಿಂದ ಶೋಷಣೆಗೆ ಒಳಗಾಗುವ ಹೆಣ್ಣಿಗೆ ಪ್ರತಿಭಟನೆಯ ಅವಕಾಶವಿಲ್ಲದೆ ನಾಶವಾಗುವ ಸ್ತ್ರೀ ಲೋಕದ ಸಂಕಟ, ಬಡತನ ಹತಾಶೆಗಳು, ಅಂತಿಮವಾಗಿ ತನ್ನ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವುದರ ಮೂಲಕ ಬಿಡುಗಡೆ ಹೊಂದುವುದನ್ನು ಕಾಣಬಹುದಾಗಿದೆ. ಅವರ 'ಬೆಂಕಿ ಮಳೆ' ಕಥೆಯು ಮುಸ್ಲಿಂ ಸಮುದಾಯದ ಆಚರಣೆ, ಸಂಪ್ರದಾಯದ, ಚೌಕಟ್ಟಿನಲ್ಲಿ ಹೆಣ್ಣು ಶೋಷಣೆಗೆ ಒಳಗಾಗುವ ಸ್ಥಿತಿಯನ್ನು ಕುರಿತು ಚಿಂತಿಸುತ್ತಾ ಆಮೂಲಕ ಹೆಣ್ಣು ಪ್ರಶ್ನಿಸುವ ಮನೋಭಾವನೆಯನ್ನು ಕಾಣಲಾಗಿದೆ ಅವರ 'ನಮ್ಮಾಳ ಗೊಬ್ಬ ಝುರೀನಾ' ದಂತಹ ಕಥೆಯು ಆಧುನಿಕ ವಿದ್ಯಾವಂತ ಮುಸ್ಲಿಂ ಹೆಣ್ಣಿನ ದಿಟ್ಟತನವನ್ನೇ ಜೀವಾಳವಾಗಿಸಿದ್ದಾರೆ.

ಹೊಸ ತಲೆಮಾರಿನ ಕಥೆಗಾರ್ತಿಯರು

ಈ ತಲೆಮಾರಿನ ಕಥೆಗಾರ್ತಿಯರು ಯಾವುದೇ ಚಳುವಳಿಯ ಪ್ರಭಾವಕ್ಕೆ ಒಳಗಾಗದೆ ತಮ್ಮದೇ ಆದ ತಾತ್ವಿಕ ನೆಲೆಯಲ್ಲಿ ಮಹಿಳೆಯ ಸಮಸ್ಯೆಗಳನ್ನು ಚಿಂತಿಸುತ್ತಾ, ಮಹಿಳೆಯನ್ನು ಕುರಿತು ಹೊಸ ಬಗೆಯ ಆಲೋಚನೆಯನ್ನು ಅವರ ಕಥಾ ಸಾಹಿತ್ಯದಲ್ಲಿ ಕಾಣಬಹುದಾಗಿದೆ. ಇತ್ತೀಚಿನ ಕಥೆಗಾರ್ತಿಯರು ಎಂದು ಗುರುತಿಸಬಹುದಾದ ಲೇಖಕಿಯರಲ್ಲಿ ನಾಗವೇಣಿ ಎಚ್, ಎಂ.ಎಸ್.ವೇದಾ, ಸುನಂದಾ ಪ್ರಕಾಶಕಡಮೆ, ಬಿ.ಟಿ.ಜಾಹ್ನವಿ, ಸಂಧ್ಯಾ ಹೊನಗುಂಟಿಕರ್, ವಿನಯಾ, ಸುಮಂಗಲಾ, ಕೋಡಿಬೆಟ್ಟು, ರಾಜಲಕ್ಷ್ಮಿ, ಶಾಂತಕುಮಾರಿ ಮುಂತಾದವರು ಭಿನ್ನ ಸಮುದಾಯದ ಬಿನ್ನ ವೃತ್ತಿ, ಭಿನ್ನ ಸಾಂಸ್ಕೃತಿಕ ನೆಲೆಯಿಂದ ಸಾಹಿತ್ಯ ಲೋಕವನ್ನು ಪ್ರವೇಶಿಸಿದರು ಮಹಿಳೆಯರ ಬದುಕು, ಭವಿಷ್ಯ ಸಮಕಾಲೀನ ಸಂದರ್ಭದೊಂದಿಗೆ ಚಿತ್ರಿಸುವ ಅವರ ಕಥಾ ಸಾಹಿತ್ಯ ಕನ್ನಡ ಕಥಾ ಸಾಹಿತ್ಯಕ್ಕೆ ಹೊಸ ಸೇರ್ಪಡೆಯಾಗಿದೆ.

ಎಚ್.ನಾಗವೇಣಿ

ಕರಾವಳಿಯ ಪ್ರಾದೇಶಿಕ ಹಿನ್ನೆಲೆಯಲ್ಲಿ ಬರೆಯುವ ಕಥೆಗಾರ್ತಿಯರಲ್ಲಿ ಎಚ್.ನಾಗವೇಣಿಯವರು ಪ್ರಮುಖರು, ಅವರು 'ನಾಕನೇ ನೀರು' (೧೯೯೭), 'ಮೀಯುವ ಆಟ' ಎಂಬ ಕಥಾ ಸಂಕಲನಗಳನ್ನು ರಚಿಸಿದ್ದಾರೆ. ಅವರು ಕಥೆಗಳಲ್ಲಿ ತುಳು ನಾಡಿನ ಸಂಸ್ಕೃತಿಯನ್ನು ಕಾಣಬಹುದಾಗಿದೆ. ಅವರ 'ನಾಕನೇ ನೀರು' ಕಥೆಯು ತುಳು ನಾಡಿನ ಹೆಣ್ಣಿನ ಮಡಿ ಮೈಲಿಗೆ ಸಂಪ್ರದಾಯಗಳನ್ನು ಕುರಿತು ಹೇಳುತ್ತದೆ. ಅವರ ಮತ್ತೊಂದು ಕಥಾ ಸಂಕಲನ 'ಮೀಯುವ ಆಟ' ಪ್ರಾದೇಶಿಕತೆ ಹಾಗೂ ನಂಬಿಕೆಗಳಿಂದ ವಿಶಿಷ್ಟವಾಗಿದೆ.

ಕಥೆಯ ನಾಯಕ ಮೂಡೂರನ ಹೆಂಡತಿ ಆತನ ಸ್ವಂತ ತಮ್ಮನಿಂದಲೇ ಬಸಿರಾದಳು ನಿಜಸ್ಥಿತಿ ಮುಡೂರನಿಗೆ ಗೊತ್ತಿದ್ದರೂ ಪ್ರಶ್ನಿಸುವ ಮನೋಧರ್ಮವಿರಲಿಲ್ಲ. ಇಲ್ಲಿ ಆತನ ಮಾನವೀಯತೆಯ ಗುಣವನ್ನು ಹಾಗೂ ಶ್ರಮಜೀವಿಗಳ ಬದುಕನ್ನು ಕುರಿತು ಹೇಳಿದ್ದಾರೆ. ಇಲ್ಲಿಯ ಪಾತ್ರಗಳು ಆತ್ಮಾಭಿಮಾನವನ್ನು ಕಾಪಾಡಿಕೊಳ್ಳಲು ತೀವ್ರವಾದ ಪ್ರತಿಭಟನೆಯ ವ್ಯಕ್ತಪಡಿಸುತ್ತಾರೆ. 'ದಾನ', 'ಬೆಳ್ಳಿಲೋಟ' ಕಥೆಯು ಇದಕ್ಕೆ ನಿದರ್ಶನವಾಗಿದೆ. ನಾಗವೇಣಿಯುವ ಬಹುಪಾಲು ಕಥೆಗಳು ತುಳುನಾಡಿನ ಕೆಳವರ್ಗದ ಜನರ ರೀತಿ ನೀತಿಗಳು, ಅನಕ್ಷರತೆ, ಮೂಢನಂಬಿಕೆಗಳು, ಮಡಿ, ಮೈಲಿಗೆ ಸಂಪ್ರದಾಯಗಳನ್ನು ಗುರುತಿಸಲಾಗಿದೆ.

ಎಂ.ಎಸ್.ವೇದಾ

ಕತೆಗಾರ್ತಿಯರಲ್ಲಿ ಎಂ.ಎಸ್.ವೇದಾ ಪ್ರಮುಖರು. ಅವರು ಕಥೆಗಳಲ್ಲಿ ಮೈಸೂರು ಸುತ್ತಲಿನ ಗ್ರಾಮೀಣ ಭಾಷೆಯನ್ನು ಪ್ರಮುಖವಾಗಿಸಿದ್ದಾರೆ. ಅವರು 'ಪ್ರೀತಿ ಮತ್ತು ಸಾವು', 'ಪಾಲು' ಎಂಬ ಎರಡು ಕಥಾ ಸಂಕಲನಗಳನ್ನು ರಚಿಸಿದ್ದಾರೆ ಇವರ 'ಕುಯ್ಯನೆಂಬ ಬಾಲಕನ ಕತ್ತಾಲ ಲೋಕವೋ' ಕಥೆ ಜಾತಿಪದ್ಧತಿಯ ಅಮಾನುಷ ಕ್ರೌರ್ಯವನ್ನು ಕಾಣಬಹುದು. ಹಾಗೂ 'ಪಾಲು' ಕಥೆಯಲ್ಲಿ ಹೆಣ್ಣಿನ

ಸ್ವಾಭಿಮಾನವನ್ನು ಎತ್ತಿಹಿಡಿಯುವ ಕಥೆಯಾಗಿದೆ ಹೀಗೆ ಅವರ ಕಥೆಯಲ್ಲಿ ಗ್ರಾಮೀಣ ಬದುಕಿನ ಚಿತ್ರಣ, ಜಾತಿಪದ್ಧತಿ, ಪರಿವಾರದ ಹುಡುಗನ ಕುರಿತ ಅನುಕಂಪ ಮುಖ್ಯವಾಗಿ ಕಾಣಲಾಗಿದೆ.

ಬಿ.ಟಿ. ಜಾಹ್ನವಿ

ಇತ್ತೀಚಿನ ಕಥೆಗಾರ್ತಿಯರಲ್ಲಿ ಜಾಹ್ನವಿ ಪ್ರಮುಖರಾಗಿದ್ದಾರೆ. ಅವರು **'ಕಳೆದುಕೊಂಡವಳು ಮತ್ತು ಇತರ ಕಥೆಗಳು'**, **'ಹುಡುಕಾಟ'** ಎಂಬ ಕಥಾ ಸಂಕಲನಗಳನ್ನು ರಚಿಸಿದ್ದಾರೆ. ಅವರ 'ವಿಮುಖ' ಕಥೆಯು ವೈವಾಹಿಕ ಸಂಬಂಧವನ್ನು ಪ್ರಮುಖ ವಸ್ತುವಾಗಿ ಬಳಸಲಾಗಿದೆ. ಹೀಗೆ ಅವರ ಕಥೆಗಳಲ್ಲಿ ದಲಿತ ಜೀವನ, ಗಂಡು ಹೆಣ್ಣಿನ ಸಂಬಂಧ ಸ್ತ್ರೀ ಸಮಸ್ಯೆಗಳು, ಸ್ತ್ರೀಯ ಶೋಷಣೆ ಇತ್ಯಾದಿ ವಿಚಾರಗಳ ಮೇಲೆ ಬೆಳಕು ಚೆಲ್ಲುತ್ತವೆ.

ಸುಮಂಗಲಾ

ಇತ್ತೀಚಿನ ಬರಹಾರಗಾರರಲ್ಲಿ ಸುಮಂಗಲಾ ಪ್ರಮುಖರು ಅವರು **'ಜುಮುರುಮಳೆ'**, **'ಕಾಲಿಟ್ಟಲ್ಲಿ ಕಾಲುದಾರಿ'**, **'ಸೀತಾಳ ಹೂ ಮತ್ತು ಇತರ ಕಥೆಗಳು'** ಎಂಬ ಮೂರು ಕಥಾ ಸಂಕಲನಗಳನ್ನು ರಚಿಸಿದ್ದಾರೆ. ಅವರ ಕಥೆಗಳಲ್ಲಿ ಕೆಳ ಮಧ್ಯಮ ವರ್ಗದ ಜೀವನದ ಚಿತ್ರಣವನ್ನು ಕಾಣಬಹುದಾಗಿ. ಸಮಕಾಲೀನ ಸಮಾಜದ ಹೆಣ್ಣಿನ ಸಮಸ್ಯೆಗಳು, ಬಾಲಕಾರ್ಮಿಕ ಪದ್ಧತಿ, ಪುರುಷರ ಸ್ವಾರ್ಥತೆ, ವಿವಾಹವಾಗದ ಹೆಣ್ಣಿನ ಸಮಸ್ಯೆಗಳು ಅವರ ಕಥೆಯ ವಸ್ತುವಾಗಿದೆ.

ಸುನಂದಾ ಪ್ರಕಾಶ ಕಡಿಮೆ

ಪ್ರಮುಖ ಕಥೆಗಾರ್ತಿಯರಲ್ಲಿ ಸುನಂದಾ ಪ್ರಮುಖರು. ಅವರು ಮೂಲತಃ ಉತ್ತರ ಕನ್ನಡ ಜಿಲ್ಲೆಯರಾಗಿದ್ದು ಕಥೆಗಳಲ್ಲಿ ಅದರ ಪ್ರಭಾವವನ್ನು ಬೀರಿದ್ದಾರೆ. ಅವರು **'ಪುಟ್ಟಪಾದದ ಗುರುತು'**, **'ಗಾಂಧೀಚಿತ್ರದ ನೋಟು'**, **'ಪಿಸುಗುಡುವ ಪೆಟ್ಟಸಾಲು'**, ಇತ್ಯಾದಿ ಕಥಾ ಸಂಕಲನಗಳನ್ನು ರಚಿಸಿದ್ದಾರೆ. ಸುನಂದ ಅವರ ಕಿಚನ ಪ್ಯಾರಡೈಸ್, ಮಗ ಚಿತ್ರ ಬರೆಯಿತು ಕಥೆಯು ಮಹಾತ್ವಾಕಾಂಕ್ಷೆಯಿಲ್ಲದ, ಭಾವನೆಗಳಿಲ್ಲದ ಯಾಂತ್ರಿಕ ಜೀವನ ನಡೆಸುತ್ತಿರುವ ಮಧ್ಯಮ ವರ್ಗದ ಜೀವನವನ್ನು ಕಾಣುತ್ತೇವೆ.

ವಿನಯಾ

ಮತ್ತೊಬ್ಬ ಕಥೆಗಾರ್ತಿಯಾದ ವಿನಯಾ ಅವರು **'ಊರೊಳಗಣ ಬಯಲು'** ಕಥೆಯಲ್ಲಿ ಕೋಮು ಸಾಮರಸ್ಯದಂತಹ ವಸ್ತುವನ್ನು ಕಾಣಬಹುದಾಗಿದೆ. ನಂತರ ಬಂದ ಸಂಧ್ಯಾ ಹೊನೆಗುಂಟಿಕರ, ಶಾಂತಕುಮಾರಿ, ರಾಜಲಕ್ಷ್ಮಿ, ಮುಂತಾದ ಕಥೆಗಾರ್ತಿಯರು ತಮ್ಮದೇ ತಾತ್ವಿಕ ನೆಲೆಯಲ್ಲಿ ಹೆಣ್ಣಿನ ಅಂತರಂಗದ ತುಮುಲಗಳನ್ನು ಕಥಾ ಸಾಹಿತ್ಯದಲ್ಲಿ ಚಿತ್ರಿಸಿದ್ದಾರೆ

ಒಟ್ಟಾರೆ ಈ ಹೊಸ ತಲೆಮಾರಿನ ಲೇಖಕಿಯರು ತಮ್ಮದೇ ಆದ ಅಭಿವ್ಯಕ್ತಿಯಲ್ಲಿ ಇಂದಿನ ಉದ್ಯೋಗಸ್ಥ ಮಹಿಳೆಯರ ಸಮಸ್ಯೆಗಳು ಸಾಮಾಜಿಕ ಸಮಸ್ಯೆಗಳ ಬಗ್ಗೆ ಚಿಂತಿಸಿ ಮಹಿಳೆಯರಿಗೆ ಜಾಗೃತಿಯನ್ನು ಮೂಡಿಸುವಲ್ಲಿ ಪ್ರಯತ್ನಿಸಲಾಗಿದೆ.

ಹೀಗೆ ಇಪ್ಪತ್ತನೆಯ ಶತಮಾನದಲ್ಲಿ ಮುಖ್ಯ ಸಾಹಿತ್ಯವಾಗಿ ಮಹಿಳಾ ಕಥಾ ಸಾಹಿತ್ಯ ಪ್ರಾರಂಭವಾಯಿತು. ಈ ಸಂದರ್ಭದಲ್ಲಿ ನವೋದಯ, ಪ್ರಗತಿಶೀಲ, ನವ್ಯ, ದಲಿತ ಬಂಡಾಯ ಲೇಖಕಿಯರು ತಮ್ಮದೇ ಆದ ತಾತ್ವಿಕ ನೆಲೆಯಲ್ಲಿ ಮಹಿಳೆಯರ ಸಮಸ್ಯೆಗಳನ್ನು ಗುರುತಿಸಿ ಜಾಗೃತಿ ಮೂಡಿಸಲಾಯಿತು. ಇಂದಿನ ಹೊಸ ತಲೆಮಾರಿನ ಲೇಖಕಿಯು ಸಹ ತಮ್ಮದೇ ಆದ ಅಭಿವ್ಯಕ್ತಿಯಲ್ಲಿ ಆಧುನಿಕ ಉದ್ಯೋಗಸ್ಥ ಮಹಿಳೆಯ ವಿವಿಧ ಸಮಸ್ಯೆಗಳು ಕುರಿತು ಚಿಂತಿಸಿದ್ದಾರೆ. ಅವರ ಕಥೆಗಳಲ್ಲಿ ಹೊಸ ಬಗೆಯ ಆಲೋಚನೆಯನ್ನು ಗುರುತಿಸಲಾಗಿದೆ. ಒಟ್ಟಾರೆ ಲೇಖಕಿಯರ ದೃಷ್ಟಿಕೋನಗಳು ಕಾಲದಿಂದ ಕಾಲಕ್ಕೆ ಭಿನ್ನವಾಗಿದೆ ಎಂಬುದು ಈ ಸಮೀಕ್ಷೆಯಲ್ಲಿ ತಿಳಿಸಲಾಗಿದೆ.

ಹೀಗೆ ನವೋದಯ ಕಥೆಗಾರ್ತಿಯರಿಂದ ಇತ್ತೀಚಿನ ಕತೆಗಾರ್ತಿಯರವರೆಗೂ ಬದಲಾದ ವಿವಿಧ ದೃಷ್ಟಿ ಧೋರಣೆಗಳನ್ನು ಈ ಸಮೀಕ್ಷೆಯಲ್ಲಿ ಗುರುತಿಸಲಾಗಿದೆ.

ಅಧ್ಯಾಯ - ನಾಲ್ಕು

ಕಥಾ ಸಾಹಿತ್ಯದ ವಸ್ತು - ದೋರಣೆಯ ಅಂತರ ಸಂಬಂಧ

ಅಧ್ಯಾಯ - ನಾಲ್ಕು

ಕಥಾ ಸಾಹಿತ್ಯದ ವಸ್ತು - ದೋರಣೆಯ ಅಂತರ ಸಂಬಂಧ

ಸಾಹಿತ್ಯ ಪ್ರಕಾರಗಳಲ್ಲಿ ಸಣ್ಣಕಥೆಯು ಒಂದು ವಿಶಿಷ್ಟ ಪ್ರಕಾರವಾಗಿದ್ದು ಈ ಕಥೆಗಳು ರಚನೆಗೊಳ್ಳಲು ಕಥಾವಸ್ತು ಪ್ರಮುಖ ಪಾತ್ರವಹಿಸುತ್ತದೆ. ಕಥಾ ವಸ್ತು ಕಥೆಯ ಮುಖ್ಯ ಘಟನೆಯನ್ನು ಒಳಗೊಂಡಿದ್ದು, ಈ ಕಥಾ ವಸ್ತುವಿಗೆ ಪ್ರಸಂಗ, ಸನ್ನಿವೇಶ, ಪಾತ್ರ ರಚನೆ, ಸಂಭಾಷಣೆ, ವರ್ಣನೆ ಮಹತ್ವದ ಅಂಶಗಳಾಗಿವೆ. ಕಥೆ ನಿರ್ಮಾಣವಾಗಲು ಈ ಅಂಶಗಳು ಪ್ರಧಾನ ಪಾತ್ರವಹಿಸುತ್ತದೆ. ಈ ಹಿನ್ನಲೆಯಲ್ಲಿ ಸಮಕಾಲೀನ ಮಹಿಳೆಯರ ಸಮಸ್ಯೆಗಳನ್ನು ಕುರಿತು ಕಥೆಗಾರ್ತಿಯರ ವಸ್ತು ಧೋರಣೆಯನ್ನು ಈ ಅಧ್ಯಯನದಲ್ಲಿ ಗುರುತಿಸಲಾಗಿದೆ.

ವಿನಯಾ ಕಥೆಗಳು

ಕನ್ನಡ ಕಥಾ ಸಾಹಿತ್ಯಕ್ಕೆ ವಿಶಿಷ್ಟ ಕೊಡುಗೆಯನ್ನು ನೀಡಿದವರಲ್ಲಿ ಇತ್ತೀಚಿನ ಬರಹಗಾರ್ತಿಯಾದ ಡಾ.ವಿನಯಾ ಅವರು ಪ್ರಮುಖರು. ಇವರು ಕೇವಲ ಒಂದು ಕಥಾ ಸಂಕಲವನ್ನು ರಚಿಸಿದ್ದರೂ ನಮ್ಮೆಲ್ಲರ ಅನುಭವದ ಮಾತಾಗಿರುವಂತೆ, ನುರಿತ ಬೆರಳುಗಳಲ್ಲಿ ಕಸೂತಿ ಹಾಕಿದಂತೆ ಕಥೆಯನ್ನು ಹೆಣೆದಿದ್ದಾರೆ. ಇವರು ರಚಿಸಿದ ಕಥಾ ಸಂಕಲನದಲ್ಲಿ 'ಊರ ಒಳಗಣ ಬಯಲು' ಪ್ರಮುಖವಾಗಿದ್ದು 'ಅರೆ ಇದು ನಾನು ಬರೆಯಬೇಕಿದ್ದ ಕತೆ' ಎನಿಸುವಂತ ನಮ್ಮೊಳಗಿನ ಮಾತುಗಳನ್ನು ಕಥೆಯಾಗಿಸಿದ್ದಾರೆ. ಈ ಕಥಾ ಸಂಕಲನದಲ್ಲಿ ಒಟ್ಟು ೧೧ ಕಥೆಗಳಿದ್ದು ಸ್ತ್ರೀಯರನ್ನು ಕುರಿತು ಆ ಮೂಲಕ ಮಾನವೀಯ ಸಂಬಂಧಗಳು, ಮಾನವೀಯ ಮೌಲ್ಯಗಳನ್ನೊಳಗೊಂಡ, ಪುರುಷ ದ್ವೇಷವಿಲ್ಲದ ಬದುಕು ಪ್ರೀತಿಯನ್ನು ಹುಟ್ಟಿಸುವಂತಹ ಕಥೆಗಳಾಗಿವೆ. ಈ ಹಿನ್ನಲೆಯಲ್ಲಿ ಕಥೆಗಾರ್ತಿಯ ಕಥೆಗಳನ್ನು ವಸ್ತು ದೋರಣೆಯ ದೃಷ್ಟಿಯಿಂದ ಈ ಅಧ್ಯಯನದಲ್ಲಿ ಗುರುತಿಸಲಾಗಿದೆ.

ಈ ಕಥಾ ಸಂಕಲನದ ಮೊದಲ ಕಥೆಯಾದ **'ಒಂದು ಖಾಸಗಿ ಪತ್ರ'** ಇದರ ಹೆಸರೇ ಸೂಚಿಸುವಂತೆ ಪತ್ರದ ಮಾದರಿಯಲ್ಲಿ ಕಥೆಯನ್ನು ನಿರೂಪಿಸಲಾಗಿದೆ. ಈ ಪತ್ರದಲ್ಲಿ ಪತ್ರ ಬರೆಯುವ ಪಪ್ಪಿಯ

ಸಂಕಷ್ಟಗಳು ಓದುಗನಿಗೆ ತಿಳಿಯುತ್ತವೆ. ಈ ಪಪ್ಪಿ ಬಾಲ್ಯದಲ್ಲಿ ತನ್ನನ್ನು ಪ್ರೀತಿಸಿದ ಆದರೆ ತಾನು ದಕ್ಕದೆ ಇರುವ ಸಂದರ್ಭದಲ್ಲಿ ಪ್ರೀತಿಸುವ ವ್ಯಕ್ತಿ ನಡೆದುಕೊಳ್ಳುವ ರೀತಿಯಿಂದ ಪಪ್ಪಿಗೆ ಅನೇಕ ಸಂದರ್ಭದಲ್ಲಿ ಮುಜುಗರ ಅವಮಾನ, ಅಪಮಾನ ಅನುಭವಿಸುತ್ತಾಳೆ. ಅವನ ಎಲ್ಲಾ ರೀತಿಯ ನಡವಳಿಕೆಗಳು ಪಪ್ಪಿ ಒಂದು ಹೆಣ್ಣಾಗಿ ಗಾಸಿಗೊಳಿಸುತ್ತಲೇ ಹೋಗುತ್ತಾಳೆ. ಬಾಲ್ಯದ ಈ ಸಂದರ್ಭಗಳು ಮುಗಿದು ಹಲವು ವರ್ಷಗಳ ನಂತರ ಪ್ರೀತಿಸುವ ನೆಪದಲ್ಲಿ ದಕ್ಕದೆ ಹೋದಾಗ ಅವನು ಘಾಸಿಗೊಳಿಸುವ ಅದರಿಂದ ತನಗಾದ ನೌವನ್ನು ದೀರ್ಘಕಾಲದ ಮೇಲೆ ಹೇಳಿಕೊಳ್ಳುವುದರಿಂದ ಒಂದು ಬಗೆಯ ನಿರ್ಲಿಪ್ತತೆ ತಣ್ಣನೆಯ ವಿರೋಧ ಈ ಕಥೆಯಲ್ಲಿ ವ್ಯಕ್ತವಾಗಿದೆ. ಹೆಣ್ಣಿನ ನವತಾರುಣ್ಯದಲ್ಲಿ ಈ ಪ್ರೇಮ ಮತ್ತು ಪ್ರೀತಿ ಎನ್ನುವ ಸಂಗತಿಗಳು ಆಕರ್ಷಣೆಯಿಂದ ಕೂಡಿದ್ದರೂ ಅವು ಲಯ ತಪ್ಪಿದಾಗ ಆಗುವ ತೊಡಕುಗಳು, ಸಂಕಷ್ಟಗಳು ಈ ಕಥೆಯಲ್ಲಿ ಮನಮುಟ್ಟುವಂತೆ ವ್ಯಕ್ತವಾಗಿದೆ.

ಮತ್ತೊಂದು ಕಥೆಯಾದ 'ಊರ ಒಳಗಣ ಬಯಲು', ಈ ಕಥೆಯು ಮೇಲ ನೋಟಕ್ಕೆ ಅಂತರ ಜಾತಿ ವಿವಾಹದ ಸರಳ ಕತೆಯೆಂದು ಕಂಡುಬಂದರು ಅದರ ಒಡಲಾಳದಲ್ಲಿ ಕೋಮು ದ್ವೇಷ, ಮಾನವೀಯ ಸಂಬಂಧಗಳ ತುಡಿತ ಕಂಡು ಬರುತ್ತದೆ. ಈ ಕಥೆಯ ನಾಯಕ ಸುಧಾಕರ ಹೆತ್ತವರ ವಿರೋಧದಲ್ಲಿ ಅಂತರ ಜಾತಿ ವಿವಾಹವಾಗಿದ್ದು ಹಲವು ವರ್ಷಗಳ ನಂತರ 'ಹುಟ್ಟಿದ ಮಗನ ನೆತ್ತಿಯ ಮೇಲೆ ತಾಯಿಯ ಪ್ರಸಾದ ಬೀಳಲಿ' (ಪು.ಸ.೧೦) ಎಂದು ಹುಟ್ಟಿದೂರಿಗೆ ಬಂದಿದ್ದಾನೆ. ಹೀಗೆ ಹೋದ ಗಂಡನ ಬಗ್ಗೆ ರೀಟಾ ಕಳವಳಗೊಳ್ಳುತ್ತಾ ಸುಧಾಕರ ತನ್ನ ಅಪ್ಪನ ಬಳಿ ಜಗಳ ಕಾದಾನೇ? (ಪು.ಸ.೧೧) ಎಂದು ಭಯಗೊಳ್ಳುತ್ತಾ ಕಥೆ ನಿರೂಪಣೆಗೊಳ್ಳುತ್ತದೆ. ಹೀಗೆ ಹೋದ ಸುಧಾಕರ ಸ್ನೇಹಿತನಾದ ಪೂಜಾರಿ ನಾಗೇಶ ಗುನಗನ ಭೇಟಿಯೊಂದಿಗೆ ತನ್ನ ಯೌವನದ ದಿನಗಳಲ್ಲಿ ಮಾಡಿದ ಪಾಪ ಕೃತ್ಯಗಳಿಗೆ ಮರುಗುತ್ತಿದ್ದಾನೆ. ಭಟ್ಕಳದಲ್ಲಿ ನಡೆದ ಕೋಮುಗಲಭೆಯಲ್ಲಿ ತನ್ನೂರಿನ ಸ್ನೇಹಿತರ ಸಹವಾಸಹದಿಂದ ಮಾಪಳರ ಕೇರಿಯ ಮೇಲೆ ಹಲ್ಲೆ ನಡೆಸಿ ಮದೀನಾಳ ಮುಡಿಗೆ ಕೈಹಾಕಿದಾಗ 'ಛೋಡ್ ದೋ ಭಯ್ಯಾ' ಎಂಬ ಆಕೆಯ ಕೂಗು ಈ ಕೃತ್ಯದಿಂದ ವಿಮುಖ ನಾಗುತ್ತಾನಾದರೂ ಪಾಪ ಪ್ರಜ್ಞೆಯಿಂದ ಬಿಡುಗಡೆ ಹೊಂದಲಿಲ್ಲ. ಆದರೇ ಬಸ್ಸಲ್ಲಿ ಕುಳಿತ ಬುರ್ಖಾ ಹೆಂಗಸು 'ಭಯ್ಯಾ ಈ ಕೂಸು ಸ್ವಲ್ಪ ಹಿಡಿ' ಎಂದಾಗ 'ದೇವರೇ ಇವಳು ಮದೀನಾ ಆಗಿರಲಿ ಇವಳಿಂದ ಭಯ್ಯಾ ಅನ್ನಿಸಿಕೊಂಡು ನನ್ನ ಪಾಪ ಇಂದಿಗೆ ಸಂದು ಹೋಗಲೀ' (ಪು.ಸ.೧೭) ಎಂದು ಸುಧಾಕರನ ಮನಸ್ಸು ಪರಿತಪಿಸುತ್ತದೆ ಇದು ಒಬ್ಬ ವ್ಯಕ್ತಿಯ ವ್ಯಕ್ತಿತ್ವದಲ್ಲಾದ ಬದಲಾವಣೆಯನ್ನು ದಾಖಲಿಸುತ್ತದೆ. ಈ ತಿಳುವಳಿಕೆಯೊಂದಿಗೆ ದೋಣಿ ನಾರಾಯಣನ ಮಾತುಗಳು ಇದುವರೆಗೂ ಇದ್ದ ಹೆತ್ತವರ ಕೋಪ ಕಳೆದು ಸುಧಾಕರ ತನ್ನವರೊಂದಿಗೆ ಸೇರುವುದರ ಮೂಲಕ ಕೌಟುಂಬಿಕ ಸಾಮರಸ್ಯವನ್ನು ಕಾಣಬಹುದಾಗಿದೆ. ಹೀಗೆ ಇಲ್ಲಿನ ಕಥೆ ಪಾಪ ಕೃತ್ಯಗಳಿಗೆ ಪರಿಹಾರ ಸೂಚಿಸುವುದರ ಮೂಲಕ ಬದುಕು ಪ್ರೀತಿಯನ್ನು ತರುವಂತಹ ಮಾನವೀಯ ಮೌಲ್ಯಗಳನ್ನೊಳಗೊಂಡ ಕಥೆಯಾಗಿ ನಮ್ಮೆಲ್ಲರ ಮನಮುಟ್ಟುತ್ತದೆ.

'ಕಡೀತನಕಾ ಕಾಯೋ ಅಭಿಮಾನ' ಕಥೆಯು ಗ್ರಾಮೀಣ ಹಾಗೂ ನಗರ ಜೀವನವನ್ನು ಮುಖಾಮುಖಿಯಾಗಿಸುವ ಸಂಕೀರ್ಣ ಕಥೆಯಾಗಿದೆ. ಈ ಕಥೆಯಲ್ಲಿನ ದಿಟ ಮಹಿಳೆಯಾಗಿ ಬರುವ ಗಂಗಕ್ಕ ಬಾಲ್ಯದಲ್ಲಿ ಹೆತ್ತವರನ್ನು, ಯೌವನದಲ್ಲಿ ಗಂಡನನ್ನು ಕಳೆದುಕೊಂಡರೂ ಬದುಕುವ ಛಲವನ್ನು ಬಿಡದೆ ಮಗಳಾದ ಕರಿಯಮ್ಮನನ್ನು ವಿದ್ಯಾವಂತೆಯನ್ನಾಗಿ ಮಾಡಿ ದಿಟ್ಟ ಮಹಿಳೆಯಾಗಿ ಕಂಡು ಬರುತ್ತಾಳೆ. ಹಳ್ಳಿ ಗಾಡಿನ ಗಾಢ ಸಂಬಂಧಗಳೊಳಗೆ ಬೆಳೆದ ಕರಿಯಮ್ಮ ಪಟ್ಟಣದ ಯುವಕನೊಂದಿಗೆ ವಿವಾಹದಿಂದ ಕರಿಷ್ಮಾ ಆಗಿ ಪರಿವರ್ತನೆಯಾಗುತ್ತಾಳೆ. ಈ ನಗರ ಜೀವನದಲ್ಲಿ ಗಂಡ, ಮಗನ ತಿರಸ್ಕಾರದಿಂದ ಒಂಟಿತನವನ್ನು ಅನುಭವಿಸುತ್ತಾಳೆ. ತನ್ನ ಕುಟುಂಬದ ಎಲ್ಲಾ ನೋವುಗಳನ್ನು ಸಹಿಸುವ ಕ್ಷಮೆಯಾಧರಿತ್ರಿಯಾಗಿ ಕಂಡು ಬರುತ್ತಾಳೆ. ಈ ಎಲ್ಲಾ ನೋವುಗಳಿಂದ ಹೊರಬರಲು ತನ್ನನ್ನು ಸದಾ ಚಟುವಟಿಕೆಯಿಂದಿರಿಸಲು ನಾಲ್ಕು ವಿದ್ಯಾರ್ಥಿಗಳಿಗೆ ಪಾಠ ಹೇಳುವುದರ ಮೂಲಕ ತನ್ನ ವ್ಯಕ್ತಿತ್ವವನ್ನು ಕಾಯ್ದುಕೊಳ್ಳುತ್ತಾಳೆ. ಆದರೆ ವಿದ್ಯಾರ್ಥಿಗಳೊಂದಿಗೆ ಅನೈತಿಕ ಸಂಬಂಧ ಕಲ್ಪಿಸಿದ ಗಂಡನ ಸಂಶಯ, ಅನುಮಾನ, ಅಪಮಾನಗಳನ್ನು ಸಹಿಸದೆ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಇಂತಹ ವ್ಯಕ್ತಿತ್ವವುಳ್ಳ ಕರಿಯಮ್ಮನ ಸಾವಿಗೆ ಮರುಗುವ ಹಳ್ಳಿಗಾಡಿನ ಯಾವುದೇ ಸಂಬಂಧವಿಲ್ಲದ ಜನರ ರೋಧನ ಕಂಡು 'ನಿಂತವರೆಲ್ಲ ಏನಾಗಬೇಕಾವಳಿಗೆ? ಎಲ್ಲ ಸಂಬಂಧಗಳಿಗೂ ಹೆಸರು ಕೊಡಲು ಹೋದೇನೆ ನಾನು? ಹೆಸರಿಲ್ಲದ ಸಂಬಂಧಗಳಲ್ಲೆ ಅಲ್ಲವೆ ಬದುಕು ಕಳೆಗಟ್ಟೋದು? (ಪು.ಸ.೧೧) ಎಂಬ ಪಾಪ ಪ್ರಜ್ಞೆ ಆತನಲ್ಲಿ ಕಂಡು ಬಂದು ಮಾನವೀಯ ಸಂಬಂಧ, ಮೌನವೀಯ ಮೌಲ್ಯಗಳು ವ್ಯಕ್ತವಾಗಿದೆ.

'ನೋಯದವರೆತ್ತ ಬಲ್ಲರೂ' ಹಾಗೂ 'ಸ್ವಯ' ಕಥೆಯು ಹೆಣ್ಣಿನ ದುರಂತತೆಯನ್ನು ಕಾಣಬಹುದು. ಇಲ್ಲಿಯೂ ಸಹ ಹೆಣ್ಣು ಅಪಮಾನ, ಅವಮಾನಗಳನ್ನು ಅನುಭವಿಸುತ್ತಾಳೆ ಕಥೆಯ ನಾಯಕಿಯ ದುರಂತ ಕಥೆಯನ್ನು ವಸ್ತು ಪಾತ್ರದ ಮೂಲಕ ಅಭಿವ್ಯಕ್ತಗೊಳ್ಳುತ್ತದೆ. ತನ್ನ ಕುಟುಂಬಕ್ಕಾಗಿ ದುಡಿದು ಜೀವನವನ್ನು ಸವೆಸಿದ ಅಂಜನಕ್ಕ ಆಸ್ತಿಯ ವಿಚಾರವಾಗಿ ಹೆತ್ತವರ ತಾರತಮ್ಯ, ಪ್ರಿಯಕರನ ಮೋಸ, ಅಪಮಾನ, ಅವಮಾನಗಳನ್ನು ಸಹಿಸದೆ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಹೀಗೆ ಹೆಣ್ಣು ಪ್ರತಿಯೊಂದು ಹಂತದಲ್ಲೂ ಸಂಕಷ್ಟಗಳನ್ನು ಎದುರಿಸುವುದನ್ನು ಕಾಣಬಹುದಾಗಿದೆ. ಈ ಮೂಲಕ ಎಲ್ಲಾ ಕಷ್ಟಗಳನ್ನು, ತಮ್ಮ ಬಯಕೆ ಬೇಕು ಬೇಡಗಳನ್ನು ತನ್ನೆಲ್ಲಾ ಅಗತ್ಯಗಳನ್ನು ಪೂರೈಸಿಕೊಳ್ಳಲು ಹೆಣ್ಣು ಬೇಕು? ಆದರೆ ಅಧಿಕಾರದ ವಿಷಯದಲ್ಲಿ ಸಮಾನತೆ ಕಾಣಿಸಲು ಆಗದ ಪುರುಷರ ಸ್ವಾರ್ಥತತೆಯನ್ನು ಹೆಣ್ಣಿನ ಮನಸ್ಸಿನ ಅಂತರಾಳವನ್ನು ತೆರೆದಿಡುವ ಕಥೆಯಾಗಿ ಮನಮುಟ್ಟುತ್ತದೆ. ಇದೇ ಕಥೆಯ ವಸ್ತುವನ್ನು ಒಳಗೊಂಡ ಆದರೆ ತನ್ನನ್ನು ತಾನು ಅಂತ್ಯಗೊಳಿಸದೆ ದಿಟ್ಟತನದಿಂದ ಬದುಕಿದ ದಿಟ್ಟತನದ ಹೆಣ್ಣಿನ ಚಿತ್ರಣವನ್ನು 'ಸ್ವಯ' ಕಥೆಯಲ್ಲಿ ಕಾಣಬಹುದಾಗಿದೆ. ಈ ಕಥೆಯಲ್ಲಿ ಗಂಡ ಹೆಂಡಿರ ಸಂಬಂಧ ತಮ್ಮ ತಮ್ಮಲ್ಲಿರುವ ಬಿಗುಮಾನ, ತಪ್ಪು ನಡವಳಿಕೆಯಿಂದ ದೂರವಾದಾಗ ಅಪಘಾತವೊಂದು ಅವರಿಬ್ಬರನ್ನು ಒಂದಾಗಿಸುವ ತಾವು ಮಾಡಿದ ತಪ್ಪುಗಳನ್ನು ಸ್ವವಿಮರ್ಶಿಸುವುದರ ಮೂಲಕ ಪ್ರೀತಿಯ ನಿಜ ಸ್ವರೂಪವನ್ನು ದರ್ಶನ

ಮಾಡಿಸುವ ಕಥೆಯಾಗಿದೆ. ಇಲ್ಲಿ ವಿಷಮ ದಾಂಪತ್ಯಕ್ಕೆ ಗಂಡಿನ ಅನೈತಿಕ ಸಂಬಂಧಗಳು, ಬಿಗುಮಾನಗಳು ಪ್ರಮುಖ ಕಾರಣವಾಗಿವೆ ಎಂಬುದನ್ನು ಕಾಣಬಹುದಾಗಿದೆ. 'ಕ್ಷಮೆಯಿರಲಿ ಕಂದಾ' ಕಥೆಯಲ್ಲಿ ಕಾಲೇಜಿನ ವಿದ್ಯಾರ್ಥಿಗಳಲ್ಲಿ ಜಾತೀಯತೆಯ ವಿಷಬೀಜವನ್ನು ಬಿತ್ತುವಲ್ಲಿ ಹಿಂದೂ ಸಂಘಟನೆಯ ಕಾರ್ಯಕರ್ತರು, ರಾಜಕಾರಣದ ಪ್ರಮುಖ ಪಾತ್ರವನ್ನು ಚಿತ್ರಿಸುವ ಸಂಕೀರ್ಣ ಕಥೆಯಾಗಿದೆ. ಈ ಕಥೆಯಲ್ಲಿ ತಮ್ಮ ಮತೀಯ ಹಿನ್ನೆಲೆಗಳನ್ನು ಮರೆತು ಆಪ್ತಸ್ನೇಹಿತರಾಗಿದ್ದ ಅಮಜದ್ ವಿಶ್ವಾಸರನ್ನು ಊರಿನ ಮತೀಯ ಸಂಘಟನೆಯ ಕಾರಣದಿಂದ ದೂರವಾಗಬೇಕಿದ್ದ ಸಂದರ್ಭವನ್ನು ಆ ಕಾಲೇಜಿನ ಅಧ್ಯಾಪಕೀಯ ಅನುಭವಗಳ ಮುಖಾಂತರ ಕಥೆ ನಿರೂಪಣೆಗೊಳ್ಳುತ್ತದೆ. ಇಲ್ಲಿ ವಿದ್ಯಾರ್ಥಿಗಳು ಏರ್ಪಡಿಸಿದ 'ಸುರಕುಂಭ' ಸಮಾರಂಭ, ನೀತಾ ಹಮೀದರ ಸ್ನೇಹದ ಮಾತುಕತೆ, ಅಮ್ಜದ್ ಪಾರ್ವತಿ ಪಾಟೀಲರ ಪ್ರೇಮ ಪ್ರಸಂಗ ಯಾವುದೂ ತಪ್ಪಲ್ಲ ಎಂದುಹೇಳುವ, ವಿದ್ಯಾರ್ಥಿಗಳಿಗೆ ಇಂತಹ ಅನ್ಯಾಯದ ವಿರುದ್ಧ ಪ್ರತಿಭಟಿಸುವ ಪ್ರೋತ್ಸಾಹವನ್ನು ನೀಡುವಲ್ಲಿ ಅದ್ಯಾಪಕಿ ವಿಫಲವಾಗುತ್ತಾಳೆ ಕಾರಣ ಮೇಲೆ ಅಧಿಕಾರಿಗಳ ಬೆದರಿಕೆ ಅಪಮಾನ ಅವಮಾನಗಳಿಂದ ಹೆದರಿ ಈ ಸಮಸ್ಯೆಗಳಿಂದ ಮುಕ್ತವಾಗಲು ವಿದ್ಯಾರ್ಥಿಗಳನ್ನು ದೂರಗೊಳಿಸುತ್ತಾರೆ. ಆದರೆ ತನ್ನ ಈ ಕಾರ್ಯದಿಂದ ಅಸಹ್ಯವೆನಿಸಿ ತನ್ನ ತಪ್ಪೇನು ಮಿಸ? (ಪು.೬೦) ಎಂದು ಕೇಳಿದ ವಿಶ್ವಾಸನ ಮಾತುಗಳು ಮೆಲುಕು ಹಾಕುತ್ತಾ "ಇಲ್ಲ ಕಂದ ನಿನ್ನ ತಪ್ಪೇನು ಇಲ್ಲ ಚೆನ್ನಾಗಿರು ಧೈರ್ಯವಾಗಿರು, ಬಿರುಸು ನೆಲದ ಮರವಾಗು ಅಮ್ಜದನ ಸ್ನೇಹ ಎಂದೂ ಕಳಚಿಕೊಳ್ಳಬೇಡ" (ಪು.೬೦) ಎಂದು ಹೇಳಬೇಕಿದ್ದ ಮಾತುಗಳ ಹೇಳದೆ ಪ್ರೋತ್ಸಾಹಿಸದ ಪರಿಣಾಮವಾಗಿ ಪಶ್ಚಾತಾಪಗೊಂಡು ಆ ಮೂಲಕ ಮಾನವೀಯ ಸಂಬಂಧಗಳ ಅಂತಃಕರಣದ ತುಡಿತ ಈ ಕಥೆಯಲ್ಲಿ ವ್ಯಕ್ತವಾಗಿದೆ. ಹೀಗೆ ಕಾಲೇಜಿನ ಶಾಂತವಾತಾವರಣವನ್ನು ಕೆಡಿಸುವಲ್ಲಿ ರಾಜಕೀಯದ ಪ್ರಭಾವ, ಇಂತಹ ವ್ಯವಸ್ಥೆಯನ್ನು ಸರಿಪಡಿಸಲು ಮುಂದಾದ ಪ್ರಾಮಾಣಿಕ ಅಧ್ಯಾಪಕರು ಎದುರಿಸಬೇಕಾದ ಸಂಕಷ್ಟಗಳು, ಅವಮಾನಗಳು ಕಥೆಯಲ್ಲಿ ಎಳೆ ಎಳೆಯಾಗಿ ನಿರೂಪಣೆಯಾಗಿದೆ.

'ಎಲ್ಲಾ ಆರಾಮ' ಕಥೆಯಲ್ಲಿ 'ಪಾಯಲ್ ಕಿ ಝೋಂಕಾರ' (ಪು.೩೧) ಆಗಿ ನೂರಾರು ವಿದ್ಯಾರ್ಥಿಗಳಿಗೆ ಜೀವ ತುಂಬಿದ ಬಾಲ್ಯದ ಟೀಚರ್ ಎದುರಾದಾಗ ತಾನು ಒಬ್ಬ ಅಧ್ಯಾಪಕಿಯಾಗಿ ಸಂಸಾರಿಕ ಜಂಜಾಟದಲ್ಲಿ ಬೋಧನೆ ಮಾಡುವುದು ನಿರಾಸಕ್ತಿಯ ಅನಿವಾರ್ಯದ ಉದ್ಯೋಗವಾಗಿ ಒಬ್ಬ ವಿದ್ಯಾರ್ಥಿಯ ಬದುಕನ್ನು ಮುಟ್ಟದ ತನ್ನ ಕರ್ತವ್ಯದ ಬಗ್ಗೆ ಮರುಗುವ ಸುಜಾತ ಇಂದಿನ ಅನೇಕ ಅಧ್ಯಾಪಕರ ಸಮಸ್ಯೆಗಳಾಗಿ ಕಂಡು ಬರುತ್ತದೆ. ದೊಡ್ಡ ದೊಡ್ಡ ಕನಸುಗಳ ಹಿಂದೋಡುತ್ತ ಬದುಕಿನ ಸಣ್ಣ ಸಣ್ಣ ಖುಷಿಗಳನ್ನು ಮರೆತು ಬಿಡುವ ಇಂದಿನ ಯಾಂತ್ರಿಕ ಜೀವನದ ಬಗ್ಗೆ ವ್ಯಂಗ್ಯತೆ ಈ ಕಥೆಯಲ್ಲಿದೆ.

'ಪ್ರೀತಿ' ಕಥೆಯಲ್ಲಿ ಸಂಸಾರಿಕ ಜೀವನದಲ್ಲಿ ಕಾಲಿಟ್ಟ ನವ ದಂಪತಿಗಳ ಪ್ರೀತಿ ಮತ್ತು ಕೈಕೊಳದ ಶಿಕ್ಷೆಗೊಳಗಾಗಿರುವ ಗಂಡನ ಬಗ್ಗೆ ತೋರಿಸುವ ಮೌನದ ಪ್ರೀತಿಯನ್ನು ಎದುರಾಗಿಸುವುದರ ಮೂಲಕ

ನಿಜವಾದ ಪ್ರೀತಿಯ ವ್ಯಾಪ್ತಿಯನ್ನು ದರ್ಶನ ಮಾಡಿಸುವಂತೆ ಒಳ್ಳೆಯ ಕವಿತೆಯನ್ನೋದಿದಂತೆ ಪ್ರೀತಿಯ ಮಹತ್ವವನ್ನು ಅರಿಯುವ ಕಥೆಯಾಗಿ ಕಂಡುಬರುತ್ತದೆ. ಹದಿಹರೆಯದ ಹುಡುಗಿಯರು ಮುಟ್ಟಾದಾಗ ಎದುರಿಸುವ ಅಡ್ಡಿ ಆತಂಕಗಳನ್ನು ತಾಯಿಯ ಸಾಂತ್ವಾನದ ಮಾತುಗಳಿಂದ ದೂರವಾಗುವುದನ್ನು 'ಜಾಣೆಯಾಗಿರು ಮಲ್ಲಿಗೆ' ಕಥೆಯಲ್ಲಿ ಕಾಣಬಹುದಾಗಿದೆ. ಸಂಸಾರಿಕ ಜೀವನದಲ್ಲಿ ಎದುರಾಗುವ ಆರ್ಥಿಕ ಪರಿಸ್ಥಿತಿ, ಗಂಡ ಹೆಂಡತಿಯ ಸರಸ, ವಿರಸ ಹೆಂಡತಿಯ ಅನುಮಾನ ಆಮೂಲಕ ತನ್ನ ಸಂಶಯ ಪ್ರವೃತ್ತಿಗೆ ತಾನೇ ಮರುಗುವ 'ಒಂದಾಗುವ, ಜೀವ ಸೆಳೆಯುವ' ಕಥೆಯಾಗಿ 'ಹತ್ತು ವರ್ಷದ ಹಿಂದೆ ಮುತ್ತೂರ ತೇರಿನಲ್ಲಿ' ಕಥೆಯಲ್ಲಿ ಕಾಣಬಹುದಾಗಿದೆ. ಇಲ್ಲಿ ಪ್ರೀತಿಯ ಅನನ್ಯತೆ ವ್ಯಕ್ತವಾಗಿದೆ.

ಒಟ್ಟಾರೆ ಡಾ.ವಿನಯಾ ಈ ಕಥಾಸಂಕಲನವು ಉತ್ತರ ಕನ್ನಡದ ಹಳ್ಳಿ ಹಾಗೂ ಪಟ್ಟಣದ ಪರಿಸರವನ್ನು ಕುರಿತ ಕಥೆಗಳಾಗಿವೆ. ಇಲ್ಲಿ ಕಥೆಗಾರ್ತಿ ತನ್ನ ಬಾಲ್ಯದ ಅನುಭವಗಳು ಹಾಗೂ ಕಂಡು ಕೇಳಿದ ಸಂಗತಿಗಳನ್ನು ಕಥೆಯಾಗಿಸಿದ್ದಾರೆ. ಇವರ ಎಲ್ಲಾ ಕಥೆಗಳಲ್ಲಿ ಗಂಡು ಹೆಣ್ಣಿನ ಪ್ರೀತಿ ವಿರಸ, ಹೆಣ್ಣಿನ ಸಂಕಷ್ಟಗಳು, ಅಂತರ ಜಾತಿವಿವಾಹ, ಕೋಮು ಗಲಭೆ, ಭ್ರಷ್ಟ ರಾಜಕಾರಣದ ಪ್ರಭಾವ, ಅಧ್ಯಾಪಕಿಯ ಕರ್ತವ್ಯ, ಹೆಣ್ಣಿನ ಪ್ರಾಕೃತಿಕ ಸಹಜ ಸಮಸ್ಯೆಯಾದ ಮುಟ್ಟು ಇತ್ಯಾದಿ ವಿಷಯಗಳನ್ನು ಕಥೆಯ ವಸ್ತುವಾಗಿಸಿ ಎಂತಹ ಕ್ಲಿಷ್ಟ ಸಮಸ್ಯೆಗಳಿಗೂ ಸರಳ ರೀತಿಯಲ್ಲಿ ಪರಿಹಾರವನ್ನು ಸೂಚಿಸುವುದರ ಮೂಲಕ ನಿರಾಶೆಗೊಂಡ ವ್ಯಕ್ತಿಗಳಿಗೆ ಬದುಕು ಪ್ರೀತಿಯನ್ನು ಹುಟ್ಟಿಸುವಂತಹ, ಮಾನವೀಯ ಸಂಬಂಧಗಳ ಮಾನವೀಯ ಮೌಲ್ಯಗಳನ್ನೊಳಗೊಂಡ, ಕೌಟುಂಬಿಕ ಸಾಮರಸ್ಯ ಬೆಸೆಯುವ ಕಥೆಗಳಾಗಿ ಕಂಡು ಬರುತ್ತವೆ. ಇಲ್ಲಿ ಬಹುಪಾಲು ಕಥೆಗಳಲ್ಲಿ ದುಡಿಯುವ, ದುಡಿದು ದಣಿಯದ ಗಟ್ಟಿಗಿತ್ತಿಯಂತಹ ಹೆಣ್ಣುಗಳ ಚಿತ್ರಣವಿದೆ. ಗಂಗಮ್ಮ, ಅಂಜನಕ್ಕ, ಸಾವಿತ್ರಿ ಟೀಚರ್ ಇಂತಹ ದಿಟ್ಟತನವಿರುವ ಹೆಣ್ಣು ಪಾತ್ರಗಳಾಗಿವೆ. ಇಲ್ಲಿನ ಕಥೆಗಳಲ್ಲಿ ಮನುಷತ್ವದ ಹುಡುಕಾಟವಿದೆ. ಇಲ್ಲಿನ ಬಹುಪಾಲು ಕಥೆಗಳು ಸ್ತ್ರೀ ಹಿನ್ನಲೆಯಲ್ಲಿ ರಚಿತವಾಗಿವೆ. ಇಂದಿನ ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಹೆಣ್ಣು ಅನುಭವಿಸುವ ಮಾನಸಿಕ ಹಾಗೂ ಲೈಂಗಿಕ ಕಿರುಕುಳ ಅವಮಾನ, ಅಪಮಾನಗಳನ್ನು ಕುರಿತು ಚಿಂತನೆ ಇಲ್ಲಿನ ಕಥೆಗಳಲ್ಲಿ ವ್ಯಕ್ತವಾಗಿದೆ. ಇಂತಹ ಸಂಗತಿಗಳನ್ನು ಪುರುಷ ದ್ವೇಷವಿಲ್ಲದೆ ತಿಳುವಳಿಕೆಯನ್ನು ಮೂಡಿಸುವ ನಿಟ್ಟಿನಲ್ಲಿ ಕಥೆಗಳು ಸರಳ ರೀತಿಯಲ್ಲಿ ರಚನೆಯಾಗಿದೆ. ಆದರೆ 'ಪ್ರೀತಿ', 'ಜಾಣೆಯಾಗಿರು ಮಲ್ಲಿಗೆ', 'ಹತ್ತುವರ್ಷದ ಹಿಂದೆ ಮುತ್ತೂರು ತೇರಿನಲ್ಲಿ' ಕಥೆಗಳು ಬರೆಯಲೇ ಬೇಕು ಎಂಬ ಒತ್ತಡದಿಂದ ಬರೆದ ಕಥೆಗಳಾಗಿ ಕಂಡು ಬರುತ್ತವೆ. ಈ ಎಲ್ಲಾ ಕಥೆಗಳಲ್ಲಿ ಪ್ರೀತಿಯ ಮಹತ್ವವನ್ನು ಕುರಿತು ಹೇಳಲಾಗಿದೆ. ಹೀಗೆ ನಿರಾಯಾಸ ಹಾಗೂ ನಿರುದ್ವೇಗದ ಹಾಗೂ ನಿರಾಯಾಸದ ಶೈಲಿಯಲ್ಲಿ ನಮ್ಮ ಅನುಭವದ ಮಾತುಗಳಂತೆ ಕಸೂತಿ ಹಾಕಿದಂತೆ ವಿನಯಾ ಅವರ ಕಥೆಗಳು ವ್ಯಕ್ತವಾಗಿವೆ ಎಂದು ಅಭಿಪ್ರಾಯಪಡುತ್ತೇನೆ.

ಸುನಂದಾ ಕಥೆಗಳು

ಇಪ್ಪತ್ತೊಂದನೆಯ ಶತಮಾನದ ಆರಂಭದ ದಶಕದಲ್ಲಿ ಬರೆಯುತ್ತಿರುವ ಕಥೆಗಾರ್ತಿಯರಲ್ಲಿ ಸುನಂದಾ ಪ್ರಕಾಶ ಕಡಿಮೆ ಪ್ರಮುಖರು ಇವರು 'ಪುಟ್ಟ ಪಾದದ ಗುರುತು', 'ಗಾಂಧಿ ಚಿತ್ರದ ನೋಟು'

ಎಂಬ ಎರಡು ಕಥಾ ಸಂಕಲನಗಳನ್ನು ರಚಿಸಿದ್ದಾರೆ. ಈ ಎಲ್ಲಾ ಕಥೆಗಳಲ್ಲಿ ಉತ್ತರ ಕನ್ನಡದ ಪರಿಸರವನ್ನು ಕಾಣಬಹುದಾಗಿದೆ. ಸುನಂದಾ ಅವರು ಮಧ್ಯಮ ವರ್ಗದ ಜನರಲ್ಲಿನ ಸಾಂಸಾರಿಕ ಜೀವನದಲ್ಲಿ ನಡೆಯುವ ದಿನ ನಿತ್ಯದ ಘಟನೆಗಳನ್ನು ಕಥೆಯಾಗಿಸಿದ್ದಾರೆ. ಇಲ್ಲಿ ಸ್ತ್ರೀಯರು ಮುಖ್ಯವಾಗಿದ್ದು ಅವರ ಭಾವನೆಗಳನ್ನು ಸಂಕಷ್ಟಗಳನ್ನು ಅರ್ಥಮಾಡಿಕೊಳ್ಳುವಲ್ಲಿ, ಸಾಂಸಾರಿಕ ಜೀವನದಲ್ಲಿ ಹೆಣ್ಣಿನ ಸ್ಥಾನಮಾನ ಆ ಮೂಲಕ ಕೌಟುಂಬಿಕ ಸಾಮರಸ್ಯವನ್ನು ತರುವಲ್ಲಿ ಪುರುಷ ಪ್ರಧಾನ ವ್ಯವಸ್ಥೆಗೆ ತಿಳುವಳಿಕೆಯನ್ನು ಮೂಡಿಸುವಲ್ಲಿ ಇಲ್ಲಿನ ಕಥೆಗಳು ಮುಖ್ಯವಾಗಿ ಇಲ್ಲಿ ಕಥೆಗಾರ್ತಿಯು ಮನಸ್ಸಿನ ಭಾವನೆಗಳನ್ನು ಸೂಕ್ಷ್ಮವಾಗಿ ಚಿತ್ರಿಸಿದ್ದಾರೆ. ಈ ಎಲ್ಲಾ ಕಥೆಗಳಲ್ಲಿ ಸ್ಥಾಯಿಭಾವ 'ಪ್ರೀತಿ'ಯಾಗಿದೆ. ಇಲ್ಲಿನ ಕಥೆಗಳು ತಲ್ಲೀನತೆಯನ್ನುಂಟು ಮಾಡುತ್ತವೆ. ಸುನಂದಾ ಅವರು ತೆರೆದ ಮನಸ್ಸಿನಿಂದ ಚಿತ್ರಬಿಡಿಸಿದಂತೆ ಇಲ್ಲಿನ ಕಥೆಗಳು ವ್ಯಕ್ತವಾಗಿ. ಈ ಕಥೆಗಳನ್ನು ವಸ್ತು ಧೋರಣೆಯ ದೃಷ್ಟಿಯಿಂದ ಈ ಅಧ್ಯಯನದಲ್ಲಿ ಗುರುತಿಸಲಾಗಿದೆ. ಸುನಂದಾ ಅವರು 'ಪುಟ್ಟಪಾದದ ಗುರುತು' (೨೦೦೫) ಮೊದಲನೇ ಕಥಾ ಸಂಕಲನವಾಗಿದ್ದು ಒಟ್ಟು ೧೧ ಕಥೆಗಳಿವೆ. ಮಧ್ಯಮ ವರ್ಗದ ಮಹಿಳೆಯ ಸಾಂಸಾರಿಕ ಜೀವನದಲ್ಲಿನ ದಿನ ನಿತ್ಯದ ಘಟನೆಗಳು ಕಥೆಯಾಗಿವೆ. ಇದಕ್ಕೆ 'ಮಗು ಚಿತ್ರ ಬರೆಯಿತು' ಕಥೆಯನ್ನು ಉದಾಹರಿಸಬಹುದಾಗಿದೆ. ಈ ಕಥೆಯು ನಿರೂಪಕಿಯ ಮುಖಾಂತರ ಕಥೆ ನಿರೂಪಣೆಗೊಳ್ಳುತ್ತದೆ. ವಠಾರದ ಕೆಳ ಮಧ್ಯಮ ವರ್ಗದ ಬದುಕನ್ನು ಹೇಳುವ ರೀತಿಯಲ್ಲಿ ಕಥೆ ತನ್ನ ಹಂದರವನ್ನು ಬಿಚ್ಚಿಕೊಳ್ಳುತ್ತದೆ. ಈ ವಠಾರದಲ್ಲಿ ೩ನೇ ನಂಬರ್ ಮನೆಯ ಕಥೆಯ ನಾಯಕಿ ಮಾಲತಿಗೆ ತನ್ನ ತಂದೆ ಕೊಟ್ಟ ಟ್ರಂಕ್ ಬಹಳ ಪ್ರೀತಿಯ ವಸ್ತುವಾಗಿದೆ. ಆದರೆ ಇದೇ ವಸ್ತು ತನ್ನ ಮಗುವಿಗೆ ಅಪಾಯವಾಗಿ ಪರಿಣಮಿಸುತ್ತದೆ ಎಂದಾಗ ಆ ವಸ್ತು ವಿನಾಕಾರಣ ಹೊರದೂಡಲ್ಪಡುತ್ತದೆ. ಆದರೂ ತನ್ನ ಕಷ್ಟಸುಖಗಳಿಗೆ ಬಾಗಿಯಾಗಿದ್ದ ಹಳೆಯ ವಸ್ತುವನ್ನು ಹೊರದೂಡಲು ಮನಸ್ಸಿಲ್ಲ ಗಂಡನ ವಿರೋಧ ಎದುರಾದರೂ ಚಿಂತೆಯಿಲ್ಲ. ಆದರೆ ಹಳೆಯ ವಸ್ತುವಿಗೆ ಬದಲಾಗಿ ಹೊಸವಸ್ತು ಅದರ ಜಾಗವನ್ನು ಆಕ್ರಮಿಸಿದಾಗ ಹಳೆಯದು ಮುಲಾಜಿಲ್ಲದೆ ಹೊರಹಾಕಲ್ಪಡುತ್ತದೆ. ಕುಟುಂಬದಲ್ಲಿ ವೃದ್ಧರದು ಇದೇ. ಸ್ಥಿತಿ ಎಂದು ಹೇಳಲು ಲೇಖಕಿ ಪ್ರಯತ್ನಿಸಿದ್ದಾರೆಯೇ ಎಂಬ ಸಂಶಯ ಬರುತ್ತದೆ. ಹೀಗೆ ಇಲ್ಲಿ ಮಾಧ್ಯಮದಲ್ಲಿ ಪ್ರಸಾರವಾಗುವ ಸಿನೆಮಾಗಳು ವ್ಯಕ್ತಿಗಳನ್ನು ಮೈಮರೆಸುವಂತೆ ಮಾಡಿ ಉಂಟಾಗುವ ಅನಾಹುತಗಳು, ಗಂಡ ಹೆಂಡತಿಯ ಸರಸ ವಿರಸ, ವಠಾರದಲ್ಲಿ ನೆರೆಹೊರೆಯರ ಸಂಬಂಧಗಳು ಮಗುವಿನ ಜೀವವುಳಿಸುವಲ್ಲಿ ತೋರುವ ನಡುವಳಿಕೆ ಮಾನವೀಯ ಸಂಬಂಧಗಳನ್ನು ಕುರಿತು ಹೇಳುತ್ತದೆ. ಕೆಳ ಮಧ್ಯಮ ವರ್ಗದ ಬದುಕಿನ ಚಿತ್ರಣವನ್ನು ಈ ಕಥೆಯಲ್ಲಿ ಕಾಣಬಹುದಾಗಿದೆ.

'ನಕ್ಷತ್ರದ ಬೆಳಕು ಹಿಡಿದು' ಕಥೆಯಲ್ಲಿ ಪ್ರೀತಿಯ ತಾರತಮ್ಯವನ್ನು ಆ ಮೂಲಕ ವ್ಯಕ್ತಿಯ ವ್ಯಕ್ತಿತ್ವವನ್ನು ಗುಣ ಸ್ವಭಾವಗಳನ್ನು ತಿಳಿಯ ಬಹುದಾಗಿದೆ. ಇಲ್ಲಿ ಲೇಖಕಿ ತನ್ನ ಅನುಭವಗಳನ್ನು ವಿವಿಧ ಪಾತ್ರಗಳನ್ನು ಚಿತ್ರಿಸುವುದರ ಮೂಲಕ ನಿರೂಪಣೆಗೊಳ್ಳುತ್ತದೆ. ಈ ಕಥೆಯಲ್ಲಿ 'ಪಪ್ಪಿ' ತನ್ನ

ಮನೆಯವರೆಲ್ಲರ ಪ್ರೀತಿಯ ಪಾತ್ರವಾದ ನಾಯಿಯಾಗಿದೆ. ಈ ಕಥೆಯ ನಾಯಕಿಗೆ ತನ್ನ ಏಳೆಂಟು ವರುಷದ ಸ್ಕಂಥದ ಮಗಳ ಪ್ರೀತಿಯೊಡನೆ ಸರಿ ಸಮವಾಗಲು ಸಾಧ್ಯವಿಲ್ಲ. ಆದರೆ ಇಂಥ ತಾರತಮ್ಯ ಆ ನಾಯಿಗಿಲ್ಲ ತನ್ನನ್ನು ಅಲಕ್ಷಿಸಿದ ಯಜಮಾನಿಯ ಹತ್ತಿರ ಯಾವುದೇ ಬೇದ ಭಾವ ವಿಲ್ಲದೆ ಮತ್ತೆ ಅದೇ ಪ್ರೀತಿಯನ್ನು ಹರಸಿ ಬರುತ್ತದೆ. ಇದೇ ರೀತಿಯಲ್ಲಿ ನಾಯಕಿಯ ಮಗಳು ಪುಟ್ಟಿ ದೀಪಾವಳಿಯ ಹಬ್ಬಗೊತ್ತಿಲ್ಲದೆ ಶಿಕ್ಷೆಗೊಳಗಾದ ತನ್ನ ಕ್ಲಾಸಮೇಟ್ ಮತ್ತು ಗೆಳತಿ ಆಸ್ಮಾಳಿಗೆ ದೀಪಾವಳಿಯ ಹಬ್ಬದ ಕಿರು ಟಿಪ್ಪಣಿ ಬರೆಯಲು ಸಹಾಯ ಮಾಡುತ್ತಾಳೆ. ಇಲ್ಲಿ ಕಥೆಯಲೊಂದು ಉಪಕಥೆಯ ತಂತ್ರವನ್ನು ಬಳಸಲಾಗಿದೆ. ಇಲ್ಲಿ ಬಾಡಿಗೆ ಮನೆ ಸಮಸ್ಯೆ ಮಾಲೀಕರ ಕಿರುಕುಳ ಮಡಿಮೈಲಿಗೆ, ಸಾಂಸಾರಿಕ ಜೀವನದಲ್ಲಿ ಹೆಣ್ಣಿನ ದಿನನಿತ್ಯದ ಸಮಸ್ಯೆಗಳು, ಮನೆಯ ನಿರ್ವಹಣೆ ಇತ್ಯಾದಿ ಅಂಶಗಳು ಇಲ್ಲಿ ವ್ಯಕ್ತವಾಗಿದೆ. ಪ್ರಾಣಿ ಮತ್ತು ಮನುಷ್ಯರಲ್ಲಿನ ಮಾನವೀತೆ ಅಂಶಗಳು ವ್ಯಕ್ತವಾಗಿವೆ. 'ಪ್ರಕೃತಿ ಧಾವಂತ' ಕಥೆಯಲ್ಲಿ ಬಾಹ್ಯ ಸಾಂಪ್ರಾದಾಯಿಕ ಆಧುನಿಕತೆಯ ಮುಖಾಮುಖಿಯನ್ನು ಕಾಣಬಹುದು. ನಿರೂಪಕಿ ಅಥವಾ ನಾಯಕಿಯ ಮುಖಾಂತರ ಕಥೆ ನಿರೂಪಣೆಗೊಳ್ಳುತ್ತದೆ. ನಾಯಕಿ ತಾಯಿ ಮುಟ್ಟಾದಾಗ ಮೊದಲ ಮೂರು ದಿನ ಮನೆಯ ಹೊರಗಿದ್ದು ಯಾರನ್ನು ಮುಟ್ಟದೆ ಮೈಲಿಗೆಯಲ್ಲಿರಬೇಕು ಎಂಬ ಸಂಪ್ರದಾಯವನ್ನು ಹಳೆಯ ತಲೆಮಾರಿನ ಅವ್ವಳ ಕಟ್ಟಾಜ್ಞೆಯಾಗಿತ್ತು. ಆಯಿ ಈ ಸಂಪ್ರದಾಯವನ್ನು ಮಡಿಮೈಲಿಗೆಯನ್ನು ಮುಂದುವರಿಸಿಕೊಂಡು ಬಂದಿದ್ದಳು ಆದರೆ ತನ್ನ ಮಗಳು ಮೈನರಿದಾಗ ಇಂತಹ ಮಡಿ ಮೈಲಿಗೆ ಅವಕಾಶ ಮಾಡಿಕೊಡದೆ ಸ್ವತಂತ್ರವಾಗಿ ಯಾವುದೇ ಕಟ್ಟುಪಾಡುಗಳಲ್ಲದೆ ಬದುಕುವಂತೆ ಅಣಿಮಾಡಿ ಕೊಳ್ಳುತ್ತಾಳೆ. ಹೀಗೆ ಇಂತಹ ಮಡಿಮೈಲಿಗೆಗಳು ಇಂದಿನ ಆಧುನಿಕ ಯುಗದಲ್ಲಿ ತನ್ನ ಮಹತ್ವನ್ನು ಕಳೆದುಕೊಳ್ಳುತ್ತಿರುವುದನ್ನು ಕಾಣಬಹುದಾಗಿ ಈ ಸಮಯದಲ್ಲಿ ಹದಿಹರಿಯದ ಹೆಣ್ಣುಮಕ್ಕಳು ಎದುರಿಸುವ ಅಡ್ಡಿ ಆತಂಕಗಳನ್ನು ಮುಟ್ಟಿನ ಸಮಸ್ಯೆಗಳು ಈ ಕಥೆಯಲ್ಲಿ ಕಾಣಬಹುದಾಗಿದೆ. ಈ ಸಂಪ್ರದಾಯಗಳು ಶಿಥಿಲವಾಗುತ್ತಿರುವುದಕ್ಕೆ ಸಾಮಾಜಿಕ ಪರಿಸ್ಥಿತಿ, ತಲೆಮಾರಿನ ಅಂತರ ಮತ್ತು ಮಹಿಳೆ ಹೆಚ್ಚು ಹೆಚ್ಚು ವಿದ್ಯಾವಂತರಾಗುವದು ಕಾರಣಗಳಿರಬಹುದು 'ಬಣ್ಣದ ಕೌದಿ' ಕಥೆಯಲ್ಲಿ ರಕ್ತ ಸಂಬಂಧಗಳಲ್ಲಿ ಉಂಟಾದ ವಿವಾಹದಿಂದ ಆಗುವ ಪರಿಣಾಮವನ್ನು, ಪ್ರೇಮದ ನಿಜವಾದ ಅರ್ಥವನ್ನು ಕುರಿತು ಹಾಗೂ ವ್ಯಕ್ತಿಗಳ ಪರಸ್ಪರ ಆತ್ಮವಲೋಕವನ್ನು ಕಾಣಬಹುದಾಗಿದೆ. ಈ ಕಥೆಯಲ್ಲಿ ನಾಯಕಿ ವೇದಾಳ ಗಂಡ ಬೇರೆ ಜಾತಿಯ ಹೆಣ್ಣನ್ನು ಮಧುವೆಯಾಗಿ ಮೂರು ವರ್ಷಗಳ ನಂತರ ಮನೆಗೆ ಹಿಂದಿರುಗಿದ್ದಾನೆ. ಕಾರಣ ತನ್ನ ತಂದೆಯನ್ನು ತನ್ನ ಬಳಿ ಕರೆದುಕೊಂಡು ಹೋಗಲು ಇಲ್ಲಿ ಪುರುಷರ ಸ್ವಾರ್ಥತನವಿದೆ ಎಂಬುದನ್ನು ಕಾಣಬಹುದಾಗಿದೆ. ದಾಸ ಹೀಗೆ ಕ್ರಿಶ್ಚಿಯನ್ ಹುಡುಗಿಯನ್ನು ಮದುವೆಯಾಗಲು ಕಾರಣ ತನ್ನ ಜೊತೆಯಲ್ಲೆ ಹುಟ್ಟಿ ಬೆಳೆದ ವೇದಾಳನ್ನು ಹೆಂಡತಿಯಾಗಿ ಸ್ವೀಕರಿಸಲು ಹಾಗೂ ಆ ಪ್ರೀತಿ ಎಂಬ ಭಾವ ಬೆಳೆಯದೆ ಇರುವುದೇ ಪ್ರಮುಖ ಸಂಗತಿಯಾಗಿದೆ. ಇಂತಹ ಪ್ರೇಮ ಹುಟ್ಟಬೇಕಾದರೆ ಯುವಕ ಯುವತಿಯರಲ್ಲಿ ಸ್ನೇಹ ಬೇಳಯಬೇಕು, ರಕ್ತ ಸಂಬಂಧವಿರಬಾರದು ಎಂದು ಲೇಖಕಿ ಅನಿಸಿಕೆ ಎಂಬುದು

ಕಂಡುಬರುತ್ತದೆ. ಕೊನೆಗೆ ವೇದಾ ದಾಸನ ಗೆಳೆಯನನ್ನು ಸಂಗಾತಿಯಾಗಿ ಆಯ್ಕೆ ಮಾಡಿಕೊಳ್ಳುತ್ತಾಳೆ. ಇಲ್ಲಿ ಪ್ರೇಮ, ಸಮಾಜ ಬಂಧನಗಳನ್ನು ಮೀರಲು ಶಕ್ತವಾಗಿದೆ ಹೀಗೆ ಇಲ್ಲಿ ಹೆಣ್ಣಿನ ಸಂಕಷ್ಟಗಳು, ಒಂಟಿತನ ಹಾಗೂ ಮನುಷ್ಯನಲ್ಲಿ ರಾಗ, ದ್ವೇಷಗಳನ್ನು ಕಾಣಬಹುದಾಗಿದೆ. ಹೀಗೆ ವಿಷಮ ದಾಂಪತ್ಯಕ್ಕೆ ರಕ್ತ ಸಂಬಂಧಗಳಲ್ಲಿನ ವಿವಾಹವು ಒಂದು ಪ್ರಮುಖ ಕಾರಣವಾಗಿದೆ.

'ಕಿಚನ ಪ್ಯಾರಡೈಸ್' ಕಥೆಯಲ್ಲಿ ಹೆಣ್ಣಿನ ಬಂಜೆತನ ಸಮಸ್ಯೆಯನ್ನು ಕುರಿತು ಚಿತ್ರಣವಿದೆ. ಆ ಮೂಲಕ ಹೆಣ್ಣು ಸಮಾಜದಿಂದ ಹಾಗೂ ಕುಟುಂಬದವರಿಂದ ಅನುಭವಿಸುವ ಹಿಂಸೆ, ಅಪಮಾನಗಳನ್ನು ಕಾಣಬಹುದಾಗಿದೆ. 'ವಶ' ಕಥೆಯಲ್ಲಿ ಗೃಹ ಪ್ರವೇಶ ಸಮಾರಂಭದಲ್ಲಿ ಗೆಳತಿಯರಿಂದ ನಿರ್ಲಕ್ಷ್ಯಕ್ಕೆ, ಒಳಗಾದೆನೆ ಎಂದು ಅನುಮಾನಿಸುವ ಹೆಣ್ಣಿನ ಸಂಕೋಚ, ಅನುಮಾನಗಳನ್ನು ಕಾಣಬಹುದಾಗಿದೆ. ನಾಗರಿಕ ಬದುಕಿನ ವಿಕಾರಗಳನ್ನು ತಿಳಿಸುವಲಿ ಹಾಗೂ ಗ್ರಾಮೀಣಪರಿಸರದ ಬಗ್ಗೆ ಇರುವ ಪ್ರೀತಿ, ಅಭಿಮಾನವನ್ನು 'ನೋ ಎಂಟ್ರಿ' ಕಥೆಯಲ್ಲಿ ಕಾಣಬಹುದಾಗಿದೆ.

'ಪುಟ್ಟಪಾದದ ಗುರುತು' ಕಥೆಯಲ್ಲಿ ಅತ್ತೆ ಸೊಸೆಯರ ಸಂಬಂಧದ ಸೂಕ್ಷ್ಮತೆಯನ್ನು ಕಾಣಬಹುದು. ಈ ಕಥೆಯು ನಾಯಕಿಯ ಮೂಲಕ ನಿರೂಪಣೆಗೊಳ್ಳುತ್ತದೆ. ನಾಯಕಿಯಾದ ಅಂಚಕ್ಕನಲವತ್ತು ವರ್ಷ ವಯಸ್ಸಿನವರಾಗಿದ್ದು ವಿನಾಕಾರಣ ಸೊಸೆ ಮಗನ ಮೇಲೆ ಕೋಪವನ್ನು ಮಾಡಿಕೊಳ್ಳುತ್ತಿದ್ದಳು ಇದು ಇಂದಿನ ಅತ್ತೆ ಸೊಸೆಯರ ಸಂಬಂಧಗಳ ಸೂಕ್ಷ್ಮತೆಯನ್ನು ಕಾಣಬಹುದಾಗಿದೆ. ಇದಕ್ಕೆ ಕಾರಣ ಒಂಟಿತನ ಆದರೆ ಸೊಸೆಯ ಅಪ್ಪನೊಂದಿಗೆ ತನ್ನ ಬಾಲ್ಯದ ದಿನಗಳನ್ನು ನೆನೆಪಿಸಿಕೊಳ್ಳುತ್ತಾ ಭಾವನೆಗಳನ್ನು ಹಂಚಿಕೊಂಡಾಗ ಅದುವರೆಗೂ ತನ್ನಲ್ಲಿದ್ದ ಅಸೂಯೆ ಕೋಪ ಕಳೆದು ಹೋಗಿ ಹೊಸ ವ್ಯಕ್ತಿತ್ವವನ್ನು ಪಡೆಯುತ್ತಾಳೆ. ಹೀಗೆ ಸೂಕ್ಷ್ಮ ಸಂಬಂಧದ ವಿವೇಚನೆ, ಏಕಾಕಿತನದ ಪರಿಣಾಮವನ್ನು ಇಲ್ಲಿ ಕಾಣಬಹುದಾಗಿದೆ.

'ಗುಬ್ಬಿಗೂಡು' ಕಥೆಯಲ್ಲಿ ಮಾನವೀಯ ಮನುಷ್ಯ ಸಂಬಂಧಗಳ ಚಿತ್ರಣವಿದೆ. ಇಲ್ಲಿ ನಿರೂಪಕನ ಮುಖಾಂತರ ಕುಟುಂಬದ ಸದಸ್ಯರ ಗುಣ ಸ್ವಭಾವಗಳು ನಿರೂಪಣೆಗೊಳ್ಳುತ್ತದೆ. ಇಲ್ಲಿ ನಾಯಕ ಸಂದೀಪ ಕುಟುಂಬದ ವಿರೋಧದಲ್ಲಿ ಮಧುವೆಯಾದ ಅಕ್ಕನನ್ನು ಮನೆಯವರ ಪರವಾಗಿ ಯೋಗಕ್ಷೇಮ ವಿಚಾರಿಸಲು ಎರಡು ವರ್ಷಗಳ ಬಳಿಕ ಹುಬ್ಬಳ್ಳಿಗೆ ಬಂದಿದ್ದಾನೆ. ಇಲ್ಲಿ ಕಳ್ಳುಬಳ್ಳಿಯ ಸಂಬಂಧಗಳು ಅಷ್ಟು ಸುಲಭವಾಗಿ ಕಳಚಿಕೊಳ್ಳಲು ಸಾಧ್ಯವಿಲ್ಲವೆಂಬಂತಿದೆ. ಈ ಸಂದರ್ಭದಲ್ಲಿ ರಂಜಾನ್ ಹಬ್ಬದ ಪ್ರಯುಕ್ತ ಹುಬ್ಬಳಿಯಲ್ಲಿ ಕೋಮುಗಲಭೆ ಸಂಬವಿಸಬಹುದೇನೋ ಎಂಬ ಸಂಶಯದಲ್ಲಿ ಪೋಲಿಸರ ಬಿಗಿಬಂದೋಬಸ್ತಿದೆ. ಈ ಪೋಲಿಸರು ಅಮಾಯಕನಾದ ಸಂದೀಪನ ಮೇಲೆ ಆತಂಕವಾದಿಯ ಆರೋಪ ಹೊರಿಸಿ ಉಪ್ಪಿನಕಾಯಿಯ ಚೀಲ ಬಾಂಬಾಗಿ ಪರಿಣಿಸಿತು. ಈ ಅಪಾಯದಿಂದ ಸಂರಕ್ಷಿಸಿದವನು ಪಕ್ಕದ ನೆರೆಹೊರೆಯ ಸಂಬಂಧಿಕ ಹೀಗೆ ಇದು ಸಾಮಾಜಿಕ ಸಂಬಂಧವಾಗಿದ್ದು ಇಲ್ಲಿ ಜಾತಿ ಒಂದು ಮುಖ್ಯ ಘಟಕವಾಗಿರದು ಕೋಮುಗಲಭೆ ಸಂದರ್ಭದಲ್ಲಿ ಸಂಬಂಧಿತ ಜಾತಿಯವರು ಒಬ್ಬರಿಗೊಬ್ಬರು ಸಹಾಯ

ಮಾಡುತ್ತಾರೆ. ಆದರೆ ನೆರೆಹೊರೆಯ ಸಂಬಂಧ ಜೀವನ ಪರ್ಯಂತ ಇರಬಹುದು ಹಾಗೆ ಇಲ್ಲಿ ನೆರೆಹೊರೆಯ ಸಂಬಂಧಗಳ ಅಪ್ಪಟ ಮಾನವೀಯ ಸಂಬಂಧಗಳಾಗಿದ್ದು ಮಾನವೀಯ ಮೌಲ್ಯವನ್ನು ಕಾಣಬಹುದಾಗಿದೆ. 'ಕಂದೀಲು' ಕಥೆಯಲ್ಲಿ ಅತ್ತೆ ಸೊಸೆಯರ ಸಂಬಂಧ, ವಿಧವಾ ಸಮಸ್ಯೆ, ಹೆಣ್ಣಿನ ಒಂಟಿತನ ನೋವು, ಸಂಕಷ್ಟಗಳನ್ನು ಕಾಣಬಹುದಾಗಿದೆ.

ಒಟ್ಟಾರೆ ಸುನಂದಾ ಅವರ ಪುಟ್ಟಪಾದದು ಗುರುತು ಕಥೆಯಲ್ಲಿ ಸಾಂಸಾರಿಕ ಜೀವನದಲ್ಲಿ ಹೆಣ್ಣು ತಾಯಿಯಾಗಿ, ಅಕ್ಕನಾಗಿ, ಗೆಳತಿಯಾಗಿ, ಹೆಂಡತಿಯಾಗಿ ನಿರ್ವಹಿಸುವ ಪಾತ್ರ ಆ ಮೂಲಕ ಅವಳಲ್ಲಿನ ಸೂಕ್ಷ್ಮ ಮನೋಭಾವನೆಯನ್ನು, ಸಂಕಟ, ನೋವುಗಳನ್ನು ಪುರುಷ ಸಮಾಜಕ್ಕೆ ಯಾವುದೇ ದ್ವೇಷವಿಲ್ಲದೆ ತಿಳುವಳಿಕೆಯನ್ನು ಮೂಡಿಸುವ ರೀತಿಯಲ್ಲಿ ಕೌಟುಂಬಿಕ ಸಾಮರಸ್ಯ, ಯಶಸ್ವೀ ದಾಂಪತ್ಯ ಸಾಗಿಸುವಂತೆ ಇಲ್ಲಿನ ಕಥೆಗಳಿವೆ ಇಲ್ಲಿ ವ್ಯಕ್ತಿಗಳಲ್ಲಿ ಭಯದ, ಆತಂಕದ, ನೋವಿನ, ಸೋಲಿನ ಅಂಶಗಳು ಕಂಡು ಬಂದರೂ ಅವೆಲ್ಲ ಪ್ರೀತಿಯ ಮುಖಾಂತರ ಪರಿಹಾರವಾಗಿ ಬದುಕು ಪ್ರೀತಿಯನ್ನು ಕಾಣಬಹುದಾಗಿದೆ. ಇಲ್ಲಿನ ಎಲ್ಲಾ ಕಥೆಗಳು ಕಥೆಗಾರ್ತಿಯ ಮನಸ್ಸಿನ ಭಾವನೆಗಳೇ ವ್ಯಕ್ತವಾಗಿದೆ ಎಂಬಂತೆ ಚಿತ್ರಣಗೊಂಡಿದೆ. ಒಟ್ಟಾರೆ ಹೆಣ್ಣಿನ ಮನಸ್ಸಿನ ಸೂಕ್ಷ್ಮ ಭಾವನೆಗಳಾದ ಸಂಕೋಚ, ಸ್ವಾಭಿಮಾನ, ಸಂಕಷ್ಟಗಳು, ಒಂಟಿತನ ಇತ್ಯಾದಿಗಳನ್ನು ವ್ಯಕ್ತಪಡಿಸಿ ವ್ಯಕ್ತಿಯಲ್ಲಿನ ಮನಸ್ಸಿನ ಭಾವನೆಗಳನ್ನು ಸೂಕ್ಷ್ಮವಾಗಿ ಗ್ರಹಿಸುವಂತಹ ತಲ್ಲೀನತೆಯನ್ನು ಈ ಕಥೆಗಳು ಮೂಡಿಸುತ್ತವೆ.

ಸುನಂದಾ ಅವರ ಎರಡನೇ ಕಥಾ ಸಂಕಲನ **'ಗಾಂಧೀಚಿತ್ರದ ನೋಟು'** ೧೩ ಕಥೆಗಳನ್ನು ಒಳಗೊಂಡಿದ್ದು ಸಂಸಾರಿಕ ಜೀವನದ ದಿನ ನಿತ್ಯದ ಘಟನೆಗಳನ್ನು ಕಥೆಯಾಗಿಸಿದ್ದಾರೆ ಆದರೆ ಕೆಲವು ಕಥೆಗಳಲ್ಲಿ ಈ ಚೌಕಟ್ಟಿನಾಚೆ ಒಂದು ವಿಚೇದನ ಸಮಸ್ಯೆ, ವೇಶ್ಯಾ ಸಮಸ್ಯೆ, ಮಾನಸಿಕ ರೋಗ, ಏಡ್ಸ್ ನಂತಹ ಮಾರಕ ಖಾಯಿಲೆಯನ್ನು ಕಥೆಯ ವಸ್ತುವಾಗಿರಿಸಿದ್ದಾರೆ. ಹೀಗೆ ಇಲ್ಲಿನ ಕಥೆಗಳಲ್ಲಿ ವ್ಯಕ್ತಿಗಳ ಗುಣ ಸ್ವಭಾವ ನಡವಳಿಕೆಗಳನ್ನು ಚಿತ್ರ ಬಿಡಿಸಿದಂತೆ ಕಥೆಯನ್ನು ಹೆಣೆದಿದ್ದಾರೆ. ಇಲ್ಲಿ ಕಥೆಗಾರ್ತಿ ಸ್ತ್ರೀವಾದಿ ದೃಷ್ಟಿಕೋನದಾಚೆಯಿರುವ ಇಂದಿನ ಆಧುನಿಕ ಮಹಿಳೆಯರು ಅನುಭವಿಸುವ ಸಂಕಟಗಳು ಹಿಂಸೆಗಳನ್ನು ತಿಳಿಸುತ್ತಾ ಸ್ತ್ರೀ ಸಂವೇದನೆಯನ್ನು ಇಲ್ಲಿನ ಕಥೆಗಳಲ್ಲಿ ಕಾಣಬಹುದಾಗಿದೆ.

ಈ ಕಥಾ ಸಂಕಲನದ ಮೊದಲನೇ ಕಥೆಯಾದ 'ಪತ್ರೋಡೆ'ಯಲ್ಲಿ ಅತ್ತೆ ಸೊಸೆಯರ ಸಂಬಂಧ, ಮನುಷ್ಯನ ಸಹಜ ದೌರ್ಬಲ್ಯಗಳ ಸಂಕೀರ್ಣ ಕಥೆಯಾಗಿದೆ. ಇಲ್ಲಿ ಎಂಬತ್ತರ ಹರೆಯದ ಯಮುನಜ್ಜಿ ಪಾತ್ರದ ಮೂಲಕ ಕಥೆ ತನ್ನ ಹಂದರವನ್ನು ಬಿಚ್ಚಿಕೊಳ್ಳುತ್ತದೆ. ಯಮುನಜ್ಜಿಯ ಸವತಿಯ ಶ್ರಾದ್ಧ ಕಾರ್ಯದಲ್ಲಿ ಆಕೆಗೆ ಇಷ್ಟವಾದ ಪತ್ರೊಡೆಯನ್ನು ಸೊಸೆಯಲ್ಲಿ ಮಾಡಿಸಬೇಕೆಂಬ ಹಠ ಆದರೆ ಸೊಸೆ ಪುರುಸೊತ್ತಿಲ್ಲದ ತನ್ನ ಕೆಲಸಗಳಲ್ಲಿ ಇದನ್ನು ಮಾಡಲಾಗದೆ ಇರುವುದು ಅತ್ತೆಯ ಕೋಪಕ್ಕೆ ಕಾರಣವಾಗುತ್ತಾಳೆ. 'ಸತ್ತು ಹೋದವಳು ನನ್ನ ಅಕ್ಕ, ಸವತಿಯಾಗದಿದ್ದರೂ ಅದು ಒಂದು ದಿನವೂ ನಿನ್ನಂತೆ ಕಾಡಲಿಲ್ಲ, ನಾನು ಮತ್ತು ಅದು ಆಳಿದ ಮನೆ ಇದು ನೀನು ಈಗ ಬಂದವಳು ಎಲ್ಲವೂ

ನನ್ನ ಮಗ ಕೊಟ್ಟ ಸಲಿಗೆ', (ಪು.೧೦) ಎಂಬ ಯಮುನಜ್ಜಿಯ ಮಾತುಗಳಲ್ಲಿ ಅತ್ತೆ ಸೊಸೆಯರ ಜಗಳ ಇವರ ಮಧ್ಯದಲ್ಲಿ ಮಗನ ಅಸಹಾಯಕ ಸ್ಥಿತಿ ವ್ಯಕ್ತವಾಗಿದೆ. ಮಗ ತಾಯಿಯ ನಡುವೆ ವಯಸ್ಸಿನ ಅಂತರವಿರುವುದರಿಂದ ತಾಯಿಗೇ ಸೋಲುಂಟಾಗುವಂತೆ ಪತ್ರೊಡೆ ವಿಷಯದಲ್ಲಿ ಮೌನ ತಾಳಿದ್ದಾನೆ. ಆದರೆ ಈ ಸಂಘರ್ಷ ಕೆಲವೇ ಕ್ಷಣಗಳಲ್ಲಿ ಎಂದು ತೋರುವಂತೆ ಶ್ರಾದ್ಧ ಕಾರ್ಯ ಮುಗಿದ ಬಳಿಕ ಸೊಸೆ ತಯಾರಿಸಿದ ಪತ್ರೊಡೆಯನ್ನು ಯಮುನಜ್ಜಿ ತಿನ್ನುವುದರ ಮೂಲಕ ಮನುಷ್ಯನ ಆಸೆಗಳು, ದೌರ್ಬಲ್ಯಗಳು ವ್ಯಕ್ತವಾಗಿವೆ. ಅಲ್ಲದೆ ಸತ್ತ ನಂತರವೂ ಮರೆಯಾಗದ ಲೌಕಿಕ ಸೆಳೆತಗಳು, ತೀರಿ ಹೋದವರ ನಡುವೆ ಇರುವ ಸಂಬಂಧ, ಅವರನ್ನು ನೆನೆದು ಮಾಡುವ ಶ್ರಾದ್ಧ ಕಾರ್ಯಗಳಲ್ಲಿಯೋ ಮನುಷ್ಯನ ಸಹಜ ದೌರ್ಬಲ್ಯಗಳನ್ನು ಹಾಗೂ ಜೀವನೋತ್ಸಾಹವನ್ನು ಈ ಕಥೆಯಲ್ಲಿ ಕಾಣಬಹುದಾಗಿದೆ.

'ಜರಿಯಂಚಿನ ಪ್ರಾಕು' ಕಥೆಯಲ್ಲಿ ಸರ್ಕಾರದ ಆಜ್ಞೆಗಳು ಕೆಳವರ್ಗದ ಜನರ ಮೇಲೆ ಬೀರುವ ಪರಿಣಾಮವನ್ನು ಹಾಗೂ ಈ ವರ್ಗದ ಜನರ ಬದುಕುವ ಮಹತ್ವಾಕಾಂಕ್ಷೆಯನ್ನು ತಿಳಿಸುವ ಸಂಕೀರ್ಣ ಕಥೆಯಾಗಿದೆ. ಈ ಕಥೆಯಲ್ಲಿ ಬರುವ ಗುರ್ರ್ಯಾ ಕೆಳವರ್ಗದವನಾಗಿದ್ದು ತನ್ನ ಸಿಂಗಾರ ಮಿಷನಿಟ್ಟುಕೊಂಡು ದರ್ಜಿಯಾಗಿ ಜೀವನ ಸಾಗಿಸುತ್ತಿದ್ದನು ತನ್ನ ಹೆಂಡತಿಯ ಆಸೆಯಂತೆ ಮಗುವಿಗೆ ಜರಿಯಂಚಿನ ಪ್ರಾಕು ಹೊಲೆಯಬೇಕೆಂಬ ಆಕಾಂಕ್ಷೆಯನ್ನು ಹೊಂದಿದ್ದನು. ಆದರೆ ಆಕಾಂಕ್ಷೆ ಈಡೇರುವ ಮೊದಲೆ ನಗರ ಪಾಲಿಕೆಯವರು ತಮ್ಮ ಜೆಸಿಬಿ ಯಂತ್ರದ ಮೂಲಕ ರಸ್ತೆ ಅಗಲೀಕರಣಕ್ಕೆ ಸಂಬಂಧಿಸಿದಂತೆ ನಗರದ ಸೌಂದರ್ಯವನ್ನು ಹೆಚ್ಚಿಸಲು ಪುಟ್ಟಪಾತ್ ತೆರವುಗೊಳಿಸುವಾಗ ಅದೇ ಪುಟ್‌ಪಾತ್‌ನಲ್ಲಿದ್ದ ಗುರ್ರ್ಯಾನ ಸಿಂಗಾರ ಮಿಷನ್ ನುಚ್ಚುನೂರಾಗಿ ಹೋಯಿತು. ಜೀವನ ಆಧಾರವಾಗಿದ್ದ ಮಿಷನ್ ಅವಸ್ಥೆಯನ್ನು ಕಂಡು ಗುರ್ರ್ಯಾ ಕಂಗಾಲಾದ. ಹೀಗೆ ಅಧಿಕಾರಿಗಳ ದರ್ಪ, ತೀರ್ಮಾನಗಳು ಕೆಳವರ್ಗದ ಜನರ ಬದುಕನ್ನು ದುರಂತವಾಗಿಸುತ್ತದೆ. ಇಲ್ಲಿ ಮೆಹರವಾಡಿದ ಸೇಟಜಿ ಗುರ್ರ್ಯಾನಿಗೆ ಜೀವನಧಾರಿಯನ್ನು ತೋರಿಸುವುದರ ಮೂಲಕ ಮಾನವೀಯ ಸಂಬಂಧ ಕಂಡುಬಂದರೆ ಸೇಟಜಿಯ ಮಗ ಗುರ್ರ್ಯಾನ ಸ್ಥಿತಿಗೆ ಸಂತೋಷ ಪಡುವುದರ ಮೂಲಕ ಪೀಳಿಗೆ ಅಂತರವನ್ನು ಕಾಣಬಹುದಾಗಿದೆ. ಆದರೆ ಅದೇ ಗುರ್ರ್ಯಾ ತನ್ನ ಹೆಂಡತಿಯ ಆಸೆಯನ್ನು ಈಡೇರಿಸಲು ಅಸಹಾಯಕನಾಗಿ ನಗರ ಪಾಲಿಕೆಯಲ್ಲಿ ಕೂಲಿ ಕೆಲಸಕ್ಕೆ ಸೇರಿಕೊಂಡಾಗ ಕೆಳವರ್ಗದ ಬದುಕಿನ ಸ್ಥಿತಿಯನ್ನು, ಜೀವನೋತ್ಸಾಹವನ್ನು ಕಾಣಬಹುದು. ಅದೇ ಗುರ್ರ್ಯಾ ನೆರೆಹೊರೆಯನ ಕಬ್ಬಿನ ಮಿಷನ್ ರಕ್ಷಿಸುವುದರ ಮೂಲಕ ಮಾನವೀಯತೆಯನ್ನು ಮೆರೆದಿದ್ದಾನೆ ಗುರ್ಯಾ ಈಗ ಆ ಯಂತ್ರದ ಹಿಂಬದಿಗೆ ಜೋತು ಬಿದ್ದುಕೊಂಡಿದ್ದಾನೆ. 'ಅವನ ಜೇಬಿನಲ್ಲಿ ಮಗಳ ಹೊಸ ಪ್ರಾಕಿಗೆ ಹಚ್ಚುವ ಜರಿಯ ಲೇಸು ಹಾಗೇ ಮಿಂಚುತ್ತ ಬೆಚ್ಚಗೆ ಕೂತಿದೆ' (ಪು.೮೩)ಈ ವಾಕ್ಯಗಳು ಇಡೀ ಪ್ರಸಂಗದ ವ್ಯಂಗ್ಯ ದುರಂತಗಳನ್ನು ಹೇಳುತ್ತದೆ.

'ಗಾಂಧೀ ಚಿತ್ರದ ನೋಟು' ಕಥೆಯಲ್ಲಿ ಮನುಷ್ಯ ಸಂಬಂಧಗಳ ಚಿತ್ರಣವಿದೆ ಈ ಕಥೆಯು ಸುಧೀರನ ಪಾತ್ರದ ಮೂಲಕ ನಿರೂಪಣೆಗೊಳ್ಳುತ್ತದೆ. ಈ ಕಥೆಯ ನಾಯಕ ಸುಧೀರ ಗಣಪತಿಯ

ಹಬ್ಬಕ್ಕೆಂದು ತನ್ನ ಕುಟುಂಬ ಸಮೇತ ತನ್ನೂರಿಗೆ ಬಂದಿದ್ದಾನೆ. ಈ ಮನೆಯಲ್ಲಿದ್ದ ಗೋಪಜ್ಜಿ ಎಂಬ ಮನೆ ಕೆಲಸದಾಕೆ ತಾನು ಬಟ್ಟೆ ಹೊಗೆಯುತ್ತಿದ್ದ ಸುಧೀರ ಪ್ಯಾಂಟಿನಲ್ಲಿ ನೂರರ ಇಪ್ಪತ್ತು ನೋಟುಗಳನ್ನು ಕಳವು ಮಾಡಿದ್ದಾಳೆ, ಆದರೆ ಆತ್ಮಸಾಕ್ಷಿಗೆ ಸರಿಯೆನಿಸದೆ ಆ ನೋಟುಗಳನ್ನು ಹಿಂದಿರಿಗಿಸುವುದರ ಮೂಲಕ ಪ್ರಾಮಾಣಿಕತೆಯನ್ನು ಮೆರೆದಿದ್ದಾಳೆ. ಈಕೆಯ ಈ ಕಳವಿನ ಬಗ್ಗೆ ಸುಧೀರ ಬಡತನದ ಕಾರಣ ಎಂದು ಮೌನವಾಗಿದ್ದರೂ, ಸುಧೀರನ ತಾಯಿ ಮೌನವಾಗಿರದೆ ವಿಚಾರಿಸಿದಾಗ ಗೋಪಜ್ಜಿ, 'ಹಣ ಸಿಕ್ಕ ಕೂಡಲೇ ನಾನು ಸುಧೀರ ಒಡೆಯರಿಗೆ ಒಯ್ದುಕೊಟ್ಟಿದೆ, ನಿಮ್ಮ ಮನೆ ಅಂಗಳದಲ್ಲಿ ಭೊಲೋ ಬಿಸಿಲು ಬರ್‍ತದೇ ಬಣಗಿಸಿ ತಾ' (ಪು.೬೦) ಎಂದು ಹೇಳುವ ಗೋಪಜ್ಜಿ ಸಂಕಷ್ಟಗಳು ಎದುರಾದಾಗ ಸುಳ್ಳಿನ ಕಥೆ ಕಟ್ಟಿ ತಪ್ಪಿಸಿಕೊಡುವ ಮಾನವನ ಸಹಜ ನಡವಳಿಕೆಯನ್ನು ಕಾಣಬಹುದಾಗಿದೆ. ತಾರಕ್ಕ ದುಡ್ಡಿನ ಬಗ್ಗೆ ತಾತ್ಸರ್ಯವನ್ನು ಕಾಣುತ್ತಾ ಅಪಮಾನ ಮಾಡಿದ್ದನ್ನು ಸಹಿಸದೆ ಬಾವಿಗೆ ಎಸೆದ ಸುಧೀರನ ಬಗ್ಗೆ ಮತ್ತಷ್ಟು ಕೋಪ ಹಿಮ್ಮಡಿಯಾಯಿತು. ಇಲ್ಲಿ ಮನುಷ್ಯನ ಸಹಜವಾದ ಸಿಟ್ಟು ಅವಿವೇಕಿಯನ್ನಾಗಿ ಮಾಡಿಸುತ್ತದೆ. ಅಲ್ಲದೆ ಇದೇ ನೆಂದ ನೋಟುಗಳನ್ನು ಆಯ್ದುಕೊಳ್ಳುವ ಚಂದಣ್ಣ ನಂತಹ ವ್ಯಕ್ತಿಗಳ ಮುಖಾಂತರ ಹಣದ ಬಗ್ಗೆ ವ್ಯಾಮೋಹವನ್ನು ಆ ಮೂಲಕ ಗುಣಸ್ವಭಾವಗಳನ್ನು ಈ ಕಥೆಯಲ್ಲಿ ಕಾಣಬಹುದಾಗಿದೆ. ಇನ್ನುಳಿದ ಕಥೆಗಳಾದ 'ಅಪ್ಪಿ', 'ಚಿನ್ನಿದಾಂಡ', 'ನನ್ನ ಪೊರವ ತೊಟ್ಟಿಲು', 'ಮಳಹೊಯ್ದು ನಿಂತ ಕ್ಷಣ ಕಥೆಗಳಲ್ಲಿ ಕುಟುಂಬ ದಾಚೆಯ ವಸ್ತುವನ್ನು ಕಥೆಯಾಗಿಸಿದ್ದಾರೆ. 'ಅಪ್ಪಿ' ಕಥೆಯಲ್ಲಿ ಹೆತ್ತವರ ಒತ್ತಾಸೆಗೆ ಮನೆಯ ಪರಿಸರ, ಪ್ರೀತಿಯಿಂದ ವಂಚಿತಳಾಗಿ ವಿದ್ಯಾಭ್ಯಾಸಕ್ಕೆ ಹೊರಟ ಮುಗ್ಧ ಮಗುವಿನ ಮಾನಸಿಕ ಅಸ್ವಸ್ಥತೆಯನ್ನು ಕಾಣಬಹುದು. ಏಡ್ಸ್ ನಂತಹ ಮಾರಕ ರೋಗದಿಂದ ಬಳಲುವ ವ್ಯಕ್ತಿಯ ಸುತ್ತ ಸಂಬಂಧಗಳ ನಡುವೆ ಹುಟ್ಟುವ ಆಸೊಯೆ, ಪ್ರೀತಿ ಆಮೂಲಕ ಸಾವಿನಚೆಗೂ ಮುಗಿಯದ ವ್ಯಕ್ತಿಯ ಆಸೆಗಳನ್ನು ತಂಕಿ ಕಥೆಯಲ್ಲಿ ಕಾಣಬಹುದಾಗಿದೆ. 'ಚಿನ್ನಿದಾಂಡು' ಕಥೆಯಲ್ಲಿ ಕುಟುಂಬದಲ್ಲಿ ತಂದೆ, ಮಗನ, ಗಂಡನ, ಜವಾಬ್ದಾರಿ, ಹೆಣ್ಣು ಗಂಡಿನ ಲೈಂಗಿಕ ಆಕರ್ಷಣೆ ಆಮೂಲಕ ಕುಟುಂಬದೊಳಗಿನ ಕ್ರೌರ್ಯವನ್ನು ಕಾಣಬಹುದಾಗಿದೆ. 'ನನ್ನ ಪೊರೆವ ತೊಟ್ಟಿಲು' ಹೆತ್ತ ತಾಯಿಯನ್ನು ಕಳೆದುಕೊಂಡ ಹೆಣ್ಣಿನ ಸಂಕಟ, ವೇಶ್ಯಾ ಸಮಸ್ಯೆಯನ್ನು ವಸ್ತುವಾಗಿರಿಸಿದ್ದಾರೆ. 'ನಿನ್ನದೊಂದು ನೋಟಬೇಕು' ಕಥೆಯಲ್ಲಿ ಕಂಡು ಬರುವ ತಂದೆ ತಾಯಿಯರ ವಿಚ್ಛೇದನ ಸಮಸ್ಯೆಯಿಂದ ಅನಾಥವಾಗುವ ಮಕ್ಕಳು ಹೆತ್ತ ತಾಯಿ ಪ್ರೀತಿಯನ್ನು ಕಳೆದುಕೊಂಡು ಹುಡುಕುವ ಹಂಬಲದಲ್ಲಿ ಮಲತಾಯಿಯ ನಿಜವಾದ ಪ್ರೀತಿಯನ್ನು ಕಂಡು ಕೊಂಡು ಒಂದು ಬಗೆಯ ಬಾವುಕತೆ ಕಥೆಯಲ್ಲಿದೆ.

ಒಟ್ಟಾರೆ ಸುನಂದಾ ಅವರು ಈ ಕಥಾಸಂಕಲನದಲ್ಲಿ ಸಾಂಸಾರಿಕ ಜೀವನದಲ್ಲಿ ನಡೆಯುವ ಘಟನೆಗಳನ್ನು ಸೂಕ್ಷ್ಮವಾಗಿ ಗ್ರಹಿಸಿ ಕಥೆಯನ್ನು ಹೆಣೆದಿದ್ದಾರೆ. ಅತ್ತೆ ಸೊಸೆಯ ಸಂಬಂಧ, ಮನಸ್ತಾಪ, ದಾಂಪತ್ಯದ ವಿರಸ, ತಂದೆ ತಾಯಿಯ ವಿಚ್ಛೇದನ ಕೆಟ್ಟ ಪರಿಣಾಮ ಅನುಭವಿಸುವ ಮಕ್ಕಳು, ಹೆಣ್ಣಿನ ಹದಿಹರೆಯವ ಸಿಹಿ ಕಹಿ ಅನುಭವಗಳು ಕಥೆಯ ವಸ್ತುವಾಗಿವೆ ಈ ಎಲ್ಲಾ ಕಥೆಗಳಲ್ಲಿ ಕೆಳ ಮಧ್ಯಮ

ವರ್ಗದ ಬದುಕಿನ ಚಿತ್ರಣವಿದೆ. ಇಲ್ಲಿ ಜರಿಯಂಚಿನ ಪ್ರಾಕು, ನನ್ನ ಪೂರೆವ ತೊಟ್ಟಿಲು ಕಥೆಯು ಪ್ರಗತಿ ಶೀಲ ಕಥೆಯನ್ನು ಕಾಣಿಸಿದರೆ, ಚಿನ್ನಿದಾಂಡ, ಚೌಕ ಮತ್ತು ಗೋಲ ನವ್ಯ ಕಥೆಯ ಮಾದರಿಯಲ್ಲಿ ಸಂಕೇತ, ಪ್ರತಿಮೆಗಳನ್ನು ಬಳಸಿದ್ದಾರೆ. ಈ ಎಲ್ಲಾ ಕಥೆಗಳಲ್ಲಿ ಕೆಳವರ್ಗದ ಜೀವನೋತ್ಸಾಹವನ್ನು ಕಾಣಬಹುದಾಗಿದೆ. ಅಲ್ಲದೆ ಸುನಂದಾ ಅವರು ಪಾತ್ರಗಳಲ್ಲಿನ ನಡವಳಿಕೆಯನ್ನು ತನ್ಮಯತೆಯನ್ನು ಹೊಂದಿ ಆ ಮೂಲಕ ವ್ಯಕ್ತಿಗಳ ನಡುವಳಿಕೆ ಗುಣ ಸ್ವಭಾವಗಳ ಅಂತರಂಗವನ್ನು ಕಥೆಗಳಲ್ಲಿ ಬಿಚ್ಚಿಡುವ ಕಥೆಗಾರ್ತಿಯ ಕಥನ ಕೌಶಲ್ಯಕ್ಕೆ ಸಾಕ್ಷಿಯಾಗಿದೆ. ಇಲ್ಲಿ ಎಲ್ಲಾ ಕಥೆಗಳಲ್ಲಿ ಪುರುಷ ದ್ವೇಷವಿಲ್ಲದೆ ಹೆಣ್ಣಿನ ಸಮಸ್ಯೆ, ಸಂಕಷ್ಟಗಳನ್ನು ಚಿತ್ರಿಸಿದ್ದಾರೆ. ಅಲ್ಲದೆ ಈ ಎಲ್ಲಾ ಕಥೆಗಳಲ್ಲಿ ಪ್ರೀತಿಯ ಯಾವುದೇ ರಾಗದ್ವೇಷವಿಲ್ಲದೆ ಬಾವುಕತೆಯನ್ನು ಹೊಂದಿದ ಪಾತ್ರಗಳ ಚಿತ್ರಣವಿದೆ. ಅಲ್ಲದೆ ವ್ಯಕ್ತಿಗಳಲ್ಲಿ ಮಾನವೀಯ ಸಂಬಂಧಗಳು, ಮಾನವೀಯ ಮೌಲ್ಯಗಳನ್ನು, ವ್ಯಕ್ತಿಗಳಲ್ಲಿ ಜೀವನೋತ್ಸಹವನ್ನು ಮೂಡಿಸುವಂತೆ ಕಸೂತಿ ಹಾಕಿದಂತೆ ಕಥೆಯನ್ನು ಹೆಣೆಯುವುದಲ್ಲಿ ಸುನಂದ ಅವರ ಪಾತ್ರಗಳಲ್ಲಿನ ತನ್ಮಯತೆಯನ್ನು ಸೂಕ್ಷ್ಮ ಗ್ರಹಿಕೆಯನ್ನು ಕಾಣಬಹುದಾಗಿದೆ.

ಎಂ.ಎಸ್.ವೇದಾ ಕಥೆಗಳು

ಕನ್ನಡ ಕಥಾ ಸಾಹಿತ್ಯಕ್ಕೆ ವಿಶಿಷ್ಟ ಕೊಡುಗೆ ನೀಡಿದವರಲ್ಲಿ ಡಾ.ಎಂ.ಎಸ್.ವೇದಾ ಪ್ರಮುಖರಾಗಿದ್ದಾರೆ. ಇವರು 'ಪ್ರೀತಿ ಮತ್ತು ನೋವು', 'ಪಾಲು' ಎಂಬ ಕಥಾ ಸಂಕಲನಗಳನ್ನು ರಚಿಸಿದ್ದಾರೆ. ಈ ಎಲ್ಲಾ ಕಥೆಗಳಲ್ಲಿ ಮೈಸೂರು ಗ್ರಾಮೀಣ ನಗರ ಪರಿಸರದ ಪ್ರಭಾವವಿದೆ. ಸಮಕಾಲೀನ ಸಮಾಜದಲ್ಲಿ ಕಂಡು ಬರುವಂತಹ ಪ್ರೀತಿ ಪ್ರೇಮ, ಮೋಸ ವಂಚನೆ, ಸುಳ್ಳು ಸತ್ಯ, ಅನ್ಯಾಯ ಅನೀತಿ ಧರ್ಮ ನಿಯಮಗಳು ನಂಬಿಕೆಗಳು, ಸಂಪ್ರದಾಯಗಳು, ಆಚರಣೆಗಳು, ಇತ್ಯಾದಿ ಅಂಶಗಳು ಕಥೆಯ ವಸ್ತುಗಳಾಗಿವೆ. ಭಾರತೀಯ ಸಮಾಜದಲ್ಲಿ ಪುರುಷ ಪ್ರಧಾನ ಸಮಾಜ ಹೆಣ್ಣಿನ ಮೇಲೆ ನಡೆಸುವ ಶೋಷಣೆಯನ್ನು ಹಾಗೂ ಅದಕ್ಕೆ ಪರಿಹಾರವೆಂಬಂತೆ ಆ ಹೆಣ್ಣು ಪ್ರತಿಭಟಿಸುವ ಮನೋಭಾವವನ್ನು ಈ ಕಥೆಗಳಲ್ಲಿ ಹೆಣ್ಣಿನ ದಿಟ್ಟತನವನ್ನು ಕಾಣಬಹುದು. ಸಾಮಾನ್ಯವಾಗಿ ಹೆಣ್ಣು ಗಂಡುಗಳಲ್ಲಿ ಸಹಜವಾಗಿ ಹುಟ್ಟುವ ಪ್ರೀತಿ ಪ್ರೇಮ, ಕಾಮಗಳು ಕೆಲವು ಸಂದರ್ಭದಲ್ಲಿ ಉಂಟುಮಾಡುವ ಅಡೆತಡೆಗಳನ್ನು, ಸಂಘರ್ಷಗಳನ್ನು ಹಾಗೂ ಈ ಪ್ರೀತಿ, ಪ್ರೇಮದಿಂದ ವ್ಯಕ್ತಿಗಳ ಬದುಕಿನ ದುರಂತವನ್ನು ಪ್ರೀತಿ ಮತ್ತು ನೋವು ಕಥಾ ಸಂಕಲದಲ್ಲಿ ಕಾಣಬಹುದಾಗಿದೆ. ಈ ಹಿನ್ನೆಲೆಯಲ್ಲಿ ಕಥೆಗಾರ್ತಿಯ ಕಥೆಗಳನ್ನು ವಸ್ತು ದೋರಣೆಯ ದೃಷ್ಟಿಯಿಂದ ಈ ಅಧ್ಯಯನದಲ್ಲಿ ಗುರುತಿಸಲಾಗಿದೆ.

ಈ ಕಥಾಸಂಕಲನದ 'ಮಳೆಯ ಒಂದು ರಾತ್ರಿಯಲ್ಲಿ' ಕಥೆಯು ಹೆಣ್ಣು ಗಂಡನಿಂದ ಅನುಭವಿಸುವ ಶೋಷಣೆಯನ್ನು ಕುರಿತು ಹೇಳುವ ಸಂಕೀರ್ಣ ಕಥೆಯಾಗಿದೆ. ಮಳೆಯ ಆರ್ಭಟದೊಂದಿಗೆ ನಿರೂಪಕಿಯ ಅಸಹಾಯತೆಯನ್ನು ಚಿತ್ರಿಸುವ ರೀತಿಯಲ್ಲಿ ಕಥೆ ನಿರೂಪಣೆಗೊಳ್ಳುತ್ತದೆ. ಈ ಕಥೆಯ ನಾಯಕಿ ಚಿತ್ರಾ ನಿರಂತರ ಗರ್ಭಪಾತದಿಂದ ಕಾಲು ಊನಿಂದ ಬಳಲುತ್ತಾ, ಗಂಡನಿಂದ ಕುಂಟಿ ಎಂಬ ಹಣೆಪಟ್ಟಿ

ಹೊತ್ತುಕೊಂಡು ಮಾನಸಿಕ ಹಾಗೂ ದೈಹಿಕ ಚಿತ್ರಹಿಂಸೆಯಿಂದ ಬಳಲಿ ಅಸಹಾಯಕಳಾಗಿದ್ದಾಳೆ. ಅತ್ತೆ ಗಂಡನಿಂದ ಪ್ರಾಣಭೀತಿಯನ್ನು ಎದುರಿಸುತ್ತಿದ್ದಾಳೆ ಅಲ್ಲದೆ ವರದಕ್ಷಿಣೆ ಫಲದಿಂದ ಮತ್ತೊಬ್ಬ ಹೆಣ್ಣಿನ ಬಾಳನ್ನು ನರಕಗೊಳಿಸುವ ಗಂಡನ ನೀಚತನ, ಆದರೆ ನಾಯಕಿಗೆ ಗಂಡನ ಈ ನಿರ್ಧಾರ ಯಾವುದೇ ದುಃಖವನ್ನು ನೀಡಿಲ್ಲ ತನ್ನ ಬದುಕಿಗೆ ಗಂಡಾಂತರವಾಗಿ ಕಾಡುತ್ತಿರುವ ಗಂಡನಿಂದ ಮುಕ್ತಿಯನ್ನು ಬಯಸುತ್ತಿದ್ದಾಳೆ. ತನ್ನ ಅಸಹಾಯಕ ಸ್ಥಿತಿಯಲ್ಲೂ ತೆವಳುತ್ತಾ ಬದುಕಿನ ದಾರಿಯನ್ನು ಕಂಡುಕೊಳ್ಳಲು ಹೊರಟ ಹೆಣ್ಣಿನ ದಿಟ್ಟತನವನ್ನು ಕಾಣಬಹುದಾಗಿದೆ. ಇಲ್ಲಿ ವರದಕ್ಷಿಣೆ ಸಮಸ್ಯೆ ಮುಖ್ಯವಾಗಿ ಕಂಡು ಬಂದರೂ ಅದನ್ನು ಮರೆಮಾಚಿ ನೋವು ಬದುಕಿನ ಚಿತ್ರಣವನ್ನು ಕಟ್ಟಿಕೊಟ್ಟಿದ್ದಾರೆ ಎಂದೆನಿಸುತ್ತದೆ.

'ಕುರುಕ್ಷೇತ್ರವೊ ಕುಂಯ್ಯನೆಂಬ ಬಾಲನ ಕತ್ತು ಲೋಕವೊ' ಕಥೆಯಲ್ಲಿ ಎರಡು ಸಮುದಾಯ ನಡುವೆ ಕ್ರೌರ್ಯವನ್ನು ಹೇಳುವ ಸಂಕೀರ್ಣ ಕಥೆಯಾಗಿದೆ. ಈ ಕಥೆಯ ನಾಯಕ ಕುಂಯ್ಯ ದಲಿತನಾಗಿದ್ದು ಕೆಳಸ್ತರದ ಬದುಕನ್ನು ಹೊಂದಿದ್ದನು. ತನ್ನ ಬಹುದಿನ ಕನಸಾದ ಕುರುಕ್ಷೇತ್ರ ನಾಟಕದಲ್ಲಿ ಅಭಿಮನ್ಯು ಪಾತ್ರವನ್ನು ತನ್ನದಾಗಿಸಿಕೊಂಡಿದ್ದನು ಆದರೆ ಇದು ಮೇಲ್‌ಜಾತಿಯವರ ಸಂಘರ್ಷಕ್ಕೆ ಎಡೆಮಾಡಿಕೊಟ್ಟಿತು. ಇದಕ್ಕೆ ಸದಾವಕಾಶವೆಂಬಂತೆ ಕುಂಯ್ಯ ಲಿಂಗಾಯಿತರ ಹುಡುಗಿ ಮಾದೇವಿಯ ಮೇಲೆ "ನಲ್ಲನೇತಕೆ ಮೆಲ್ಲನೆ ಬಾಳಿ ಬಾರೆss" (ಪು.೧೨೩) ಎಂದು ಹಾಡನ್ನು ಹೇಳಿದ್ದು ದೊಡ್ಡ ಅಪರಾಧವಾಗಿ ಕಂಡು ಬಂದು ಪಂಚಾಯ್ತಿಯಲ್ಲಿ ಇದು ಅರಿಯದ ಮಕ್ಕಳು ಆಡಿದ ಸಾಮಾನ್ಯ ಜಗಳ ಕುಂಯ್ಯನ ಕೈಯಲ್ಲಿ ಕ್ಷಮಾಪಣೆ ಕೇಳಿಸಿಬಿಡಿ ಎಂಬ ಕುಂಯ್ಯನ ಪರವಾಗಿ ವಕಾಲತ್ತು ನಡೆಸಿದ ವಿದ್ಯಾವಂತನಾದ ಮಾನಣ್ಣ ಮಾತುಗಳು ಮಾನವೀಯತೆಯನ್ನು ಕಾಣಬಹುದು. ಹೀಗೆ ಇತ್ಯರ್ಥಗೊಂಡರು. ಇಷ್ಟಕ್ಕೆ ಸುಮ್ಮನಿರದ ಮೇಲ್‌ವರ್ಗದವರು ಆಗ ತಾನೆ ಋತುಮತಿಯಾದ ಮಾಧವಿಯ ಮೇಲೆ ಅತ್ಯಾಚಾರ ಮಾಡಿ ಆ ಆಪಾದನೆಯನ್ನು ಕುಂಯ್ಯ ಮೇಲೆ ಹೊರೆಸಿ ಕೊಲೆ ಮಾಡುವುದರ ಮೂಲಕ ಜಾತೀಯತೆಯಲ್ಲಿ ವ್ಯಕ್ತಿಗಳ ಅಮಾನುಷವಾದ ಕ್ರೌರ್ಯ ಅನಾವರಣಗೊಳ್ಳುತ್ತದೆ.

'ಅನುಕ್ತ' ಕಥೆಯ ನಾಯಕಿ ಗಂಡನ ಅನೈತಿಕ ಸಂಬಂಧ ತಿಳಿದು ತನ್ನ ಗಂಡನಿಂದ ಬಿಡುಗಡೆಗೊಂಡು ತನಗಿಷ್ಟವಾದ ಗಂಡನ್ನು ಆಯ್ದುಕೊಳ್ಳುವುದರ ಮೂಲಕ ಸಮಾಜದ ಕಟ್ಟುಪಾಡುಗಳನ್ನು ಮೀರಿ ಸ್ವತಂತ್ರವಾಗಿ ಬದುಕುವ ಗಟ್ಟಿಗಿತ್ತಿಯಾಗಿ ಕಂಡು ಬಂದರೆ, 'ಉರಿದವರ' ಕಥೆಯಲ್ಲಿ ಬರುವ ಅನುರಾಧ ಕಾಮುಕ ವ್ಯಕ್ತಿಗಳಿಗೆ ಬಲಿಪಶುವಾಗಿ ಮಾನಸಿಕವಾಗಿ ಹಿಂಸೆಗೊಳ್ಳುವುದರ ಮೂಲಕ ದುರಂತ ನಾಯಕಿಯಾಗಿ ಕಂಡುಬರುತ್ತಾರೆ. 'ಒಂಟಿ ಮೋಡಗಳು' ಕಥೆಯಲ್ಲಿ ಬರುವ ನಾಯಕಿ ಮೂರು ಮಕ್ಕಳ ತಾಯಿಯಾದ ನಂತರ ತನ್ನ ಗಂಡನಿಂದ ದೂರವಾಗಿ ಹಲವು ವರ್ಷಗಳ ನಂತರ ಪಶ್ಚಾತಾಪಗೊಂಡು ತನ್ನ ಕುಟುಂಬಕ್ಕೆ ಹಿಂದುರಿಗಿದ್ದು ವ್ಯಕ್ತಿಯಲ್ಲಿ ಕಾಮ, ಪ್ರೇಮ ಎಂತಹ ಅನಾಹುತಕ್ಕೆ ಕಾರಣವಾಗಿ ಜೀವವನ್ನು ದುರಂತವಾಗಿಸುತ್ತದೆ ಎಂಬುದನ್ನು ಕಾಣಬಹುದು. ಇಲ್ಲಿ ಗಂಡ ಹೆಂಡತಿ, ತಾಯಿ-ಮಕ್ಕಳ, ತಂದೆ-ಮಕ್ಕಳ ಸಂಬಂಧಗಳ ಸೂಕ್ಷ್ಮತೆಯನ್ನು ಕಾಣಬಹುದಾಗಿದೆ.

'ಸಾಂತವ್ವನೆಂಬ ಅವ್ವನೊ ರುದ್ರೇಶಿಯೆಂಬ ಕಂದನು' ಕಥೆಯಲ್ಲಿ ಸಾಂತವ್ವ ದುಡಿಯುವ ಶ್ರಮಜೀವಿ ಹೆಣ್ಣಾಗಿದ್ದಳು. ಈ ಬೆಳವಣಿಗೆಯನ್ನು ಸಹಿಸಲಾರದ ಪುರುಷ ಪ್ರಧಾನ ವ್ಯವಸ್ಥೆ ಮಾನಸಿಕವಾಗಿ, ದೈಹಿಕವಾಗಿ ಅಪಮಾನಗೊಳಿಸಿದಾಗ ತನ್ನ ವಿದ್ಯಾವಂತ ಮಗನಿಂದ ಗೌಡನ ಮೇಲೆ ಸೇಡು ತೀರಿಸಿಕೊಳ್ಳುವುದರ ಮೂಲಕ ಅನ್ಯಾಯ, ಅಕ್ರಮವನ್ನು ಪ್ರತಿಭಟಿಸುವುದನ್ನು ಕಾಣಬಹುದಾಗಿದೆ.

ಒಟ್ಟಾರೆ ಈ ಕಥಾ ಸಂಕಲನದಲ್ಲಿ ವ್ಯಕ್ತಿಯ ಜೀವನದ ವಿವಿಧ ಮುಖಗಳನ್ನು ಗ್ರಾಮೀಣ ಮತ್ತು ನಗರ ಪರಿಸರದಲ್ಲಿನ ಜನ ಜೀವನ, ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಹೆಣ್ಣು ಅನುಭವಿಸುವ ಅಪಮಾನ, ನೋವು, ಅಸಹಾಯತೆಯನ್ನು ಚಿತ್ರಿಸುವುದು ಮೂಲಕ ನೊಂದ ಜೀವಿಗಳಿಗೆ ಬದುಕುವ ಆಶಾಕಿರಣವನ್ನು ಕಥೆಗಾರ್ತಿ ಮೂಡಿಸಿದ್ದಾರೆ. ಅಲ್ಲದೆ ಪ್ರತಿಯೊಬ್ಬ ಹೆಣ್ಣು ಗಂಡುಗಳಲ್ಲಿನ ಸಹಜವಾದ ಕಾಮ, ಪ್ರೇಮ ಬದುಕನ್ನು ದುರಂತಗೊಳಿಸುತ್ತದೆ ಆ ಮೂಲಕ ವ್ಯಕ್ತಿಗಳ ಅಂತರಾಳದ ತಲ್ಲಣಗಳನ್ನು ಅನಾವರಣಗೊಳಿಸಲಾಗಿದೆ ಎಂದು ಅಭಿಪ್ರಾಯಪಡುತ್ತೇನೆ.

ವೇದಾ ಅವರು ಎರಡನೇ ಕಥಾ ಸಂಕಲನವಾದ 'ಪಾಲು' ಕಥೆಯಲ್ಲಿ ಒಟ್ಟು ೧೦ ಕಥೆಗಳಿದ್ದು, ಮೊದಲನೇ ಸಂಕಲನದ ವಸ್ತು ಧೋರಣೆಯನ್ನು ಈ ಎಲ್ಲಾ ಕಥೆಗಳಲ್ಲಿ ಕಾಣಬಹುದಾಗಿದೆ. ಈ ಎಲ್ಲಾ ಕಥೆಗಳು ಗ್ರಾಮೀಣ ಹಾಗೂ ನಗರ ಸಂಸ್ಕೃತಿಯನ್ನು ಒಳಗೊಂಡಿದ್ದು ಇಲ್ಲಿನ ಬಹುಪಾಲು ಕಥೆಗಳು ಗ್ರಾಮೀಣ ಬದುಕನ್ನು ಕುರಿತು ಹೇಳುತ್ತವೆ. ಈ ಕಥಾ ಸಂಕಲನದ ಮೊದಲನೇ ಕಥೆಯಾದ 'ಪಾಲು' ಕಥೆಯಲ್ಲಿ ರಕ್ತ ಸಂಬಂಧಗಳ ಸಂಕೀರ್ಣ ಚಿತ್ರಣವಿದೆ. ಈ ಕಥೆಯ ನಾಯಕಿ ತಾಯವ್ವ ದುಡಿಯುವ ದಿಟ್ಟ ಮಹಿಳೆಯಾಗಿದ್ದಾಳೆ. ಹದಿಹರೆಯದ ವಯಸ್ಸಿನಲ್ಲಿ ವಿಧವೆಯಾಗಿ, ಬದುಕುವ ಛಲ ಬಿಡದೆ ಮಕ್ಕಳನ್ನು ಸಾಕಿ ಸಲುಹಿದಳು ಆದರೆ ಈ ಮಕ್ಕಳೆ ತನ್ನನ್ನು ತಿರಸ್ಕರಿಸುತ್ತಾರೆ ಎಂದು ಅವಳು ಬಾವಿಸಿರಲಿಲ್ಲ. ತನ್ನ ಮಕ್ಕಳಿಗೆ ಮದುವೆ ಮಾಡಿ ಸೊಸೆಯರನ್ನು ಮನೆ ತುಂಬಿಸಿಕೊಂಡಿದ್ದ ಗಳಿಗೆಯಲ್ಲಿ ತಾಯವ್ವ ಎಲ್ಲಾರಿಂದಲೂ ಅವಮಾನ, ಹಿಂಸೆ ಅನುಭವಿಸಬೇಕಾಯಿತು. ಅಲ್ಲದೆ ತಾನು ಕಷ್ಟ ಪಟ್ಟು ದುಡಿದು ಬೆಳೆಸಿದ ಹಟ್ಟಿಯು ಪಾಲಾಗುವುದನ್ನು ಅವಳು ಸಹಿಸದಾದಳು. ವಯಸ್ಸಿನ ಅಂತರದಿಂದ ಅತ್ತೆ ಸೊಸೆಯರ ಜಗಳದಲ್ಲಿ ತಾಯವ್ವನಿಗೆ ಸೋಲಾಗುವುದೇ ಸಹಜವೆಂಬಂತೆ.

ಸಂಕಲನದ ಮೊದಲನೇ ಕಥೆಯಾದ 'ಪಾಲು' ಕಥೆಯಲ್ಲಿ ರಕ್ತ ಸಂಬಂಧಗಳ ನಡುವಿನ ಸಂಬಂಧಗಳ ಸಂಕೀರ್ಣ ಚಿತ್ರಣವಿದೆ. ಈ ಕಥೆಯ ನಾಯಕಿ ತಾಯವ್ವ ದುಡಿಯುವ ಶ್ರಮಜೀವಿಯಾಗಿದ್ದಾಳೆ. ಹದಿಹರೆಯದ ವಯಸ್ಸಿನಲ್ಲಿ ಗಂಡನನ್ನು ಕಳೆದು ಕೊಂಡರು ಬದುಕುವ ಛಲವನ್ನು ಬಿಡದೆ ಹನ್ನೆರಡು ಕಂಬಂದ ಹಟ್ಟಿಯನ್ನು ನಿರ್ಮಿಸಿದ್ದಾಳೆ ಆದರೆ ಮನೆಗೆ ಬಂದ ಸೊಸೆಯರ ಮಾತು ಕೇಳಿ ಮಕ್ಕಳು ತಾನು ಕಷ್ಟಪಟ್ಟು ಬೆಳೆಸಿದ ಹಟ್ಟಿಯನ್ನು ಪಾಲು ಕೇಳಲು ಮುಂದಾದಾಗ" ಅದನ್ನು ಸಹಿಸದಾಗುತ್ತಾಳೆ. ಈ ಪ್ರಸಂಗ ಪಂಚಾಯ್ತಿಯಲ್ಲಿ ಇತ್ಯರ್ಥವಾಗಿ ಹಿರಿಯಮಗ ಮೂರುಪಾಲು ಮಾಡಬೇಕೆಂದು ಮುಂದಾದಾಗ "ಅದ್ಯಾಕುಡಾ ಶಿವ್ಲಿಂಗ ನಿಮ್ ಮೂರ ಮಂದಿನೆಯಾ ಮಾದಿಪ್ಪಂಗೆ ವುಟ್ಟಿರಾದು

ಮಾದೇವಿಯನ್ನೂ ಪುಟ್ಟಿಸೋನೆ ಕ ಕೂಸೆ ನಾನೇ ಯೆತ್ತೀವ್ನಿ ಅವ್ನುನ್ನೂ ಸೇರಿಸ್‌ಕಂಡು ಪಾಲಾಗಬೇಕದೆ ಇಲ್ಲಿ" (ಪು.೧೫) ತಾಯವ್ವ ವಾದಿಸುವುದರ ಮೂಲಕ ಮಗಳಿಗೂ ಆಸ್ತಿಯಲ್ಲಿ ಗಂಡಸರಿಗೆ ಸಮಾನವಾಗುವಂತೆ ಪಾಲು ದೊರಕಿಸುವಲ್ಲಿ ಮುಂದಾಗುತ್ತಾಳೆ. ಇದೇ ಸಂದರ್ಭದಲ್ಲಿ ಹಿರಿಯ ಮಗ ವಬ್ ತಲೆಗೈಯಾತ ಗೌಡ್ರೆ ಅಷ್ಟು ಖರ್ಚು ವೆಚ್ಚಾನೂ ಅಂಟುಸ್ದರೆ ಅದು ನ್ಯಾಯವಾ ನೀವ್ ಹ್ಯಾಳಿ. ಅವ್ವಾ ನಾಕ್ನಾಕ ತಿಂಗ್ಳಾ ಒಬ್ಬೊಬ್ಬ ಹಟ್ಟಿ ತಾವಿರ್ಲಿ. ಇಲ್ಲಾಂದರೆ ಆದೆಷ್ಟಾದರೂ ಖರ್ಚು ಲೆಕ್ಕ ಹಾಕುವ, ಅದು ಹಂಚ್ಕಳ್ಳಾದು ಹ್ಯಾಳಿ" (ಪು.೧೮) ಎಂದಾಗ ತಾಯವ್ವ ಅಸಹಾಯಕಳಾದಳು ಮಕ್ಕಳಿಂದ ಈ ತಿರಸ್ಕೃತ ಭಾವನೆ ಅತೀವ ದುಂಖವುಂಟಾಯಿತು ಇದು ಇಂದಿನ ಸಮಾಜದಲ್ಲಿ ಮಕ್ಕಳು ಹೆತ್ತ ತಂದೆ ತಾಯಿಗಳನ್ನು ನಿರ್ಲಕ್ಷಿಸುವ, ಹಾಗೂ ಇಂತಹ ವಯಸ್ಸಿನಲ್ಲಿ ಅಸಹಾಯಕರಾಗಿ ಅಪಮಾನ ಹಿಂಸೆಗಳಿಗೆ ಗುರಿಯಾಗುವುದನ್ನು ಕಾಣಬಹುದಾಗಿ ಆದರೆ ತಾಯವ್ವ ಇದಕ್ಕೆ ಪ್ರತಿಯುತ್ತರವಾಗಿ "ನನ್ನ ಯಾರೂ ಸಾಕಬ್ಯಾಕಿಲ್ಲ ಕ ಈರಣ್ಣ, ದ್ಯಾವ್ರು ನಂಗಿನ್ನೂ ಸಕ್ತಿ ಕೊಟ್ಟೋನೆ, ನನ್ ಹಿಟ್ಟು ಸೊಪ್ಪನ್ನಾ ಪುಟ್ಟಿಸ್ಕಾಬಲ್ಲಿಲ್ಲೆ. ಕೆಟ್ಟ ಬಂದ ಕಾಲುಕ್ಕೆ ಅವ್ರಿಗೆ ನಾನೇ ಯಿಟ್ ಕಾಣಿಸೀನೂs. (ಪು.೧೯) ಎಂದು ತನ್ನ ಬದುಕನ್ನು ತಾನೇ ಕಂಡು ಕೊಳ್ಳುವ ದಿಟ್ಟ ಮಹಿಳೆಯಾಗಿ ಕಂಡು ಬರುತ್ತಾಳೆ

ಪುರಾಣದ ವಸ್ತುವನ್ನು ಕಥೆಯಾಗಿಸಿ ಆ ಮೂಲಕ ಹೆಣ್ಣಿನ ಮೇಲೆ ಪುರುಷರ ದೌರ್ಜನ್ಯವನ್ನು ಅನಾವರಣಗೊಳಿಸುವುದನ್ನು 'ಹೋಗಿ ಬರಲೆ ಭರತ' ಹಾಗೂ 'ಮರಳಿ ಬಾರದ ಶಕುಂತಲೆ' ಕಥೆಯಲ್ಲಿ ಕಾಣಬಹುದಾಗಿದೆ. ಈ ಕಥೆಯ ನಾಯಕಿ ಶಕುಂತಲೆ ದುಷ್ಯಂತನಿಂದ ಮೋಸಹೋಗಿದ್ದರು ತನ್ನಂತೆ ತನ್ನ ಮಗನಿಗೂ ಈ ದುಸ್ಥಿತಿ ಬರದಂತೆ ಎಚ್ಚರ ವಹಿಸಿ ಭರತನಿಗೆ ಉತ್ತರಾಧಿಕಾರಿಯಾಗಿ ಮಾಡಬೇಕೆಂಬ ನಿರ್ಧಾರದಿಂದ ದುಷ್ಯಂತನ ಅರಮನೆ ಪ್ರವೇಶಿಸುತ್ತಾಳೆ. ಆದರೆ ಅಲ್ಲಿ ಆಕೆ ಯಾರೆಂಬುದು ತನಗೆ ಗೊತ್ತಿಲ್ಲವೆಂದು ಅವಳ ಮಾತನ್ನು ತಿರಸ್ಕಾರದಿಂದ ತಳ್ಳಿಹಾಕುವ ದುಷ್ಯಂತನ ನಡತೆ ಅಮಾನವೀಯ ವಾದದ್ದು. ಆದರೆ ಅಶರೀರವಾಣಿ ನುಡಿಯಿಂದ ಅವಳನ್ನು ಸ್ವೀಕರಿಸುತ್ತಾನೆ, ಹೀಗೆ ತಾನು ಒಮ್ಮೆ ಕೂಡಿದ್ದ ಹೆಣ್ಣು ಎದುರಿನಲ್ಲಿ ನಿಂತು ಹೇಳಿದಾಗ ಅದನ್ನು ಲೇವಡಿ ಮಾಡುವ ದುಷ್ಯಂತನಿಗೆ ಅಶರೀರವಾಣಿಯೊಂದರ ಮಾತು ಪ್ರಮುಖವೆನಿಸುತ್ತದೆ. ಹೀಗೆ ಹೆಣ್ಣೊಬ್ಬಳ ಮಾತಿಗೆ ಸಮಾಜವು ಕೊಡುತ್ತಾ ಬಂದ ಮಾನ್ಯತೆಯನ್ನು ಇಲ್ಲಿ ಕಾಣೂಹುದಾಗಿದೆ ಆದರೆ ಶಕುಂತಲೆ ದುಷ್ಯಂತನ ಅರಮನೆಯಲ್ಲಿರಲು ಒಪ್ಪದೆ 'ಯಾವ ಕಾರಣಕ್ಕೂ ಅಪ್ರಮಾಣಿಕನೋರ್ವನ ಪಟ್ಟ ಮಹಿಷಿಯಾಗಿ ಇತಿಹಾಸದಲ್ಲಿ ಗುರುತಿಸಲು ಇಚ್ಛಿಸುವುದಿಲ್ಲ. ಭರತನಂತಹ ಮಗನ ತಾಯಿಯಾಗಿ ಗುರುತಿಸ್ಪಡಲು ಇಚ್ಛಿಸುತ್ತೇನೆ. (ಪು.೧೨೦) 'ಹೋಗಿ ಭರಲೆ ಭರತ' ಎನ್ನುವ ಮಾತಿನಲ್ಲಿ ಆಕೆಯ ದಿಟ್ಟತನ ಮಗನ ಮೇಲಿನ ಭರವಸೆ ವ್ಯಕ್ತವಾಗುತ್ತದೆ. ಹೆಣ್ಣನ್ನು ಮನ ಬಂದಂತೆ ಅನುಭವಿಸಿ ಬಿಸಾಡಬಹುದೆನ್ನುವ ಪ್ರಭುತ್ವದ ಲಘುಧೋರಣೆಗೆ ಶಂಕುತಲೆ ನಿಲುವು ನಿಷ್ಠುರತೆ ಸ್ವಾಭಿಮಾನದ ಸಂಕೇತವಾಗುತ್ತದೆ. ಇದರ ಮುಂದುವರೆದ ಕಥೆಯಂತಿರುವ 'ಮರಳಿ ಬಾರದ ಶಾಕುಂತಲೆ' ಕಥೆಯಲ್ಲಿ ಭರತನ ನೀಚತನ ತನ್ನನ್ನು

ಹೋಲುವ ಮಕ್ಕಳನ್ನು ಹೆತ್ತಿಲ್ಲವೆಂಬ ಕಾರಣದಿಂದ ಮೂವರು ಹೆಂಡತಿಯನ್ನು ಸಂಶಯಿಸುವ ಭರತನ ಮನೋಧರ್ಮಕ್ಕೆ ನೊಂದು ಮಡದಿಯರು ತಾವು ಹೆತ್ತ ಮಕ್ಕಳನ್ನೆ ಕೊಲೆಗೈದು ಸುದ್ದಿ ತಿಳಿದ ಶಾಕುಂತಲೆ ಇತಿಹಾಸದ ಪುನರಾರ್ವತನೆಯೇ ಬದುಕಾಗಲು ಬಿಡಬೇಡ ಹೊಸದಾಗಿ ಬಾಳು ತಾನು ಹೊಂದಿದ ಹೆಣ್ಣಲ್ಲಿ ಕೊನರಿದ ಕುಡಿಯನ್ನು ಇಲ್ಲಸಲ್ಲದ ಕಾರಣಗಳಿಗಾಗಿ ನನ್ನದಲ್ಲ, ನನ್ನಂತಿಲ್ಲ ಎಂದೂ ಹೇಳಿಬಿಡುವುದು ಖಂಡಿತಾ ಪೌರುಷದ ಲಕ್ಷಣ, ಸ್ತ್ರೀತ್ವದ ಅಪಮಾನ ಎರಡೂ ಅಲ್ಲ ಕೊಂಚ ಆಳವಾಗಿ ಆಲೋಚಿಸಿ ನೋಡು ಅದು ನಿನ್ನ ಷಂಡತನದ ಪ್ರತೀಕವಾಗಿ ಬಿಡುತ್ತದೆ...... ಬೇರೆ ಸ್ವರೂಪದ ನೋವಿನ ನೆಲೆಗಳಲ್ಲಿ ನೆರಳುವ ಮತ್ತೆ ಮೂವರು ಶಕುಂತಲೆಯರನ್ನು ಸೃಷ್ಟಿಸಿ ಹೋಗಬೇಡಾ (ಪು.೧೨೭) ಎಂಬ ಮಾತುಗಳು ಪುರುಷರು ಹೆಣ್ಣಿನ ಮೇಲಿನ ಸಂಶಯ ಪ್ರವೃತ್ತಿ ಸ್ವಾರ್ಥತನ ವ್ಯಕ್ತವಾಗುತ್ತದೆ. ಮಗನ ಅಮಾನವೀಯ ನಡತೆಯಿಂದ ನೊಂದು ರಾಜಮಾತೆಯಾಗುವ ಆಸೆಯನ್ನು ಬಿಟ್ಟು ಅರಮನೆಯೊಂದಿಗೆ ಸಂಬಂಧವನ್ನೇ ಮುಂದುವರೆಸಬಾರದೆಂಬ ದೃಢ ನಿರ್ಧಾರ ಮಹಿಳೆ ಸ್ವತಂತ್ರವಾಗಿ ಬದುಕಬೇಕೆನ್ನುವ ಮನೋಧರ್ಮಕ್ಕೆ ಪ್ರತೀಕವಾಗಿದೆ. ಹೀಗೆ ಈ ಎರಡು ಕಥೆಗಳಲ್ಲಿ ಹೆಣ್ಣು ಪುರುಷನಿಂದ ಅನುಭವಿಸುವ ಮೋಸವಂಚನೆ ಮತ್ತು ಅಸಹಾಯಕತೆಯನ್ನು, ಪರಂಪರೆ ಉದ್ದಕ್ಕೂ ಪುರುಷ ಪ್ರಧಾನ ವ್ಯವಸ್ಥೆ ಹೆಣ್ಣನ್ನು ಶೋಷಣೆ ಮಾಡಿರುವುದನ್ನು ಈ ಕಥೆಯಲ್ಲಿ ಕಾಣಬಹುದಾಗಿದೆ. ಹೀಗೆ ಈ ವ್ಯಭಿಚಾರಕ್ಕೆ ಪುರುಷ ಸಮಾಜ ಕಾರಣವಾದರೂ ಅದನ್ನು ಸ್ವೀಕರಿಸದೆಯಿರುವ ಪುರುಷರ ಸ್ವಾರ್ಥ ವಂಚನೆಯನ್ನು ಕಾಣಬಹುದಾಗಿದೆ.

ಒಟ್ಟಾರೆ ಎಂ.ಎಸ್ ವೇದಾ ಅವರು ತಮ್ಮ ಈ ಎರಡು ಕಥಾ ಸಂಕಲನದಲ್ಲಿ ಗ್ರಾಮೀಣ ಹಾಗೂ ನಗರ ಜನಜೀವನವನ್ನು ಕಾಣಬಹುದಾಗಿದೆ ಈ ಎಲ್ಲಾ ಕಥೆಗಳಲ್ಲಿ ಮೈಸೂರು ಗ್ರಾಮೀಣ ಭಾಷೆಯನ್ನು ಕಾಣಬಹುದಾಗಿದೆ ಇಲ್ಲಿ ಕಥೆಗಾರ್ತಿ ನಗರದ ಮಧ್ಯಮ ವರ್ಗದ ವಿದ್ಯಾವಂತ ತರುಣ-ತರುಣಿಯರ ನಡುವಿನ ಪ್ರೀತಿ, ಪ್ರೇಮ, ದ್ವೇಷ, ನೋವು ಕಥೆಗಳಲ್ಲಿ ವಿವಿಧ ಪಾತ್ರಗಳ ಮೂಲಕ ಕಾಣಿಸಿದ್ದಾರೆ. ಕಥೆಗಾರ್ತಿಗೆ ನಗರ ಪ್ರದೇಶಕ್ಕಿಂತ ಗ್ರಾಮೀಣ ಹಿನ್ನಲೆಯಲ್ಲಿ ರಚಿಸಿದ ಕಥೆಗಳು ಹೆಚ್ಚು ಪರಿಣಾಮಕಾರಿಯಾಗಿವೆ. ಇಲ್ಲಿ ಹಳ್ಳಿ ಗಾಡಿನ ಅಶಿಕ್ಷಿತ ಸಮಾಜದಲ್ಲಿ ಬದುಕುತ್ತಿರುವ ಹೆಣ್ಣಿನ ಮೇಲೆ ನಡೆಯುವ ಅತ್ಯಾಚಾರ, ಮೋಸ, ವ್ಯಭಿಚಾರ ಕಥೆಯ ವಾಸ್ತುವಾಗಿದೆ. ಆದರೆ ಕಥೆಗಾರ್ತಿಯ ಭಾಷೆ ಓದಿಗೆ ಸಲೀಸಾಗಿಲ್ಲ ಎಂದು ಅಭಿಪ್ರಾಯಪಡುತ್ತೇನೆ. ಗ್ರಾಮೀಣ ಹಿನ್ನಲೆಯಲ್ಲಿ ರಚಿತವಾದ ಕಥೆಗಳಲ್ಲಿ ಸಹಜವಾಗಿ ಕೆಳವರ್ಗದ ಬಡತನ ಜಾತಿ ಮತ್ತು ಸಂಪ್ರದಾಯದ ನಡುವಿನ ಸಂಬಂಧಗಳು, ಸಮಸ್ಯೆಗಳನ್ನು ಇಲ್ಲಿಯ ಕಥೆಗಳು ಶೋಧಿಸಿ ಅಂತ್ಯದಲ್ಲಿ ವ್ಯಕ್ತಿಯ ಅಂತರಾಳದಲ್ಲಿರುವ ಮಾನವೀಯ ಅನುಕಂಪಗಳನ್ನು ಎತ್ತಿ ಹಿಡಿಯುತ್ತವೆ. ಹೀಗೆ ಇಲ್ಲಿನ ಪಾತ್ರಗಳು ಮಾನವೀಯತೆಯಿಂದ ತುಡಿಯುತ್ತವೆ. ಅಲ್ಲದೆ 'ಹೆಣ್ಣು ಅಬಲೆಯಲ್ಲ ಸಬಲೆ' ಎಂಬುದನ್ನು ತಾಯವ್ವ, ಸಾಂತವ್ವ, ಚಿತ್ರಾ, ಮಂಜುಳಾ ಪಾತ್ರದ ಮೂಲಕ ಅನಾವರಣಗೊಳಿಸಿಲಾಗಿದೆ ಹೀಗೆ ಪುರಾಣ ಕಾಲದಿಂದ ಪುರುಷರಿಂದ ಹೆಣ್ಣು ಶೋಷಣೆ, ದೌರ್ಜನ್ಯ ಅಪಮಾನ, ಅವಮಾನಗಳಿಗೆ ಒಳಗಾಗಿದ್ದು ನೊಂದಂತಹ ಜೀವಗಳಿಗೆ ಜೀವನೋತ್ಸಾಹವನ್ನು ನೀಡುವ

ಮಾನವೀಯ ಸಂಬಂಧಗಳನ್ನೊಳಗೊಂಡ ಹೊಸ ಆಶಾಕಿರಣವನ್ನು ಮೂಡಿಸುವಂತೆ ಇಲ್ಲಿಯ ಕಥೆಗಳಿವೆ. ಕಥೆಗಳು ಹೆಣ್ಣು- ಗಂಡುಗಳಲ್ಲಿರುವ ಕಾಮ, ಪ್ರೇಮ, ಬದುಕಿನಲ್ಲಿ ತರುವ ಸಂಕಷ್ಟಗಳನ್ನು ಅನಾವರಣಗೊಳಿಸುತ್ತದೆ ಅಲ್ಲದೆ ಇಲ್ಲಿಯ ಕಥಾನಾಯಕಿಯರು ಸಮಾಜದ ಕಟ್ಟುಪಾಡುಗಳನ್ನು ಮೀರಿ ಸ್ವತಂತ್ರ್ಯವಾಗಿ ಬದುಕುವ ದಿಟ್ಟತನವನ್ನು ವೇದಾ ಅವರ ಕಥೆಗಳಲ್ಲಿ ಕಾಣುತ್ತೇವೆ.

ಬಿ.ಟಿ.ಜಾಹ್ನವಿ ಕಥೆಗಳು

ಇತ್ತೀಚಿನ ಕಥೆಗಾರ್ತಿಯರಲ್ಲಿ ಒಬ್ಬರಾದ ಬಿ.ಟಿ.ಜಾಹ್ನವಿಯವರು **'ಕಳೆದು ಕೊಂಡವಳು ಮತ್ತು ಇತರ ಕಥೆಗಳು', 'ಹುಡುಕಾಟ'** ಎಂಬ ಎರಡು ಕಥಾಸಂಕಲನಗಳನ್ನು ರಚಿಸಿದ್ದಾರೆ. ಈ ಎಲ್ಲಾ ಕಥೆಗಳಲ್ಲಿ ಕಥೆಗಾರ್ತಿ ಗಂಡು ಹೆಣ್ಣಿನ ಸಂಬಂಧವನ್ನು ಕುರಿತು ಯಾವುದೇ ಮಡಿ ಮೈಲಿಗೆಯಿಲ್ಲದೆ ವ್ಯಕ್ತಪಡಿಸಿದ್ದಾರೆ. ಗಂಡು ಹೆಣ್ಣಿನ ಕಾಮ ಪ್ರೇಮ ಇದರಿಂದ ಒದಗುವ ಸಂಕಷ್ಟಗಳು, ಅಲ್ಲದೆ ಇಲ್ಲಿಯ ಕಥೆಗಳ ಹೆಣ್ಣುಗಳು ಯಾವುದೇ ಮಡಿ ಮೈಲಿಗೆಯಿಲ್ಲದೆ ತನಗೆ ಬೇಕಾದ ತನ್ನ ಆಸೆ ಆಕಾಂಕ್ಷೆಗಳನ್ನು ಈಡೇರಿಸಿಕೊಳ್ಳಲು ಮುಂದಾಗುತ್ತಾಳೆ. ಹೆಣ್ಣಿನ ಮನಸ್ಸಿನ ಅಂತರಾಳದ ಮಾತುಗಳು ಸುಪ್ತ ಬಯಕೆಗಳು, ಮೂಢನಂಬಿಕೆ, ಜಾತಿ ಪದ್ಧತಿ, ಬಾಲಕಾರ್ಮಿಕ ಪದ್ಧತಿ ಇತ್ಯಾದಿ ಅಂಶಗಳು ಕಥೆಯ ವಸ್ತುವಾಗಿವೆ. ಅಲ್ಲದೆ ಹೆಣ್ಣು ಮಾನಸಿಕವಾಗಿ, ದೈಹಿಕವಾಗಿ ಪುರುಷನಿಂದ ಅನುಭವಿಸುವ ಸಂಕಷ್ಟಗಳು, ಲೈಂಗಿಕ ದೌರ್ಜನ್ಯ, ಅಲ್ಲದೆ ಮಾನವೀಯ ಸಂಬಂಧಗಳು, ಇತ್ಯಾದಿ ಅಂಶಗಳು ಕಥೆಯಾಗಿವೆ. ಇಲ್ಲಿನ ಸ್ತ್ರೀಪಾತ್ರಗಳು ದಿಟ್ಟತನದಿಂದ ಹೋರಾಡುವ ತನ್ನ ಬಯಕೆಗಳನ್ನು ಈಡೇರಿಸಿಕೊಳ್ಳುವವರಾಗಿದ್ದಾರೆ. ಹೀಗೆ-ಗಂಡು ಹೆಣ್ಣಿನ ಕಾಮಪ್ರೇಮವನ್ನು ಕುರಿತು ವ್ಯಕ್ತಿಗಳ ಮನಸ್ಸಿನ ತಲ್ಲಣಗಳನ್ನು ಕಥೆಗಾರ್ತಿ ಯಾವುದೇ ಸಂಕೋಚವಿಲ್ಲದೆ ತೆರೆದಿಟ್ಟು ಹೆಣ್ಣಿನ ಅಂತರಾಳದ ಮಾತುಗಳನ್ನು ವ್ಯಕ್ತಪಡಿಸಿದ್ದಾರೆ. 'ಕಳೆದುಕೊಂಡವಳು ಮತ್ತು ಇತರ ಕಥೆಗಳು ಎಂಬ ಕಥಾ ಸಂಕಲನದಲ್ಲಿನ ಮೊದಲನೇ ಕಥೆಯಾದ 'ವಿಮುಖ'ದಲ್ಲಿ ಗಂಡು-ಹೆಣ್ಣಿನ ಸಂಬಂಧವನ್ನು ಕುರಿತು ಹೇಳುವ ಸಂಕೀರ್ಣ ಕಥೆಯಾಗಿದೆ. ಈ ಕಥೆಯ ನಾಯಕಿ ಮೈತ್ರ ತನ್ನ ಪ್ರಿಯಕರನ ಸ್ನೇಹಿತನಿಂದ ಅತ್ಯಾಚಾರಕ್ಕೊಳಗಾಗಿದ್ದಾಳೆ. ಈ ಸಂದರ್ಭದಲ್ಲಿ ಎಷ್ಟೇ ಪ್ರಯತ್ನಿಸಿದರೂ ಕಾಮುಕ ವ್ಯಕ್ತಿಯಿಂದ ತಪ್ಪಿಸಿಕೊಳ್ಳಲಾರದೆ, ತನ್ನನ್ನು ದೈಹಿಕವಾಗಿ ತನ್ನ ಮೇಲೆ ಮಾಡುತ್ತಿರುವ ಹಿಂಸೆಯನ್ನು ತಾಳಲಾರದೆ ತನ್ನನ್ನು ಅರ್ಪಿಸಿಕೊಳ್ಳುತ್ತಾಳೆ. ಮೈತ್ರಳ ಈ ರೀತಿಯ ಒಪ್ಪಿಕೊಳ್ಳುವಿಕೆ ದಿನಕ್ಕೊಂದು ಹೆಣ್ಣನ್ನು ಬದಲಿಸುವ ಕಾಮುಕ ವ್ಯಕ್ತಿಗೆ ತನ್ನ ಕ್ರೂರತನದಿಂದ ವಿಮುಖನಾಗಿ ಹೊಸ ವ್ಯಕ್ತಿತ್ವವನ್ನು ಪಡೆದುಕೊಂಡು ಮೈತ್ರೆಯಳನ್ನು ಮದುವೆಯಾಗುವುದರ ಮೂಲಕ ಮಾನವೀಯತೆಯನ್ನು ತೋರುತ್ತಾನೆ. ಇಲ್ಲಿ ಮೈತ್ರ ತನ್ನ ಪ್ರಿಯಕರನಿಂದ ಪಡೆಯದ ಸುಖವನ್ನು ಈ ವ್ಯಕ್ತಿಯಿಂದ ಪಡೆಯುತ್ತಾಳೆ ಇಲ್ಲಿ ತಾನು ಒಪ್ಪಿಕೊಂಡಿರುವುದು ಅಪರಾಧ ಎಂಬ ಪಾಪ ಪ್ರಜ್ಞೆಯಿಲ್ಲ ಕಾರಣ ತನ್ನ ಪ್ರಿಯಕರನ ಮೋಸ ಹಾಗೂ ಭರತನೊಂದಿಗೆ ಆ ಸಂಬಂಧ ಆಕೆಯಲ್ಲಿ ಹೊಸತನವನ್ನು ತಂದು ಕೊಟ್ಟಿದೆ. ತನ್ನ ಸುಪ್ತಬಯಕೆಗಳು, ತಣಿಯದ ಆಸೆ, ಆಕಾಂಕ್ಷೆಗಳು ಕಾಮುಕವ್ಯಕ್ತಿಯಿಂದ ಪಡೆದು

ಸಂತೃಪ್ತಳಾಗಿದ್ದಾಳೆ. ಹೀಗೆ ಹೆಣ್ಣಿನ ಪ್ರೇಮ, ವಾತ್ಸಲ್ಯ ಕ್ರೌರ್ಯ ವ್ಯಕ್ತಿಯನ್ನು ಬದಲಿಸುವ ಸಾಮರ್ಥ್ಯವನ್ನು ಕಾಣಬಹುದಾಗಿದೆ. 'ಕಳ್ಳುಬಳ್ಳಿ' ಕಥೆಯಲ್ಲಿ ವ್ಯಕ್ತಿಗಳ ಗುಣ ಸ್ವಭಾವಗಳನ್ನು ಕುರಿತು ಹೇಳುತ್ತದೆ. ಸ್ವತಃ ರಕ್ತ ಸಂಬಂಧಗಳಲ್ಲಿ ನಡೆಯುವ ಅಸ್ಪೃಶ್ಯತಾ ಭಾವನೆ, ಅಧಿಕಾರದ ಕ್ರೌರ್ಯ, ಓದಿಗಾಗಿ ಹಂಬಲಿಸುವ ಬಾಲಕನೊಬ್ಬನ ಉತ್ಕಟ ಆಕಾಂಕ್ಷೆ, ಆದರೆ ಅದನ್ನು ಈಡೇರಿಸಿಕೊಳ್ಳಲಾರದ ಅಸಹಾಯಕತೆ ಬಡತನ, ಸಂಬಂಧಗಳಲ್ಲಿನ ಕ್ರೌರ್ಯತೆ ವ್ಯಕ್ತವಾಗಿದೆ.

'ತಾಯ್ತನ' ಕಥೆಯಲ್ಲಿ ಹೆಣ್ಣು ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಅನುಭವಿಸುವ ಅಪಮಾನ ಹಿಂಸೆಗಳ ಸಂಕೀರ್ಣ ಕಥೆಯಾಗಿದೆ. ಈ ಕಥೆಯು ಪೃಥ್ವಿ ಪಾತ್ರದ ಮೂಲಕ ನಿರೂಪಣೆಗೊಳ್ಳುತ್ತದೆ. ಇಲ್ಲಿ ಪೃಥ್ವಿಗೆ ತಂದೆಯ ಮೇಲೆ ಅಪಾರ ದ್ವೇಷವಿದೆ ಅಪಘಾತಕೀಡಾದರೂ ನೋವು ಬದುಕಿನಲ್ಲಿ ಹೋರಾಡುತ್ತಿದ್ದರೂ ಅನುಕಂಪವಿಲ್ಲ ಕಾರಣ ತನ್ನ ತಾಯಿಗೆ ಮಾಡಿರುವ ಹಿಂಸೆ, ಅಪಮಾನ, ನೋವು ಪುರುಷರನ್ನೇ ದ್ವೇಷಿಸುವ ಮಟ್ಟಕ್ಕೆ ಅಲ್ಲದೆ ತಮ್ಮನ್ನೂ ಸಹ ತಾಯಿಗೆ ತಾಯಿ ಎಂಬ ಮಮಕಾರವಿಲ್ಲದೆ "ಅಯ್ಯೋ ಯಾರೂ ಮಾಡದೆ ಇರೋ ಘನಕಾರ್ಯವಲ್ಲ ಹಡೆಯೋದು ಪ್ರತಿಯೊಂದು ಹೆಣ್ಣು ಒಂದು ದಿನ ಹಡೆಯಲೇಕು, ಹಾಗೆ ಈಕೆ ಕೂಡ ನನ್ನ ಹಡೆದಿದ್ದಾಳೆ. (ಪು.೬೩) ಹೀಗೆ ಹೆಣ್ಣು ಪ್ರತಿ ಹೆಜ್ಜೆ ಹೆಜ್ಜೆಗೆ ನೋವು ಅನುಭವಿಸುತ್ತಿದ್ದು ಅದು ಗಂಡನಿಂದ, ಮಗನಿಂದ ಹೀಗೆ ನಿರಂತರ ಶೋಷಣೆಗೆ ಒಳಗಾಗುತ್ತಿದ್ದಾಳೆ. ಹೀಗೆ ತನ್ನ ತಂದೆ, ತಮ್ಮರ ಕ್ರೌರ್ಯತನ ತಾಯಾಗದಿದ್ದರೂ ಸರಿಯೇ ನನ್ನ ಗರ್ಭದಿಂದ ಗಂಡು ಮಾತ್ರ ಹುಟ್ಟುವುದು ಬೇಡ ಎನ್ನುವ ನಾಯಕಿ ಮನೋಭಾವನೆ ಇಂದಿನ ಪ್ರತಿಯೊಬ್ಬ ಹೆಣ್ಣು ಅನುಭವಿಸುವ ಮಾನಸಿಕ, ದೈಹಿಕ ಹಿಂಸೆ, ಅಪಮಾನಕ್ಕೆ ಸಾಕ್ಷಿಯಾಗಿದೆ. ಇಷ್ಟೆಲ್ಲಾ ನೋವು, ಸಂಕಟ ಅನುಭವಿಸಿದರೂ ಎಲ್ಲವನ್ನೂ ಮರೆತು ಕ್ಯಾನ್ಸರ್ ರೋಗಕ್ಕೆ ತುತ್ತಾದ ಮಗನ ಮೇಲೆ ಕನಿಕರಗೊಂಡು ಸೇವೆ ಮಾಡುವ ತಾಯಿಯ ತ್ಯಾಗಮಯತೆ ಪ್ರೀತಿ, ವಾತ್ಸಲ್ಯದ ಬಗ್ಗೆ ಪೃಥ್ವಿ ಅಸೂಯೆ ಪಟ್ಟರೂ ಆದರೆ ಸ್ವತಃ ತಾನೇ ತಾಯಿಯಾಗುವುದರ ಮೂಲಕ ಇದುವರೆಗೂ ಪುರುಷರ ಮೇಲೆ ಇದ್ದ ದ್ವೇಷವೆಲ್ಲ ಮರೆತು ತನ್ನ ತಾಯಿಯ ತ್ಯಾಗ ಮಮತೆಗೆ, ಪ್ರೀತಿಗೆ ಕಾರಣವನ್ನರಿತು ತನ್ನ ಮಗನಿಗೆ ತಾಯಿ ಪ್ರೀತಿ, ಮಮತೆಯನ್ನು ನೀಡುವುದರ ಮೂಲಕ ತಾಯ್ತನದ ಮಹತ್ವವನ್ನು ಹೆಣ್ಣು ಅನುಭವಿಸುವ ಹೊಸತನವನ್ನು ಹಾಗು ಪುರುಷರಿಂದ ಎಷ್ಟೇ ನೋವು ಅನುಭವಿಸಿದರೂ ಅದನ್ನು ಮರೆತು ಕ್ಷಮಿಸುವ ಯಥಾಪ್ರಕಾರ ಪ್ರೀತಿಯನ್ನು ಧಾರೆಯೆರೆಯುವ ಹೆಣ್ಣಿನ ತಾಯ್ತನದ ಮಹತ್ವವನ್ನು ಈ ಕಥೆಯಲ್ಲಿ ಕಾಣಬಹುದಾಗಿದೆ.

'ಒಳಗುದಿ' ಕಥೆಯಲ್ಲಿ ಹೆಣ್ಣಿನ ಗುಣಸ್ವಭಾವ, ಮನಸ್ಥಿತಿಯನ್ನು ತೆರೆದಿಡುವ ಸಂಕೀರ್ಣ ಕಥೆಯಾಗಿದೆ. ಈ ಕಥೆಯ ನಾಯಕಿ ಸದಾ ಬೇರೆಯವರ ಸುಖ ಸಂತೋಷಗಳನ್ನು ಕಂಡು ಅಸೂಯೆ ಪಡೆಯುತ್ತಾ ಮಾನಸಿಕವಾಗಿ ತಳಮಳಗೊಂಡಿದ್ದಳು. ತನ್ನ ಗಂಡ, ಮನೆ, ಮಕ್ಕಳ ಮೇಲೆ ಅಧಿಕಾರ ಚಲಾಯಿಸುತ್ತಾ ಯಾವುದೇ ಕೊರತೆಯಿರದೆ ಸುಖವಾಗಿದ್ದರೂ ತನ್ನ ಪಕ್ಕದ ಮನೆಯ ಸ್ನೇಹಿತೆಯ

ಬೇರೆಯವರೊಂದಿಗೆ ಒಡನಾಟ, ಆತ್ಮೀಯತೆ ಪ್ರತಿಷ್ಠೆಯನ್ನು ಕಂಡು ಅಸೂಯೆ ಪಡುತ್ತಿದ್ದು ಅವರಿಂದ ಇವಳನ್ನು ದೂರಮಾಡಿಸಿ ತನ್ನಲ್ಲಿನ ದುಃಖಕ್ಕೆ ತೆರೆ ಎಳೆದಿದ್ದಳು. ಆದರೆ ಈ ಪ್ರಯತ್ನ ಸಫಲವಾಗದೆ ಗೌರಿ ಮತ್ತಷ್ಟು ಎಲ್ಲರೊಂದಿಗೆ ಆತ್ಮೀಯವಾಗಿ ವರ್ತಿಸಿದ್ದು ತನ್ನನ್ನು ಆತ್ಮೀಯವಾಗಿ ಕಂಡಿದ್ದಕ್ಕೆ ತನ್ನ ಈ ಅಸೂಯೆಗೆ ಮರುಗುತ್ತಾಳೆ. ಹೀಗೆ ಬೇರೆಯವರ ಸುಖವನ್ನು, ನೆಮ್ಮದಿಯನ್ನು ಕಬಳಿಸಲು ಹೋದರೆ ಅದು ತಿರುಗುಬಾಣವೆಂಬಂತೆ ನಮ್ಮನ್ನು ಆವರಿಸಿ ಮಾನಸಿಕ ಅಸ್ವಸ್ಥತೆಗೆ ಕಾರಣವಾಗಿ ವ್ಯಕ್ತಿಯನ್ನೇ ನಾಶಗೊಳಿಸುತ್ತದೆ. ಹೀಗೆ ಹೆಣ್ಣಿನ ಮನಸ್ಸಿನ ಒಳತೋಟಿಯನ್ನು ತೆರೆದಿಡುವ ಕಥೆಯಾಗಿದೆ.

'ಬಸವಿ' ಕಥೆಯಲ್ಲಿ ಹಳ್ಳಿಯ ಜನರ ಮೂಢನಂಬಿಕೆಗಳಿಗೆ ಬಲಿಯಾಗುವ ಹೆಣ್ಣಿನ ದುಸ್ಥಿತಿಯನ್ನು ಕುರಿತು ಹೇಳುವ ಸಂಕೀರ್ಣ ಕಥೆಯಾಗಿದೆ. ಈ ಕಥೆಯ ನಾಯಕಿ ದೇವಿರಿ ರೂಪವತಿಯಾಗಿದ್ದು ಇದನ್ನು ಕಂಡು ಸಹಿಸದ, ಪಡೆಯುವ ಹಂಬಲದಿಂದ ಊರ ಜನರು 'ಬಸವಿ' ಎಂಬ ದುಷ್ಟಪದ್ಧತಿಗೆ ಒಳಗಾಗಿಸಿದರು. ಆದರೆ ತಾಯಿಯ ಆಸರೆಯಿಂದ ಅದರಿಂದ ಪಾರಾಗಿ ಇನ್ನೊಂದೆಡೆಗೆ ನೆಲೆಸಿದರು ಹೆಣ್ಣನ್ನು ಕೇವಲ ಬೋಗದ ವಸ್ತುವಾಗ ಬಯಸುವ ದುಷ್ಟ ಜನರಾದ ಶನಿದೇವಯ್ಯ, ಮಾದೇವ, ರಾಘುವರ, ಕಪಟ ಮೋಸ ವಂಚನೆಗೆ ಗುರಿಯಾದಳು ಇವರ ಈ ಕೃತ್ಯಕ್ಕೆ ತನ್ನ ಪ್ರೀತಿ ಪಾತ್ರವಾದ ಮರಿಯನನ್ನು ಕಳೆದುಕೊಂಡಳು ಆದರೆ ದೇವಿರಿ ತನ್ನ ಹಿಂಸೆಗೆ, ಅಪಮಾನಕ್ಕೆ ಕಾರಣವಾದವರ ಮೇಲೆ ಸೇಡು ತೀರಿಸಿಕೊಳ್ಳುವುದರ ಮೂಲಕ ಅವರವರಲ್ಲೇ ಅಂತಃ ಕಲಹ ಉಂಟುಮಾಡುವುದರ ಮೂಲಕ ಸಾವಿಗೆ ಶರಣಾಗುವಂತೆ ಮಾಡಿ ದಿಟ್ಟತನವನ್ನು ತೋರಿ ಈ ದುಷ್ಟಪದ್ಧತಿಯಿಂದ ಬಿಡುಗಡೆ ಹೊಂದುತ್ತಾಳೆ. ಹೀಗೆ ಇಲ್ಲಿ ಒಂದು ಹೆಣ್ಣು ಪುರುಷರ ದೌರ್ಜನ್ಯಕ್ಕೆ ಒಳಗಾಗುವ ಹಾಗೂ ಹಳ್ಳಿಯ ಜನರ ಮೂಢನಂಬಿಕೆಗಳನ್ನು ತಿಳಿಸುವುದರ ಮೂಲಕ ಇಂತಹ ದುಷ್ಟಪದ್ಧತಿ ಇಂದು ಕಣ್ಮರೆಯಾಗಿರುವುದು ಕಾಣಬಹುದಾಗಿದೆ.

'ಹೋರಾಟ' ಕಥೆಯಲ್ಲಿ ಒಂದು ಹೆಣ್ಣು ಅತ್ಯಾಚಾರಕ್ಕೆ ಒಳಗಾದಾಗ ಅದನ್ನು ಬಹಿರಂಗ ಪಡಿಸಿ ಹಣಗಳಿಸಿರುವುದರಿಂದ ಯಾವ ಪರಿಹಾರ ದೊರಕುವುದಿಲ್ಲ ಎಂಬ ಸತ್ಯವನ್ನು ಅರಿತ ವಿದ್ಯಾವಂತ ಹುಡುಗ ಆಕೆಯ ಬಾಳ ಸಂಗಾತಿಯಾಗುವುದರ ಮೂಲಕ ಮಾನವೀಯತೆಯನ್ನು ಕಾಣಬಹುದಾಗಿದೆ. ಪ್ರತಿಯೊಬ್ಬ ಗಂಡು ಹೆಣ್ಣು ಕಾಮ, ಪ್ರೇಮಗಳಿಗೆ ಬಲಿಯಾಗಿ ಅನೇಕ ಸಂಕಷ್ಟಗಳನ್ನು ಅನುಭವಿಸುತ್ತಾರೆ. ಒಂದು ಹೆಣ್ಣು ತನ್ನ ಗಂಡನಿಂದ ಅಂತಹ ಪ್ರೀತಿ ದೊರಕದೆ ಹೋದಾಗ ಪರಪುರುಷನೊಂದಿಗೆ ಅನೈತಿಕ ಸಂಬಂಧವನ್ನು ಹರಿಸುವುದು ವ್ಯಭಿಚಾರವಾದರೆ ಆದರೆ ಅದಕ್ಕೆ ಮೂಲ ಕಾರಣ ಪುರುಷನಾಗಿದ್ದಾನೆ ಹೆಣ್ಣಿನ ಬಯಕೆಗಳನ್ನು ಆಸೆ ಆಕಾಂಕ್ಷೆಗಳನ್ನು ತಣಿಸಲಾರದಾಗ ಇಂತಹ ಸ್ಥಿತಿ ಎದುರಾಗುತ್ತದೆ ಆದರೆ ಸಮಾಜದ ಹಂಗಿಲ್ಲದೆ ನೀತಿ ನಿಯಮಗಳಿಗೆ ಬದ್ಧವಾಗದೆ ಪರಪುರುಷನೊಂದಿಗೆ ಸಂಬಂಧವನ್ನು ಬೆಳೆಸುವ ಲೀಲಾ ದಿಟ್ಟತನವನ್ನು ತೋರಿದರೆ ಆದರೆ ಸಮಾಜದ ನಿಯಮಗಳಿಗೆ ಒಳಗಾಗಿ, ಸಮಾಜಕ್ಕೆ ಹೆದರಿ ಸಿನಿಮಾದ ಹೀರೊಗಳನ್ನು ನೆನೆಯುವುದರ ಮೂಲಕ ಸವಿತಾ ಮಾನಸಿಕ ವ್ಯಭಿಚಾರಿಯಾಗುತ್ತಾಳೆ.

ಹೀಗೆ ಹೆಣ್ಣಿನ ಅಂತರಾಳವನ್ನು ಅರಿಯದ ಪುರುಷರಿಗೆ ಅರಿವು ಮೂಡಿಸುವಂತೆ ಈ ಕಥೆಯನ್ನು ಕಾಣಬಹುದು.

ಹೀಗೆ ಈ ಸಂಕಲನದ ಎಲ್ಲಾ ಕಥೆಗಳು ಮಧ್ಯಮ ವರ್ಗದ ಹೆಣ್ಣಿನ ಜೀವನನ್ನು ಕುರಿತು ಹೇಳುತ್ತಾ ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಹೆಣ್ಣು ಅನುಭವಿಸುವ ದೈಹಿಕ ಹಾಗೂ ಮಾನಸಿಕ ಹಿಂಸೆಯನ್ನು ಕಾಣಬಹುದಾಗಿದೆ.

ಜಾಹ್ನವಿಯವರ ಎರಡನೇ ಕಥಾಸಂಕಲನ **'ಹುಡುಕಾಟ'** ೧೩ ಕಥೆಗಳನ್ನೊಳಗೊಂಡಿದ್ದು ಸಂಪ್ರದಾಯಕತೆ-ಆಧುನಿಕತೆಯನ್ನು ಮುಖಾಮುಖಿಯಾಗಿಸುತ್ತದೆ. ಮಾನವೀಯತೆ, ಮುಗ್ಧತೆ, ಜೀವ ಸಂಬಂಧಗಳನ್ನೊಳಗೊಂಡ ಅಂಶಗಳನ್ನು ಕಾಣಬಹುದಾಗಿದೆ. ಇಲ್ಲಿನ ಸ್ತ್ರೀಪಾತ್ರಗಳು ದೌರ್ಜನ್ಯಕ್ಕೆ ಒಳಗಾಗಿದ್ದರೂ ಅದರಿಂದ ಹೊರಬರುವ ದಿಟ್ಟತನದವರಾಗಿದ್ದಾರೆ. ಹೀಗೆ ಜೀವ ಸೆಳೆಯುವ ಮಾನವೀಯ ಸಂಬಂಧಗಳನ್ನೊಳಗೊಂಡ ಕಥೆಗಳಾಗಿವೆ. ಈ ಕಥಾಸಂಕಲನದ ಮೊದಲನೇ ಕಥೆಯಾದ 'ದೇವರು ಬಂದಾವ್ ಬನ್ನಿರೋ' ಕಥೆಯಲ್ಲಿ ಸಮಾಜದ ಮೂಡನಂಬಿಕೆಗಳಿಗೆ ಒಳಗಾದ ಹೆಣ್ಣಿನ ದುಸ್ಥಿತಿಯನ್ನು ಕುರಿತು ಹೇಳುವ ಸಂಕೀರ್ಣ ಕಥೆಯಾಗಿದೆ. ಕಥೆಯು ನಿರೂಪಕಿ ರೇಣುಕ ಪಾತ್ರದ ಮೂಲಕ ಕಥೆ ನಿರೂಪಣೆಗೊಳ್ಳುತ್ತದೆ. ಈಕೆ ವಿದ್ಯಾವಂತೆಯಾಗಿದ್ದು ವಿಧವೆಯಾದ ಚಿಕ್ಕಮ್ಮ ಮೇಲೆ ಕುಟುಂಬದವರು ನಡೆಸುವ ದೌರ್ಜನ್ಯವನ್ನು ಪ್ರಶ್ನೆಮಾಡುತ್ತಾಳೆ 'ಚಿಕ್ಕಮ್ಮನ್ಯಾಕೆ ಹಿಂಗೆ ಹುರಿಸ್ಕೊಂಡು ತಿನ್ನಾಕತ್ತೀರಿ? ನಾಯಿಗಿಂತ ಕಡೀ ಮಾಡಿಟ್ಟರಿ ಆಕಿ ಪಾಡು.' (ಪು.೧) ಸಂಭವಿಸುತ್ತಿರುವ ಅನ್ಯಾಯವನ್ನು ಪ್ರತಿಭಟಿಸುತ್ತಾಳೆ. ಆದರೆ ಇದಕ್ಕೆ ಮರುಗದೆ ಕುಟುಂಬದವರು ರೇಣ್ಕಾ ನಿಮ್ಮ ಚಿಕ್ಕಮ್ಮ ದೇವು ಮನುಸಳು ಈಗ, ಮ್ಯಾಲಿಂದ್ಮಾಲೆ ಆಕಿ ಆಟ ನೋಡಿ ಹುಚ್ಚಂಗಿ ದುರ್ಗಕ್ಕೆ ಕರ್ಕಂಡೋದ್ರು ಎಲ್ಲಾ ಸೇರ್ಕಂಡು ಅಲ್ಲೇ ಆ ಮಾತಾಯಿ, ತನ್ನ ಸನ್ನಿಧ್ಯಾಗೆ ಈಕಿ ಮೈಮ್ಯಾಗೆ ಬಂದು ಈಕಿ ನನೀಗೆ ಸೇರ್ಬೇಕಾದಕಿ... ಈಕೀನ ನನ್ನ ವುಡ್ಯಾಗಾಕ್ರಿ... ಮುತ್ತು ಕಟ್ರುಸ್ರೀ ಅಂತ ಯೇಳ್ಕೆ ಕೊಟ್ಲಂತೆ, ಆಕಿ ಮಾತ್ನ ಮೀರಾ ದುಂಟೇನೇ ತಾಯಿ...? (ಪು.೨) ಎಂದು ಮತ್ತು ಕಟ್ಸಿ ಬಸದಿ ಮಾಡಿದು. ಹೀಗೆ ಹಳ್ಳಿಯ ಜನರ ಮೂಢನಂಬಿಕೆ ಹೆಣ್ಣು ಬಲಿಪಶುವಾಗಿ ಅಸಹಾಯಕಳಾಗಿದ್ದಾಳೆ. ಆದರೆ ತನ್ನ ಮನೆಯವರನ್ನು ವಿರೋಧಿಸಿ ಈ ಅನಿಷ್ಟ ಪದ್ಧತಿಯಿಂದ ತಪ್ಪಿಸಿಕೊಳ್ಳಲು ಪ್ರಿಯಕರನ ಜೊತೆ ಓಡಿಹೋಗಲು ನಿರ್ಧರಿಸಿದರೂ ಈ ಸಂದರ್ಭದಲ್ಲಿ ಭಕ್ತಾಧಿಗಳು' (ಪು.೩) ಯಪ್ಪಾ ನನ್ನ ಮಗೀನ ಪ್ರಾಣ ನಿಮ್ಮ ಕೈಯಾಗೈತೆ... ಆ ಮಾತಾಯೀನ ಕರಿಯಪ್ಪ... ಎನ್ನುವ ಜನರ ಮೂಢನಂಬಿಕೆಯಲ್ಲಿ ಬಲಿಯಾಗಿ ತನ್ನ ಪ್ರಿಯಕನಿಂದ ಮೋಸ ಹೋಗಿ ಆತನಿಂದನೂ ಮಾತಾಯಿ ಎಂದು ಕರೆಸಿಕೊಂಡು ತನ್ನ ಆಸೆ ಆಕಾಂಕ್ಷೆಗಳನ್ನು ಹೆಣ್ಣಿನ ಸಹಜ ಬಯಕೆಗಳನ್ನು ಅದುಮಿಟ್ಟು ರೋಧಿಸುತ್ತಾ ಲೋಬಾನಗಳ ಮಧ್ಯೆ ದೇವ್ರು ಬಂದಾವ ಬರ್ರೀ... ಎಂದು ತಿಳಿದ ಹಳ್ಳಿಯ ಜನರ ಮೂಢನಂಬಿಕೆಗಳಿಗೆ ಅಸಹಾಯಕಳಾಗಿ ಹೆಣ್ಣು ಅನುಭವಿಸುವ ಹಿಂಸೆ ಅಪಮಾನ ದೌರ್ಜನ್ಯವನ್ನು ಕಾಣಬಹುದಾಗಿದೆ.

'ಅಪ್ಪಯ್ಯನ ಹಂಡೇವು' ಕಥೆಯಲ್ಲಿ ಸಂಪ್ರದಾಯಕತೆ ಆಧುನಿಕತೆಯನ್ನು ಮುಖಾಮುಖಿಯಾಗಿಸುವ ಸಂಕೀರ್ಣ ಕಥೆಯಾಗಿದೆ. ಈ ಕಥೆಯ ನಾಯಕಿ ಶಿವಮ್ಮನಿಗೆ ತನ್ನ ತವರು ಮನೆಯಿಂದ ಬಳುವಳಿಯಾಗಿ ಬಂದ ಹಂಡೇವ್ನ ಮೇಲೆ ಪಂಚಪ್ರಾಣವಿದೆ ಅದರ ಮೂಲಕ ಹಂಡೆವಗಾಗಿ ಜೀತ ಮಾಡಿ ಜೀವ ಸವೆದ ತಂದೆಯ ಪ್ರೀತಿ ಅಡಗಿದೆ ಅದನ್ನು ಯಾವುದೇ ಕಾರಣಕ್ಕೂ ದೂರಗೊಳಿಸಲು ಸಾಧ್ಯವಿಲ್ಲ. ಹೀಗಿರುವಾಗ ತನ್ನ ಕುಡುಕ ಗಂಡನಿಂದ ಬೇಸತ್ತು ತಾನೇ ಮನೆ ಜವಾಬ್ದಾರಿ ಹೊರುವುದರ ಮೂಲಕ ದುಡಿಯುವ ಗಟ್ಟಿಗಿತ್ತಿಯಾಗಿದ್ದಾಳೆ. ಗಂಡನ ಕುಡಿತದ ದುಶ್ಚಟಕ್ಕೆ 'ಆಟು ದೊಡ್ಡ ಹಂಡೆವು ನಮಗ್ಯಾಕೆ' ಎಂದು ಮಾರಲು ಮುಂದಾದಾಗ ನೀನೇನರ ಒಂದಚ್ಚೆ ಮುಂದುಕ್ಕಿಟ್ರೆ ಸಿಗ್ದು ಹಾಕ್ಬಿಡ್ತೀನಿ... ಆ ಹಂಡೇವ್ನ ಕೈನಾಗೆ ಮುಟ್ಕೋಯೋಗ್ಯತೆನೂ ನಿನಗಿಲ್ಲ... (ಪು.೧೦) ಎಂದು ಪ್ರತಿಭಟಿಸಿ ತನ್ನ ತವರುಮನೆಯ ವಸ್ತುವನ್ನು ಸಂರಕ್ಷಿಸುತ್ತಾಳೆ. ಆದರೆ ಮನೆಗೆ ಬಂದ ಸೊಸೆಗೆ ಈ ಹಂಡೇವು ಆಕರ್ಷಣೀಯವಾಗಿ ಕಂಡು ಅದನ್ನು ಕೊಡಲು ಒಪ್ಪದಾಗ 'ನೋಡಿ After all ಆ ಹಳೇದೊಂದು ಹಂಡೆಗೆ ಇಷ್ಟೆಲ್ಲಾ ರಂಪನಾ...? ಎಷ್ಟು ಪ್ರಷಿಯಸ್ ಅದು ಹಾಂ...? ನಿಮ್ಮಮ್ಮ ಏನೂ ಪುಕ್ಕಟ್ಟೆ ಕೊಡೋದು ಬ್ಯಾಡ. ಅಲ್ರೀ ತಿಂಗ್ಳು ನೀವು ಕಳಿಸ್ತಿರೀಲ್ಲಾ ದುಡ್ನು ಅದಕ್ಕಿಂತಲೂ ಹೆಚ್ಚು ಬೆಲೆ ಬಾಳುತ್ತಾ ಆ ಹಂಡೆ...? (ಪು.೧೦) ಎಂದು ತುಚ್ಛವಾಗಿ ಮಾತಾಡಿ ಹಳೆಯ ವಸ್ತುವನ್ನು ಕಡೆಗಣಿಸುವ ಅದರಂತೆ ಹಳೆಯ ತಲೆ ಮಾರಿನ ಅತ್ತೆಯನ್ನು ಕಡೆಗಣಿಸುವ ಇಂದಿನ ಆಧುನೀಕತೆಯನ್ನು ಕಾಣಬಹುದಾಗಿದೆ. ಇದರಿಂದ ಶಿವಮ್ಮ ನೊಂದು ಸಾವಿಗೀಡಾದಾಗ ಹಂಡೆವು ಪಕ್ಕದಲ್ಲಿ ಮಗನ ದುಡ್ಡಿನ ಸೂರೆ ಕಂಡು ತಮ್ಮ ಈ ಕೃತ್ಯಕ್ಕೆ ಪಶ್ಚಾತಾಪಗೊಂಡರು ಹೀಗೆ ಇಲ್ಲಿ ಜೀತಪದ್ಧತಿ, ಮಡಿಮೈಲಿಗೆ ಹಾಗೂ ಸಂಪ್ರದಾಯತೆ ಆಧುನೀಕತೆಯ ಸಂಘರ್ಷವನ್ನು ಈ ಕಥೆಯಲ್ಲಿ ಕಾಣಬಹುದಾಗಿದೆ.

'ಹುಯ್ಯೊ ಹುಯ್ಯೊ ಮಳೆರಾಯ' ಕಥೆಯಲ್ಲಿ ಒಂದು ಹೆಣ್ಣು ನಾಲ್ಕುಗೋಡೆಯ ಮಧ್ಯದಲ್ಲಿ ಬಂಧನವಾಗಿ ಗಂಡನಿಂದ ಚಿತ್ರಹಿಂಸೆ ಅನುಭವಿಸುವುದರ ಮೂಲಕ ಪುರುಷ ಪ್ರಧಾನ ವ್ಯವಸ್ಥೆ ಹೆಣ್ಣಿನ ಮೇಲೆ ನಡೆಸುವ ಮಾನಸಿಕ ಹಾಗೂ ದೈಹಿಕ ಶೋಷಣೆಯನ್ನು ಕಾಣಬಹುದಾಗಿದೆ. ಆದರೆ ಈ ಶೋಷಣೆಯಿಂದ ಬಿಡುಗಡೆ ಹೊಂದಿ ಸ್ವತಂತ್ರವಾಗಿ ಬದುಕುವ ಹೆಣ್ಣಿನ ದಿಟ್ಟತನವನ್ನು ಈ ಕಥೆಯಲ್ಲಿ ಕಾಣಬಹುದಾಗಿದೆ.

ಒಟ್ಟಾರೆ ಈ ಕಥಾ ಸಂಕಲನದಲ್ಲಿ ಕಥೆಗಾರ್ತಿ ಗಂಡು ಹೆಣ್ಣಿನ ಕಾಮ, ಪ್ರೇಮದ ಸಂಬಂಧವನ್ನು ಮುಕ್ತವಾಗಿ ಚರ್ಚಿಸಿದ್ದಾರೆ. ಅಲ್ಲದೆ ಈ ಲೈಂಗಿಕ ಪ್ರಕ್ರಿಯೆಯಲ್ಲಿ ಹೆಣ್ಣು ತೋರುವ ದಿಟ್ಟತನ ತನ್ನ ಬಯಕೆಗಳನ್ನು ಈಡೇರಿಸಿಕೊಳ್ಳಲು ಯಾವ ಕಟ್ಟುಪಾಡುಗಳಿಲ್ಲದೆ ಸ್ವತಂತ್ರವಾಗಿ ಈ ಪ್ರಕ್ರಿಯೆಯಲ್ಲಿ ತೊಡಗುವುದನ್ನು ಇಲ್ಲಿನ ಬಹುಪಾಲು ಕಥೆಗಳಲ್ಲಿ ಕಾಣಬಹುದಾಗಿದೆ. ಅಲ್ಲದೆ ಬಡತನ, ನಿರುದ್ಯೋಗ, ಸಮಸ್ಯೆ ಇತ್ಯಾದಿ ಅಂಶಗಳು ಕಥೆಯ ವಸ್ತುವಾಗಿದೆ. ಅಲ್ಲದೆ ಮನುಷ್ಯನ ಸ್ವಾರ್ಥ, ಮೋಸ, ವ್ಯಕ್ತಿಯ ಗುಣಸ್ವಭಾವಗಳು, ಅಧಿಕಾರ, ಶ್ರೀಮಂತಿಗೆ ಬಂದಾಗ ವ್ಯಕ್ತಿಯು ತನ್ನ ಅಸ್ತಿತ್ವವನ್ನು ಮರೆತು

ಪಶುವಿನಂತೆ ವರ್ತಿಸುವ ವ್ಯಕ್ತಿಗಳ ಸಹಜವಾದ ಗುಣಗಳು ಕಥೆಯ ವಸ್ತುವಾಗಿದೆ. ಹೀಗೆ ಹೆಣ್ಣು ಅನೇಕ ಕಾರಣಗಳಿಂದ ಒಂದಲ್ಲಾ ಒಂದು ರೀತಿಯಲ್ಲಿ ಪುರುಷರಿಂದ ದೌರ್ಜನ್ಯ ಹಿಂಸೆ, ಅನುಭವಿಸುವುದರ ಮೂಲಕ ದಿಟ್ಟತನದಿಂದ ಬದುಕನ್ನು ರೂಪಿಸಿಕೊಳ್ಳುವ ಗಟ್ಟಿಗಿತ್ತಿಯಾಗಿ ಇಲ್ಲಿನ ಬಹುಪಾಲು ಕಥೆಗಳಲ್ಲಿ ಕಾಣಬಹುದಾಗಿದೆ. ಹೀಗೆ ಚಾಹ್ನವಿಯರು ಮಧ್ಯಮ ವರ್ಗದ ಹೆಣ್ಣಿನ ಜೀವನವನ್ನು ನೋವು, ಸಂಕಷ್ಟಗಳು, ಅಸಮಾನ, ಹಿಂಸೆಗಳನ್ನು ಆ ಮೂಲಕ ಸ್ವತಂತ್ರವಾಗಿ ಬದುಕುವ ಹೆಣ್ಣಿನ ಚಿತ್ರಣವನ್ನು ಈ ಕಥಾ ಸಂಕಲನದಲ್ಲಿ ಕಾಣಬಹುದಾಗಿದೆ. ಒಟ್ಟಾರೆ ಈ ಎಲ್ಲಾ ಕಥೆಗಳಲ್ಲಿ ಪುರುಷರು ಹೆಣ್ಣಿನ ಮೇಲೆ ನಡೆಸುವ ಶೋಷಣೆಯನ್ನು, ವಯಸ್ಸಿನ ಅಂತರದಲ್ಲಿ ಗಂಡು ಹೆಣ್ಣಿನ ಬಯಕೆಗಳನ್ನು ತಣಿಸಲು ಅಸಹಾಯಕನಾದಾಗ ಲೈಂಗಿಕ ತೃಪ್ತಿಗಾಗಿ ಅನೈತಿಕ ಸಂಬಂಧವನ್ನು ಬಯಸುವ ಅದನ್ನು ಅಪರಾಧ ಎಂದು ತಿಳಿಯದೆ ಅದಕ್ಕೆ ಮೂಲ ಕಾರಣ ಪುರುಷರೇ ಎಂದು ಇಂತಹ ಲೈಂಗಿಕತೆಯನ್ನು ಮುಕ್ತವಾಗಿ ಕಥೆಗಾರ್ತಿ ತೆರೆದಿಟ್ಟು ಸಾಂಪ್ರದಾಯಿಕ ಚೌಕಟ್ಟನ್ನು ಮೀರಿ ನಿಲ್ಲಬಲ್ಲ ಕಥೆಗಾರ್ತಿಯಾಗಿದ್ದಾರೆ. ಹೀಗೆ ಇಲ್ಲಿನ ಬಹುಪಾಲು ಕಥೆಗಳಲ್ಲಿ ಗ್ರಾಮೀಣ ನಗರ ಭಾಷೆಯನ್ನು ಬಳಸಲಾಗಿದೆ. ಇಲ್ಲಿನ ಬಹುಪಾಲು ಕಥೆಗಳಲ್ಲಿ ಸಾಂಪ್ರದಾಯಿಕತೆ, ಆಧುನಿಕತೆಯನ್ನು ಮುಖಾಮುಖಿಯಾಗಿಸಿದೆ.

ಕೋಡಿಬೆಟ್ಟು ರಾಜಲಕ್ಷ್ಮಿ ಕಥೆಗಳು

ಕೋಡಿಬೆಟ್ಟು ರಾಜಲಕ್ಷ್ಮೀಯವರು 'ಒಂದು ಮುಷ್ಟಿ ನಕ್ಷತ್ರ' ಎಂಬ ಕಥಾ ಸಂಕಲನವನ್ನು ರಚಿಸಿದ್ದಾರೆ. ಈ ಎಲ್ಲಾ ಕಥೆಗಳಲ್ಲಿ ದಕ್ಷಿಣ ಕನ್ನಡದ ಪರಿಸರ ಪ್ರಭಾವವನ್ನು ಕಾಣಬಹುದು. ಈ ಕಥೆಗಳು ರಾಜಲಕ್ಷ್ಮೀಯವರ 'ಖಾಸಾ ಅನುಭವದ' ಕಥೆಗಳಾಗಿವೆ. ಈ ಎಲ್ಲಾ ಕಥೆಗಳಲ್ಲಿ ಬಾಲ್ಯದ ದಟ್ಟ ಅನುಭವಗಳನ್ನು ಕಾಣಬಹುದು. ವ್ಯಕ್ತಿಯ ಬದುಕಿನಲ್ಲಿ ಹಾಗೂ ಸಮಾಜದಲ್ಲಿ ನಡೆಯುವ ಘಟನೆಗಳು ಕಥೆಯಾಗಿವೆ. ಕೋಮು ಸೌಹಾರ್ದತೆ, ಮೋಸ, ವಂಚನೆ, ಮೂಢ ನಂಬಿಕೆ, ರಾಜಕೀಯ ಭ್ರಷ್ಟಾಚಾರ, ಹೆಣ್ಣಿನ ಶೋಷಣೆ, ಅಪಮಾನ, ಬಂಚೆತನ ಹೀಗೆ ವ್ಯಕ್ತಿಯ ಬದುಕಿನ ಕ್ರೂರತೆಯನ್ನು ವಿವರಿಸುತ್ತಾ ಆ ಮೂಲಕ ಒಂದಾಗುವ ಬದುಕು ಪ್ರೀತಿಯನ್ನು ಹುಟ್ಟಿಸುವ ಮನುಷ್ಯ ಸಂಬಂಧಗಳ, ಮಾನವೀಯ ಮೌಲ್ಯಗಳನ್ನೊಳಗೊಂಡ ಮನುಷ್ಯತ್ವದ ತಿರುಳನ್ನು ಪಡೆದ ಕಥೆಗಳಾಗಿ ಮೂಡಿ ಬಂದಿದೆ. ಈ ಕಥಾ ಸಂಕಲನದ ಮೊದಲನೇ ಕಥೆಯಾದ 'ಪಟ್ಟೆ ಹುಲಿ' ಮನುಷ್ಯ ಸಂಬಂಧಗಳ ಸಂಕೀರ್ಣ ಕಥೆಯಾಗಿದೆ. ಈ ಸಂಬಂಧಗಳು ಬಹು ಆಯಾಮವನ್ನು ಪಡೆದುಕೊಂಡಿರುವ ಶಕ್ತಿ ಈ ಕಥೆಯಲ್ಲಿದೆ. ನವರಾತ್ರಿ ಉತ್ಸವವನ್ನು ಯಾವುದೇ ಬೇದ ಭಾವವಿಲ್ಲದೆ ಹಿಂದೂ ಮುಸ್ಲಿಂರು ಪಾಲ್ಗೊಂಡು ಆಚರಿಸುವ ಈ ಸಂದರ್ಭದಲ್ಲಿ ಕೋಮು ಸೌಹಾರ್ದತೆಯನ್ನು ಕಾಣಬಹುದಾಗಿದೆ. ಆದರೆ ಈ ಊರಿನ ಪಕ್ಕದ ದುರ್ಗಾದೇವಾಸ್ಥಾನದಲ್ಲಿ ಬಿಳಿಹುಲಿ ವೇಷವನ್ನು ನೋಡಲು ಹೋದ ಪುಷ್ಪ ಮನೆಗೆ ಹಿಂದುರುಗದೆ ಮುಸ್ಲಿಂ ಹುಡುಗನೊಂದಿಗೆ ವಿವಾಹವಾಗಲು ನಿರ್ಧರಿಸಿದ್ದು ಅಲ್ಲದೆ ಹನೀಷ ಹಿಂದೂ ಧರ್ಮಕ್ಕೆ ಮತಾಂತರನಾಗಲು ಸಿದ್ಧನಾಗಿದ್ದು ಪರಸ್ಪರ ಹಿಂದೂ ಮುಸ್ಲಿಂರಲ್ಲಿ ವೈಮನಸ್ಸುಗಳು ಬೆಳೆದು

ಕೊಡುಕೊಳ್ಳುವಿಕೆಯನ್ನು ವ್ಯವಹಾರ ಸ್ಥಗದ್ಧವಾಯಿತು ಅಲ್ಲದೆ ದುರ್ಗಾ ಉತ್ಸವದ ಹುಲಿವೇಷದಾರಿಗಳು ಮಸೀದಿ ಮುಂದೆ ಕುಣಿಯುವುದು ನಿರ್ಬಂಧವಾಯಿತು. ಅಲ್ಲದೆ ಈ ಸಂದರ್ಭದಲ್ಲಿ ಹೊಡೆದಾಟದ ವಾಸನೆ ಎಲ್ಲೆಡೆ ಹರಿಡಿ ಭಯದ ವಾತಾವರಣ ಶುರುವಾಗಿ ಕೋಮುಗಲಭೆಗೆ ಅವಕಾಶ ಮಾಡಿಕೊಟ್ಟಿತು. ಈ ಸಂದರ್ಭದಲ್ಲಿ ಬಡವಳಾಗಿದ್ದ ಯಂಕಮ್ಮ ತನ್ನ ಮಕ್ಕಳಿಗೆ ಮರಿ ಹುಲಿ ವೇಷಧರಿಸಿ ಈ ಉತ್ಸವದಲ್ಲಿ ಪಡೆಯುವ ಹಣದಿಂದ ತನ್ನ ಆರ್ಥಿಕ ಪರಿಸ್ಥಿತಿ ಸುಧಾರಿಸುವುದೆಂದು ಕನಸು ಕಂಡಿದ್ದಳು ಹೀಗಿರುವಾಗ ಮಾರನವಮಿಯ ಕೊನೆದಿನ ಹುಲಿವೇಷಧಾರಿಗಳು ಭಯದ ಅಳುಕಿನಲ್ಲಿ ಮುಕ್ರಿ ಅಂಗಡಿಯಲ್ಲಿ ಎಂದಿನಂತೆ ಕುಣಿತ ಆರಂಭಿಸಿದರು ಈ ಸಂದರ್ಭದಲ್ಲಿ 'ಮುಸ್ಲಿಂ ಅಂಗಡಿಯ ಮುಂದೆ ದೇವಿ ಹಾಡು ಹಾಡಲಿಕ್ಕೆ ಇವರಿಗೆಷ್ಟು ಧೈರ್ಯ...? (ಪು.೨೦) ಕಿಡಿಗೇಡಿಗಳು ಕಲ್ಲು ಹಿಡಿದು ನಿಂತಿರುವ ಗುಸುಗುಸು ಮಾತುಗಳು ಬುಗಿಲೆದ್ದಂತೆ ವಾತಾವರಣ ಶಾಂತವಾಗಿ ಕುಣಿತ ನಿಂತಿತು ಈ ಸಂದರ್ಭದಲ್ಲಿ ಸಿಗುತ್ತಿದ್ದ ದುಡ್ಡು ಸಿಗದೆ ಯಂಕಮ್ಮ ನಿರಾಶಳಾದಳು. ಆದರೆ ಹಿಂದೂ ಮುಸ್ಲಿಂ ಹಿರಿಯ ಮುಖಂಡರು ಪರಿಸ್ಥಿತಿಯನ್ನು ಹತೋಟಿಗೆ ತಂದು ಜನರ ತಪ್ಪುತಿಳುವಳಿಕೆಯನ್ನು ಸರಿಪಡಿಸಿದರು. ಈ ಸಂದರ್ಭದಲ್ಲಿ ಚೌಳಬ್ಯಾರಿ ಮನೆಗೆ ಮಿನು ತರಲು ಹೋದ ಯಂಕಮ್ಮನಿಗೆ ಮುಕ್ರಿ ನೋಟುಗಳ ಕಂತೆ ಹಿಡಿದು 'ಇದು ನೋಡು. ನಿಂಗೆ ಕೊಡಬೇಕಾದದ್ದು ನಿನ್ನೆ ಸಂಜೆ ಏನೇನೋ ಎಲ್ಲ ಆಗಿ ಹೋಯಿತು. ಹಾಗಂತ ನಾವು ವರ್ಷ ವರ್ಷ ಕೊಡುವುದನ್ನು ಬಿಡಲಿಕ್ಕಾಗ್ತದಾ. ನಮ್ಮ ಮನೆಯಿಂದ ಪ್ರತಿ ತಲೆಗಿಷ್ಟು ಎಂಬಂತೆ ದೇವರಿಗೆ ಸಲ್ಲಬೇಕಲ್ಲ. ದೇವರು, ದಿಂಡಿರು, ಆಚರಣೆಯೆಂದ ಮೇಲೆ ಎಲ್ಲವೂ ಒಂದೇ ನಿಮ್ಮದಾದ್ರೇನು ನಮ್ಮದಾದ್ರೇನು. ಅಲ್ಲವಾ...' ಎಂದು ನೋಟುಗಳನ್ನು ನೀಡುತ್ತಾ ಮಕ್ಕಳಿಗೆ ಜ್ವರ ಬಂದಿದೆಯಂತೆ ಕಣ್ಣು ಮುಚ್ಚಿರಬೇಕು. 'ಕರಕೊಂಡು ಬಾ ಅಕ್ಕ ಮಂತ್ರಿಸಿಕೊಡುತ್ತೇನೆ' (ಪು.೨೧) ಎಂದು ಹೇಳುವುದರ ಮೂಲಕ ಮಾನವೀಯ ಮೌಲ್ಯವನ್ನು, ಕೋಮು ಸೌಹಾರ್ದತೆಯನ್ನು, ಮನುಷ್ಯತ್ವವನ್ನು ಈ ಕಥೆಯಲ್ಲಿ ಕಾಣುತ್ತೇವೆ.

'ಬುದ್ಧಿ ಇಲ್ಲದ ಹುಡುಗನ ತಲೆಯೊಳಗೆ' ಕಥೆಯಲ್ಲಿ ರಾಜಕೀಯತೆಯನ್ನು ಕುರಿತು ಹೇಳುವ ಕಥೆಯಾಗಿದೆ ಈ ಕಥೆಯಲ್ಲಿನ ನಾಯಕ ಯಾದವ ಪದವಿ ಪಡೆದಿದ್ದು ಕೆಲಸವಿಲ್ಲದೆ ನಿರುದ್ಯೋಗಿಯಾಗಿದ್ದಾನೆ. ಈ ಸಂದರ್ಭದಲ್ಲಿ ಲಂಚ ತೆಗೆದುಕೊಳ್ಳದೆ ಇರುವ ಜನತಾ ಪಾರ್ಟಿಯನ್ನು ಚುನಾವಣೆಯಲ್ಲಿ ಗೆಲ್ಲಿಸಲು ಓಟಿನ ಕಾರ್ಯನಿರ್ವಹಿಸುತ್ತಿದ್ದು. ಎಲ್ಲಿಯೂ ಮೋಸ ನಡೆಯದಂತೆ ಎಚ್ಚರ ವಹಿಸಿದ್ದನು ಇದರಿಂದ ಕಿಡಿಗೇಡಿಗಳು ಅವರ ತೆಂಗಿನ ಕಾಯಿಗಳನ್ನು ಕದ್ದಿದ್ದು ತಂದೆ ತಾಯಿಯರ ಕೋಪಕ್ಕೆ ಕಾರಣವಾಗಿದ್ದನು. ಜನತಾ ಪಾರ್ಟಿಯ ಎಂ.ಎಲ್.ಎ ಆಚಾರಪ್ಪ ಗೆದಿದ್ದು ಈ ಹಿಂದೆ ಜನತೆಗೆ ನೀಡಿದ ಭರವಸೆ ಡಿ.ಸಿ, ಆಫೀಸಿನಲ್ಲಿ ಲಂಚ ಇಲ್ಲದ ಹಾಗೆ ಮಾಡುತ್ತೇನೆ. ಕಾಳಿ ದೇವಸ್ಥಾನದ ದಾರಿಗೆ ಡಾಂಬರೀಕರಣ ಹಾಗೂ ಭಜನಾ ಮಂದಿರಾ ಕಟ್ಟಿಸುವ ಎಲ್ಲಾ ಮಾತುಗಳು ಹುಸಿ ಭರವಸೆಗಳಾಗಿ ಕಂಡು ಬಂದವು ಹೀಗೆ ರಾಜಕಾರಣಿಗಳು ಮುಗ್ಧ ಅಮಾಯಕ ಜನರನ್ನು ವಂಚಿಸಿ ಮೋಸ ಮಾಡುತ್ತಾರೆ. ಈ ಮೋಸ

ಯಾದವನಿಗೆ ತಿಳಿದು ತನ್ನ ಸ್ನೇಹಿತರೊಳಗೊಂಡು ಹಿಂದೂ ಮುಸ್ಲಿಂ ಎನ್ನದೆ ಎಲ್ಲರೂ ಐಕ್ಯತೆಯಿಂದ ಭಜನಾ ಮಂದಿರಾ ಕಟ್ಟಿಸುವಲ್ಲಿ ಶ್ರಮವಹಿಸಿದರು. ಹೀಗೆ ಐಕ್ಯತೆ ಭಾವನೆ ಮೂಡಿ ಮಾನವೀಯತೆಯನ್ನು ಕಾಣಬಹುದಾಗಿದೆ. ಕಾಳಿ ದೇವಸ್ಥಾನದ ಭಜನ ಮಂದಿರ ಉದ್ಘಾಟನೆಯಲ್ಲಿ ಜನರು ತಮ್ಮ ಕಷ್ಟಗಳನ್ನು ಪರಿಹರಿಸು ಎಂದು ಕೇಳಿಕೊಳ್ಳುವವರೇ ಹೊರತು ಯಾರು ಸಹ ಲಂಚ ಇಲ್ಲದ ಸರಕಾರ ಬರಲಿ ಎಂದು ಹರಕೆ ಹೊತ್ತದೆಯಿರುವ ಜನರ ಅಜ್ಞಾನವನ್ನು ಅಸಹಾಯಕತೆಯನ್ನು ಇಂದಿನ ಸಮಾಜದಲ್ಲಿ ಕಂಡುಬರುತ್ತವೆ.

'ಅವಳ ಪ್ರಶ್ನೆ' ಕಥೆಯಲ್ಲಿ ಪುರುಷ ಪ್ರಧಾನ ವ್ಯವಸ್ಥೆ ಪುರಾಣ ಕಾಲದಿಂದಲೂ ಹೆಣ್ಣಿನ ಮೇಲೆ ನಡೆಸುವ ದೌರ್ಜನ್ಯ, ಸ್ವಾರ್ಥತತೆಯನ್ನು ಕುರಿತು ಹೇಳುವ ಸಂಕೀರ್ಣ ಕಥೆಯಾಗಿದೆ. ಈ ಕಥೆಯಲ್ಲಿ ನಾಯಕಿ ಶಕುಂತಲೆ ದುಷ್ಯಂತರ ಪ್ರೇಮ ಪ್ರಸಂಗ, ದುಷ್ಯಂತ ಶಕುಂತಲೆಯನ್ನು ಒರೆಸದೆ ವ್ಯಭಿಚಾರಿ ಎಂದು ಅರಮನೆಯಲ್ಲಿ ಮಾಡಿದ ಅವಮಾನ ಎಲ್ಲವನ್ನೂ ಸಹಿಸಿಕೊಂಡು ಗರ್ಭದಲ್ಲಿದ್ದ ಭರತನನ್ನು ತಾಯಿ ಮೇನಕೆಯ ಆರೈಕೆಯಿಂದ ಸಾಕಿ ಸಲುಹಿದ್ದಾಳೆ. ಈ ಸಂದರ್ಭದಲ್ಲಿ ದುಷ್ಯಂತನಿಗೆ ತನ್ನ ತಪ್ಪಿನ ಅರಿವಾಗಿ ಹಾಗೂ ಸ್ವಾರ್ಥತನದಿಂದ ತನ್ನ ಅರಮನೆಯ ಯುವರಾಜ ಪಟ್ಟಕ್ಕೆ ಯಾರು ಸಮರ್ಥರಿಲ್ಲದಾಗ, ರಾಜಧರ್ಮ, ರಾಜಪರಿಪಾಲನೆಯ ಅನಿವಾರ್ಯತೆ, ಧಾರ್ಮಿಕತೆ ಧರ್ಮದ ನೆಪವೊಡ್ಡಿ ಭರತನನ್ನು ಕರೆದುಕೊಂಡು ಹೋಗಲು ಬಂದಿದ್ದು, ಇಲ್ಲದಿದ್ದರೆ ಮೋಸ ಮಾಡಿದಂತೆ ಎಂದು ಹೇಳಿ ರಾಜಮಾತೆ ಪಟ್ಟಕ್ಕೆ ಶಕುಂತಲೆಯನ್ನು ಬೇಡಿಕೊಂಡನು. ಈ ಸಂದರ್ಭದಲ್ಲಿ ಶಕುಂತಲೆ' ಭರತನನ್ನು ಸಾಮ್ರಾಜ್ಯವೇ ಬೇಡುತ್ತಿದೆ. ಅದು ರಾಜಧರ್ಮ ವಿಚಾರ ಆದರೆ ಈ ವನದಲ್ಲಿ ನನ್ನ ಬದುಕು ರಾಜಧರ್ಮಕ್ಕೆ ಬಲಿಯಾಗುತ್ತಿದೆ ಎಂದು ಕೊಂಡಿರಲಿಲ್ಲ. ಅಷ್ಟೇ ಏಕೆ ರಾಜಧರ್ಮ ಬಲಿ ಬೇಡುತ್ತಿದೆ ಎಂಬ ಕ್ರೌರ್ಯವೂ ಗೊತ್ತಿರಲಿಲ್ಲ. ಹೀಗೆ ಪುರುಷರು ತಮ್ಮ ಸ್ವಾರ್ಥ ಸಾಧನೆಗೆ ತಕ್ಕಂತೆ ನಿಯಮ ಕಟ್ಟುಪಾಡುಗಳನ್ನು ಹಾಕಿಕೊಂಡು ತಮ್ಮ ಮನ ಬಂದಂತೆ ಅದನ್ನು ಬದಲಿಸುವ ಹೆಣ್ಣನ್ನು ಅಪಮಾನ, ಮೋಸ, ಹಿಂಸೆಯನ್ನು ನೀಡುವ ಪುರುಷರ ಕ್ರೌರ್ಯತೆಯನ್ನು ಪುರಾಣಕಾಲದಿಂದಲೂ ಹೆಣ್ಣು ಇಂತತಹ ಸಂಕಷ್ಟಗಳನ್ನು ಎದುರಿಸುತ್ತಾದ್ದಾಳೆ. ಹೀಗೆ ತನ್ನ ವಂಶಪಾರ್ಯಂಪರೆಗೆ, ಆಡಳಿತಕ್ಕಾಗಿ, ರಾಜಧರ್ಮಕ್ಕಾಗಿ ಮಗನನ್ನು ಬೇಡುವ, ದುಷ್ಯಂತನಿಗೆ ಅದೇ ಹೆಣ್ಣು ಮಗಳು ಹುಟ್ಟಿದರೆ ನೀವು ಬರುತ್ತಿದ್ದಿರಾ? (ಪು.೪೨) ಎಂಬ ಶಕುಂತಲೆಯ ಪ್ರಶ್ನೆ ಪುರುಷ ಕೇಂದ್ರಿತ ಸಮಾಜದ ಸ್ವಾರ್ಥ, ಮೋಸ ವಂಚನೆಯನ್ನು ಬಯಲಿಗೆಳೆಯುತ್ತದೆ. ಹೀಗೆ ಶಕುಂತಲೆ ಭರತನನ್ನು ಕಳುಹಿಸಲು ಒಪ್ಪಿಕೊಂಡರೂ, ರಾಜಮಾತೆಯ ಪೀಠ ಎಂಬ ಭಿಕ್ಷೆಯನ್ನು ನಿರಾಕರಿಸುವುದರ ಮೂಲಕ ತನ್ನ ಬದುಕನ್ನು ತಾನು ಕಂಡುಕೊಳ್ಳುವ ದಿಟ್ಟತನದ ಮಹಿಳೆಯಾಗಿ ಕಂಡುಬರುತ್ತಾಳೆ. ಹೀಗೆ ರಾಜಕೀಯಾ ಅಧಿಕಾರದ ಸ್ವಾರ್ಥತೆಗಾಗಿ ಇಂತಹ ಕಾರ್ಯವನ್ನು ಮಾಡುವ ಪುರುಷ ಕೇಂದ್ರಿತ ಸಮಾಜಕ್ಕೆ ಅರಿವನ್ನು ಮೂಡಿಸುವ ಪ್ರಯತ್ನದಲ್ಲಿ ಈ ಕಥೆ ಮೂಡಿಬಂದಿದೆ. ಹೀಗೆ ಪುರುಷರ ಅಧಿಕಾರ, ದರ್ಪ, ಮೋಸ ವಂಚನೆ ಸ್ವಾರ್ಥತೆಯ ಅಡಿಯಲ್ಲಿ ಹೆಣ್ಣು ಪುರಾಣ ಕಾಲದಿಂದಲೂ

ಶೋಷಣೆಗೊಳ್ಳುತ್ತಿದ್ದು ಇಂದಿನ ಮಹಿಳೆಯರಿಗೆ ಇಂತಹ ಸಂಕಷ್ಟಗಳಿಂದ ಹೊರಬರುವಂತೆ ಎಚ್ಚರಿಕೆಯನ್ನು ನೀಡುವಂತಿದೆ.

'ನಡು ಘಟ್ಟದ ಮೌನ' ಕಥೆಯಲ್ಲಿ ಮನುಷ್ಯ ಸಂಬಂಧಗಳ ನಡುವಿನ ಅಂತರವನ್ನು ತಿಳಿಸುವ ಸಂಕೀರ್ಣ ಕಥೆಯಾಗಿದೆ. ಈ ಕತೆಯು ನಿರೂಪಕ ತನ್ನ ಪ್ರೇಯಸಿಯನ್ನು ನೆನೆಯುವುದರ ಮೂಲಕ ಕಥೆ ನಿರೂಪಣೆಗೊಳ್ಳುತ್ತದೆ. ನಾಯಕ ವಿಶ್ವನಾಥ ಮಧುವೆಯಾಗಿ ಹಲವು ವರ್ಷಗಳು ಕಳೆದುಹೋದರು ತನ್ನ ಹಂಡತಿಯ ಮಡಿಲಲ್ಲಿ ಪುಟ್ಟ ಕಂದನನ್ನು ತರುವಲ್ಲಿ ಅಸಮರ್ಥನಾದ, ಆದರೆ ತಾಯ್ತನಂದ ಬಯಕೆಯನ್ನು ಹಂಬಲಿಸಿ ಹೆಂಡತಿ ಸಾವಿತ್ರಿ ಪರಪುರುಷನೊಂದಿಗೆ ಅನೈತಿಕ ಸಂಬಂಧವನ್ನು ಬಳಸಿ ಬಸುರಾದಳು ಸಮಾಜದ ಕಣ್ಣಿಗೆ ವ್ರತ ಪೂಜೆಯಿಂದ ಗರ್ಭಧರಿಸಿದ್ದಾಳೆ ಎಂದು ತಿಳಿದರೂ ಆದರೆ ವಾಸ್ತವ ವಿಶ್ವನಾಥನಿಗೆ ಮಾತ್ರ ಗೊತ್ತಿದ್ದು, 'ನನ್ನಿಂದಾಗಲಿಲ್ಲ ಅವಳಾದರೂ ಚೆಂದಾಗಿರಬಾರದೆ ಖುಷಿಯಾಗಿದ್ದಾಳೆ. ಇರಲಿ' (ಪು.೯೧) ಎಂದು ದುಃಖ ಉಮ್ಮಳಿಸಿದರೂ ಎಲ್ಲವನ್ನು ತಡೆದು ಮಾನವೀಯತೆಯನ್ನು ತೋರಿದನು. ಆದರೆ ತನ್ನ ಈ ದುಖವನ್ನು ಅಳಲನ್ನು ಹೇಳಿಕೊಳ್ಳಲು ಗೆಳತಿ ಘಟ್ಟದ ಗಿರಿಜಾಳನ್ನು ಭೇಟಿಯಾಗಲು ಹೋದಾಗ ಕಂಟ್ರಾಕ್ಟರ್ ಜೊತೆ ಓಡಿಹೋದ ಸುದ್ದಿ ತಿಳಿದು ನಿರಾಶನಾಗಿ ಮನೆಗೆ ಹಿಂದುರುಗುವ ಮೂಲಕ ನಿರ್ಲಿಪ್ತನಾಗುತ್ತಾನೆ. ಹೀಗೆ ಮನುಷ್ಯ ಸಂಬಂಧಗಳ ನಡುವಣ ತಣ್ಣನೆಯ ಬಿರುಕುಗಳು ಕಂದಕವಾಗುವುದನ್ನು ಕಾಣಬಹುದಾಗಿದೆ. 'ಪೋಕ್ರಿ ಕಿಟ್ಟಪ್ಪ' ಕಥೆಯು ಬಾಲ್ಯದ ನೆನಪುಗಳನ್ನು ಮರುಕಳಿಸುವಂತೆ, ಹಂತ ಹಂತವಾಗಿ ಬೆಳೆದ ವ್ಯಕ್ತಿಯ ಜವಾಬ್ದಾರಿಗಳು ಸಂಸಾರದ ಜಂಜಾಟ, ಈ ನಡುವೆ ಹೆತ್ತವರ ಪ್ರೀತಿ ಬಾಲ್ಯದ ಮಧುರ ಕ್ಷಣಗಳು ವ್ಯಕ್ತಿಗೆ ಹೊಸ ಚೇತನವನ್ನು ನೀಡುವಂತೆ ಕಥೆಯಾಗಿ ಮೂಡಿಬಂದಿದೆ.

'ಸಾವಿನ ಮನೆ' ಕಥೆಯಲ್ಲಿ ಮುಷ್ಯನ ಹುಟ್ಟು ನೋವುಗಳ ಅನಿವಾರ್ಯತೆಯನ್ನು ಕುರಿತು ಹೇಳುವ ಕಥೆಯಾಗಿದೆ. 'ಕೋವಿ ಮನೆ' ಕಥೆಯಲ್ಲಿ ಧರ್ಮದ ಹೆಸರಿನಲ್ಲಿ ಮುಗ್ಧ ಜನರನ್ನು ಮೋಸಗೊಳಿಸಿ ಅನ್ಯಾಯ ಮಾರ್ಗಗಳಿಂದ ಸಂಪತ್ತನ್ನು ಕಬಳಿಸಿ ಶ್ರೀಮಂತನಾಗುವ ವ್ಯಕ್ತಿ ಅಷ್ಟೇ ಬೇಗನೆ ಎಲ್ಲವನ್ನು ಕಳೆದುಕೊಂಡು ಜೀವನ ದುರಂತಗೊಳಿಸುವ ವ್ಯಕ್ತಿಯ ಚಿತ್ರಣವನ್ನು ನೀಡುವುದರ ಮೂಲಕ ಜನರ ಮೂಢ ನಂಬಿಕೆ, ಮೌಡ್ಯತೆಗಳನ್ನು ತಿಳಿಸುತ್ತಾ ನೈತಿಕತೆಯನ್ನು ಜನರಲ್ಲಿ ಮೂಡಿಸುವಂತೆ ಚಿತ್ರಣಗೊಂಡಿದೆ.

ವ್ಯಕ್ತಿಯ ಮೋಸ ವಂಚನೆಯನ್ನು ತಿಳಿಸುತ್ತಾ ಅನ್ಯಾಯ ಮಾರ್ಗಗಳಿಂದಗಳಿಸಿದ ಧನ ಅಧಿಕಾರಗಳು ಬಹುಬೇಗನೆ ಇಲ್ಲವಾಗುತ್ತದೆ ಎಂದು ನೀತಿ ಕಥೆಯಂತೆ 'ಹಸನಬ್ಯಾರಿ ಕಥೆ' ಮೂಡಿ ಬಂದಿದೆ.

'ಗಿಡ್ಡಕೂದಲಿನ' ಹುಡುಗಿ ಕಥೆಯಲ್ಲಿ ಬದುಕನ್ನು ಈ ಬದುಕಿನಲ್ಲಿ ಬರುವ ಕಷ್ಟಗಳನ್ನು ಎದುರಿಸಲಾರದೆ ಸಂಸಾರದಿಂದ ವಿಮುಖನಾಗಿ ಸ್ವತಂತ್ರವಾಗಿರಲು ಬಯಸುವ ವ್ಯಕ್ತಿಯ ಪಲಾಯನವಾದಿಯನ್ನು ಹಾಗು ಹೆಣ್ಣಿನ ಒಂಟಿತನ, ತಾಯ್ತನದ ಹಂಬಲವನ್ನು ತಿಳಿಸುವುದು ಮೂಲಕ ತನ್ನ ತಪ್ಪಿನ ಅರಿವಾಗಿ ಪಾಪಪ್ರಜ್ಞೆ ಕಾಡಿ ನಿರ್ಧಾರವನ್ನು ಬದಲಿಸುವುದರ ಮೂಲಕ ಕೌಟುಂಬಿಕ

ಸಾಮರಸ್ಯವನ್ನು ಕಾಣಬಹುದಾಗಿದೆ. 'ಕಂಪಾಸ ಬಾಕ್ಸು' ಕಥೆಯಲ್ಲಿ ಬಡತನ, ವಿದ್ಯೆ ಕಲಿಯುವ ಉತ್ಕಟ ಆಕಾಂಕ್ಷೆ ಆದರೆ ಅದನ್ನು ಈಡೇರಿಸಿಕೊಳ್ಳಲಾಗದ ಮನೆಯ ಆರ್ಥಿಕ ಪರಿಸ್ಥಿತಿ ಈ ನಡುವೆ ತನ್ನ ಕಲಿಯುವ ಆಸೆಯನ್ನು ಈಡೇರಿಸಿಕೊಳ್ಳಲು ಪುಟ್ಟಬಾಲಕಿ ನಡೆಸುವ ಹೋರಾಟ ಮನಸ್ಸನ್ನು ಕದಲಿಸುತ್ತದೆ ಎಳೆ ವಯಸ್ಸಿನ ಮನಸ್ಸನ್ನು ತೆರೆದಿಡುವ ಕಥೆಯಾಗಿದೆ. 'ಕೃಷ್ಣ ಪಕ್ಷದ ಚಂದ್ರಮನಿಗೆ' ಕಥೆಯು ಕಥೆಗಾರ್ತಿ ಕವಿಯತ್ರಿಯೂ ಆಗಿದ್ದಾರೆ ಎಂಬಂತೆ ಬಾಸವಾಗುತ್ತದೆ.

ಹೀಗೆ ಈ ಕಥಾ ಸಂಕಲನದಲ್ಲಿ ಒಟ್ಟು ಹನ್ನೊಂದು ಕಥೆಗಳಿದ್ದು ಅವು ಕಥೆಗಾರ್ತಿಯ 'ಖಾಸಾ ಅನುಭವದ ಕಥೆಗಳಾಗಿ ಮೂಡಿ ಬಂದಿದೆ. ಈ ಎಲ್ಲಾ ಕಥೆಗಳಲ್ಲಿ ಕೋಮುಗಲಭೆ, ರಾಜಕಾರಣ, ಹೆಣ್ಣಿನ ಶೋಷಣೆ, ಬಾಲ್ಯದ ಪರಿಸರ, ಎಳೆಯ ಮನಸ್ಸಿನ ಅಂತರಾಳದ ಮಾತುಗಳು, ಮನುಷ್ಯನ ಹುಟ್ಟು ಸಾವಿನ ಅನಿವಾರ್ಯತೆ, ಬಂಜೆತನ, ತಾಯ್ತನದ ಬಯಕೆ ಇತ್ಯಾದಿ ಅಂಶಗಳು ಕಥೆಯ ವಸ್ತುವಾಗಿ ವ್ಯಕ್ತಿಯ ಗುಣಸ್ವಭಾವಗಳನ್ನು ತಿಳಿಸುತ್ತಾ ಬದುಕಿನ ಕ್ರೌರ್ಯವನ್ನು ತಿಳಿಸುವುದರ ಮೂಲಕ ಇಂತಹ ಕ್ರೌರ್ಯತನದಲ್ಲಿ ಮಾನವೀಯ ಸಂಬಂಧಗಳನ್ನು ಹುಡುಕಾಡುವ, ಮಾನವೀಯ ಮೌಲ್ಯಗಳನ್ನೊಳಗೊಂಡ ಮನುಷ್ಯತ್ವದ ತಿರುವುಗಳನ್ನು ಪಡೆದ ಕಥೆಗಳಾಗಿವೆ. ಅಲ್ಲದೆ ಪುರಾಣದ ವಸ್ತುವನ್ನು ಕಥೆಯಾಗಿಸಿ ಪುರುಷಕೇಂದ್ರಿತ ವ್ಯವಸ್ಥೆ ತನ್ನ ಸ್ವಾರ್ಥಕ್ಕಾಗಿ ಮಾಡಿಕೊಂಡ ನೀತಿ ನಿಯಮಗಳನ್ನು ರಾಜಕೀಯ ಹುನ್ನಾರವನ್ನು ಬಯಲಿಗೆಳೆಯುವ, ಆ ಮೂಲಕ ಹೆಣ್ಣಿನ ಮೇಲೆ ನಡೆಯುವ ದೌರ್ಜನ್ಯ, ಅಸಮಾನತೆ ಹಾಗೂ ಇದನ್ನು ಪ್ರಶ್ನಿಸುವ ಹೆಣ್ಣಿನ ದಿಟ್ಟತನವನ್ನು ಈ ಕಥಾ ಸಂಕಲದಲ್ಲಿ ಕಾಣಬಹುದಾಗಿದೆ. ಹೀಗೆ ಕಥೆಗಾರ್ತಿ ಭಿನ್ನ ವಸ್ತು, ಅದಕ್ಕೆ ತಕ್ಕಂತೆ ಭಾಷೆ ಬಳಕೆ, ಹೊಸ ಪ್ರಯೋಗಶೀಲತೆ ಎಲ್ಲಿಯೂ ಚ್ಯುತಿ ಬರದಂತೆ ತಾರ್ಕಿಕತೆಗೆ ಅವಕಾಶ ಮಾಡಿಕೊಡದೆ ದಟ್ಟ ಅನುಭವವನ್ನು ಕಥೆಯಾಗಿಸಿ ಆ ಮೂಲಕ ಮಾನವೀಯ ಸಂಬಂಧಗಳನ್ನು ಬೆಸೆಯುವ ಜೀವನ ಪ್ರೀತಿಯನ್ನು ಹುಟ್ಟಿಸುವ ಮುಷ್ಟಿಯನ್ನೂ ಮೀರಿದಂತೆ ಇಲ್ಲಿಯ ಕಥೆಗಳು ಬೆಳೆದು ಬಂದು ರಾಜಲಕ್ಷ್ಮೀ ಒಳ್ಳೆಯ ಕಥೆಗಾರ್ತಿ ಎಂಬುದನ್ನು ಸಾಬಿತು ಪಡಿಸುವ ಕಥೆಗಳಾಗಿ ಮೂಡಿಬಂದಿದೆ.

ಸಂಧ್ಯಾ ಹೊನಗುಂಟಿಕರ ಕಥೆಗಳು

ಇತ್ತೀಚಿನ ಕಥೆಗಾರ್ತಿಯರಲ್ಲಿ ಒಬ್ಬರಾದ ಸಂಧ್ಯಾ ಹೊನಗುಂಟೆಕರ್ ಅವರು **'ಹರಿದ ಹಾಸಿಗೆ ಹಂಬಲ'** ಎಂಬ ಕಥಾಸಂಕಲನವನ್ನು ರಚಿಸಿದ್ದು ಈ ಸಂಕಲನದಲ್ಲಿ ಒಟ್ಟು ೧೦ ಕಥೆಗಳಿದ್ದು ಭಿನ್ನ ವಸ್ತುಗಳಿದ್ದು ಈ ಎಲ್ಲಾ ಕಥೆಗಳಲ್ಲಿ ಕಥೆಗಾರ್ತಿಯ ಬಾಲ್ಯದ ದಟ್ಟ ಅನುಭವಗಳಿದ್ದು ಉತ್ತರ ಕನ್ನಡ ಪರಿಸರದ ಪ್ರಭಾವವನ್ನು ಈ ಕಥೆಯಲ್ಲಿ ಕಾಣಬಹುದಾಗಿದೆ ಇಲ್ಲಿ ಬರಗಾಲ, ಅತಿವೃಷ್ಟಿ, ಅನಾವೃಷ್ಟಿ, ದಲಿತರ ಜೀವನ, ಜಮೀನ್ದಾರರ ದಬ್ಬಾಳಿಕೆ, ಅಂತರ್‌ಜಾತಿವಿವಾಹ, ಸಂಪ್ರದಾಯಿಕತೆ, ಮಡಿ ಮೈಲಿಗೆ, ಹಳ್ಳಿಯ ಜನರ ಮೂಡನಂಬಿಕೆ, ಮೋಸ ವಂಚನೆ ಮುಂತಾದ ವ್ಯಕ್ತಿಯ ಗುಣ ಸ್ವಭಾವವನ್ನು ಕಥೆಯ ವಸ್ತುವಾಗಿರಿಸಿದ್ದಾರೆ ಅಲ್ಲದೆ ಏಡ್ಸ್‌ನಂತಹ ಮಾರಕ ರೋಗಕ್ಕೆ ಬಲಿಯಾದ ಜೀವಿಗಳಿಗೆ, ವ್ಯಕ್ತಿಗಳಿಗೆ

ಬದುಕು ಪ್ರೀತಿಯನ್ನು ಹುಟ್ಟಿಸುವಂತೆ ಪರಿಹಾರ ಸಾಂತ್ವನ ನೀಡುವ ಕಥೆಗಳಾಗಿವೆ ಅಲ್ಲದೆ ಕಥೆಗಾರ್ತಿ ಸಂಪ್ರದಾಯ ಚೌಕಟ್ಟನ್ನು ಮೀರಿ ಹೆಣ್ಣು ಪುರುಷರಂತೆ ಪೂಜೆ ಪುನಸ್ಕಾರದಲ್ಲಿ ಸಮಾನತೆಯನ್ನು ಪಡೆಯುವ, ಬದುಕಿನಲ್ಲಿ ಬರುವ ಸಂಕಷ್ಟಗಳಿಗೆ ಹೆದರದೆ ಬದುಕುವ ಛಲಯವನ್ನು ಬಿಡದೆ ಹೋರಾಡುವ ಗಟ್ಟಿಗಿತ್ತಿಯರು ಸ್ತ್ರೀಯರಾಗಿದ್ದಾರೆ. ವೇಶ್ಯಾವೃತ್ತಿಯನ್ನು ತಿಳಿಸುವುದರ ಮೂಲಕ ಅದಕ್ಕೆ ಕಾರಣವಾಗುವ ಪುರುಷರಿಗೆ ಯಾವುದೇ ಸಂಘರ್ಷವಿಲ್ಲದೆ ಮೌನರೀತಿಯಲ್ಲಿ ಅರಿವನ್ನು ಮೂಡಿಸಿ, ಹೆಣ್ಣು ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ನಿರಂತರವಾಗಿ ಅನುಭವಿಸುವ ಮಾನಸಿಕ ಹಾಗೂ ದೈಹಿಕ ಶೋಷಣೆಯನ್ನು ತಿಳಿಸಿ ಆ ಮೂಲಕ ಪುರುಷ ಕೇಂದ್ರಿತ ಸಮಾಜಕ್ಕೆ ಅರಿವನ್ನು ಮೂಡಿಸುವಂತೆ ಇಲ್ಲಿಯ ಕಥೆಗಳಿವೆ. ಈ ಕಥಾಸಂಕಲನದಲ್ಲಿ ಮೊದಲನೇ ಕಥೆಯಾದ 'ಹರಿದ ಹಾಸಿಗೆ ಹಂಬಲ' ಕಥೆಯಲ್ಲಿ ದಲಿತರ ಮೇಲೆ ನಡೆಯುವ ಅಪಮಾನ, ಹಿಂಸೆಗಳನ್ನು ಕುರಿತು ಹೇಳುವ ಸಂಕೀರ್ಣ ಕಥೆಯಾಗಿದೆ ಈ ಕಥೆ ನಿರೂಪಕ ಪಾತ್ರದ ಮೂಲಕ ನಿರೂಪಣೆ ಗೊಳ್ಳುತ್ತದೆ. ಊರಿನಲ್ಲಿ ಮೂರು ನಾಲ್ಕು ವರ್ಷ ಸತತವಾಗಿ ಮಳೆಯಿಲ್ಲದೆ ದನಕರುಗಳಿಗೆ ಮೇವು, ನೀರಲ್ಲದೆ, ದಲಿತರು ಅತ್ಯಂತ ಬಡವರಾಗಿದ್ದು ಉಳ್ಳವರ ಹೊಲದಲ್ಲಿ ಕೂಲಿ ಸಿಗದೆ ಹಸಿವಿನಿಂದ ಕಂಗಾಲಾಗಿದ್ದು ಜೀವನ ಬಡವರಾಗಿದ್ದು ಉಳ್ಳವರ ಹೊಲದಲ್ಲಿ ಕೂಲಿ ಸಿಗದೆ ಹಸಿವಿನಿಂದ ಕಂಗಾಲಾಗಿದ್ದು ಜೀವನ ನಿರ್ವಹಣೆಗಾಗಿ ನಗರಗಳಿಗೆ ಹೊಲಸೆ ಹೋಗುಲು ನಿರ್ಧರಿಸಿದ್ದು ಈ ಸಂದರ್ಭದಲ್ಲಿ ಮಲ್ಕ್ಯಾನನ್ನು ಗೌಡ್ರ ಮನೆಗೆ ಜೀತಕ್ಕೆ ನೇಮಿಸಲು ನಿರ್ಧರಿಸಿದ್ದು ಅತೀವ ದುಃಖ ಉಂಟುಮಾಡಿತು ಕಾರಣ ಗೌಡ್ರು ದರ್ಪ, ಕ್ರೂರತೆ ಕೆಳವರ್ಗದವರನ್ನು ಹಿಂಸಿಸುವ ಪರಿ ಕಣ್ಣೆದುರಿಗೆ ಬಂದು ಇದರಿಂದ ತಪ್ಪಿಸಿಕೊಳ್ಳಲು ಹಾತೊರೆಯುತ್ತಿದ್ದು ಹೇಗಾದರೂ ಮಳೆ ಬರಿಸಿಬೇಕು ಅಥವಾ ಗೌಡ್ರನ್ನು ನಾಶಪಡಿಸಿಬೇಕು ಎಂಬ ಹಠ ತೊಟ್ಟು ಪೂಜೆ ಪುನಸ್ಕಾರ ಕೊನೆಗೆ ಮಳೆರಾಯನ ಬರುವಿಕೆ ಆಟ ಯಾವುದೇ ಪ್ರಯತ್ನ ಫಲಸಿಗದೆ ಕೊನೆಗೆ ಅಗಸರ ಸಾಬವ್ವ ಹೇಳಿದ "ಏ ತಂಗೇರೆ... ಮನಿ ಮನಿ ಹೋಗಿ ಕಪ್ಪಿಗೆ ಜಳಕ ಮಾಡಸ್ಹೊಂಬರ್ರಿ ಅಗದ್ರ ಮಳಿ ಬಂದೀತು" (ಪುಟ ೯) ಎಂಬ ಸಲಹೆಯನ್ನು ಸ್ವೀಕರಿಸಿ ಮಲ್ಕ್ಯಾ ಗೌಡ್ರ ಹಿಂಸೆಯಿಂದ ತಪ್ಪಿಸಿಕೊಳ್ಳಲು ತಾನು ಒನಕೆ ಹಿಡಿದು ಬೆತ್ತಲೆಯಾಗಿ ಮನೆಮನೆಗೆ ನೀರು ಹಾಕಿಸಿಕೊಂಡು ಅಪಮಾನ ನಾಚಿಕೆಯನ್ನು ತೊರೆದು ಕಾರ್ಯನಿರ್ವಹಿಸಿ ಅಪಮಾನ, ನಾಚಿಕೆ, ಜನರ ನಿಂದೆಯನ್ನು ಅನುಭವಿಸಿ ಕೊನೆಗೆ ಮಳೆತರಿಸಿದನು ಈ ಸಂದರ್ಭದಲ್ಲಿ ಗೌಡ್ರು ಜೀತ ಪದ್ಧತಿಯಿಂದ ಮುಕ್ತಿಗೊಂಡು ಮಲ್ಕ್ಯಾನ ಸಂತೋಷಕ್ಕೆ ಪಾರವಿಲ್ಲದೆ ಜಮೀನ್ದಾರರು ದಲಿತರ ಮೇಲೆ ನಡೆಸುವ ದಬ್ಬಾಳಿಕೆಯನ್ನು ಕ್ರೂರತೆಯನ್ನು ಮೌನವಾಗಿ ಕಥೆ ಬಿಚ್ಚಿಡುತ್ತದೆ. ಈ ಮೂಲಕ ಪಟ್ಟಣ ಪ್ರದೇಶಗಳಿಗೆ ವಲಸೆ ಹೋಗುವ ಜನರ ನಿರ್ಧಾರವನ್ನು ಬದಲಿಸುವ ಮೂಲಕ ಸ್ವದೇಶಿತನವನ್ನು ಎತ್ತಿ ಹಿಡಿಯುವುದನ್ನು ಕಾಣಬಹುದಾಗಿದೆ.

'ರಾದೇಯ' ಕಥೆಯು ತಾಯ್ತನದ ಮಹತ್ವವನ್ನು ತಿಳಿಸುವ ಸಂಕೀರ್ಣ ಕಥೆಯಾಗಿದೆ ಈ ಕಥೆಯು ರಾದೇಯಳ ವಾತ್ಸಲ್ಯದ ಅರಿವನ್ನು ಮೂಡಿಸುವ ಯತ್ನದಲ್ಲಿ ಕಥೆ ನಿರೂಪಣೆಗೊಳ್ಳುತ್ತದೆ. ಲೋಕನಿಂದನೆಗೆ

ಹೆದರಿ ಕುಂತಿ ಕರ್ಣನನ್ನು ದೂರಗೊಳಿಸಿದ್ದು ಆದರೆ ಬಂಜೆತನದಿಂದ ಬಳಲಿ ಲೋಕನಿಂದನೆಗೊಳಾಗಿದ್ದ ರಾದೇಗೆ ಕರ್ಣ ದೊರಕಿದ್ದು ಸ್ವರ್ಗವೇ ಸಿಕ್ಕಂತೆ ಸಂತೋಷಗೊಂಡಳು ಈ ನಡುವೆ ಕರ್ಣ ಮಲತಾಯಿಯ ಪ್ರೀತಿ ವಾತ್ಸಲ್ಯದಲ್ಲಿ ಬೆಳೆದು ವೀರ, ಪೌರುಷತ್ವದಲ್ಲಿ ಪಾಂಡವರಿಗೆ ಮೀರಿಸಿ ಬೆಳೆದಿದ್ದು ಅಲ್ಲದೆ ಸುತಪುತ್ರನೆಂಬ ಬಿರುದು ಗಳಿಸಿದ್ದ ಈ ರೀತಿ ತನ್ನ ಮೂಲ ಹುಟ್ಟನ್ನು ತಿಳಿಯದೆ ಕಳವಳಗೊಳ್ಳುತ್ತಿರುವ ಸಂದರ್ಭದಲ್ಲಿ ಕುಂತಿ ತನ್ನ ಮಗ ಅರ್ಜುನನ್ನು ಉಳಿಸಿಕೊಳ್ಳುವ ಸಲುವಾಗಿ 'ತನ್ನ ಹಿರಿಯ ಮಗನೆಂದು ಒಪ್ಪಿಕೊಂಡು ಪಾಂಡವರಲ್ಲಿಯೇ ನೀನು ಪ್ರಥಮ ನೀನು ಹಿರಿಯನಾಗಿ ನೀನೇ ತಮ್ಮಂದಿರೊಂದಿಗೆ ಬೆರೆತು ಯುದ್ಧ ಮಾಡು, ಜಯಶಾಲಿಯಾಗು ನೀನೇ ಹಸ್ತಿನಾವತಿಯ ಚಕ್ರವರ್ತಿಯಾಗುವಿ' (ಪುಟ.೧೧) ಎಂದು ಕರ್ಣನನ್ನು ಓಲೈಸಿದಳು. ಇದನ್ನು ತಿಳಿದ ರಾಧೆಯ ತನ್ನ ಮಗನ ಅಗಲುವಿಕೆಯನ್ನು ಸಹಿಸಿದೆ ಕುಂತಿಯ ಮೇಲೆ ರೊಚ್ಚಿಗೆದ್ದಳು ಆದರೆ ಮರುಕ್ಷಣವೇ ನಿರಾಳವಾಗಿ "ನೀನು ಕುಂತಿ ಮಾತೆಯ ಮಾತಿನಂತೆ ಅವಳೊಂದಿಗೆ ಹೋಗು....ನಾನು ಸುತ ಪುತ್ರನಲ್ಲ ಪರಮಕ್ಷತ್ರೀಯ ವೀರಕುಲದವ .....ಪಾಂಡವರ ಪ್ರಥಮನೆಂದು ಈ ಜಗತ್ತಿಗೆಲ್ಲ ಸಾರು" (ಪು.೧೫) ಎಂದು ಹೇಳುವುದರ ಮೂಲಕ ತಾಯ್ತನದ ಹಿರಿಮೆಯನ್ನು ಕಾಣಬಹುದಾಗಿದೆ ಈ ಹಿನ್ನಲೆಯಲ್ಲಿ ಸುತ ಪುತ್ರನೆಂಬ ಕಾರಣದಿಂದ ದ್ರೌಪತಿ ತನ್ನ ಗಂಡನಾಗಿ ಸ್ವೀಕರಿಸಲು ನಿರಾಕರಿಸಿದಳು ಹಾಗೂ ದ್ರೋಣ ವಿದ್ಯೆ ಕಲಿಸಲು ಒಪ್ಪಲಿಲ್ಲ ಆದರೆ ಇಂದು ನೀಚ ಕುಲದಲ್ಲಿ ಹುಟ್ಟಿ ಕ್ಷತ್ರೀಯರಿಗಿಂತಲೂ ವೀರತ್ವವನ್ನು ಪಡೆದುಕೊಂಡು ಕರ್ಣ ಔತನ್ಯವನ್ನು ಪಡೆದಿದ್ದಾನೆ. ಕರ್ಣ ರಾಧೆಯ ಮಾತನ್ನು ನಿರಾಕರಿಸಿ ಪಾಂಡವರೊಂದಿಗೆ ಸೇರಲು ಒಪ್ಪಿಕೊಳ್ಳದೆ 'ಮಾತೆ ನಾನು ಕುಲವನ್ನು ಬಿಟ್ಟು ಹೋದರೆ ಮೇಲ್ಜಾತಿಯವನೆಂದು ಆಧರಿಸಿಯಾರು ಆದರೆ ಈ ಕುಲದ ತಾರತಮ್ಯ ಹೀಗೆ ಉಳಿಯಬೇಕೆ? ನಾನೊಬ್ಬನು ಆ ಕತ್ತಿನಿಂದ ಪಾರಾದರೆ ಸಾಕೆ? ಇಲ್ಲ..... ಕುಲದ ಹೆಸರಿನಿಂದ ಯಾರೂ ನೋಯಬಾರದು, ಕುಲ ಯಾವುದಾದರೇನು ಮನುಷ್ಯನ ಗುಣಗಳನ್ನು ಪರಿಗಣಿಸುವಂತಾಗಬೇಕಲ್ಲವೆ? ಎಂದು ತನ್ನ ಕೆಳಜಾತಿಯನ್ನೇ ಒಪ್ಪಿಕೊಂಡು ಮಲತಾಯಿಯ ಪ್ರೀತಿಯನ್ನೇ ಹರಿಸಿ ಕೆಳಜಾತಿಯ ಶ್ರೇಯಸ್ಸನ್ನು ಎತ್ತಿ ಹಿಡಿಯುವುದರ, ತನ್ನನ್ನು ಸುತ ಪುತ್ರನೆಂದು ಕಡೆಗಣಿಸದೆ ಅಂಗಾಧಿಪತಿಯನ್ನು ಮಾಡಿದ ದುರ್ಯೋದನನ ಉದಾರತೆಗೆ ಮಿತ್ರದ್ರೋಹ ಬಗೆಯದೆ ಜಾತೀಯತೆಯನ್ನು ಹೋಗಲಾಡಿಸಿ ಕೆಳಜಾತಿಯ ಔತನ್ಯವನ್ನು ಎಲ್ಲೆಡೆ ಸಾರುವುದರ ಮೂಲಕ ಮಾನವೀಯತೆಯನ್ನು ಕರ್ಣನಲ್ಲಿ ಕಾಣಬಹುದಾಗಿದೆ. ಹೀಗೆ ಮನುಷ್ಯನಲ್ಲಿ ಒಳ್ಳೆಯ ಗುಣವಿರಬೇಕು ಅದರಿಂದ ಆತನ ವ್ಯಕ್ತಿತ್ವವನ್ನು ಕಾಣಬಹುದೇ ಹೊರತು ಜಾತೀಯತೆಯಿಂದಲ್ಲ, ಹೀಗೆ ಪುರಾಣದ ವಸ್ತುವನ್ನು ಕಥೆಯಾಗಿಸಿ ಜಾತೀಯತೆ ಸಮಸ್ಯೆ ಅಂದಿನಿಂದಲೂ ಬೆಳೆದುಕೊಂಡು ಬಂದಿದ್ದು ಇಂದಿಗೂ ಪ್ರಮುಖ ಸಮಸ್ಯೆಯಾಗಿ ಕಾಡುತ್ತಿರುವುದನ್ನು ಕಾಣಬಹುದಾಗಿದೆ.

'ಹಾವು ಮುತ್ತಿನ ಹುಡುಕಾಟದಲ್ಲಿ' ಹೆಣ್ಣು ಮಾನಸಿಕವಾಗಿ ಹಾಗೂ ದೈಹಿಕವಾಗಿ ಪುರುಷರಿಂದ ಶೋಷಣೆಗೊಳ್ಳುತ್ತಿರುವ ಪರಿಯನ್ನು ನೀಡುವ ಸಂಕೀರ್ಣ ಕಥೆಯಾಗಿದೆ ಈ ಕಥೆಯು ನಿರೂಪಕಿಯ

ಮೂಲಕ ಕಥೆ ನಿರೂಪಣೆಗೊಳ್ಳುತ್ತದೆ. ಈ ಕಥೆಯ ನಾಯಕಿಯಾದ ಸುಧಾ ಪತ್ರಕರ್ತೆಯಾಗಿದ್ದು ಏಡ್ಸ್ ಕ್ಷೇತ್ರಕಾರ್ಯದ ಬಗ್ಗೆ ನೆಡೆದ ಸಮಾರಂಭದಲ್ಲಿ ಹಲವು ಸಂಸ್ಥೆಯ ಪ್ರತಿನಿಧಿಗಳು ಈ ಏಡ್ಸ್ ಜನಜಾಗೃತಿ ಮೂಡಿಸುವಲ್ಲಿ ತಮಗಾದ ಅನುಭವಗಳನ್ನು ಮಡಿವಂತಿಕೆಯಿಲ್ಲದೆ ಸಭೆಯ ಮುಂದೆ ತೆರೆದಿಟ್ಟಾಗ ಅದನ್ನು ಲಿಖಿತ ರೂಪದಲ್ಲಿ ದಾಖಲಿಸುತ್ತಾ ಅಸಹ್ಯಗೊಂಡು ಮನ ಕಸಿವಿಸಿಗೊಂಡಳು ಈ ಸಂದರ್ಭದಲ್ಲಿ ಶಕ್ತಿ ಸಂಸ್ಥೆಯ ಪ್ರತಿನಿಧಿ ಅಬ್ದುಲ್ ತನ್ನ ಅನುಭವವನ್ನು ಹೇಳಿಕೊಳ್ಳುವಾಗ 'ಮೊದಮೊದಲು ಅಲ್ಲಿಯ ಜನ ನಿಂಗೂ ಗಿರಾಕಿ ಅಂತನೇ ತಿಳಿದಿದ್ದರೂ, ಒಳಗೆ ಕರಿತಿದ್ರು ಒಬ್ಬರಿಗಿಂತ ಒಬ್ಬರು ರೇಟು ಕಮ್ಮಿ ಮಾಡುತ್ತಿದ್ರು ನೀ ಬಾಳ ಸಣ್ಣಾಂವ ಇದ್ದಿ ಖರೇ ಏನೂ ಗೊತ್ತಿರಲಿಕ್ಕಿಲ್ಲ; ಗಾಬ್ರಿ ಬ್ಯಾಡ ನಾನೆಲ್ಲ ಸಂಭಾಳಿಸಿಕೊಂತೀವಿ' (ಪು.೨೦) ಎಂದು ಈ ಕ್ಷೇತ್ರದಲ್ಲಿ ತಾನು ಅನುಭವಿಸಿದ ಹಿಂಸೆ, ಸಂಕೋಚ ಅಸಹ್ಯ ಭಾವನೆಯನ್ನು ತೆರೆದಿಡುತ್ತಾ ವೇಶ್ಯಾವೃತ್ತಿಯಲ್ಲಿ ತೊಡಗಿದ್ದ ಶ್ಯಾಮಲಾ ಮಹಿಳೆಯಿಂದ ಸಭೆ ಸೇರುವಂತಾಗಿ ಈ ಮಾರಕ ಕಾಯಿಲೆ ಬಗ್ಗೆ ಜಾಗೃತಿ ಮೂಡಿಸುವಲ್ಲಿ ನೆರವಾಗಿ ಮಾನವೀಯತೆ ಮೆರೆದಿದ್ದಾಳೆ. ಈ ಮಹಿಳೆ ಜೊತೆಯಲ್ಲಿ ಮಾತು, ಊಟ ಮುಗಿಸುವ ಸಂದರ್ಭದಲ್ಲಿ ನಾಯಕಿ ವಿಚಿತ್ರ ರೀತಿಯ ಅಸಹ್ಯ ಹಾಗೂ ಹೇಸಿಗೆಯನ್ನುಂಟು ಮಾಡಿತು. ಆದರೆ ಈ ವೃತ್ತಿಗಿಳಿದ ಮಹಿಳೆಯರು ಈ ಹುದ್ದೆಗೆ ಬರಲು ವಿವಿಧ ಕಾರಣಗಳನ್ನು ವಿವರಿಸಿದಾಗ ಹಾಗೂ ಈ ಮಾರಕ ರೋಗದಿಂದ ತಪ್ಪಿಸಿಕೊಳ್ಳಲು ಗಿರಾಕಿಗಳಿಗೆ ನಿರೋಧ ಬಳಸಲು ಹೇಳಿದಾಗ ಇದಕ್ಕೆ ಒಪ್ಪದೆ ಇದ್ದಾಗ ಗಿರಾಕಿ ಮರ್ಜಿಯನ್ನು ಅನುಸರಿಸಿದಾಗ ಸಭೆಯಲ್ಲಿ ನೆರದಿದ್ದವರಲ್ಲಿ 'ಗಿರಾಕಿ ಹೇಳಿದ್ಹಂಗ ಕೇಳಿದ್ರ ಅವರಿಗೆ ಅಪಾಯ ಅಂತ ಹೇಳ್ಬೇಕ್ರಿ, ರೊಕ್ಕಾ ಮುಖ್ಯನೋ ಬದುಕು ಮುಖ್ಯನೋ' (ಪು.೨೪) ಎಂದು ಸಿಡಿಮಿಡಿಗೊಂಡು ಕೇಳಿದ ಪ್ರಶ್ನೆಗೆ ಅದೇ ದಂದೆಗೆ ಸೇರಿದ್ದ ಮಲ್ಲಮ್ಮ 'ಬದುಕಬೇಕು ಅಂತಾನೇ ನಾವು ಏಡ್ಸ ತಡಿಗಟ್ಟಾಕ ಕೆಲ್ಸಾ ಮಾಡಕತ್ತೀವಿ, ಬದುಕಬೇಕೆಂತನ ನಾಚಿಕೆ ಬಿಟ್ಟು ಎಲ್ಲರೆದುರು ನಮ್ಮ ಹಾಸುಗಿ ಸುದ್ದಿನ ಬಿಚ್ಚಿಟ್ಟೀವಿ, ಬದುಕಬೇಕೆಂತ ಹೊಟ್ಯಾನ ಕಹಿ ಗುಟ್ಟುಗಳನ್ನು ಬಿಟ್ಟುಕೊಟ್ಟು ಬಯಲಾಗಿಟ್ಟಿದ್ದು ಸಾಹೇಬ್ರು ಬದುಕ ಬೇಕಂತನ ಉರಿಯೋ ಕೊಳ್ಳಿ ತೆಲ್ಯಾಗ ಸಿಗಸಿಕೊಂಡು ನಿಮ್ಮಂತೋರಿಸಿ ಬೆಳಕು ಕೊಟ್ಟಿದ್ದು... ಎಂದು ಹೇಳುವ ಆಕೆಯ ಅಳುವಿನಲ್ಲಿ ಬದುಕಿನ ಕ್ರೂರತೆಯನ್ನು ಬಿಚ್ಚಿಡುತ್ತಾ, ಈ ವೃತ್ತಿಯಲ್ಲಿ ತಾವು ಪುರುಷರಿಂದ ಅನುಭವಿಸಿದ ಲೈಂಗಿಕ ದೌರ್ಜನ್ಯವನ್ನು ಸಂಕಷ್ಟಗಳನ್ನು ಅಪಮಾನ ಹಿಂಸೆಗಳನ್ನು ಇಂದು ಅನೇಕ ವೇಶ್ಯೆಯರು ಬದುಕುವ ರೀತಿಯನ್ನು ಅಸಹಾಯಕತೆಯನ್ನು ಹೆಣ್ಣಿನ ಮೇಲೆ ನಡೆಯುವ ಶೋಷಣೆಯನ್ನು ಎಳೆಎಳೆಯಾಗಿ ಬಿಚ್ಚಿಡುತ್ತದೆ. ಈ ವೇಶ್ಯಾ ವೃತ್ತಿಗಿಳಿಯಲು ಹಲವು ಕಾರಣಗಳಾದ ಮಲ್ಲಮ್ಮನ ಗಂಡ ಮಾರಲು ಸಿದ್ಧನಾಗಿದ್ದು, ಶಾಮಲನಾ ಗಂಡ ಸಂಸಾರ ಹೊಣೆ ನಿರ್ವಹಿಸಲಾರದೆ ಸ್ನೇಹಿತನ ಹಾಸಿಗೆಗೆ ಒಪ್ಪಿಸಿದ್ದು, ಸಾರಿಕಾ ಗಂಡ ನಂಬಿಸಿ ಮೋಸ ಮಾಡಿದ್ದು, ಗಂಡನ ಸಹವಾಸದಿಂದ ಏಡ್ಸ್ ರೋಗ ನೀಲಮ್ಮನಿಗೆ ತಗುಲಿ ಮನೆಯವರಿಂದ ಹೊರದೂರಲ್ಪಟ್ಟಿದ್ದು, ಹೀಗೆ ಹಲವು ಕಾರಣಗಳಿಂದ ಹೆಣ್ಣು ಪುರುಷರಿಂದ ನಿರಂತರ ಶೋಷಣೆಗೊಂಡು ಬದುಕುವ ಛಲದಿಂದ

ಅಸಹಾಯಕಳಾಗಿ ಮೈಮಾರಿ ತಮ್ಮ ಜೀವನವನ್ನು ನಿರ್ವಹಿಸಲು ಮುಂದಾಗಿದ್ದು ಬದುಕಿನ ಕ್ರೂರತೆಯನ್ನು ತಿಳಿದ ನಾಯಕಿಗೆ ಅವರ ಮೇಲಿದ್ದ ಅಸಹ್ಯ ಭಾವನೆ ಹೋಗಿ ತನ್ನ ಸಣ್ಣತನಕ್ಕೆ ನಾಚಿ ಪಾಪ ಪ್ರಜ್ಞೆ ಕಾಡತೊಡಗಿತು ಅಲ್ಲದೆ ಹೀಗೆ ಬದುಕಿನಲ್ಲಿ ನೊಂದ ಹೆಣ್ಣು ಜೀವಗಳಿಗೆ ಸಾಂತ್ವನ ನೀಡುವುದರಿಂದ ಅವರಿಗಾದ ಅನ್ಯಾಯ, ವಂಚನೆ, ನೀಗಿಸಲು ಸಾಧ್ಯವಿಲ್ಲ. ಇಂತಹ ಮಾರಕ ರೋಗಕ್ಕೆ ಅಮಾಯಕ ಹೆಣ್ಣು ಬಲಿಯಾಗುವುದರ ಮೂಲಕ ಬದುಕಿನ ಕ್ರೌರ್ಯವನ್ನು ಕಾಣಬಹುದಾಗಿದೆ ಹೀಗೆ ಏಡ್ಸ್‌ನಂತಹ ಮಾರಕ ಕಾಯಿಲೆಗೆ ಹೆಣ್ಣನ್ನು ಬಲಿಪಶುಮಾಡುವ ಮೂಲಕ ಪುರುಷ ಪ್ರಧಾನ ವ್ಯವಸ್ಥೆಯ ದೌರ್ಜನ್ಯ ಈ ಕಥೆಯಲ್ಲಿ ಕಾಣಬಹುದಾಗಿದೆ.

'ಅಂತೂ ಮರೆಯಾಗಲಿಲ್ಲ' ಕಥೆಯಲ್ಲಿ ರಕ್ತ ಸಂಬಂಧಗಳ ಚಿತ್ರಣವಿದೆ ಈ ಕಥೆಯಲ್ಲಿ ನಾಯಕಿ ತನ್ನ ಆಸೆ ಬಯಕೆಗಳನ್ನು ತಣಿಸಲಾರದ ಗಂಡನ ಬಗ್ಗೆ ತಿರಸ್ಕಾರವಿದೆ ತನ್ನ ಈ ಬಯಕೆಯನ್ನು ಈಡೇರಿಸಿಕೊಳ್ಳಲು ತನ್ನನ್ನು ಪ್ರೀತಿಸಿದ ಸೋದರ ಮಾವನೊಂದಿಗೆ ಒಂದಾಗುವುದರ ಮೂಲಕ ನಿರ್ಲಿಪ್ತಳಾಗುತ್ತಾಳೆ ಹೀಗೆ ಹೆಣ್ಣಿನ ಅಂತರಾಳದ ತಲ್ಲಣಗಳನ್ನು ತೆರೆದಿಡುವ ಕಥೆಯಾಗಿದೆ.

'ಜಾಲಿಯ ಮರದಂತೆ' ಕಥೆಯಲ್ಲಿ ನಗರದ ಆಕರ್ಷಣೆಗೆ ಒಳಗಾಗಿ ಅನಂತಭಟ್ಟ ಹಳ್ಳಿಯನ್ನು ತೊರೆದು ಹಲವು ವರ್ಷಗಳ ನಂತರ ಬಂದು ತನ್ನೂರನ್ನು ಉದ್ಧಾರ ಮಾಡುವ ನೆಪದಲ್ಲಿ ಜಾಲಿಯ ಮರದಿಂದ ಔಷಧಿ ತಯಾರಿಸುವಂತೆ ಹೇಳಿ, ಮುಗ್ಧ ಅಮಾಯಕ ಹಳ್ಳಿಯ ಜನರು ತೆಂಗು, ಮಾವು, ಬೇವು ಗಿಡಗಳನ್ನು ಕಡೆದು ಹಣದ ಆಸೆಗಾಗಿ ಯಥೇಚ್ಛವಾಗಿ ಜಾಲಿಮರ ಬೆಳೆಸಿದ್ದು ಕೊನೆಗೆ ಫಿರಂಗಿಯರು ತನ್ನೂರಿನ ಹುಡುಗ ಮಾಡಿದ ಮೋಸ ವಂಚನೆಯಿಂದ ಇಡೀ ಹಳ್ಳಿಯೇ ಬೆಂಕಿ ಹತ್ತಿಕೊಂಡು ಸರ್ವನಾಶವಾಗುತ್ತದೆ ಹೀಗೆ ಸ್ವಾತಂತ್ರ್ಯ ಪೂರ್ವದಲ್ಲಿ ಬ್ರಿಟಿಷರು ಭಾರತೀಯ ಹಳ್ಳಿಗಾಡಿನ ಜನರ ಮೇಲೆ ಮಾಡುವ ಮೋಸ ವಂಚನೆ ಅದಕ್ಕೆ ಸ್ವತ ತನ್ನೂರಿನವರೆ ಕೈ ಕುಲುಕುವ ಅಮಾನವೀಯತೆಯನ್ನು ಕುರಿತು ಹೆಳುವುದರ ಮೂಲಕ ಹಳ್ಳಿಯ ಜನರ ಮೌಢ್ಯತೆ ಅನಕ್ಷರತೆಯನ್ನು ಕಾಣಬಹುದಾಗಿದೆ ವ್ಯಕ್ತಿಯ ಸ್ವಾರ್ಥ, ಮೋಸ ವಂಚನೆ ಕಾಣಬಹುದಾಗಿದೆ.

'ಹೊಸಪ್ರೇಮ' ಕಥೆಯಲ್ಲಿ ವಿದ್ಯಾವಂತ ಹುಡುಗ ನಿರುದ್ಯೋಗಿಯಾಗಿದ್ದು ಬದುಕನ್ನು ಎದುರಿಸಲಾರದೆ ಸನ್ಯಾಸತ್ವದ ಮುಖವಾಡ ಧರಿಸಿ ಬದುಕಿನಿಂದ ಪಲಾಯನಗೊಳ್ಳುವ ಪರಿಯನ್ನು ಹಾಗೂ ಈ ವೈರಾಗ್ಯ ಹಿಂದೆ ತನ್ನೆಲ್ಲ ಕಾಮ, ಪ್ರೇಮತೆಯನ್ನು ಬಲವಂತವಾಗಿ ತ್ಯಾಗ ಮಾಡಿದ್ದರ ಆ ಹಸಿ ಬಯಕೆಗಳು ಆರದೆ ತನ್ನ ಸನ್ಯಾಸತ್ಮದ ಮುಖವಾಡದಿಂದ ಪಶ್ಚಾತಾಪಗೊಂಡಿದ್ದಾನೆ. ಆದರೆ ಈ ಮುಖವಾಡಕ್ಕೆ ಸಮಾಜವೇ ಕಾರಣವಾಗಿದೆ ಎಂದು ವ್ಯಕ್ತಿಯ ವಿಭಿನ್ನ ಮುಖಗಳನ್ನು ಕಾಣಬಹುದಾಗಿದೆ. ಹೀಗೆ ವ್ಯಕ್ತಿಯ ಮುಖವಾಡದ ಹಿಂದಿರುವ ಬದುಕಿನ ವಾಸ್ತವ ಚಿತ್ರಣವನ್ನು ಕಥೆ ಅನಾವರಣಗೊಳಿಸುತ್ತದೆ. 'ಖರೇವಂದ್ರ ತಪ್ಪು' ಕಥೆಯಲ್ಲಿ ನಾಯಕಿ ವೇದಬಾಯಿ ಪರಿಸ್ಥಿತಿಯ ಕೈ ಗೊಂಬೆಯಾಗಿ ಹಿರಿಯರು ಇಲ್ಲದಾಗ ಬೇರೆ ದಾರಿಯಿಲ್ಲದೆ ದೇವಿ ಗುಡಿಗೆ ಹೊಕ್ಕು ದೇವಿಯನ್ನು ಶೃಂಗರಿಸಿ ಪೂಜೆ ಪುನಸ್ಕಾರ ಮಾಡಿದ್ದು ದೊಡ್ಡ

ಅಪರಾಧವಾಗಿ ಪಂಚಾಯಿತಿ ಸೇರಿಸಿ ಶಿಕ್ಷೆ ವಿಧಿಸುವಲ್ಲಿ ತೀರ್ಮಾನಿಸಿದ ಪುರುಷ ಪ್ರಧಾನ ವ್ಯವಸ್ಥೆಯ ಸ್ವಾರ್ಥತನವನ್ನು ಕಾಣಬಹುದು ಆದರೆ ಅಲ್ಲೆ ನೆರೆದಿದ್ದ ವೆಂಕತ್ತಿ 'ಹೌದ್ರಪ್ಪ ವೇದಾಬಾಯಿನು ಒಬ್ಬ ಹೆಂಗಸು, ಭಗವತಿ ತಾಯಿನು ಒಬ್ಬ ಹೆಂಗಸು, ಹೆಂಗಸು ಹೆಂಗಸ್ರಿಗೆ ಸೀರೆ ಉಡಿಸಿದ್ರ, ಅಲಂಕಾರ ಮಾಡಿದ್ರ ಏನು ತಪ್ಪ ಕಾಣಿಸ್ತು ನಿಮಗ...? (ಪು.೪೫) ಪ್ರಶ್ನಿಸುವುದರ ಮೂಲಕ ಶಿಕ್ಷೆಯಿಂದ ವಿಮುಕ್ತಿಗೊಳಿಸಿ ದೇವಿಗೆ ಪೂಜೆ ಸಲ್ಲಿಸುವಲ್ಲಿ ಪುರುಷರಷ್ಟೇ ಸ್ತ್ರೀಯರು ಸಮಾನತೆಯನ್ನು ಹೊಂದಿದ್ದಾರೆ ಎಂದು ತನ್ನ ಹಕ್ಕನ್ನು ಪಡೆದುಕೊಳ್ಳುವ ದಿಟ್ಟತನದ ಮಹಿಳೆಯಾಗಿ ಕಂಡುಬರುತ್ತಾಳೆ. ಹೀಗೆ ಪುರುಷರು ಹೆಣ್ಣನ್ನು ಎಲ್ಲಾ ಅವಕಾಶಗಳಿಂದ ವಂಚಿತರನ್ನಾಗಿ ಮಾಡಿ ಶೋಷಿಸುವ ಪರಿಯನ್ನು ಆದರೆ ಇಂದಿನ ಆಧುನಿಕತೆಯಲ್ಲಿ ಹೆಣ್ಣು ಅದನ್ನು ಪ್ರಶ್ನಿಸುವ ತನ್ನ ಹಕ್ಕನ್ನು ಪಡೆದುಕೊಳ್ಳುವ ದಿಟ್ಟ ಮಹಿಳೆಯಾಗಿದ್ದಾಳೆ ಎಂಬುದನ್ನು ಕಾಣಬಹುದಾಗಿದೆ.

'ತ್ರಿಶಂಕು' ಕಥೆಯಲ್ಲಿ ಸಂಪ್ರದಾಯಿಕತೆ ಆಧುನಿಕತೆಯನ್ನು ಮುಖಾಮುಖಿಯಾಗಿಸುವ ಸಂಕೀರ್ಣ ಚಿತ್ರಣವಿದೆ. ವೈದಿಕ ಜಾತಿಯಲ್ಲಿ ಹುಟ್ಟಿದ ನಾಯಕಿ ತನ್ನ ಅಜ್ಜಿ, ಅಮ್ಮ, ನಿರ್ವಹಿಸುತ್ತಿದ್ದ ಮಡಿ, ಮೈಲಿಗೆ ಪೂಜೆ ಪುನಸ್ಕಾರದ ಬಗ್ಗೆ ಸದಾ ತಿರಸ್ಕಾರವಿದ್ದು ಮೈ ನೆರೆದಾಗ ಮೂರು ದಿವಸ ಹೊರಗೆ ಕೂರುವುದನ್ನು 'ಈಗ್ಯಾರು ಹೊರಗ ಕೂಡ್ತಾರ' ಎಂದು ಪ್ರಶ್ನಿಸುತ್ತಾ, ಬೇರೆ ಜಾತಿಯ ಹುಡುಗರಿಗೆ ತನ್ನ ಮನೆಯ ಪಡಸಾಲೆಯಲ್ಲಿ ವಿದ್ಯೆ ಕಲಿಸುವಾಗ ಅಜ್ಜಿ 'ಜಾತಿಯಿಲ್ಲದ ಪಾಲ್ಗೋಳಿಗಿ ಪಡಸಾಲ್ಯಾಗ ಕೂಡಿಸಿ ಟ್ಯೂಶನ್ ಹೇಳಬ್ಯಾಡ' (ಪು.೫೫) ಎಂದು ತಿರಸ್ಕರಿಸಿದರೂ ಅದನ್ನು ಲೆಕ್ಕಿಸದೆ ಸಂಪ್ರದಾಯಿಕತೆಯನ್ನು ಕಟ್ಟುಪಾಡುಗಳನ್ನು ದಿಕ್ಕರಿಸುವುದರ ಮೂಲಕ ಇಂದಿನ ಸಂಪ್ರದಾಯಿಕತೆ ಮಡಿ ಮೈಲಿಗೆ ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುವುದನ್ನು ಕಾಣಬಹುದು ಅಲ್ಲದೆ ಪರಜಾತಿಯ ಹುಡುಗನನ್ನು ಮಧುವೆಯಾಗುವುದರ ಮೂಲಕ ಸಾಂಪ್ರದಾಯಿಕ ಕಟ್ಟುಪಾಡುಗಳನ್ನು ಮೀರಿ ಸಮಾಜದ ಬಂಧನವನ್ನು ಮೆಟ್ಟಿ ನಿಲ್ಲುವ ಆಧುನಿಕ ಮಹಿಳೆಯಾಗಿ ಕಂಡು ಬಂದು ಅಂತರ ಜಾತಿ ವಿವಾಹ ಸರ್ವೇಸಾಮಾನ್ಯವಾಗಿ ಸಂಪ್ರದಾಯಿಕತೆ ತನ್ನ ಛಾಪನ್ನು ಕಳೆದುಕೊಳ್ಳುತ್ತಿರುವುದನ್ನು ಕಾಣಬಹುದು. ಇದಕ್ಕೆ ಸ್ತ್ರೀ ವಿದ್ಯಾವಂತಳಾಗಿರುವುದು ಪ್ರಮುಖ ಕಾರಣವಾಗಿದೆ.

ಹೀಗೆ ಒಟ್ಟಾರೆ ಸಂಧ್ಯಾ ಹೊನಗುಂಟಿಕರ ಅವರು 'ಹರಿದ ಹಸಿಗೆ ಹಂಬಲ' ಕಥಾ ಸಂಕಲನದಲ್ಲಿ ಒಟ್ಟು ೧೦ ಕಥೆಗಳಿದ್ದು ಅವರ ಬಾಲ್ಯದ ದಟ್ಟ ಅನುಭವಗಳನ್ನು ಕಥೆಯಾಗಿಸಿದ್ದಾರೆ ಅಲ್ಲದೆ ಹೊಸ ಹೊಸ ಪ್ರಯೋಗಾತ್ಮಕತೆಗೆ ಕೈ ಹಾಕಿದ್ದು ಏಡ್ಸ್ ರೋಗವನ್ನು ಕಥೆಯ ವಸ್ತುವಾಗಿಸಿ ಆ ಮೂಲಕ ಹೆಣ್ಣಿನ ಬದುಕಿನ ಕರಾಳತೆಯನ್ನು ತೆರೆದಿಡುವ 'ಹಾವು ಮುತ್ತಿನ ಹುಡುಕಾಟದಲ್ಲಿ' ಮನಮುಟ್ಟುವಂತೆ ಕಥೆ ಹೆಣೆದಿದ್ದಾರೆ. ಇವರ ಎಲ್ಲಾ ಕಥೆಗಳಲ್ಲಿ ಬರಗಾಲ, ಜಮೀನ್ದಾರರ ದೌರ್ಜನ್ಯ, ಜಾತೀಯತೆ, ಏಡ್ಸ್ ರೋಗ, ಜನರ ಮೋಸ, ವಂಚನೆಯನ್ನು ಕಥೆಯ ವಸ್ತುವಾಗಿರಿಸಿದ್ದಾರೆ. ಅಲ್ಲದೆ ಬದುಕನ್ನು ಎದುರಿಸಲಾರದೆ ಮುಖವಾಡ ಧರಿಸುವ ಸನ್ಯಾಸತ್ವದ ಹಿಂದಿನ ಬದುಕಿನ ಕ್ರೂರತೆಯನ್ನು ತಿಳಿಸುವ

'ಹೊಸ ಪ್ರೇಮ' ಕಥೆಯು ನಿರುದ್ಯೋಗ, ಬಡತನ, ಅಧಿಕಾರದ ಕ್ರೌರ್ಯವನ್ನು ಅನಾವರಣಗೊಳಿಸುತ್ತದೆ. ಅಲ್ಲದೆ ಅಂತರಜಾತಿವಿವಾಹ, ಮಡಿಮೈಲಿಗೆ ಸಂಪ್ರದಾಯಕತೆಯನ್ನು ತೊಡೆದು ಹಾಕುವಲ್ಲಿ ಸ್ತ್ರೀ ವಿದ್ಯಾವಂತಳಾಗಿದ್ದು ಆಧುನಿಕತೆಯನ್ನು ಕಾಣಬಹುದಾಗಿದೆ. ಅಲ್ಲದೆ ಹೆಣ್ಣನ್ನು ಶೋಷಣೆಗೊಳಿಸುವ ಪುರುಷರ ದೌರ್ಜನ್ಯವನ್ನು ಖಂಡಿಸಿ ಪೂಜೆ ಪುನಸ್ಕಾರಗಳಲ್ಲಿ ಹೆಣ್ಣು ಪುರುಷರಂತೆ ಸಮಾನತೆ ಪಡೆಯುವಂತೆ ಇಲ್ಲಿಯ ಕಥೆಯ ನಾಯಕಿಯರು ಪ್ರಬುದ್ಧರಾಗಿದ್ದಾರೆ. ಹೀಗೆ ಕಥೆಗಾರ್ತಿ ಮಧ್ಯಮ ವರ್ಗದ ಜನರ ಬದುಕನ್ನು ತಿಳಿಸುವುದರ ಮೂಲಕ ಹೆಣ್ಣಿನ ಮೇಲೆ ಪುರುಷಪ್ರಧಾನ ವ್ಯವಸ್ಥೆ ನಡೆಸುವ ಶೋಷಣೆಯನ್ನು ಪ್ರತಿಭಟಿಸಿದ್ದಾರೆ. ಅಲ್ಲದೆ ವೇಶ್ಯಾವೃತ್ತಿ, ಏಡ್ಸ್‌ರೋಗಕ್ಕೆ ತುತ್ತಾಗಿ ಬಳಲಿದ ವ್ಯಕ್ತಿಗಳಿಗೆ ಸಾಂತ್ವನ ನೀಡುವುದರ ಮೂಲಕ ಪರಿಹಾರ ಸೂಚಿಸಿ ಬದುಕ ಪ್ರೀತಿಯನ್ನು ಹುಟ್ಟಿಸುವ ಕಥೆಗಳಾಗಿವೆ. ಅಲ್ಲದೆ ಇಲ್ಲಿನ ಬಹುಪಾಲು ನಾಯಕಿಯರು ಬದುಕುವ ಛಲವನ್ನು ಹೊಂದಿದ್ದು ಸಾವನ್ನು ಎದುರಿಸುವ ಗಟ್ಟಿಗಿತ್ತಿಯರಾಗಿದ್ದಾರೆ. ಹೀಗೆ ಸಂಧ್ಯಾ ಹೊನಗಂಟೆಕರ ಅವರು ನೊಂದ ಬೆಂದ ಜೀವಿಗಳಿಗೆ ಬದುಕು ಪ್ರೀತಿಯನ್ನು ಹುಟ್ಟಿಸುವಂತೆ ಇಲ್ಲಿಯ ಕಥೆಗಳನ್ನು ಕಾಣಬಹುದಾಗಿದೆ.

ಸುಮಂಗಲಾ ಕಥೆಗಳು

ಶಕ್ತ ಕಥೆಗಾರ್ತಿಯೆಂದು ಗುರುತಿಸಿಕೊಂಡ ಸುಮಂಗಲಾ ಅವರು **'ಜುಮುರು ಮಳೆ'**, **'ಕಾಲಿಟ್ಟಲ್ಲಿ ಕವಲುದಾರಿ'**, **'ಸೀತಾಳೆ ಹೂ ಮತ್ತು ಇತರ ಕಥೆಗಳು'** ಎಂಬ ಮೂರು ಕಥಾಸಂಕಲನಗಳನ್ನು ರಚಿಸಿದ್ದಾರೆ. ಜುಮುರು ಮಳೆಯಲ್ಲಿ ಒಟ್ಟು ೧೨ ಕಥೆಗಳಿದ್ದು ಕಥೆಗಾರ್ತಿಯ ದಟ್ಟ ಅನುಭವಗಳನ್ನು ಕಾಣಬಹುದಾಗಿದೆ. ಈ ಎಲ್ಲಾ ಕಥೆಗಳಲ್ಲಿ ಹೆಣ್ಣಿನ ವಿವಿಧ ತುಮಲಗಳನ್ನು ವಿಭಿನ್ನ ರೀತಿಯಲ್ಲಿ ಸೆರೆಹಿಡಿದಿದ್ದಾರೆ. ಈ ಎಲ್ಲಾ ಕಥೆಗಳಲ್ಲಿ ಸ್ಥಾಯಿ ಭಾವ ವಿಷಾದ ಇಲ್ಲಿ ಮನುಷ್ಯ ಸಂಬಂಧಗಳ ಸಂಕೀರ್ಣ ಚಿತ್ರಣವಿದೆ. ಅಲ್ಲದೆ ಕೌಟುಂಬಿಕ, ಸಾಮಾಜಿಕ ವ್ಯಕ್ತಿಗತ ನೆಲೆಯಲ್ಲಿ ಮಾನವೀಯತೆಯನ್ನು ಕಾಣಿಸುವಂತೆ ಕೌಟುಂಬಿಕ ಹಾಗೂ ಹೊರ ಸಂಬಂಧಗಳಲ್ಲಿ ಪ್ರೀತಿಯನ್ನು ಕಾಣಬಹುದು ಸುಮಂಗಲಾ ಕಥೆಗಳಲ್ಲಿ ನವ್ಯದ ಪ್ರಭಾವವನ್ನು ಕಾಣಬಹುದಾಗಿದೆ. ವ್ಯಕ್ತಿಯ ಅಂತರಂಗದ ಶೋಧನೆ ಇಲ್ಲಿಯ ಬಹುಪಾಲು ಕಥೆಗಳಲ್ಲಿ ಕಾಣಬಹುದಾಗಿದೆ. ನವ್ಯದ ಹಿನ್ನೆಲೆಯಲ್ಲಿ ರಚಿತವಾದ ಕಥೆ 'ಪ್ರಾಜಕ್ತಾ ಡೈರಿ ಬರೆಯಲಿಲ್ಲ' ಒಂದು ಸಂಕೀರ್ಣ ಕಥೆಯಾಗಿದೆ. ಈ ಕಥೆಯಲ್ಲಿ ಪ್ರಾಜಕ್ತಾಳ ತನ್ನ ನೆನಪುಗಳನ್ನು ಲೈಟುಕಂಬದ ಸುತ್ತ ನಡೆದ ಘಟನೆಗಳನ್ನು ನೆನೆಯುವುದರ ಮೂಲಕ ಕಥೆ ತನ್ನ ಹಂದರವನ್ನು ಬಿಚ್ಚಿಕೊಳ್ಳುತ್ತದೆ. ಈ ಕಥೆಯ ನಾಯಕಿಗೆ ಡೈರಿ ಬರೆಯಲು ಸಾಧ್ಯವಾಗುತ್ತಿಲ್ಲ. ಕಾರಣ ತನ್ನ ಮೊದಲ ಪ್ರೇಮವನ್ನು ಡೈರಿಯಲ್ಲಿ ಬರೆದು ವ್ಯಕ್ತಿಪಡಿಸುವ ಮುಂಚೆಯೆ ಪ್ರಿಯಕರನಿಗೆ ತಿಳಿದು ಅವಳ ಉಡುಗೊರೆಯನ್ನು ನಿರಾಕರಿಸಿದ್ದು ಅವಳ ಪ್ರೇಮ ನಿರಾಕರಿಸಲ್ಪಟ್ಟಿತು. ಹೀಗೆ ಪ್ರೀತಿ ಪ್ರೇಮ ಬದುಕಿನಲ್ಲಿ ಆಕರ್ಷಣೀಯವಾಗಿ ಕಂಡು ಬಂದರೂ ಅದು ನೀಡುವ ಸಂಕಷ್ಟಗಳು ಅಪಾರ ಹೀಗೆ ಈ ಪ್ರೇಮ ವಿಷಾದ ಛಾಯೆಯನ್ನು ಮೂಡಿಸುತ್ತದೆ. ಅಲ್ಲದೆ ಇಲ್ಲಿ ಅಸಹಾಯಕ ನಿರ್ಗತಿಕ ಚಿಂದಿ ಆಯುವ ಹೆಣ್ಣುಗಳ ಬದುಕಿನ ಬೀಕರತೆಯನ್ನು ತೋರುತ್ತದೆ.

'ಆಲಿಕಲ್ಲು' ಕಥೆಯಲ್ಲಿ ಮನುಷ್ಯ ಸಂಬಂಧಗಳ ಸಂಕೀರ್ಣ ಚಿತ್ರಣವಿದ್ದು ಈ ಸಂಬಂಧಗಳು ಕುಟುಂಬದಾಚೆಗಿನ ಸಂಬಂಧಗಳಾಗಿ ಬಹುಮುಖ ಆಯಾಮವನ್ನು ಪಡೆದಿರುತ್ತವೆ. ಈ ಕಥೆಯು ಲತ್ಯಾಮಾಮುವಿನ ಪಾತ್ರದ ಮೂಲಕ ಕಥೆ ನಿರೂಪಣೆಗೊಳ್ಳುತ್ತದೆ. ಇಲ್ಲಿಯ ಕಮಲವ್ವ ಗಂಡನಿಂದ ದೂರವಾಗಿದ್ದರೂ ಬದುಕುವ ಛಲ ಬಿಡಿದೆ ದಿಟ್ಟತನದಿಂದ ಕುಟುಂಬದ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದಾಳೆ ಅಲ್ಲದೆ ತನ್ನ ಮಗನೂ ಗಂಡನ ಹಾಗೆ ವಂಚಕನಾಗದಿರಲಿ ಎಂದು ಕಳವಳಗೊಳ್ಳುತ್ತಾ ಬದುಕುತ್ತಿರುವಾಗ ಈ ಸಂದರ್ಭದಲ್ಲಿ ಕಮಲವ್ವನ ಮಗ ಕಳ್ಳತನ ಕೇಸಿನಲ್ಲಿ ಸಿಕ್ಕಿಬಿದ್ದು ಬಂಧಿತನಾದರೂ ಈ ಸಮಯದಲ್ಲಿ ನೆರೆಹೊರೆಯವನಾದ ಲತ್ಯಾಮಾಮು 'ಎದಕೆ ಸುಳ್ಳೇ ಚಿಂತಿ ಮಾಡಿ ಸೊರಗ್ತೀಯವ್ವಾ... ಎಲ್ಲ ಬರೋಬ್ಬರಿ ಆಗ್ತದೆ... (ಪು.೨೬) ಎಂದು ಸಮಾಧಾನಿಸಿ ಮಾನವೀಯತೆಯನ್ನು ಮೆರೆದಿದ್ದಾನೆ. ಅಲ್ಲದೆ ರೀಮ್ಯಾಂಡ್ ಹೋಂ ನಿಂದ ಬಿಡುಗಡೆಗೊಂಡ ಬಾಲಕ ತನ್ನೆಲ್ಲ ದುಶ್ಚಟವನ್ನು ಬಿಟ್ಟು ಏಷ್ಯನ ಪೇಂಟ್ಸನ ಬಾಲಕನ ಜಾಹೀರಾತು ಚಿತ್ರಬಿಡಿಸುವುದರ ಮೂಲಕ ತನ್ನ ಪ್ರತಿಬಿಂಬವೆಂಬತೆ ನಾನೀಗ ಸಭ್ಯನಾಗಿದ್ದೇನೆ ಅಮ್ಮಾ, ಎಂಬಂತೆ ಬಾಸವಾಗುತ್ತಿದ್ದು ಗ್ರಹಿಸಿದ ಲತ್ಯಾ ಮಾಮನಿನ ಮೂಲಕ ಬಾವುಕತೆಯನ್ನು ಕಾಣಬಹುದಾಗಿದೆ. ಹೀಗೆ ಇನ್ನೊಬ್ಬರ ಕಷ್ಟಸುಖಗಳಿಗೆ ಮರುಗುವ ಸ್ಪಂದಿಸುವುದರ ಮೂಲಕ ಮನುಷ್ಯ ಸಂಬಂಧಗಳ ಮಾನವೀಯ ಮೌಲ್ಯವನ್ನು ಲತ್ಯಾಮಾಮು, ಕಮಲವ್ವ, ಆಕೆಯ ಮಗನಂತೆ ಬಾಸವಾಗುವ ಏಷ್ಯನ ಪೇಂಟ ನ ಹುಡುಗ, ಅಪರಿಚಿತ ಹೆಂಗಸು ವಿಭಿನ್ನ ರೀತಿಯಲ್ಲಿ ಮಾನವೀಯತೆಯನ್ನು ಕಾಣಬಹುದಾಗಿದೆ. ಹೀಗೆ ಹೆಣ್ಣಿನ ಅಸಹಾಯಕತೆ ಒಂಟಿತನ, ಪುರುಷರ ದೌರ್ಜನ್ಯ ಆ ಮೂಲಕ ಹೆಣ್ಣಿನ ಬದುಕಿನ ನಿರ್ವಹಣೆ ಸಂಕಷ್ಟಗಳನ್ನು ಇಲ್ಲಿ ಕಾಣಬಹುದಾಗಿದೆ.

'ಫಾತೀಮಾಗೆ ಮಳೆಯೆಂದರೆ ಇಷ್ಟ' ಕಥೆಯಲ್ಲಿ ಹೆಣ್ಣಿನ ಗುಣ ಸ್ವಭಾವಗಳ ಸಂಕೀರ್ಣ ಚಿತ್ರಣವಿದೆ. ಈ ಕಥೆಯು ನಾಯಕಿ ಪಾತೀಮಾಳ ಪಾತ್ರದ ಮೂಲಕ ನಿರೂಪಣೆಗೊಳ್ಳುತ್ತದೆ. ಇಲ್ಲಿ ಫಾತೀಮ ಕೆಳವರ್ಗದ ಮಹಿಳೆಯಾಗಿದ್ದು ವಯಸ್ಸಾದ ಖಾಯಿಲೆಯಿಂದ ನರಳುವ ಗಂಡನೊಂದಿಗೆ ಕುಟುಂಬದ ಜವಾಬ್ದಾರಿ ಹೊತ್ತು ನಾಲ್ಕು ಮನೆ ಕಸ ಮುಸರಿ ಮಾಡುವುದರ ಮೂಲಕ ಜೀವನ ಸಾಗಿಸುತ್ತಿದ್ದಳು. ತನ್ನ ಸ್ವಾಭಿಮಾನ ಗುಣಸ್ವಭಾವಗಳಿಂದ ಮನೆ ಒಡೆಯರ ಪ್ರೀತಿಪಾತ್ರಳಾಗಿದ್ದು ತನ್ನ ಮಗಳ ಕಳ್ಳತನದ ಅಪರಾಧದಿಂದ ಅವಮಾನಿತಳಾಗಿದ್ದಳು ಅಲ್ಲದೆ ಮನೆ ಒಡೆಯರು ಹೊಸಬಟ್ಟೆ, ಒಡವೆ ಹಾಕಿಕೊಂಡರೆ, ಗಂಡದಿರೊಡನೆ ಸಿನಿಮಾಗೆ ಹೊರಟರೆ ಸಹಜವಾಗಿ ಈ ಸುಖದಿಂದ ವಂಚಿತವಾದದ್ದನ್ನು ನೆನೆದು ಸ್ತ್ರೀ ಸಹಜವಾದ ಅಸೂಯೆ ಮೂಡುತ್ತಿತ್ತು. ಆದರೆ ತಾನು ಕೆಲಸ ಮಾಡುವ ಮನೆಯ ಒಡೆಯ ಕ್ಯಾನ್ಸರ್‌ನನಿಂದ ಬಳಲುತ್ತಿರುವಾಗ ಯೋಗಕ್ಷೇಮ ವಿಚಾರಿಸಿ ಸಾಂತ್ವಾನದ ಮಾತುಗಳನ್ನಾಡುತ್ತಾ ಸಾವಿನ ಅನಿವಾರ್ಯತೆಯನ್ನು ತಿಳಿಸುತ್ತಾ 'ನಮ್ಮ ಮೂಗಿನ ನೇರಕ್ಕೆ ಎಲ್ಲ ಇರಬಕು ಅಂದ್ರ ಹೆಂಗಸಾಧ್ಯ ಆಗ್ತದ... ಎಷ್ಟು ಜನ ಮಾತಾಡಿದ್ರೂ ಕಡೀಕೆ ನಾವು ಒಬ್ಬರೇರೀ... ಮತ್ಯಾರೂ ಜತಿಯಾಗಂಗಿಲ್ರೀ... ನಮನಮಗ ಹಂಗ ಕಬೂಲೆನ್ನಿಸಿತದ ಹೆಂಗ ಗಟ್ಟಿಯಾಕ್ಕೋತ

ಹೋಗೊದರೀ...ಜಿಂದಗೀ ದೊಡ್ಡವದರೀ ಅಣ್ಣಾರ' (ಪು.೧೩೦) ಎಂದು ಹೇಳುವ ಹೆಣ್ಣಿನ ನೋವು, ಸಂಕಷ್ಟಗಳನ್ನು ಹೇಳುತ್ತಾ ಮೇಲು ಕೀಳು ಎನ್ನ ಭಾವವಿಲ್ಲದ ಅಪ್ಪಟ ಮನುಷತ್ವದ ಮಾನವೀಯ ಮೌಲ್ಯವನ್ನು ಕೆಳವರ್ಗದ ಮಹಿಳೆಯಲ್ಲಿ ಕಾಣಬಹುದಾಗಿದೆ. ಹೀಗೆ ಇಲ್ಲಿ ಬಡತನ, ಹೆಣ್ಣಿನ ಅಸಹಾಯಕತೆ ನೋವು, ಅಪಮಾನ, ಸಂಕಷ್ಟಗಳು ಆ ಮೂಲಕ ಬದುಕುವ ಛಲವನ್ನು ಬಿಡದ ಹೆಣ್ಣಿನ ದಿಟ್ಟತನವನ್ನು ಕಾಣಬಹುದಾಗಿದೆ. ಹೀಗೆ ಇಲ್ಲಿ ಕುಟುಂಬದ ಒಳಗೆ ಹಾಗೂ ಅದರಾಚೆ ಯಾವುದೇ ಬೇಧಬಾವವಿಲ್ಲದೆ ವ್ಯಕ್ತಿಗಳಲ್ಲಿ ಕಾಣುವ ಪ್ರೀತಿ ಕಥೆಯ ಆಶಯವಾಗಿ ಮೂಡಿಬಂದಿದೆ.

'ಆಯಿ ಬರೆದ ಭಾಷ್ಯ' ಎಂಬ ಕಥೆಯಲ್ಲಿ ಗಂಡು ಹೆಣ್ಣಿನ ಸಂಬಂಧವನ್ನು ಕುರಿತು ಹೇಳುವ ಸಂಕೀರ್ಣ ಕಥೆಯಾಗಿದೆ. ಮಳೆಯ ಹನಿಯೊಂದಿಗೆ ನಾಯಕಿಯ ಕರಾಳ ಬದುಕಿನ ಚಿತ್ರಣವನ್ನು ತೆರೆದಿಡುವುದರ ಮೂಲಕ ಕಥೆ ನಿರೂಪಣೆಗೊಳ್ಳುತ್ತದೆ. ಕಥೆಯ ನಾಯಕಿ ಮನಿಷಾ ಹೆತ್ತವರ ಪ್ರೀತಿಗೆ ಸುತು ಪ್ರೀತಿಸಿದ ಗೆಳಯನನ್ನು ತ್ಯಾಗಮಾಡುತ್ತಾಳೆ. ತಾಯಿ ಹೀಗೆ ನಿರಾಕರಿಸಲು ಕಾರಣ ಬೆಳಗಾವಿ ಪರಿಸರಕ್ಕೆ ಹೊಂದಿಕೊಳ್ಳದೆ ಒಂಟಿತನ ಕಾಡುತ್ತಿದ್ದು ಆ ಮೂಲಕ ಕನ್ನಡ ಭಾಷೆ, ಜನರ ಮೇಲೆ ಅಸೂಯೆ ಮೂಡಿ ಅದರ ಪರಿಣಾಮವಾಗಿ ಮಗಳ ಪ್ರಿಯಕರ ಕನ್ನಡಿಗನು ಎಂಬ ಕಾರಣದಿಂದ ತಿರಸ್ಕರಿಸಿದಳು. ಹೀಗೆ ಆಯಿಯ ಪ್ರೀತಿಗೆ ಎಲ್ಲಾವನ್ನೂ ತ್ಯಾಗ ಮಾಡಿದ ಮನಿಷಾ ಹೆತ್ತವರ ಆಸೆಯಂತೆ ಮರಾಠಿ ಹುಡುಗನನ್ನು ವಿವಾಹವಾಗಿದ್ದಳು ಆದರೆ ಸಂಶಯದ ಕಣ್ಣಿನಿಂದ ಸದಾ ನೋಡುತ್ತಿದ್ದ ಗಂಡನಿಂದ ಸಾಕಷ್ಟು ಹಿಂಸೆ ಅನುಭವಿಸಿದ್ದಳು ಅಲ್ಲದೆ ಕಾಲಪ್ರವಾಹ ಕಳದಂತೆ ತನ್ನ ಪ್ರಿಯಕರ ಆಕಸ್ಮಿಕವಾಗಿ ಎದುರಾದಾಗ ತನ್ನ ಅಳಲನ್ನು ತೋಡಿಕೊಳ್ಳುವುದರ ಮೂಲಕ ಸಾಂತ್ವಾನದ ಮಾತಗಳಿಂದ ತೃಪ್ತಿ ಹೊಂದುತ್ತಾ ಪ್ರಪಂಚದ ಸಮಾಜದ ಹಂಗಿಲ್ಲದೆ ತನ್ನನ್ನು ಅರ್ಪಿಸಿಕೊಂಡು ಒಂದಾಗುವುದರ ಮೂಲಕ ಪ್ರೀತಿಯ ಉತ್ಕಟತೆಯನ್ನು ಕಾಣಬಹುದು ಅಲ್ಲದೆ ಹೆಣ್ಣು ಗಂಡಿನಿಂದ ಅನುಭವಿಸುವ ಲೈಂಗಿಕ ಹಿಂಸೆ, ಅಪಮಾನ, ನೋವು ಸಂಕಷ್ಟಗಳು ಅಪಾರ ಹೀಗೆ ಭಾಷೆ ಸಮಸ್ಯೆಯೂ ವಿಷಮ ದಾಂಪತ್ಯಕ್ಕೆ ದಾರಿ ಮಾಡಿಕೊಡುವುದರ ಮೂಲಕ ವಿಷಾದದ ರಾಗ ಈ ಕಥೆಯಲ್ಲಿ ಮೂಡಿಬಂದಿದೆ.

'ಬೆಳದಿಂಗಳಲ್ಲಿ ಹುಡುಕಿದ ಹಾಡು' ಕಥೆಯಲ್ಲಿ ಗಂಡು ಹೆಣ್ಣಿನ ವಿಫಲ ಪ್ರೇಮ ವಸ್ತುವಾಗಿ ಆ ಮೂಲಕ ಕೋಮು ಸೌಹಾರ್ದತೆ, ಮಾನವೀಯ ಸಂಬಂಧಗಳನ್ನು ಕಾಣಬಹುದಾಗಿದೆ.

'ಚೌಕಟ್ಟಿನಿಂದ ಹೊರಬಂದ ಚಿತ್ರ' ಕಥೆಯಲ್ಲಿ ನಿರೂಪಕಿ ಬಾವಿಯ ಅವ್ಯವಸ್ಥೆಯನ್ನು ಕುರಿತು ಲೇಖನವನ್ನು ರಚಿಸಲು ಕೊಳಚೆ ಪ್ರದೇಶಗಳ ಅವಲೋಕಿಸುತ್ತಾ ಆ ಮೂಲಕ ಕೆಳವರ್ಗದ ಜನರ ಬಡತನ, ಜೀವನ ನಿರ್ವಹಣೆ, ಮುಸ್ಲಿಂ ಮಹಿಳೆಯರ ಮೇಲೆ ನಡೆಯುವ ಶೋಷಣೆ ಇತ್ಯಾದಿ ಅಂಶಗಳನ್ನು ಕಾಣುತ್ತೇವೆ.

'ಅರ್ದಹೆಣೆದ ಗುಲಾಬಿ ಕಾಲುಚೀಲ' ಕಥೆಯಲ್ಲಿ ಹೆತ್ತವರ ಮೋಸ, ವಂಚನೆ, ಸ್ವಾರ್ಥದಿಂದ ಅವಿವಾಹಿತಳಾಗಿ ಒಂಟಿತನವನ್ನು ಅನುಭವಿಸಿದ ಹೆಣ್ಣಿನ ಆಸೆ ಬಯಕೆಗಳನ್ನು ಕಾಮ, ಪ್ರೇಮಗಳನ್ನು

ಕುರಿತು ಗಂಡನ ಬೆಚ್ಚನೆ ಪ್ರೀತಿಯನ್ನು ಹರಸುವ, ತಾಯ್ತನದ ಹಂಬಲವನ್ನು ಹರಸುವ ಹೆಣ್ಣಿನ ಅಂತರಾಳದ ಮಾತುಗಳನ್ನು ತವಕ ತಲ್ಲಣಗಳನ್ನು ತೆರೆದಿಡುವ ಕಥೆಯಾಗಿದೆ.

'ಎದೆಯಲೊಂದು ಬಳೆಚೂರು' ಕಥೆಯಲ್ಲಿ ವಿವಾಹಿತ ಅನಾಥ ಹೆಣ್ಣನ್ನು ಬಾಳಸಂಗಾತಿಯಾಗಿ ಸ್ವೀಕರಿಸುವ ದಿವಾಕರನ ಮೂಲಕ ಮಾನವೀಯತೆಯನ್ನು ಕಥೆಯಾಗಿಸಿದ್ದಾರೆ.

ಹೀಗೆ ಒಟ್ಟಾರೆ ಸುಮಂಗಲಾ ಅವರು ತಮ್ಮ ಎಲ್ಲಾ ಕಥೆಗಳಲ್ಲಿ ಉತ್ತರ ಕನ್ನಡ ಪರಿಸರದ ಪ್ರಭಾವವನ್ನು ಕಾಣಬಹುದಾಗಿದೆ. ಈ ಎಲ್ಲಾ ಕಥೆಗಳಲ್ಲಿ ಕೆಳ ಮಧ್ಯಮವರ್ಗದ ಹೆಣ್ಣಿನ ಜನಜೀವನ ಸಂಕಷ್ಟಗಳು, ಅಪಮಾನ ಹಿಂಸೆಗಳು ಕಥೆಯಲ್ಲಿ ಮೂಡಿವೆ. ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಹೆಣ್ಣು ಅನುಭವಿಸುವ ಶೋಷಣೆಯನ್ನು ತಿಳಿಸುತ್ತಾ ಹೆಣ್ಣಿನ ಮನಸ್ಸಿನ ಅಂತರಾಳವನ್ನು ಅರಿಯುವಂತೆ ಪುರುಷರಿಗೆ ಯಾವುದೇ ದ್ವೇಷವಿಲ್ಲದೆ ತಿಳುವಳಿಕೆಯನ್ನು ಮೂಡಿಸುವ ಯತ್ನದಲ್ಲಿ ಈ ಕಥೆಗಳಿವೆ. ಇವರ ಕಥೆಗಳಲ್ಲಿ ಸ್ವಾಗತ ಮಾದರಿಯನ್ನು ಕಾಣಬಹುದಾಗಿದೆ. ಕುಟುಂಬದ ಒಳಗೆ ರಾಗ, ದ್ವೇಷ, ಅಸೂಯೆ ಸಾಮಾನ್ಯವಾಗಿದ್ದು ಅದರೊಳಗೆ ಪ್ರೀತಿಯ ನೆಲೆಯಿದೆ ಅದು ಕುಟುಂಬದಾಚೆಯೂ ಹಬ್ಬಿದೆ ಸಮಾಜದಲ್ಲಿ ಕಂಡು ಬರುವ ದಿನನಿತ್ಯದ ಘಟನೆಗಳು ಕಥೆಯಾಗಿ ಮೂಡಿಬಂದಿವೆ. ಈ ಎಲ್ಲಾ ಕಥೆಗಳು ಕೌಟುಂಬಿಕ, ಸಾಮಾಜಿಕ, ವ್ಯಕ್ತಿಗತ ನೆಲೆಯಲ್ಲಿದ್ದು ಮಾನವೀಯ ಮೌಲ್ಯವನ್ನು ಈ ಕಥೆಗಳಲ್ಲಿ ಕಾಣಬಹುದಾಗಿದೆ.

ರೇಖಾರಾಣಿ ಕಥೆಗಳು

ಇತ್ತೀಚಿನ ಕಥೆಗಾರ್ತಿಯರಲ್ಲಿ ರೇಖಾರಾಣಿ ಒಬ್ಬರಾಗಿದ್ದು ಅವರು **'ಪ್ರೀತಿಯಲ್ಲಿ ಕ್ಷಮೆಯಿರಲಿ'** ಎಂಬ ಕಥಾಸಂಕಲನವನ್ನು ರಚಿಸಿದ್ದಾರೆ. ಈ ಎಲ್ಲಾ ಕಥೆಗಳಲ್ಲಿ ಕಥೆಗಾರ್ತಿಯ ದಟ್ಟ ಅನುಭವವನ್ನು ಕಾಣಬಹುದಾಗಿದೆ. ಈ ಕಥೆಗಳು ಕಾದಂಬರಿ ಮಾದರಿಯಲ್ಲಿರುವಂತೆ ಬಾಸವಾಗುತ್ತದೆ. ಈ ಎಲ್ಲಾ ಕಥೆಗಳಲ್ಲಿ ಹೆಣ್ಣು ಮುಖ್ಯ ಪಾತ್ರವಾಗಿ ಕಂಡುಬರುತ್ತಾಳೆ. ಇಲ್ಲಿ ಕೆಳ ಮಧ್ಯಮ ಶ್ರೀಮಂತ ವ್ಯಕ್ತಿಗಳ ನಡುವೆ ಗಂಡು ಹೆಣ್ಣಿನ ಸಂಬಂಧಗಳು ಕೇವಲ ಕಾಮ, ಪ್ರೇಮಕ್ಕಾಗಿ ಹಾತೊರೆಯುವ ಕ್ಷಣ ಮಾತ್ರದ ಸಂಬಂಧಗಳಾಗಿ ಕಂಡುಬರುತ್ತವೆ. ಈ ಎಲ್ಲಾ ಕಥೆಗಳಲ್ಲಿ ಆಧುನಿಕ ಹೆಣ್ಣಿನ ಮೂಲಭೂತ ಸಮಸ್ಯೆಗಳನ್ನು ಕಾಣಬಹುದಾಗಿದೆ. ಇಲ್ಲಿಯ ಕಥೆಗಳಲ್ಲಿ ಗಂಡು ಹೆಣ್ಣಿನ ನಡುವೆಯಿರುವ ಕಾಮ-ಪ್ರೇಮ, ಪ್ರೇಮ-ಸ್ನೇಹ, ಪ್ರೀತಿ-ತ್ಯಾಗ ಇವುಗಳ ನಡುವೆಯಿರುವ ವ್ಯತ್ಯಾಸವನ್ನು ಅನಿವಾರ್ಯತೆಯನ್ನು ಈ ಕಥೆಯಲ್ಲಿ ಕಾಣಬಹುದಾಗಿದೆ. ಅಲ್ಲದೆ ಹೆಣ್ಣಿನ ನೋವು, ಸಂಕಟಗಳನ್ನು ಹಾಗೂ ಈ ನೋವು, ಅಪಮಾನ ಹಿಂಸೆಗಳನ್ನು ಮೆಟ್ಟಿ ತನ್ನ ಬದುಕನ್ನು ಸ್ವತಂತ್ರ್ಯವಾಗಿ ಆಯ್ಕೆ ಮಾಡುವ ಆಧುನಿಕ ಹೆಣ್ಣಿನ ಮನೋಭಾವನೆಯನ್ನು ಕಾಣಬಹುದಾಗಿದೆ. ಅಲ್ಲದೆ ಈ ಕಥೆಗಳಲ್ಲಿ ಹೆಣ್ಣನ್ನು ತಣಿಸಲಾರದ ಗಂಡನ್ನು ನಿರಾಕರಿಸಿ ಲೈಂಗಿಕ ತೃಪ್ತಿಗಾಗಿ ಅನೈತಿಕ ಸಂಬಂಧಗಳನ್ನು ಬಯಸುವ ಹೆಣ್ಣಿನ ಚಿತ್ರಣವನ್ನು ಇಲ್ಲಿ ಕಾಣಬಹುದಾಗಿದೆ. ಹೀಗೆ ಸಾಂಪ್ರಾದಾಯಿಕ ಚೌಕಟ್ಟನ್ನು ಮೀರುವ ಕಥೆಗಾರ್ತಿಯ ಈ ಕಥೆಗಳು ಹೆಚ್ಚು ಆಪ್ತವಾಗಿ ಕಾಣುತ್ತವೆ.

ಈ ಕಥಾ ಸಂಕಲನದ ಮೊದಲನೇ ಕಥೆಯಾದ 'ಅರ್ಥವಾಗದವರು' ಕಥೆಯಲ್ಲಿ ವ್ಯಕ್ತಿಗಳ ಮನಸ್ಸಿನ ಭಾವನೆಗಳನ್ನು ಕುರಿತು ಹೇಳುವ ಸಂಕೀರ್ಣ ಕಥೆಯಾಗಿದೆ ಈ ಕಥೆಯು ಪತ್ರ ಮಾದರಿಯ ಮೂಲಕ ನಿರೂಪಣೆಗೊಳ್ಳುತ್ತದೆ. ಮನೋಹರ ಎಂಬ ವ್ಯಕ್ತಿಯು ವಿಚಾರವಾದಿಯಾಗಿದ್ದು ಪ್ರೀತಿ, ಪ್ರೇಮಗಳಿಗೆ ಸ್ಥಾನವಿಲ್ಲದೆ ಸದಾ ಸ್ವತಂತ್ರವಾಗಿರಬೇಕೆಂದು ಹಂಬಲಿಸುತ್ತಿದ್ದು ಈ ಸಂದರ್ಭದಲ್ಲಿ ವಸಂತಾ ಎಂಬ ಕಥೆಗಾರ್ತಿಯ ಕಥೆಗಳನ್ನು ಓದಿ ಆಕೆಯ ಸ್ನೇಹಕ್ಕಾಗಿ ಹಂಬಲಿಸಿ ಪರಸ್ಪರ ಪತ್ರಮಾದರಿಯ ಮೂಲಕ ಮೆಚ್ಚುಗೆ, ಅಭಿನಂದನೆ ನೀಡುತ್ತಾ ಕಷ್ಟಸುಖಗಳನ್ನು ಹಂಚಿಕೊಂಡು ಆತ್ಮೀಯರಾಗಿದ್ದರು ಆದರೆ ಈ ಆತ್ಮೀಯತೆಯನ್ನು ಪ್ರೀತಿ ಎಂದು ತಿಳಿದ ವಸಂತಾ ಮಧುವೆಯಾಗಲು ಇಚ್ಛಿಸಿದಾಗ ಪ್ರಿಯಕರನ ನಿರಾಕರಣೆ ಆಘಾತವಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಳೆ. ಹೀಗೆ ಈ ಪ್ರೀತಿ ಪ್ರೇಮಗಳು ಅದರ ಆಳ, ಅಗಲವನ್ನು ಅರಿತುಕೊಳ್ಳಲಾಗದೆ ವ್ಯಕ್ತಿಗಳ ಬದುಕಿನಲ್ಲಿ ಸಂಕಷ್ಟಗಳನ್ನು ತಂದುಕೊಡುತ್ತದೆ. ಅಂತ್ಯದಲ್ಲಿ ವಸಂತಾಳಿಗೆ ತನ್ನ ಕೃತ್ಯದ ಬಗ್ಗೆ ಪಶ್ಚಾತಾಪಗೊಂಡು ಮನೋಹರ ಬಯಸಿದಂತೆ ಆತ್ಮೀಯ ಸ್ನೇಹಿತರಾಗಿ ಉಳಿಯುವುದರ ಮೂಲಕ ಪ್ರೇಮಕ್ಕಿಂತ ಸ್ನೇಹ ಶಾಶ್ವತವಾದದ್ದು ಎಂಬುದನ್ನು ಕಾಣಬಹುದು. ಇಲ್ಲಿ ವ್ಯಕ್ತಿಯ ಒಂಟಿತನಕ್ಕೆ ಪರಿಸರ ದಟ್ಟ ಪ್ರಭಾವಬೀರುತ್ತದೆ. ಹೀಗಾಗಿ ಮಧುವೆ ಎಂಬ ವಿಷಯದ ಬಗ್ಗೆ ತಿರಸ್ಕಾರತೆ ಕಂಡು ಬರುತ್ತದೆ. ಆದರೆ ಹೆಣ್ಣು ಭಾವನಾ ಜೀವಿಯಾಗಿದ್ದು ಪ್ರೀತಿ, ಪ್ರೇಮ, ಮಧುವೆ, ಗಂಡ ಬೆಚ್ಚನೆಯ ಪ್ರೀತಿ ಬಗ್ಗೆ ಸದಾ ಹಾತೊರೆಯುವ ಹೆಣ್ಣಿನ ಮನಸ್ಸಿನ ಅಂತರಾಳವನ್ನು ತಿಳಿಸುವ ಹಾಗೂ ಕಾಮ, ಪ್ರೇಮ, ಸ್ನೇಹದ ಬಗ್ಗೆ ವ್ಯಕ್ತಿಗಳಲ್ಲಿರುವ ಮನೋಭಾವನೆಯನ್ನು ಈ ಕಥೆಯಲ್ಲಿ ವ್ಯಕ್ತವಾಗಿವೆ.

'ಮನ ಒಲಿಸಿದವರು' ಕಥೆಯಲ್ಲಿ ಗಂಡು ಹೆಣ್ಣಿನ ಸಂಬಂಧಗಳ ಸಂಕೀರ್ಣ ಚಿತ್ರಣವಿದೆ. ಈ ಕಥೆಯು ನಿರೂಪಕಿಯ ಪಾತ್ರದ ಮೂಲಕ ನಿರೂಪಣೆಗೊಳ್ಳುತ್ತದೆ. ಕಥೆಯ ನಾಯಕಿ ವೀಣಾ ಗಂಡನ ಮೇಲಿನ ಪ್ರೀತಿಗೆ ಕಟ್ಟುಬಿದ್ದು ಆತನ ಆದರ್ಶವಾದಂತೆ ಆಕಾಂಕ್ಷೆಯನ್ನು ಈಡೇರಿಸಲು ಒಲ್ಲದ ಮನಸ್ಸಿನಿಂದ ತನ್ನ ಕಂಪನಿಯ ಮೇಲಾಧಿಕಾರಿಗೆ ತನ್ನನ್ನು ಅರ್ಪಿಸಿಕೊಳ್ಳುತ್ತಾಳೆ. ಈ ಘಟನೆಯ ನಂತರ ಲೈಂಗಿಕತೆ ಬಗ್ಗೆ ಆದರ್ಶವಾಗಿ ಮಾತನಾಡುತ್ತಿದ್ದ ಪ್ರಕಾಶ ಸಾಂಪ್ರದಾಯಿಕತೆ ಅಡ್ಡ ಬಂದು ಮೊದಲಿನಂತೆ ತನ್ನ ಹೆಂಡತಿಯನ್ನು ಸ್ವೀಕರಿಸಲಾರದೆ ಅಪರಾಧಿ ಭಾವನೆ ಕಾಡ ತೊಡಗಿತು. ತನ್ನ ಮಹತ್ವಾಕಾಂಕ್ಷೆಯಂತೆ ಉನ್ನತ ಹುದ್ದೆ ದೊರಕಿದರು ಈ ಹಿನ್ನಲೆಯಲ್ಲಿ ವೀಣಾ ಸಮಾಜದಿಂದ ಅಸಮಾನ ಹಿಂಸೆಗಳನ್ನು ಅನುಭವಿಸಿದ್ದಳು. ಹೀಗೆ ಪುರುಷರ ಸ್ವಾರ್ಥತನಕ್ಕೆ ಹೆಣ್ಣು ಬಲಿಪಶುವಾಗುತ್ತಾಳೆ. ಆದರೆ ಪ್ರಕಾಶ ಹೆಂಡತಿಯಿಂದ ಬಿಡುಗಡೆ ಬಯಸಿ ವಿಚ್ಛೇದನಕ್ಕೆ ಮುಂದಾದಾಗ ಎಲ್ಲವನ್ನೂ ಸಹಿಸುವ ತ್ಯಾಗಮಯಿಯಂತೆ ವೀಣಾ ಅವನಿಂದ ಬಿಡುಗಡೆ ಹೊಂದಿ ಒಂಟಿಯಾಗಿ ಬದುಕಲು ಮುಂದದಾಗ ಈ ಎಲ್ಲಾ ಸಂಕಷ್ಟಕ್ಕೆ ತಾನು ಕಾರಣ ಎಂಬ ಪಾಪಪ್ರಜ್ಞೆ ಭಟ್ಟನಲ್ಲಿ ಕಾಡತೊಡಗಿ ವೀಣಾಳ ಸಹಾಯಕ್ಕೆ ಮುಂದಾಗಿ ಮಾನವೀಯತೆಯನ್ನು ಮೆರೆಯುತ್ತಾನೆ. ಆದರೆ ವಿದ್ಯಾವಂತ ಉದ್ಯೋಗಸ್ಥ ಮಹಿಳೆಯಾಗಿ ಆಧುನಿಕವಾಗಿ

ಆಲೋಚಿಸುವ ಹೆಣ್ಣಾಗಿ ವೀಣಾ ತನ್ನ ಗಂಡನಿಗಿಂತಲೂ ಉನ್ನತ ಹುದ್ದೆಯನ್ನು ಅಲಂಕರಿಸಿ ಸಮಾಜದ ನಿಯಮ ಕಟ್ಟುಪಾಡುಗಳನ್ನು ದಿಕ್ಕರಿಸಿ ತನಗಿಷ್ಟ ಬಂದಂತೆ ಸ್ವತಂತ್ರ್ಯವಾಗಿ ಬದುಕನ್ನು ಬಾಳಸಂಗತಿಯನ್ನು ಆಯ್ದುಕೊಳ್ಳುವುದರ ಮೂಲಕ ಉದ್ಯೋಗಸ್ಥ ಮಹಿಳೆಯ ಮನೋಭಾವನೆಯನ್ನು ಸ್ಪಷ್ಟಪಡಿಸುತ್ತಿವೆ.

'ಕಲ್ಪನಾ ಬರಲೇ ಇಲ್ಲ' ಕಥೆಯು ಮೇಲಿನ ಕಥೆಯಂತೆ ಗಂಡು ಹೆಣ್ಣಿನ ಸಂಬಂಧಗಳನ್ನು ಕುರಿತು ಹೇಳುವ ಸಂಕೀರ್ಣ ಕಥೆಯಾಗಿದೆ. ಈ ಕಥೆಯು ನಿರೂಪಕಿ ಪಾತ್ರದ ಮೂಲಕ ನಿರೂಪಣೆಗೊಳ್ಳುತ್ತದೆ. ನಾಯಕಿ ಭಾಗ್ಯ ತನ್ನ ಗಂಡನಿಂದ ದೊರೆಯದ ಪ್ರೀತಿ, ಆಸೆ, ಬಯಕೆಗಳನ್ನು ಮತ್ತೊಬ್ಬ ಪುರುಷನಿಂದ ಪಡೆದು ಸಂತೃಪ್ತಿಗೊಂಡಿದ್ದಾಳೆ. ಆದರೆ ಕಾಲಕಳೆದಂತೆ ತನ್ನ ಗಂಡನ ವರ್ತನೆಯಲ್ಲಿ ಆದ ಬದಲಾವಣೆ ಮೊದಲಿನ ಕ್ರೂರತೆಯನ್ನು ಬಿಟ್ಟು ಮನುಷ್ಯನಾಗಿ ವರ್ತಿಸುತ್ತಿದ್ದು ಅಪಾರ ಪ್ರೀತಿಯನ್ನು ತೋರಿಸಿದ್ದರಿಂದ ತನ್ನ ಅನೈತಿಕ ಸಂಬಂಧವನ್ನು ತನ್ನ ಗೆಳತಿಯ ಜೀವನದ ಕಥೆ ಎಂಬಂತೆ ತಿಳಿಯಪಡಿಸುತ್ತಾಳೆ ಇದನ್ನು ಅರಿತ ಗಂಡ ಭಾಗ್ಯಳ ಈ ತಪ್ಪಿಗೆ ತಾನು ಮೂಲ ಕಾರಣವೆಂಬುದನ್ನು ಅರಿತು 'ಕಲ್ಪನಾಳನ್ನು ನಮ್ಮ ಮನೆಗೆ ಕರಿ ನಿನ್ನ ಪ್ರೀತಿಗೆ ಬೆಲೆಕೊಟ್ಟು ಅವಳಾಗಿ ನಮ ಮನೆಗೆ ಬಂದರೆ ಸರಿ ಬಾರದಿದ್ದರೆ ಇದೇ ಕಡೆ ಇನ್ನೊಂದು ಬಾರಿ ಈ ಮನೆಯಲ್ಲಿ ನೀನು ಅವಳ ಹೆಸರೆತ್ತ ಬಾರದು' (ಪು.೧೦೫) ಎಂದು ಹೇಳುತ್ತಾ ಆ ಸತ್ಯವನ್ನು ಮರೆಮಾಚುವುದರ ಮೂಲಕ ಮಾನವೀಯತೆಯನ್ನು ಮೆರೆದಿದ್ದಾನೆ. ಹೀಗೆ ಪ್ರೀತಿಯ, ದಾಂಪತ್ಯದ ಸಾಮರಸ್ಯವನ್ನು ಪರಸ್ಪರ ಗಂಡು ಹೆಣ್ಣಿನ ಹೊಂದಾಣಿಕೆಯನ್ನು ಕಾಣಬಹುದಾಗಿದೆ. 'ಪ್ರೀತಿಯಲ್ಲಿ ಕ್ಷಮೆಯಿರಲಿ' ಕಥೆಯಲ್ಲಿ ಗಂಡು ಹೆಣ್ಣಿನ ನಡುವೆಯಿರುವ ಕಾಮ ಪ್ರೇಮವನ್ನು ಕುರಿತ ಕಥೆಯಾಗಿದೆ ಈ ಕಥೆಯು ನಿರೂಪಕನ ಪಾತ್ರದ ಮೂಲಕ ಕಥೆ ನಿರೂಪಣೆಗೊಳ್ಳುತ್ತದೆ. ಈ ಕಥೆಯ ನಾಯಕ ಮನೋಹರ್ ತನ್ನ ಹೆಂಡತಿಯನ್ನು ಅತಿಯಾಗಿ ಪ್ರೀತಿಸುತ್ತಿದ್ದು ಅವಳ ಎಲ್ಲಾ ಆಸೆ ಆಕಾಂಕ್ಷೆಗಳನ್ನು ಈಡೇರಿಸುತ್ತಿದ್ದು ಸಧಾ ನನ್ನ ಎದುರಿಗಿರಲು ಬಯಸುತ್ತಿದ್ದ. ಆದರೆ ಆಕೆ ಉನ್ನತ ವಿದ್ಯಾಭ್ಯಾಸಕ್ಕಾಗಿ ಅಸ್ಸಾಂಗೆ ಹೋಗಲು ಸಿದ್ಧವಾದಾಗ ಅದನ್ನು ವಿರೋಧಿಸಿ 'ಪ್ರೀತಿಯ ಮುಂದೆ ಎಲ್ಲವೂ ಕ್ಷುಲಕ' ಎಂದು ಅದನ್ನು ತ್ಯಾಗ ಮಾಡು ಎಂದು ಹೇಳಿದಾಗ ಸಾಧನೆ ಮುಖ್ಯವೆಂದು ತಿರಸ್ಕರಿಸಿದಾಗ ಅತೀವ ನೋವು, ಒಂಟಿತನ ಕಾಡತೊಡಗುತ್ತದೆ. ಈ ಒಂಟಿತನವನ್ನು ರೇವತಿ ಎಂಬ ಸ್ನೇಹಿತೆ ತುಂಬಿದಾಗ ಹೆಂಡತಿಯನ್ನು ದ್ವೇಷಿಸಲು ಪ್ರಾರಂಭಿಸುತ್ತಾನೆ ಆದರೆ ಈ ದ್ವೇಷದ ಹಿಂದೆ ಅಪಾರ ಪ್ರೀತಿಯಿದೆ ಎಂದು ಅರಿತ ರೇವತಿ ತನ್ನನ್ನು ತಾನು ದೂರಗೊಳಿಸಿಕೊಂಡು ಅವರಿಬ್ಬರನ್ನು ಸಾಮೀಪ್ಯಕ್ಕೆ ತರುವುದರ ಮೂಲಕ ಪ್ರೀತಿಯ ನಿಜವಾದ ಅರ್ಥವನ್ನು ನೀಡುವುದರ ಮೂಲಕ ಪ್ರೀತಿಯಲ್ಲಿ ಪರಸ್ಪರ ಕ್ಷಮೆಯಿರಬೇಕು ಆಗ ಪ್ರೀತಿ ಅಮರವಾಗುತ್ತದೆ ಕೌಟುಂಬಿಕ ಸಾಮರಸ್ಯ ಮೂಡುತ್ತದೆ. ದೇವಕನ್ನಿಕಾ ಕಥೆಯಲ್ಲಿ ಪಾಶ್ಚಿಮಾತ್ಯ ಪ್ರಭಾವಕ್ಕೆ ಒಳಗಾಗಿ ಹೆಣ್ಣನ್ನು ಕೇವಲ ಭೋಗದ ವಸ್ತು ಎಂದು ಭಾವಿಸಿದ ವ್ಯಕ್ತಿಗೆ ತನ್ನ ಮಗಳ ರೂಪದಲ್ಲಿ ತನ್ನ ತಪ್ಪಿನ ಅರಿವಾಗಿ ಹೆಣ್ಣಿನ ಬದುಕಿನ ಸಂಕಷ್ಟಗಳನ್ನು ಅರಿತು ಪಾಪಪ್ರಜ್ಞೆ ಕಾಡತೊಡಗಿ ಪ್ರೇಮದ ಫಲವಾದ ಮಗಳನ್ನು ಸ್ವೀಕರಿಸುವುದರ ಮೂಲಕ ಮಾನವೀಯತೆಯನ್ನು ಕಾಣಬಹುದಾಗಿದೆ.

ಅಲ್ಲದೆ ತಂದೆ ತಾಯಿಗಳ ಪ್ರೀತಿ, ಪ್ರೇಮ, ದ್ವೇಷಕ್ಕೆ ಬಲಿಯಾಗುವ ಅನಾಥ ಮಕ್ಕಳ ನೋವು ಸಂಕಷ್ಟಗಳನ್ನು ಇಲ್ಲಿ ಕಾಣಬಹುದಾಗಿದೆ.

'ಆಸೆಗಳು ಮುಳುಗುವುದಿಲ್ಲ' ಕಥೆಯಲ್ಲಿ ಗಂಡು ಹೆಣ್ಣು ಸಂಬಂಧಗಳು ಕಾಮ ಪ್ರೇಮಗಳ ಅನಿವಾರ್ಯತೆಯನ್ನು ಹಾಗೂ ಪ್ರತಿಷ್ಠಿತ ಶ್ರೀಮಂತ ವ್ಯಕ್ತಿಗಳಲ್ಲಿ ಈ ಪ್ರೇಮ ಕೇವಲ ಕಾಮವಾಗಿ ಮಾತ್ರ ಕಾಣುವುದನ್ನು ಹಾಗೂ ಹೆಣ್ಣು ಪುರುಷರಿಂದ ಅನುಭವಿಸುವ ಮಾನಸಿಕ ಹಾಗೂ ದೈಹಿಕ ಹಿಂಸೆಯನ್ನು, ಅಲ್ಲದೆ ಲೈಂಗಿಕ ಆಸಕ್ತಿಯ ಬಗ್ಗೆ ಹೆಣ್ಣಿನ ಅಂತರಾಳದ ಮಾತುಗಳನ್ನು ಇಲ್ಲಿ ಕಾಣಬಹುದಾಗಿದೆ.

ಒಟ್ಟಾರೆ ಈ ಕಥಾ ಸಂಕಲನದಲ್ಲಿ ರೇಖಾರಾಣಿಯವರು ಕುಟುಂಬ ದಾಂಪತ್ಯ ಜೀವನ, ಗಂಡು ಹೆಣ್ಣಿನ ಸಂಬಂಧಗಳನ್ನು, ಹೆಣ್ಣಿನ ಮನಸ್ಸಿನ ಅಂತರಾಳದ ಪ್ರಶ್ನೆಗಳೂ, ಆಸೆ, ಬಯಕೆಗಳನ್ನು ಇಲ್ಲಿ ಕಾಣಬಹುದಾಗಿದೆ. ಇಲ್ಲಿ ಕಥೆಗಾರ್ತಿ ಮಧ್ಯಮ ಪ್ರತಿಷ್ಠಿತ ವರ್ಗದ ವ್ಯಕ್ತಿಗಳಲ್ಲಿ ಕಾಮ, ಪ್ರೇಮಗಳು ಅನಿವಾರ್ಯವಾಗಿ ಕಂಡುಬರುತ್ತದೆ. ಇಲ್ಲಿ ಕಥೆಗಾರ್ತಿ ಹೆಣ್ಣಿನ ಮೂಲಭೂತ ಸಮಸ್ಯೆಗಳನ್ನು ತಿಳಿಸುವುದಲ್ಲದೆ. ಪುರುಷರ ಗುಣಸ್ವಭಾವಗಳನ್ನು ಗ್ರಹಿಸುವ ಸೂಕ್ಷ್ಮತೆಯನ್ನು ಕಾಣಬಹುದಾಗಿದೆ. ಅಲ್ಲದೆ ಹೆಣ್ಣನ್ನು ಕೇವಲ ಭೋಗದ ವಸ್ತುವಾಗಿ ನೋಡುವ ಪುರಷರಿಗೆ ಯಾವುದೆ ದ್ವೇಷವಿಲ್ಲದೆ ಅರಿವನ್ನು ಮೂಡಿಸುವ ಪ್ರಯತ್ನವನ್ನು ಮಾಡಿದ್ದಾರೆ. ಅಲ್ಲದೆ ಕಾಮ ಪ್ರೇಮದ ಬಗ್ಗೆ ಯಾವುದೇ ಮಡಿವಂತಿಕೆಯಿಲ್ಲದೆ ಗಂಡು ಹೆಣ್ಣಿನ ಲೈಂಗಿಕಾಸಕ್ತಿಯ ಬಗ್ಗೆ ಹೇಳುವ ಕಥೆಗಾರ್ತಿಯ ನೇರವಾದ ಮಾತುಗಳು ತನ್ಮತೆಯನ್ನು ಕಾಣಬಹುದಾಗಿದೆ. ಹೀಗೆ ಹೆಣ್ಣಿನ ಮನಸ್ಸಿನ ತುಮುಲಗಳನ್ನು ಕಥೆಗಾರ್ತಿ ತಮ್ಮದೇ ಆದ ಅನುಭವ ಅಭಿವ್ಯಕ್ತಿಯಲ್ಲಿ ಕಥೆಯಾಗಿ ಮೂಡಿಸಿದ್ದಾರೆ.

ಶಾಂತಕುಮಾರಿ ಕಥೆಗಳು

ಶಾಂತಕುಮಾರಿ ಇತ್ತೀಚಿನ ಕಥಾಗಾರ್ತಿಯರಲ್ಲಿ ಒಬ್ಬರಾಗಿದ್ದು ಅವರು 'ಮುಟ್ಟು' ಒಂಬ ಕಥಾಸಂಕಲನವನ್ನು ರಚಿಸಿದ್ದಾರೆ. ಈ ಕಥಾ ಸಂಕಲನದಲ್ಲಿ ಒಟ್ಟು ಹದಿನೇಳು ಕಥೆಗಳಿದ್ದು, ಮೊದಲ ಕಥೆಗೂ ಕೊನೆಯ ಕಥೆಗೂ ಇಪ್ಪತ್ತೆರಡೂ ವರ್ಷಗಳ ಅಂತರವಿದೆ. ಹೀಗೆ ೧೭ ವರ್ಷಗಳ ದೀರ್ಘ ಮೌನದ ನಂತರ ಮತ್ತೆ ಕಥೆಗಳನ್ನು ಬರೆಯಲು ಕಥೆಗಾರ್ತಿಗೆ ಸಾಧ್ಯವಾಯಿತು. ಈ ಎಲ್ಲಾ ಕಥೆಗಳಲ್ಲಿ ಕಥೆಗಾರ್ತಿಯ ದಟ್ಟ ಅನುಭವಗಳಿದ್ದು, ಕೆಲವೊಮ್ಮೆ ಹೊಸ ಸನ್ನಿವೇಶಗಳನ್ನು ಸೃಷ್ಟಿಸಿ ಪ್ರಯೋಗಾತ್ಮಕ ಕಥೆಯೂ ಮೂಡಿಬಂದಿದೆ ಈ ಎಲ್ಲಾ ಕಥೆಗಳಲ್ಲಿ ಹದಿಹರೆಯದ ವಯಸ್ಸಿನ ಗಂಡು ಹೆಣ್ಣಿನ ಸಂಬಂಧಗಳು, ದಾಂಪತ್ಯ ಜೀವನ, ಕಾಮ, ಪ್ರೇಮ, ಅಲ್ಲದೆ ಕೌಟುಂಬಿಕ ನೆಲೆಯಲ್ಲಿ ಹದಿಹರೆಯದ ತವಕ ತಲ್ಲಣಗಳು ಕಥೆಯಾಗಿವೆ. ಅಲ್ಲದೆ ಪುರುಷರಿಂದ ಸ್ತ್ರೀ ಶೋಷಣೆಗೊಳಗುತ್ತಿದ್ದಾಳೆ ಎಂದೆಷ್ಟೆ ತಿಳಿದ ಸಮಾಜಕ್ಕೆ ಸ್ತ್ರೀಯರಿಂದ ಪುರುಷರು ಶೋಷಣೆಗೆ ಒಳಾಗುತ್ತಾರೆ ಎಂಬುದನ್ನು ತೋರಿಸುವ ಪುರುಷ ಮನಸ್ಸಿನ ಸೂಕ್ಷ್ಮ ಭಾವನೆಗಳನ್ನು ಗ್ರಹಿಸುವ ಶಕ್ತಿ ಕಥೆಗಾರ್ತಿಗೆ ದಕ್ಕಿದ್ದು, ಇಲ್ಲಿಯ ಕಥೆಗಳು ಪುರುಷ

ದ್ವೇಷವಿಲ್ಲದೆ ತಿಳುವಳಿಕೆಯನ್ನು ಮೂಡಿಸುವಂತೆ ಸ್ತ್ರೀವಾದಿ ದೃಷ್ಟಿಕೋನಕ್ಕಿಂತ ಅದರಾಚೆ ಹೆಣ್ಣಿನ ಮನಸ್ಸಿನ ಅಂತರಾಳವನ್ನು ಕಥೆಗಾರ್ತಿ ಸಮೃದ್ಧವಾಗಿ ತೆರೆದಿಟ್ಟಿದ್ದಾರೆ. ಈ ಕಥಾ ಸಂಕಲನದ ಮೊದಲನೇ ಕಥೆಯಾದ 'ಮುಟ್ಟು' ಗಂಡು ಹೆಣ್ಣಿನ ಸಂಬಂಧವನ್ನು ಕುರಿತು ಹೇಳುವ ಸಂಕೀರ್ಣ ಕಥೆಯಾಗಿದೆ. ಈ ಕಥೆಯು ನಿರೂಪಕಿಯ ಪಾತ್ರದ ಮೂಲಕ ನಿರೂಪಣೆಗೊಳ್ಳುತ್ತದೆ. ಕಥೆಯ ನಾಯಕಿ ನೈಸರ್ಗಿಕ ಸಹಜವಾದ ತಿಂಗಳ ಸಮಸ್ಯೆಯಿಂದ ನರಳುತ್ತಿದ್ದು ಈ ಸಂದರ್ಭದಲ್ಲಿ 'ಹೊಟೇಲಿಂದ ಊಟ ತರಿಸು ರೆಸ್ಟ್ ತಗೋ' ಎನ್ನುವುದಕ್ಕಿಂತ "ನಿಮ್ಮಿ, ಈ ದಿನ ಅಡಿಗೆ ನನ್ನದೇ, ಈ ಎಲ್ಲಾ ಕ್ಲೀನಿಂಗ್ ನಾನೇ ಐದು ನಿಮಿಷದಲ್ಲಿ ಮುಗಿಸಿಬಿಡುತ್ತೇನೆ'. ಎಂದೋ "ಬಾ ಎಲ್ಲಾದರೂ ಹೊರಗೆ ಹೋಗಿ ಬರೋಣ" (ಪು-೧೭) ಎಂಬ ಸಾಂತ್ವದ ಮಾತುಗಳು ಪ್ರೀತಿಯ ಬೆಚ್ಚನೆಯ ಮಾತುಗಳಿಗೆ ಹಾತೊರೆಯುತ್ತಾಳೆ ಇದು ಪ್ರತಿಯೊಬ್ಬ ಹೆಣ್ಣಿನ ಬಯಕೆಯೂ ಕೂಡ ಆಗಿರುತ್ತದೆ. ಅಲ್ಲದೆ ಇಂತಹ ಸಂದರ್ಭದಲ್ಲೂ ಮನೆ, ಗಂಡ, ಸಂಸಾರ ಎಂದು ಕುಟುಂಬದ ಹೊರಗೆ, ಒಳಗೆ ದುಡಿಯುತ್ತಿದ್ದು ಸಾಕಷ್ಟು ಬಳಲಿ ಅಪಾರ ನೋವು ಅನುಭವಿಸುತ್ತಿದ್ದು ಇದನ್ನು ಗಂಡನಿಗೆ ಅರ್ಥಮಾಡಿಸಲಾರದೆ ಇವೆಲ್ಲವುಗಳಿಂದ ಮುಕ್ತವಾಗಿ ಬಿಡುಗಡೆ ಹೊಂದಬೇಕು ಎಂದು ಬಯಸಿದರೂ ಅದು ಸಾಧ್ಯವಾಗದೆ ಗಂಡನ ಮೇಲೆ ಸಂಸಾರದ ಮೇಲೆ ಸಿಡುಕು, ದ್ವೇಷವಿದ್ದರೂ ಅದು ಕ್ಷಣಮಾತ್ರದಲ್ಲಿ ಕಳೆದುಹೋಗಿ ಗಂಡನ ಬೆಚ್ಚನೆಯ ಅಪ್ಪುಗೆಯಲ್ಲಿ ಪ್ರೀತಿಯ ಅಪ್ಪುಗೆಯಲ್ಲಿ ಎಲ್ಲವೂ ಅದುವರೆಗೂ ಇದ್ದ ದುಃಖ ದುಮ್ಮಾನಗಳು ದೂರವಾಗಿ ಪ್ರೀತಿಯ ವರತೆಯಲ್ಲಿ ಸಂಸಾರಿಕ ಜೀವನ ಸಾಗುವುದು ಆ ಮೂಲಕ ಕೌಟುಂಬಿಕ ಸಾಮರಸ್ಯವನ್ನು ಕಾಣಬಹುದಾಗಿದೆ. ಹೀಗೆ ಮಧ್ಯಮ ವರ್ಗದ ಉದ್ಯೋಗಸ್ಥ ಮಹಿಳೆಯು ಸಾಂಸಾರಿಕ ಹಾಗೂ ಮುಟ್ಟಿನ ಸಂದರ್ಭದಲ್ಲಿ ಹೆಣ್ಣು ಅನುಭವಿಸುವ ನೋವು, ಸಂಕಟಗಳನ್ನು ಅತ್ಯಂತ ಸಹಜವಾಗಿ ಕಥೆಯಲ್ಲಿ ಮೂಡಿ ಬಂದಿದೆ.

'ಹೀಗೊಂದು ವಾದ' ಕಥೆಯಲ್ಲಿ ಗಂಡು ಹೆಣ್ಣಿನ ನಡುವಿನ ಅಂತರ ಸಂಬಂಧವನ್ನು ಮನುಷ್ಯ ಸ್ವಭಾವವನ್ನು ಕುರಿತು ಹೇಳುವ ಸಂಕೀರ್ಣ ಕಥೆಯಾಗಿದೆ. ಈ ಕಥೆಯು ನಿರೂಪಕಿಯ ಮೂಲಕ ೧೫ ವರ್ಷಗಳ ನಂತರ ಭೇಟಿಯಾದ ಗಂಡನ ಸಾಮಿಪ್ಯ ಭೂತಕಾಲವನ್ನು ನೆನೆಯುವುದರ ಮೂಲಕ ಕಥೆ ನಿರೂಪಣೆಗೊಳ್ಳುತ್ತದೆ. ಅನುಕಂಪವೆಂಬುದು ಪತಿ ಪತ್ನಿಯರಲ್ಲಿ ಅಷ್ಟೇ ಅಲ್ಲ ಸ್ನೇಹಿತರೊಂದಿಗಿರಬೇಕೆಂದು ಗಂಡ ಹೊಡೆದ ಎಂಬ ಕಾರಣಕ್ಕಾಗಿ ಮನೆಯನ್ನು ತೊರೆದ ಅವರನ್ನು ಒಂದಾಗಿಸುವ ಪ್ರಯತ್ನದಲ್ಲಿ ಹುಟ್ಟಿಕೊಂಡ ವಾದ ನಾಯಕಿಯ ಜೀವನವನ್ನು ಸಾಂಸಾರವನ್ನು ದುರಂತಗೊಳಿಸುತ್ತದೆ. ನಿಮ್ಮಿ ಪ್ರಕಾರ 'ಗಂಡ ಅಂದರೆ ಏನು ಬೇಕಾದ್ರೂ ಮಾಡಬಹುದು ಅಂತಾನಾ?' (ಪು-೨೬) ಎಂದು ತನ್ನ ಸ್ನೇಹಿತೆಯ ನಿರ್ಧಾರದ ಬಗ್ಗೆ ಮೆಚ್ಚುಗೆಯಿದ್ದು ಗಂಡನ ವಾದಗಳಿಗೆ ಪ್ರತಿರೋದವನ್ನೊಡ್ಡುತ್ತಾ ಕೊನೆಗೆ ಆಕಾಸ್ಮಾತ್ ನಾನೇ ಹೊಡೆದರೆ ನೀನೇನೂ ಮಾಡ್ತಿಯಾ (ಪು-೨೮) ಎಂದು ಪ್ರಶ್ನಿಸುವುದರ ಮೂಲಕ ಗಂಡನ ಪ್ರತಿಕ್ರಿಯೆಯನ್ನು ಸಹಿಸದೆ ಹೆಣ್ಣಿನ ಬಗ್ಗೆ ಇರುವ, ಅಸಹನೆ, ಹೆಣ್ಣಿನ ಮೇಲೆ ನಡೆಸುವ ಅಧಿಕಾರ, ಅಲ್ಲದೆ ಹೆಣ್ಣು ಕೇವಲ ಭೋಗದ ವಸ್ತು ಎಂದು ಭಾವಿಸುವ ಗಂಡನ ಗುಣ ಸ್ವಭಾವಗಳನ್ನು ಅರಿತು

ಯಾವತ್ತಿದ್ರೂ ಗಂಡಸು ಮೇಲೆ ಅಂತ ಗೊತ್ತಾಯ್ತಾ? ಎಂದು ಹೇಳಿದ ಗಂಡನ ಅಹಂ, ಗಂಡು ಸುತನವನ್ನು ಸಹಿಸದೆ ಪರಸ್ಪರ ಆತ್ಮಗೌರವವಿಲ್ಲದೆ ಕೇವಲ ಹೊಂದಾಣಿಕೆಯಿಂದ ಗಂಡು ಹೆಣ್ಣಿನ ಸಂಬಂಧ ಮುಂದುವರೆಯುವುದು ಹೊಂದಾಣಿಕೆ ತಳಹದಿಯಲ್ಲಿ ದಾಂಪತ್ಯ ಜೀವನವನ್ನು ನಡೆಸುವುದು ಒಪ್ಪದ ಮಾತಾಗಿ ಗಂಡನನ್ನು ಯಾವುದೇ ವಾದ ವಿವಾದಗಳಿಲ್ಲದೆ ರಾಗ ದ್ವೇಷವಿಲ್ಲದೆ ಮೌನವಾಗಿ ದೂರಸರಿದರೂ ಕಾಲಂತರದಲ್ಲಿ ಅಪಘಾತಕ್ಕೀಡಾದ ಗಂಡನ ಸೇವೆ ಮಾಡುವುದರ ಮೂಲಕ ಹೆಣ್ಣಿನ ಸಹಜ ಪ್ರೀತಿ, ವಾತ್ಸಲ್ಯ, ಮಮತೆಯನ್ನು ಕಾಣಬಹುದಾಗಿದೆ ಆದರೆ ಈ ಪ್ರೀತಿ ಕೇವಲ ಗಂಡ ಹೆಂಡಿರ ಪ್ರೇಮವಾಗಿರದೆ ಅದು ಕೇವಲ ಪರಸ್ಪರ ಸ್ನೇಹಿತರಾಗಿರುವುದರ ಮೂಲಕ ಮುಕ್ತಾಯವಾಗುವುದರ ಮೂಲಕ ವಿದ್ಯಾವಂತ ಮಹಿಳೆಯ ಆಧುನಿಕತೆಯ ವಿಚಾರಗಳನ್ನು ಕಾಣಬಹುದಾಗಿದೆ ಹೀಗೆ ವಿಷಯ ದಾಂಪತ್ಯಕ್ಕೆ ಹೆಣ್ಣು ಉದ್ಯೋಗಸ್ಥಳಾಗಿರುವುದೇ ಕಾರಣವೆಂಬಂತೆ ಅಪರಾದವೆಂತೆ ಸಣ್ಣ ಎಳೆ ಬಾರದಿರಲಾರದು.

'ಕೊನೆಗೂ ಟ್ಯಾಲಿಯಾಗಲಿಲ್ಲ' ಕಥೆಯಲ್ಲಿ ಗಂಡು ಹೆಣ್ಣಿನ ಗುಣ ಸ್ವಭಾವಗಳನ್ನು ತಿಳಿಸುವ ಸಂಕೀರ್ಣ ಕಥೆಯಾಗಿದೆ. ಈ ಕಥೆಯು ನಿರೂಪಕನ ಪಾತ್ರದ ಮೂಲಕ ಕಥೆ ನಿರೂಪಣೆಗೊಳ್ಳುತ್ತದೆ. ಈ ಕಥೆಯ ನಾಯಕ ಪುರುಷೋತ್ತಮ ಕುಟುಂಬದವರ ಸೇವೆ ಮಾಡುತ್ತಾ ಅದೇ ತನ್ನ ಕರ್ತವ್ಯವೆಂಬಂತೆ ಅವರಿಂದ ಅಪಮಾನ ಹಿಂಸೆಗಳನ್ನು ಸಹಿಸಿ ಎಲ್ಲರಿಗೂ ಪ್ರೀತಿ ಪಾತ್ರವಾಗಿದ್ದ ಈ ಸಂದರ್ಭದಲ್ಲಿ ತನಗಿಂತಲೂ ವಯಸ್ಸಿನಲ್ಲಿ ಕಿರಿದಾದ ಹೆಣ್ಣನ್ನು ವಿವಾಹವಾಗಿದ್ದು ರಸಿಕತನವಿಲ್ಲದ, ವಯಸ್ಸಿನಲ್ಲಿ ಸಾಕಷ್ಟು ಅಂತರವಿರುವ ಗಂಡನಿಂದ ಬೇಸತ್ತ ಉಮಾ ತನ್ನ ಆಸೆ, ಬಯಕೆಗಳನ್ನು ಈಡೇರಿಸಿಕೊಳ್ಳಲು, ಪರಪುರುಷನೊಂದಿಗೆ ಅನೈತಿಕ ಸಂಬಂಧವನ್ನು ಹೊಂದುತ್ತಾಳೆ. ಎಲ್ಲವನ್ನೂ ಕಂಡು ಕಾಣದೆಯಿದ್ದ ಆದರೆ ನೆರೆಹೊರೆಯವರಿಂದ ಈ ವಿಷಯ ಪ್ರಸ್ತಾಪವಾದ ಇದನ್ನು ಸಹಿಸದೆ "ಬೆಳಗಿನಿಂದ ಸಂಜೆತನಕ ಆಫೀಸಿನಲ್ಲಿ ಜೊತೆಯಲ್ಲಿ ಇರ್ತಿರ, ಮನೆಗೆ ಬಂದ ನಂತರವೂ ಏನಿರುತ್ತೆ ಮಾತನಾಡಲು?" ಎಂದು ರೇಗಿದಾಗ "ಅಯ್ಯೋ ನಿಮಗೇನು ಗೊತ್ತಾಗುತ್ತೆ. ಅಕ್ಕಂದಿರ ಮನೆಯಲ್ಲಿ ಏನಾದರೂ ಕೆಲಸ ಇದ್ದರೆ ನೋಡಿ" (ಪು.೪೯) ಎಂದಾಗ ಪುರುಷೋತ್ತಮ ಸಾಕಷ್ಟು ಅಪಮಾನ, ಹಿಂಸೆ ಅನುಭವಿಸಿದ್ದು ಸ್ತ್ರೀಯೂ ಪುರುಷರನ್ನು ಶೋಷಣೆ ಮಾಡುತ್ತಾಳೆ ಎಂಬ ಸತ್ಯವನ್ನು ಕಾಣಬಹುದು. ಹೀಗೆ ಮಕ್ಕಳ ಮದುವೆ, ಮುಂದಿನ ಭವಿಷ್ಯಕ್ಕೆ ಹೆದರಿ ಎಲ್ಲವನ್ನು ಹೊಂದಾಣಿಕೆ ಮಾಡಿಕೊಳ್ಳುವ ಪುರುಷೋತ್ತಮನಲ್ಲಿ ಮಾನವೀಯತೆಯನ್ನು ಕಾಣಬಹುದಾಗಿದೆ. ಹೀಗೆ ಪುರುಷರಲ್ಲಿಯೂ ಸಾಕಷ್ಟು ಸಮಸ್ಯೆಗಳಿವೆ ಎಂಬುದನ್ನು ತಿಳಿಸುವ ಕಥೆಗಾರ್ತಿ ಪುರುಷನ ಮನಸ್ಸನ್ನು ಅಂತರಾಳವನ್ನು ಅರಿಯುವಲ್ಲಿ ಗುಣ ಸ್ವಭಾವಗಳನ್ನು ಗ್ರಹಿಸುವ ಕಥೆಗಾರ್ತಿ ಸೂಕ್ಷ್ಮತೆಯನ್ನು ತಿಳಿಸಿದ್ದಾರೆ.

'ಮನೆ' ಕಥೆಯಲ್ಲಿ ಸಾಂಪ್ರದಾಯಿಕ ಆಧುನೀಕತೆಯನ್ನು ಮುಖಾಮುಖಿಯಾಗಿಸುವುದರ ಮೂಲಕ ಆಧುನೀಕತೆಯ ಹುಚ್ಚು ಪ್ರವಾಹದಲ್ಲಿ ಸಾಂಪ್ರದಾಯಿಕ ಜೀವನ ಮೌಲ್ಯಗಳು ನಾಶವಾಗುತ್ತಿರುವುದನ್ನು

ಕಾಣಬಹುದಾಗಿದೆ. ಅಲ್ಲದೆ ಹೆಣ್ಣು ಗಂಡನಿಂದ ಮಕ್ಕಳಿಂದ ಹಂತ ಹಂತದಲ್ಲಿಯೂ ಅಪಮಾನ, ಹಿಂಸೆಗಳನ್ನು ಅನುಭವಿಸುತ್ತಿರುವುದನ್ನು ಕಾಣಬಹುದಾಗಿದೆ. 'ಒಂದು ಹೇನಿನ ಕಥಾ ಪ್ರಸಂಗ' ಕಥೆಯಲ್ಲಿ ಹೆಣ್ಣಿನ ಸಂಶಯ ಪ್ರವೃತ್ತಿ ಗುಣ ಸ್ವಭಾವಗಳನ್ನು ಅದರ ಪರಿಣಾಮಗಳನ್ನು ಕುರಿತು ಹೇಳುವ ಕುತೂಹಲಕರವಾದ ಕಥೆಯಾಗಿದೆ.

'ಮಾತಾ ಆನಂದ ಮಾಯಿ' ಕಥೆಯಲ್ಲಿ ಜಾಗತಿಕರಣದ ವಲಯದಲ್ಲಿ ಆಧ್ಯಾತ್ಮಿಕ ಹಿನ್ನಲೆಯಲ್ಲಿ ಜನರನ್ನು ಮೋಸಗೊಳಿಸುವ ಹೆಣ್ಣಿನ ಕ್ರೌರ್ಯದ ಮುಖವನ್ನು ಪರಿಚಯಿಸುವ, ಹೆಣ್ಣಿನ ವಿರುದ್ಧ ಮುಖಗಳನ್ನು ತಿಳಿಸುವುದರ ಮೂಲಕ ಹೆಣ್ಣಿಗೆ ಹೆಣ್ಣೆ ಶೋಷಣೆ ಮಾಡುವ ಚಿತ್ರಣವನ್ನು ಈ ಕಥೆಯಲ್ಲಿ ಕಾಣಬಹುದಾಗಿದೆ. 'ಮೀಸೆ' ಕಥೆಯಲ್ಲಿ ಹೆಣ್ಣಿನ ಸಹಜ ಗುಣ ಸ್ವಭಾವಗಳನ್ನು ಮರೆತು ಪುರುಷರಂತೆ ಅಧಿಕಾರ, ಅಹಂ, ದೌರ್ಜನ್ಯಗಳನ್ನು ಬೆಳೆಸಿಕೊಂಡ ನಾಯಕಿಗೆ ಇದರ ಪರಿಣಾಮದಿಂದ ಮೀಸೆ ಬೆಳೆದಂತೆ ಭಾಸವಾಗಿ ಪಶ್ಚಾತಾಪಗೊಂಡು ದಾಂಪತ್ಯ ಜೀವನಕ್ಕೆ ಕಾಲಿಡುವ ಹೆಣ್ಣಿನ ಮನಸ್ಥಿತಿಯನ್ನು ಕುರಿತ ಚಿತ್ರಣವಿದೆ.

ಜಾತಿ ಕೆಟ್ಟವರು ಕಥೆಯಲ್ಲಿ ವೈದಿಕ ಸಂಪ್ರದಾಯ ಹಿನ್ನಲೆಯಲ್ಲಿ ಬ್ರಾಹ್ಮಣ ವಿಧವಾ ಹೆಣ್ಣಿನ ಮಡಿ, ಮೈಲಿಗೆ ಸಂಪ್ರದಾಯಗಳು, ಅಲ್ಲದೆ ಹದಿಹರೆಯದ ಹೆಣ್ಣಿನ ಆರದ ಹಸಿಹಸಿ ಬಯಕೆಗಳು, ಕೆಳವರ್ಗದವರ ಮಾನವೀಯ ಮೌಲ್ಯವನ್ನು ಕಥೆಯಲ್ಲಿ ಕಾಣಬಹುದಾಗಿದೆ.

'ವಾಸನೆ' ಕಥೆಯಲ್ಲಿ ಮಧ್ಯಮ ವರ್ಗದ ಹೆಣ್ಣು ಔದ್ಯೋಗಿಕವಾಗಿ ತನ್ನನ್ನು ತೊಡಗಿಸಿಕೊಂಡಾಗ ಮೇಲಾಧಿಕಾರಿಗಳಿಂದ ಅನುಭವಿಸುವ ಲೈಂಗಿಕ ಕಿರುಕುಳವನ್ನು ಆ ಮೂಲಕ ತನ್ನ ವಾಸನೆಯ ಗ್ರಹಿಕೆಯಿಂದ ಗ್ರಹಿಸಿದ ಆಸ್ವಾದಿಸಿದ ಅನೇಕ ಅಂಶಗಳು ವ್ಯಕ್ತಿಯನ್ನೇ ಸರ್ವನಾಶಮಾಡುತ್ತವೆ. ಹೀಗೆ ಹೆಣ್ಣಿನ ಸಮಾನತೆ, ಸ್ವಾತಂತ್ರ್ಯದ ಅವಕಾಶಕ್ಕೆ ಅಹಂ ಮಾರಕವಾಗಿ ಕಾಡುತ್ತಿದ್ದೇನು ಎಂದು ಭಾಸವಾಗುತ್ತಿದೆ.

'ಸಂಬಂಧ' ಕಥೆಯಲ್ಲಿ ಹೆತ್ತ ತಂದೆಯಿಂದಲೇ ಲೈಂಗಿಕ ಶೋಷಣೆಗೆ ಗುರಿಯಾಗುವ ಕಾಮ, ಪ್ರೇಮಗಳ ತೀವ್ರತೆಯನ್ನು ಕುರಿತು ಹೇಳುವ ಹೆಣ್ಣು ಅಸುರಕ್ಷತೆಯನ್ನು, ಪುರುಷರ ಸ್ವಾರ್ಥತತೆಯನ್ನು ಕಥೆಯಾಗಿಸಿದ್ದಾರೆ.

ಒಟ್ಟಾರೆ ಶಾಂತಕುಮಾರಿಯವರ 'ಮುಟ್ಟು' ಕಥಾ ಸಂಕಲನದಲ್ಲಿ ಕುಟುಂಬ, ದಾಂಪತ್ಯ, ಹದಿಹರೆಯದ ವಯಸ್ಸಿನವರ ಕಾಮ, ಪ್ರೇಮ ಕಥೆಯ ವಸ್ತುವಾಗಿವೆ. ಅಲ್ಲದೆ ಜಾಗತೀಕರಣ ವಲಯದಲ್ಲಿ ವ್ಯಕ್ತಿಯ ಕ್ರೂರತೆ ಮೋಸವಂಚನೆಗಳು ಇಲ್ಲಿಯ ಕಥೆಗಳಲ್ಲಿ ಮೂಡಿಬಂದಿದೆ. ಈ ಎಲ್ಲಾ ಕಥೆಗಳಲ್ಲಿ ಕಥೆಗಾರ್ತಿ ಸಾಂಪ್ರದಾಯಿಕ ಚೌಕಟ್ಟನ್ನು ಮೀರಿ ಆಧುನೀಕತೆಯನ್ನು ಕಾಣಬಹುದಾಗಿದೆ. ಕಥೆಗಾರ್ತಿಯ ಬಾಲ್ಯದ ಗ್ರಾಮೀಣ ಅನುಭವಗಳು ಕಥೆಗಳಾಗಿ ಮೂಡಿಬಂದರೂ ಹೆಚ್ಚಾಗಿ ಸಮಕಾಲೀನ ಬದುಕಿನ ಸನ್ನಿವೇಶಗಳು ಮತ್ತು ಜೀವನ ಮೌಲ್ಯಗಳನ್ನು ಇಲ್ಲಿಯ ಕಥೆಗಳಲ್ಲಿ ಹಿಡಿದಿಡಲಾಗಿದೆ. ಅಲ್ಲದೆ ಸಮಕಾಲೀನ ಸಮಾಜದಲ್ಲಿನ ಸಹಜವಾದ ಸನ್ನಿವೇಶವನ್ನು ಕಥೆಯಾಗಿ ಮೂಡಿಬಂದಿವೆ.

ಕಥೆಗಾರ್ತಿ ಇಲ್ಲಿ ವಾಸ್ತವಿಕ, ಅವಾಸ್ತವಿಕ ಹಾಗೂ ಫ್ಯಾಂಟಸಿ ಮಾದರಿಯಲ್ಲಿ ಕಥೆಗಳು ಮೂಡಿಬಂದಿದೆ. ವಾಸನೆ, ಮೀಸೆ ಕಥೆಗಳು ಉದಾರಹಣೆಯಾಗಿವೆ. ಗಂಡು ಹೆಣ್ಣನ್ನು ಅನಾದಿಕಾಲದಿಂದಲೂ ಶೋಷಣೆ ಮಾಡುತ್ತಿರುವುದು ಸಾಮಾನ್ಯವಾಗಿದೆ. ಆದರೆ ಇಂದಿನ ಆಧುನಿಕ ಯುಗದಲ್ಲಿ ಹೆಣ್ಣು ಸಹಾ ಗಂಡನ್ನು ಶೋಷಣೆ ಮಾಡುತ್ತಿದ್ದಾಳೆ ಎಂಬುದನ್ನು ಕಥೆಗಾರ್ತಿ ಕಥೆಗಳಲ್ಲಿ ಮೂಡಿಸಿದ್ದಾರೆ. ಹಾಗೂ ಕಥೆಗಾರ್ತಿ ಪುರುಷರ ಮನಸ್ಸನ್ನು ಸೂಕ್ಷ್ಮವಾಗಿ ಗ್ರಹಿಸಿ ಆ ಮೂಲಕ ಅವರ ಗುಣ ಸ್ವಭಾವಗಳನ್ನು ಸೆರೆಹಿಡಿಯುವಲ್ಲಿ ಕಥೆಗಾರ್ತಿಯ ಸೂಕ್ಷ್ಮಗ್ರಹಿಕೆ ಅಪಾರವಾಗಿದೆ. ಈ ಎಲ್ಲಾ ಕಥೆಗಳಲ್ಲಿ ಹೆಣ್ಣು ಕೇಂದ್ರಬಿಂದುವಾಗಿದ್ದು ಅವರು ಅನುಭವಿಸುವ ನೋವು, ಸಂಕಟ, ತಿಂಗಳಿನ ಸಮಸ್ಯೆ ಹೀಗೆ ಮಧ್ಯಮ ವರ್ಗದ ಹೆಣ್ಣಿನ ಸ್ಥಿತಿಗತಿಗಳನ್ನು ಇಲ್ಲಿಯ ಕಥೆಗಳಲ್ಲಿ ಕಾಣಬಹುದಾಗಿದೆ. ಇಲ್ಲಿ ಕಥೆಗಾರ್ತಿ ಸ್ತ್ರೀವಾದಿ ನಿಲುವಿನಿಂದ ಆಚೆಗೆ ಬದಲಾದ ಬದುಕಿನ ಸನ್ನಿವೇಶಗಳನ್ನು ಹಾಗೂ ಮೌಲ್ಯಗಳನ್ನು ತಮ್ಮ ನೇರವಾದ ಅಭಿವ್ಯಕ್ತಿಯಲ್ಲಿ ಲೀಲಾಜಾಲವಾಗಿ ಪುರುಷ ದ್ವೇಷವಿಲ್ಲದೆ ಅರಿವನ್ನು ಮೂಡಿಸುವಲ್ಲಿ ಕಥೆಯನ್ನು ಹೆಣೆಯಲಾಗಿದೆ ಹಾಗೂ ಹೆಣ್ಣು ಹೆಣ್ಣಿಗೆ ಶತ್ರು ಎಂಬುದನ್ನು ಹೆಣ್ಣಿನ ಕ್ರೌರ್ಯತೆ, ಸಂಶಯ ಪ್ರವೃತ್ತಿಯನ್ನು ಇಲ್ಲಿ ಕಾಣಬಹುದಾಗಿದೆ. ಹೀಗೆ ಶಾಂತಕುಮಾರಿ ಶಕ್ತ ಕಥೆಗಾರ್ತಿಯೆಂಬುದು ಈ ಸಂಕಲನದಿಂದ ಸಾಧ್ಯವಾಗಿದೆ. ಅಲ್ಲದೆ ಇವರ ಕಥೆಗಳು ವರ್ತಮಾನ ಹಾಗೂ ಭವಿಷ್ಯದ ಸನ್ನಿವೇಶಗಳನ್ನು ಹೇಳುತ್ತದೆ. ಹೀಗೆ ಶಾಂತಕುಮಾರಿ ಕಥೆಗಳು ಹೆಣ್ಣಿನ ನೋವು, ಮನಸ್ಸಿನ ತಲ್ಲಣಗಳಿಗೆ ಹಾಗೂ ಬದುಕಿಗೆ ವ್ಯಾಖ್ಯಾನ ನೀಡುವಂತೆ ಕಥೆಗಳು ಮೂಡಿಬಂದಿವೆ.

ಎಚ್. ನಾಗವೇಣಿಯವರು ಶಕ್ತ ಕಥೆಗಾರ್ತಿಯೆಂದು ಖ್ಯಾತಿ ಪಡೆದಿದ್ದು ಇವರು **'ನಾಕನೇ ನೀರು'**, **'ಮೀಯುವ ಆಟ'** ಎಂಬ ಎರಡು ಕಥಾ ಸಂಕಲನಗಳನ್ನು ರಚಿಸಿದ್ದಾರೆ. ಈ ಎಲ್ಲಾ ಕಥೆಗಳಲ್ಲಿ ಕಥೆಗಾರ್ತಿಯ ಕರಾವಳಿ ಪರಿಸರದಲ್ಲಿನ ದಟ್ಟ ಅನುಭವಗಳು ಕಥೆಯ ಜೀವಂತಿಕೆಯಾಗಿದೆ. ಈ ಪರಿಸರದಲ್ಲಿ ಬದುಕುವ ಕೆಳ ಹಾಗೂ ಮೇಲ್‌ವರ್ಗದ ಜನರ ಜೀವನ, ಈ ಸಮುದಾಯಗಳ ನಡುವೆ ಇರುವ ಕ್ರೌರ್ಯ ಹಾಗೂ ಮಾನವೀಯತೆಯನ್ನು ಈ ಕಥೆಗಳಲ್ಲಿ ಕಾಣಬಹುದಾಗಿದೆ. ಅಲ್ಲದೆ ಈ ಪ್ರದೇಶದ ಜನರಲ್ಲಿನ ಮೌಢ್ಯತೆ, ಭೂತಚೇಷ್ಟೆ, ಸಂಪ್ರದಾಯಗಳು ಮಡಿಮೈಲಿಗೆಗಳು ಹಾಗೂ ಹೆಣ್ಣಿನ ವಿವಿಧ ಸಮಸ್ಯೆಗಳು ಈ ಕಥೆಯಲ್ಲಿ ಮೂಡಿಬಂದಿದೆ. 'ನಾಕನೇ ನೀರು' ಮೊದಲನೇ ಕಥಾ ಸಂಕಲನವಾಗಿದ್ದು ಕರಾವಳಿ ಪರಿಸರದ ದಟ್ಟ ಪ್ರಭಾವವನ್ನು ಇಲ್ಲಿಯ ಕಥೆಗಳಲ್ಲಿ ಕಾಣಬಹುದಾಗಿದೆ.

ಈ ಸಂಕಲನದ 'ಕೊಡೆ ಇಲ್ಲ ಶಿವರಾಯ' ಕಥೆಯು ಮನುಷ್ಯ ಸಂಬಂಧಗಳ ಸಂಕೀರ್ಣ ಕಥೆಯಾಗಿದೆ. ಈ ಕಥೆಯು ನಿರೂಪಕನ ಪಾತ್ರದ ಮೂಲಕ ಕಥೆ ನಿರೂಪಣೆಗೊಳ್ಳುತ್ತದೆ. ಈ ಕಥೆಯ ನಾಯಕ ಶಿವರಾಯ ಮಾಸ್ಟ್ರ ಒಬ್ಬ ಒಳ್ಳೆಯ ಬೋಧಕರಾಗಿದ್ದು ಮಕ್ಕಳಿಗೆ ಎಲ್ಲಾ ಚಟುವಟಿಕೆಗಳಲ್ಲಿ ಭಾಗವಹಿಸುವಂತೆ ಪ್ರೋತ್ಸಾಹಿಸುತ್ತಿದ್ದರು ಅಲ್ಲದೆ ಈ ಮಕ್ಕಳಿಂದ ತನಗೆ ಬೇಕಾದ ಸೇವೆಯನ್ನು ಮಾಡಿಸಿಕೊಳ್ಳುತ್ತಿದ್ದರು. ಈ ಸಂದರ್ಭದಲ್ಲಿ ಮಳೆಯ ಅಬ್ಬರತೆಯಲ್ಲಿ ಮೇಷ್ಟರ ಲಂಗೋಟಿ

ಒದ್ದೆಯಾದರೆ ರಜಾ ಸಿಗುವುದೆಂದು ಮಕ್ಕಳ ಆಸೆಯನ್ನು ಶಿವರಾಯರು ನಿರಾಶೆಗೊಳಿಸಿದರು. ಕಾರಣ ಶಾಲೆಗೆ ಇನ್ಸ್‌ಪೆಕ್ಟರ್ ಬರುವ ಸೂಚನೆಯಿದ್ದು, ತನ್ನ ಗೆಳೆಯನ ಪರಿಸ್ಥಿತಿ ತನಗೆ ಒದಗಬಾರದೆಂದು ಹೀಗಿರುವಾಗ ಹೊಲೆಯ ಜಾತಿಯ ಇನ್ಸ್‌ಪೆಕ್ಟರ್ ಈ ಹುದ್ದೆಯನ್ನು ಗಳಿಸಿದ್ದು ಬ್ರಾಹ್ಮಣರಿಗೆ ಇರುಸುಮುರುಸಾಗಿದ್ದು, ಈ ಸಂದರ್ಭದಲ್ಲಿ ಮೇಷ್ಟ್ರು ತನ್ನ ಮಕ್ಕಳಿಂದ ಸೇವೆ ಮಾಡಿಸಿಕೊಳ್ಳುತ್ತಿರುವಾಗ ಬಂದ ಇನ್ಸ್‌ಪೆಕ್ಟರನ್ನು ಕಂಡು ಎಲ್ಲರಿಗೂ ಭಯ ಆವರಿಸಿ ಈ ಸಂಕಷ್ಟದಿಂದ ಪಾರಾಗಲು ಮಲ್ಲರಾಯ ದೈವಕ್ಕೆ ಹರಕೆ ಕಟ್ಟಿದರು ಹೀಗೆ ಸಣ್ಣ ಸಣ್ಣ ವಿಷಯಗಳಿಗೂ ಭೂತದ ಮೊರೆ ಹೋಗುವ ಮೌಢ್ಯತೆಯನ್ನು ಕಾಣಬಹುದಾಗಿದೆ. ಈ ಸಂದರ್ಭದಲ್ಲಿ ಎಲ್ಲವನ್ನೂ ಅವಲೋಕಿಸಿ ಮಾಸ್ಟ್ರ ಮಕ್ಕಳನ್ನು ಪ್ರಶಂಸಿಸಿದರು. ಆದರೆ ಮಾಸ್ಟ್ರಲ್ಲಿ ಯಾವ ಭಯದ ಛಾಯೆ ಆವರಿಸಿತ್ತೊ ಅದನ್ನ ಇನ್ಸ್‌ಪೆಕ್ಟರ್ ಹೊಲೆಯರ ವಿದ್ಯಾರ್ಥಿ ವೇತನ ಹಾಗೂ ದಾಖಲೆ ಪತ್ರಗಳ ಬಗ್ಗೆ ಪ್ರಸ್ತಾಪಿಸಿದಾಗ ಅದನ್ನು ಶಿವರಾಯರು ತನ್ನ ಸ್ವಂತಕ್ಕೆ ಬಳಸಿಕೊಂಡು ವಿದ್ಯಾರ್ಥಿಗಳಿಗೆ ಮೋಸ ಮಾಡಿದ್ದರು. ಹೀಗಿರುವಾಗ ಪಾಪ ಪ್ರಜ್ಞೆಯಲ್ಲಿ ಬೇಗುತ್ತಿದ್ದ ಶಿವರಾಯರನ್ನು ಕುರಿತು 'ಏನ್ರೀ ಮೇಷ್ಟ್ರೇ ಅಳ್ತಿದ್ದೀರ, ನಿಮ್ಮೊಳಗೆ ಒಬ್ಬ ಒಳ್ಳೆ ಮನುಷ್ಯ ಇದ್ದಾನೇರಿ, ಅವನ್ನ ಸಾಯಿಸ್ಬೇಡಿ, ಮತ್ತೊಮ್ಮೆ ನಿಮ್ಮಿಂದ ಇಂಥ ತಪ್ಪಾಗ್ಬಾರ್ದು ನೋಡಿ, ಖರ್ಚು ಮಾಡಿದ ಹಣ ತಂದು ಜಮಾ ಮಾಡಿ' ಎಂದು ಹೇಳುವ ಇನ್ಸ್‌ಪೆಕ್ಟರ್ ಅಧಿಕಾರದ ದರ್ಪವನ್ನು ತೋರದೆ ಒಳ್ಳೆಯತನವನ್ನು ಎತ್ತಿಹಿಡಿಯುವ ಮೂಲಕ ತಪ್ಪುಗಳನ್ನು ತಿದ್ದಿ ಅರಿವನ್ನು ಮೂಡಿಸುತ್ತಾ ಮಾನವೀಯತೆಯನ್ನು ಕಾಣಬಹುದಾಗಿದೆ.

'ಗಾಳ' ಕಥೆಯಲ್ಲಿ ಮನುಷ್ಯ ಸಂಬಂಧಗಳ ಸಂಕೀರ್ಣ ಚಿತ್ರಣವಿದೆ. ಈ ಕಥೆಯು ನಿರೂಪಕ ಮೂಡೂರನ ಪಾತ್ರದ ಮೂಲಕ ಕಥೆ ನಿರೂಪಣೆಗೊಳ್ಳುತ್ತದೆ. ಮುಡೂರ ಹೆಚ್ಚಿನ ಪಗಾರ ಪಡೆಯಲು ಸಂಪಾದಿಸಲು ಗಟ್ಟಕ್ಕೆ ಹೋಗುತ್ತಾನೆ. ಈ ಸಂದರ್ಭದಲ್ಲಿ ಮೂಡೂರನ ಹೆಂಡತಿ ಚೆನ್ನಮ್ಮ ಹಿಂದುರುಗಿ ಬರುವುದರಲ್ಲಿ ತನ್ನ ಮೈದುನನಿಂದ ಬಸುರಾಗಿದ್ದಾಳೆ. ಈ ಸುದ್ದಿ ತಿಳಿದ ಮೂಡೂರ ಕಾಲ ಮೀರಿ ಹೋಗಿ ವೈದ್ಯರ ಬಳಿ ಬರಲು ನಿರಾಕರಿಸಿದ ಹಾಗೂ ಆಕೆಯನ್ನು ಸರಿಯಾಗಿ ನೋಡಿಕೊಳ್ಳದ ಬಗ್ಗೆ ತಮ್ಮನ ಬಗ್ಗೆ ಕೋಪವಿದೆ ವಿನಹ ಇದಕ್ಕೆ ಕಾರಣ ಯಾರು ಎಂದು ಅರಿಯದಷ್ಟು ಮುಗ್ಧನಾಗಿದ್ದಾನೆ. ಈ ಸಂದರ್ಭದಲ್ಲಿ ಯಾವ ಬೇದಭಾವವಿಲ್ಲದೆ, ಅಂತಸ್ತನ್ನು ಲೇಕ್ಕಿಸದೆ ಪ್ರೀತಿಯಿಂದ ಕಾಣುತ್ತಿದ್ದ ಉನ್ನತ ಜಾತಿಯ ಶೆಟ್ಟರ ಬಳಿ ತನ್ನ ಚಿನ್ನಮ್ಮನ ಬಸುರಿಯ ಸಮಸ್ಯೆಯ ಬಗ್ಗೆ ಪ್ರಸ್ತಾಪವೆತ್ತಿದಾಗ ಅದನ್ನು ಪ್ರಸ್ತಾಪಿಸಲು ಸಂತೋಷ ನಾಚಿಕೆಯೆನಿಸಿ ಆತನಿಗೆ ವಿವರಿಸಲು ಶೆಟ್ಟರು ಅಸಹಾಯಕರಾಗಿದ್ದಾರೆ. ಈ ಸಂದರ್ಭದಲ್ಲಿ ಶೆಟ್ಟರ ಹೆಂಡತಿಯಿಂದ ಚಿನ್ನಮ್ಮ ತನ್ನ ತಮ್ಮನಿಂದ ಕದ್ದು ಬಸುರಾಗಿದ್ದು ತಿಳಿದು ದುಃಖವನ್ನು ಅಸಪಮಾನ, ಹಿಂಸೆಗಳನ್ನು ಅನುಭವಿಸಿದ್ದು ಆದರೆ ಏನೂ ಮಾಡಲೂ ಅಸಹಾಯಕನಾಗಿ ಬಾಣಂತಿ ಕೆರೆಯಲ್ಲಿ ಗಾಳ ಹಾಕುವುದರ ಮೂಲಕ ಕೋಪವನ್ನು ಶಮನಮಾಡಿಕೊಂಡು ಮುಗ್ಧತೆಯನ್ನು ಹಾಗೂ ಅಸಹಾಯಕತೆಯನ್ನು ಕಾಣಬಹುದು. ಆದರೆ ಶೆಟ್ಟರ ಹೆಂಡತಿ ಮುಡೂರ ಈ ಸ್ಥಿತಿಯ ಬಗ್ಗೆ

ಅನುಕಂಪವಿದ್ದು, 'ಇವನಂಥ ದನದ ಜಾತಿಯವ' ಈ ಬೇವರ್ಸಿ ಲೋಕದಲ್ಲಿ ಬದುಕಬಾರದು: ಇವಗಟ್ಟ ಹತ್ತಿದ್ದೇ ತಪ್ಪು, ಅಲ್ಲ. ಇವ ಆ ದರ್ವೇಸಿ ತಮ್ಮ ನನ್ನ ನಂಬಿ ಹೆಂಡ್ತಿಯನ್ನು ಬಿಟ್ಟು ಹೋಗುವವನ ಇವನೆಂಥವ ಸಮಾಜದ ಕ್ರೂರತೆಯನ್ನು ವಿವರಿಸುತ್ತಾ ಇದಕ್ಕೆ ಬಲಿಪಶುವಾದ ಮೂಡೂರನ ಬಗ್ಗೆ ಆತನ ಅಸಹಾಯಕ ಸ್ಥಿತಿಯ ಬಗ್ಗೆ ಶೆಟ್ಟರ ಹೆಂಡತಿಗೆ ಅನುಕಂಪವಿದೆ. ಆದರೆ ಈ ಎಲ್ಲಾ ಸತ್ಯವನ್ನು ಅರಿತು ಎಲ್ಲವನ್ನೂ ಒಪ್ಪಿಕೊಂಡು "ಶೆಟ್ರೇ ನನ್ನ ಚಿನ್ನಮ್ಮ ಹೆತ್ಲು, ಗಂಡು ಮಗು; ಮಗು ಗುಂಡು ಗುಂಡಾಗಿದೆ ಶೆಟ್ರೆ, ಬಾರಿ ಚಂದ ಇದೆ, ದೇಯಿ ಪದೆತಿ ಹೇಳಿದ್ದು," ಎರ್ಡು ತುಂಡು ಅಡಿಕೆ ಹಾಳೆ ಬೇಕಂತೆ (ಪು.೧೬೬) ಎಂದು ತನ್ನ ಹೆಂಡತಿ ಹೆತ್ತಿದ್ದ ಗಂಡು ಮಗುವನ್ನು ಬಗ್ಗೆ ಸಂಭ್ರಮ ಪಡುವುದರ ಮೂಲಕ ವ್ಯಂಗ್ಯತೆ ಹಾಗೂ ಮೂಡರನ ಮುಗ್ಧತೆ, ಮಾನವೀಯತೆಯನ್ನು ಕಾಣಬಹುದಾಗಿದೆ.

'ನಾಕನೇ ನೀರು' ಕಥೆಯಲ್ಲಿ ವೈದಿಕ ಸಂಪ್ರದಾಯದ ನೀತಿ ನಿಯಮಗಳನ್ನು ಕುರಿತು ಹೇಳುವ ಸಂಕೀರ್ಣ ಕಥೆಯಾಗಿದೆ. ಈ ಕಥೆಯ ನಾಯಕ ಶಿವಪ್ಪ ಭೂತದ ಮೊಗ ಹಾಗೂ ಕಟ್ಟಲೆಗಳನ್ನು ಸಿದ್ಧಪಡಿಸುವ ಸಂದರ್ಭದಲ್ಲಿ ಮಣಿಕೋಣೆಯನ್ನು ಶುದ್ಧಗೊಳಿಸಿದ್ದು ಈ ಸಂದರ್ಭದಲ್ಲಿ ಹೆಂಡತಿ ಕಿನ್ನಿ ತವರು ಮನೆಯ ಬೆತ್ತಲ ಕೋಲಕ್ಕೆ ಹಬ್ಬಕ್ಕೆ ನಾಲ್ಕು ದಿನ ಎಂಬುದನ್ನು ಮರೆತು ಮಡಿಕೋಣೆಗೆ ಕಾಲಿಟ್ಟಾಗ ಹಡಬೇ ಬೇವರ್ಸಿ, ಐದು ನೀರು ಹಾಕಿಕೊಳ್ಳುವ ಮೊದಲೇ ನನ್ನ ಮಡಿಕೋಣೆಗೆ ಬಂದು ಭೂತಕ್ಕೆ ಮೈಲಿಗೆ ಮಾಡಿದರೆ ಜೀವ ಸಮೆತ ಹುಗಿದೇನು ಇದೇ ಸುರು ಇದೇ ಕೊನೆಯಾಗಬೇಕು" ಎಂದು ಹೊಡೆದು ಅಪಮಾನಗೊಳಿಸಿದಾಗ ಅತ್ತೆಗೆ ಸಂತೋಷವಾಗದಿರದೂ ಈ ಸಂದರ್ಭದಲ್ಲಿ ಕಿನ್ನಿ ಅತೀವ ದುಃಖ ಹೊಂದಿ ಈ ಸಂಪ್ರದಾಯಗಳು, ಮಡಿ, ಮೈಲಿಗೆಯನ್ನು ತಿರಸ್ಕರಿಸುತ್ತಾ, ತಾನು ಮಡಿ ಮನೆಗೆ ಹೋಗಬೇಕಾದರೆ ಐದು ನೀರು ಮುಗಿಯಬೇಕಂತೆ, ಅಷ್ಟೊಂದು ಮಡಿಸುದ್ಧವಿದ್ದವರು, ಮೂರು ನೀರಾದವಳನ್ನ ರಾತ್ರಿ ಬಂದು ಮುಟ್ಟಬಹುದಾ? ಎಂದು ಮಡಿ ಮೈಲಿಗೆಯನ್ನು ವಿರೋಧಿಸುವ ಆಧುನಿಕತೆಯ ಹೆಣ್ಣಾಗಿ ಕಂಡು ಬರುತ್ತಾಳೆ. ಈ ಸಂದರ್ಭದಲ್ಲಿ ಶಿವಪ್ಪನಿಗೆ ಪಾಪಪ್ರಜ್ಞೆ ಕಾಡತೊಡಗಿ "ಇನ್ನೂ ತಾನು ಮಡಿ ಮನೆಯನ್ನು ಶುದ್ಧದಲ್ಲಿಟ್ಟರೆಷ್ಟು? ಬಿಟ್ಟರೆಷ್ಟು? ತನ್ನ ಕಿನ್ನಿಯ ಮನಸ್ಸನ್ನು ಪ್ರೀತಿಯನ್ನ ಮಲಿನಗೊಳಿಸಿದ ಮೇಲೆ ಎಂದು ಪಶ್ಚಾತಾಪಗೊಂಡು ಹೆಂಡತಿಯನ್ನು ರಮಿಸಲು ಸಾಕಷ್ಟು ಪ್ರಯತ್ನಿಸಿ ಕೊನೆಗೆ ಕಿನ್ನಿ ನಿಮ್ಮನೆಯ ಮಾಡಿ ಶುದ್ಧವನ್ನೆಲ್ಲ ಕೂಳೂರು ಹೊಳೆಗೆ ಎಸೆಯದಿದ್ದರೆ ನಾನ್ಯಾಕೆ ಬದುಕಿರಬೇಕು (ಪು.೧೩೪) ಎಂದು ಸಾಂಪ್ರದಾಯಕ ಆಚಾರಗಳಾದ ಮಡಿ ಮೈಲಿಗೆಗಳನ್ನು ಪ್ರತಿಭಟನೆಯನ್ನು ಕಾಣಬಹುದಾಗಿದೆ ಆದರೆ ಶಿವಪ್ಪ ಹಳೆಯ ಸಂಪ್ರದಾಯಕ ವಾದಿಯಂತೆ ಮಡಿಕೋಣೆಯನ್ನು ಪ್ರವೇಶಿಸಿದ ತಾನು ಹಾಗೂ ಹುಂಜದ ಕಾರಣಕ್ಕಾಗಿ ಮನೆ ಶುದ್ಧೀಕರಿಸಲು ತಂತ್ರಗಳನ್ನು ಕರೆತರಲು ಹೋಗುವುದರ ಮೂಲಕ ಮೌಢ್ಯತೆಯನ್ನು ಕಾಣಬಹುದಾಗಿದೆ.

ಒಟ್ಟಾರೆ ಈ ಕಥಾಸಂಕಲನದಲ್ಲಿ ಕರಾವಳಿ ಜನರ ಜೀವನ ಆಚಾರ ವಿಚಾರಗಳು, ಮೇಲ್ವರ್ಗದವರು ಕೆಳವರ್ಗದವರ ಮೇಲೆ ನೆಡೆಸುವ ದೌರ್ಜನ್ಯ ಬ್ರಾಹ್ಮಣ ಮನೆತನದ ಹೆಣ್ಣುಗಳು ಸಂಪ್ರದಾಯಗಳು,

ಮಡಿ ಮೈಲಿಗೆಯ ಹೆಸರಿನಲ್ಲಿ ವಿಧಿಸಿರುವ ಕಟ್ಟುಪಾಡುಗಳು ಇದರಿಂದ ಹೆಣ್ಣು ಅನುಭವಿಸುವ ಹಿಂಸೆ, ಶೋಷಣೆಗಳು ವ್ಯಕ್ತವಾಗಿವೆ. ಅಲ್ಲದೆ ಕರಾವಳಿ ಜನರ ಮೂಢನಂಬಿಕೆ ಭೂತದ ಚೇಷ್ಟೆ ಇತ್ಯಾದಿ ಅಂಶಗಳು ಕಥೆಯ ವಾಸ್ತುವಾಗಿ ಅಲ್ಲದೆ ಅಂತಹಜಾತಿ ವಿವಾಹ, ಹಾಗೂ ಕೆಳವರ್ಗದವರು ತಮ್ಮ ಮೇಲಿನ ದೌರ್ಜನ್ಯವನ್ನು ಪ್ರತಿಭಟಿಸುವುದರ ಮೂಲಕ ದಿಟ್ಟತನವನ್ನು ಇಲ್ಲಿ ಕಾಣಬಹುದಾಗಿದೆ. ಹಾಗೂ ಎರಡು ಸಮುದಾಯಗಳ ನಡುವೆ ಮಾನವೀಯತೆ ಹಾಗೂ ಕೇವಲ ಸೌಹಾರ್ದತೆಯನ್ನು ಕಾಣಬಹುದು ಹೀಗೆ ಕರಾವಳಿ ಪರಿಸರ ಕಥೆಗಳ ಜೀವಂತಿಕೆಯಾಗಿದೆ.

ಈ ಕಥೆಗಾರ್ತಿಯ ಮತ್ತೊಂದು ಕಥಾಸಂಕಲನ 'ಮೀಯುವ ಆಟ' ಇದು ಸಹಾ ಕರಾವಳಿ ಪರಿಸರ ಜೀವಂತಿಕೆಯ ಕಥೆಗಳಾಗಿವೆ. ಸಮಾಜ ಅಂಚಿನಲ್ಲಿ ಬದುಕುತ್ತಿರುವ ಸಮುದಾಯಗಳ ನೋವು, ನಲಿವುಗಳ ಜೀವಂತಿಕೆ ಹಾಗೂ ಮಾವವೀಯತೆಯನ್ನು ಇಲ್ಲಿಯ ಕಥೆಗಳಲ್ಲಿ ಕಥೆಗಾರ್ತಿ ಮನ ಮುಟ್ಟುವಂತೆ ತಿಳಿಸಿದ್ದಾನೆ. ಈ ಸಂಕಲನದ ಮೊದಲನೇ ಕಥೆಯಾದ 'ಮೀಯುವ ಆಟ' ದಲ್ಲಿ ಮನುಷ್ಯ ಸಂಬಂಧಗಳ ಸಂಕೀರ್ಣ ಚಿತ್ರಣವಿದೆ. ಈ ಸಂಬಂಧಗಳು ಕುಟುಂಬಗಳ ಒಳಗೆ ಊರೊಟ್ಟಿಗೆನ ಸಂಬಂಧಗಳು ಆಗಿರಬಹುದು ಯಾವ ನೆಲೆಯಲ್ಲಿ ಗ್ರಹಿಸಿದರೂ ಈ ಸಂಬಂಧಗಳು ಏಕಮುಖಲಾಗಿರುವುದಿಲ್ಲ. ಬಹುಮುಖಗಳನ್ನು ಪರಿಚಯಿಸುತ್ತವೆ. ಹೀಗಾಗಿ ಕಥೆಯನ್ನು ಬಹು ಆಯಾಮಗಳಲ್ಲಿ ಗ್ರಹಿಸಿಕೊಳ್ಳಬಹುದು ಅಂತಹ ಶಕ್ತಿ ಈ ಕಥೆಯಲ್ಲಿದೆ.

ಈ ಕಥೆಯಲ್ಲಿ ಬರುವ ಖಾದ್ರಿ ಬ್ಯಾರಿಯವರಿಗೆ ಈಗ ಇಳಿವಯಸ್ಸು ಅದರಲ್ಲಿ ವಾತರೋಗ ಬೇರೆ ಅಂಟಿಕೊಂಡಿದೆ. ಈ ರೋಗದಿಂದ ಮುಕ್ತವಾಗಲು ಬ್ಯಾರಿಯವರಿಗೆ ಬಿಸಿ ನೀರಿನ ಮದ್ದುಬೇಕು ಆದರೆ ಮಲೆನಾಡಿನಂತಹ ದೀರ್ಘ ಕಾಲದ ಮಳೆಗಾಲದಿಂದ ಉರುವಲು ದೊರೆಯುವುದು ಬಹಳ ಕಷ್ಟ. ಆಕಸ್ಮಿಕವೆಂಬಂತೆ ಅಥವಾ ತಮ್ಮ ಹಿತಕ್ಕಾಗಿ ವೆಂಕಪ್ಪಶೆಟ್ಟರಿಗೆ ಬ್ಯಾರಿಯವರು ಬದಲಾಗುತ್ತಾರೆ. ಶೆಟ್ಟರ ಮಗಳು ಬಾಣಂತಿ ಅವಳಿಗೆ ನೀರು ಕಾಯಿಸುವ ಕೆಲಸವನ್ನು ಶೆಟ್ಟರು ಬ್ಯಾರಿಗೆ ವಹಿಸುತ್ತಾರೆ.

ಆದರೆ ಶೆಟ್ಟರ ಮನೆಯಲ್ಲಿ ಹೆಂಡತಿ ಬ್ಯಾರಿಯವರಿಗೆ ಬಿಸಿನೀರು ಖರ್ಚುಮಾಡಲು ಮನಸ್ಸಿಲ್ಲ ಶೆಟ್ಟರ ಮಗಳಿಗೆ ಬ್ಯಾರಿಯವರ ಮೇಲೆ ಎಷ್ಟೇ ಪ್ರೀತಿಯಿದ್ದರೂ ಇಕ್ಕಟ್ಟಿನ ಪ್ರಸಂಗ ಎದುರಿಸಬೇಕಾಗುತ್ತದೆ. ಅಲ್ಲದೆ ಬ್ಯಾರಿಯವರಿಗೆ ತಮ್ಮ ಕುಟುಂಬದಲ್ಲಿಯೂ ಮಕ್ಕಳ ಪ್ರೀತಿಗೆ ಪಾತ್ರವಾಗಿದ್ದರೂ ಸೊಸೆ ಮಗಳಾಗಲು ಸಾಧ್ಯವಿಲ್ಲ. ಬ್ಯಾರಿಯವರ ವಾತ ರೋಗಕ್ಕೆ ಬೇಕಾದ ನೀರನ್ನು ಒದಗಿಸಲು ಸೊಸೆಗೂ ಇಷ್ಟವಿಲ್ಲ ಆದರೂ ಬ್ಯಾರಿಯವರನ್ನು ಕಂಡರೆ ಕುಟುಂಬದವರಿಗಾಗಲಿ ಊರಿನವರಿಗಾಗಲಿ ಬಿಸಿನೀರು ನೀಡುವ ಒಂದನ್ನು ಬಿಟ್ಟರೆ ಉಳಿದೆಲ್ಲ ವಿಷಯಗಳಲ್ಲಿ ಬ್ಯಾರಿಯವರು ಗೌರವಕ್ಕೆ ಪಾತ್ರರೆ, ಇಂತಹ ಸಂಕೀರ್ಣ ನೆಲೆಯಲ್ಲಿ ಮನುಷ್ಯ ಸಂಬಂದಗಳ ಚಿತ್ರಣ ಈ ಕತೆಯಲ್ಲಿ ಮನೋಜ್ಞವಾಗಿ ಮೂಡಿದೆ. ಬ್ಯಾರಿಯವರು ತಮ್ಮ ವಾತರೋಗದಿಂದ ಬಿಸಿನೀರನ್ನು ಒದಗಿಸಿಕೊಳ್ಳಲಾಗದೆ ಕೊನೆಯುಸಿರೆಳೆಯುತ್ತಾರೆ. ಆಗ ಕುಟುಂಬಗಳು ಊರೊಟ್ಟಿಗಿನ ಜನರು ಮರುಗುತ್ತಾರೆ. ಏನೆಲ್ಲ ನೆರವು ನೀಡಲು ಮನಸ್ಸು

ಮಾಡುತ್ತಾರೆ ಇದು ಲೋಕದಲ್ಲಿ ಕಾಣುವ ವಾಸ್ತವ, ಇಂತಹ ವಾಸ್ತವ ವಸ್ತುಸ್ಥಿತಿಯನ್ನು ಮೀಯುವ ಆಟ ವ್ಯಕ್ತಪಡಿಸುತ್ತದೆ.

'ದಾನ' ಕಥೆಯಲ್ಲಿ ಎರಡು ಸಮುದಾಯಗಳ ನಡುವಿನ ನಂಬಿಕೆಗಳು ಒಂದು ಬಿಕ್ಕಟ್ಟನ್ನು ಸೃಷ್ಟಿಸುತ್ತವೆ ಇಲ್ಲಿ ಬರುವ ಎರಡು ಸಮುದಾಯಗಳು ಎಂದರೆ ಉಚ್ಚ ಜಾತಿಯ ಬ್ಯಾಕರು ಗುತ್ತಿ ಮನೆತನ ಒಂದು ಕೊರಗರ ಜಾತಿಯದು. ಕೊರಗರ ಜಾತಿಯನ್ನು ಅತ್ಯುನ್ನತ ನಿಕೃಷ್ಟವಾಗಿ ಕಾಣುವ ವ್ಯವಸ್ಥೆಯಿದೆ. ಅದೇನಿದ್ದರೂ ಆ ಜಾತಿಯ ಸಮುದಾಯ ಅಧೀನದಲ್ಲಿದ್ದು ಊರ ಹೊರಗೆ ಬದುಕುವ ಕಟ್ಟುಪಾಡಿನಲ್ಲಿದೆ. ಉಚ್ಚಜಾತಿಯವರ ಹುಸಿ ಜೀವನಕ್ಕೆ ಕುಟುಂಬ ಜೀವನಕ್ಕೆ ಕೊರಗರು ತಮ್ಮ ದುಡಿಮೆಯಿಂದ ನೆರವಾಗಬೇಕು ಆದರೆ ಒಂದು ಅಂತರ ಕಾಯ್ದುಕೊಂಡು ಆದರೂ ಮನುಷ್ಯ ಸಮುದಾಯದ ಒಳಗಡೆ ಅಥವಾ ಸಂಸ್ಕೃತಿಯ ಒಳಗಡೆ ಕೆಲವು ನಂಬಿಕೆಗಳು ಹಾಗೂ ಆಚರಣೆಗಳು ಮಾನ್ಯತೆ ಪಡೆದಿರುತ್ತವೆ. ಇವುಗಳನ್ನು ಮೀರಲು ಸಮುದಾಯಗಳಿಗೆ ಸಾಧ್ಯವಾಗುವುದಿಲ್ಲ. ಈ ಕಥೆಯಲ್ಲಿ ಬಾಕ್ಯಾರು ಗುತ್ತಿಯ ಕುಟುಂಬದಲ್ಲಿ ಹುಟ್ಟುವ ಮಗು ದೋಷದಿಂದ ಹುಟ್ಟಿರುತ್ತದೆ. ಯಾವುದೋ ಕಂಠಕ ಆ ಮಗುವಿಗೆ ಹುಟ್ಟಿನಿಂದ ಬಂದಿರುತ್ತದೆ. ಎಂದು ಜ್ಯೋತಿಷ್ಯರು ನುಡಿಯುತ್ತಾರೆ ಅದರ ಪರಿಹಾರವಂದರೆ ಮಗುವನ್ನು ಕೊರವರ ಹೆಣ್ಣು ಮಗಳ ಉಡಿಯಲ್ಲಿ ಹಾಕಿ ದಾನ ಕೊಟ್ಟು ದೋಷ ಪರಿಹರಿಸಿಕೊಳ್ಳಬೇಕು. ಆದರೆ ಈಗ ಎಚ್ಚೆತ್ತು ಕೊಂಡಿರುವ ಕೊರಗ ಸಮುದಾಯ ಇದನ್ನು ವಿರೋಧಿಸುತ್ತದೆ. ಅಂದರೆ ಕೊರಗ ಸಮುದಾಯದಲ್ಲಿರುವ ಓದಿದ ವ್ಯಕ್ತಿಯೊಬ್ಬ ಎಚ್ಚೆತ್ತುಕೊಂಡಿರುವ ಕೇತನು ಇದನ್ನು ವಿರೋಧಿಸುತ್ತಾನೆ. ಯಾಕೆಂದರೆ ನಿಕೃಷ್ಟವಾಗಿ ಕಾಣುವ ತಮ್ಮ ಸಮುದಾಯವನ್ನು ಇಂತಹ ಕಾಲದಲ್ಲಿ ನೆರವನ್ನು ಪಡೆಯುವುದು ಉಚ್ಚಜಾತಿಯವರ ನೈತಿಕತೆಯನ್ನು ಪ್ರಶ್ನಿಸುತ್ತಾರೆ. ಆದರೆ ಗುತ್ತಿಗೆ ಒಡತಿ ಮತ್ತು ಕೊರವರ ಒಡತಿಯ ಮಧ್ಯೆ ಅಧೀನ ಮತ್ತು ಪ್ರಧಾನದ ವ್ಯವಸ್ಥೆಯಿದ್ದರೂ ಇದನ್ನು ಮೀರಿದ ಮನುಷ್ಯ ಸಂಬಂದವಿದೆ. ಇದನ್ನು ನಂಬಿಕೊಂಡು ಗುತ್ತಿಯ ಒಡತಿ ಕೊರವರ ಒಡತಿಯಲ್ಲಿಗೆ ಹೋಗಿ ತನ್ನ ಮಗುವನ್ನು ಆಕೆಯ ಉಡಿಗೆ ಹಾಕಿ ದಾನ ಕೊಟ್ಟು ಮಗುವಿಗಿದ್ದ ಹುಟ್ಟಿನ ದೋಷವನ್ನು ಪರಿಹರಿಸಿಕೊಳ್ಳುತ್ತಾರೆ. ಆ ಆಚರಣೆಯನ್ನು ಕಂಡ ಕೇತು ಒಂದು ಮಾತು ಹೇಳುತ್ತಾನೆ. 'ಅಮ್ಮ... ಈ ಬಾರಿ ನಿಮ್ಮ ಸಂಕಲ್ಪದಂತೆಯೇ ಕೆಲಸ ನಡೆದು ಹೋಗಿರಬಹುದು. ಆದರೆ ಮುಂದೆ ಎಂದೂ ಹೀಗಾಗುವುದಿಲ್ಲ... ಈಗ ಕಾಲ ಬದಲಾಗಿದೆ. ನಿಮ್ಮ ಮನಸ್ಸು ಯೋಜನೆಯೂ ಬದಲಾಗಬೇಕಾದೆ. ನಮ್ಮ ಕೊರತೆಯಿಂದ ಮಗು ಗುಣವಾಗುವುದಿಲ್ಲ...' (ಪು.೫೦)

ಈ ಕಥೆಯಲ್ಲಿ ಉಚ್ಚ ಜಾತಿಯವರಿಗೂ ಮನ ಪರಿವರ್ತನೆಯಾಗುವ ಸಂದರ್ಭ ಕಾಣುತ್ತದೆ. ಅದೇ ರೀತಿ ಕೊರಗ ಕೇತುವಿಗೆ ಮೇಲ್ವರ್ಗದ ಗುತ್ತಿ ಒಡೆಯರ ಮೇಲೆ ದ್ವೇಷ ತೀರಿಸಿಕೊಳ್ಳುವ ಸಂದರ್ಭ ಇದ್ದಾಗಲೂ ವಿದ್ಯೆ ಕಲಿತವನಾಗಿ ಎಚ್ಚೆತ್ತುಕೊಂಡವನಂತೆ ತಿಳುವಳಿಕೆಯನ್ನು ನೀಡುತ್ತಾನೆ. ಇಲ್ಲಿ ದಾನ ಎನ್ನುವ ಅರ್ಥ ವಿಶೇಷವಾಗಿದೆ. ಮೇಲ್ ಜಾತಿಯವರು ಕೊರವರ ಜಾತಿಗೆ ದಾನ ಕೊಡುತ್ತಾರೆಯೇ?

ಅಥವಾ ಕೊರಗ ಜಾತಿಯವರು ಮೇಲ್ ಜಾತಿಯ ಗುತ್ತಿಯವರಿಗೆ ದಾನ ಕೊಡುತ್ತಾರೋ? ಯೋಚಿಸುವಂತೆ ಮಾಡುತ್ತದೆ.

'ಧಣಿಗಳ ಬೆಳ್ಳಿಲೋಟ' ಕಥೆಯಲ್ಲಿ ದಲಿತರ ನೋವು, ಸಂಕಷ್ಟಗಳನ್ನು ಕುರಿತು ಹೇಳುವ ಸಂಕೀರ್ಣ ಕಥೆಯಾಗಿದೆ. ಕಥೆ ನಿರೂಪಕಿ ಚೆನ್ನಮ್ಮನ ಪಾತ್ರದ ಮೂಲಕ ನಿರೂಪಣೆಗೊಳ್ಳುತ್ತದೆ. ಚೆನ್ನಮ್ಮನ ಸುಖ ದುಃಖಗಳಿಗೆ ಹೊಳೆ ಸಾಕ್ಷಿಯಾಗಿದೆ. ಚೆನ್ನಮ್ಮನಂತಹ ದಲಿತ ವ್ಯಕ್ತಿಗಳಿಗೆ ಧಣಿಗಳು ನೋವು, ಸಂಕಟನೀಡುವಂತೆ ಹೊಳೆಯು ಪಾಲಾಗಿದಿಯೇನೂ ಎಂಬಂತೆ ಚೆನ್ನಮ್ಮ ಹೊಳೆಯನ್ನು ನಿಂದಿಸುತ್ತಾಳೆ. ದಣಿಗಳ ಸನ್ನಿದಿಯಲ್ಲಿ ಜೀತ ಮಾಡುತ್ತಿದ್ದ ಚೆನ್ನಮ್ಮನ ಮಗ ಗುಡ್ಡ ಧಣಿಯ ತೋಟದ ಅಂಚಿನಲ್ಲಿ ಪಾತ್ರೆ ತೊಳೆಯುವಾಗ ಸಾಕಷ್ಟು ನೀರಿನಿಂದ ಮೆಂದು ಹೋಗಿ ಕಾಲು ಜಾರಿ ಆ ಪಾತ್ರೆಗಳ ಸಮೇತ ತಾನು ಹೊಳೆಯ ಪಾಲಾದ ತನನ್ನು ತಾನು ಸಂರಕ್ಷಿಸಿದನಾದರೂ ಧಣಿಯ ಪತ್ನಿಯ ಪ್ರೀತಿಪಾತ್ರವಾದ ಬೆಳ್ಳಿಲೋಟ ಹೊಳೆಯ ಪಾಲಾಯಿತು. ಈ ಸಂದರ್ಭದಲ್ಲಿ ಧಣಿಗಳು ಗುಡ್ಡನನ್ನು ಹಿಂಸಿಸಿದರು. ಹೀಗೆ ದಲಿತರು ಮಾಡದ ಅಪರಾಧಕ್ಕಾಗಿ ಹಿಂಸೆಯನ್ನು ಅನುಭವಿಸಿದರು. ಈ ಹಿಂಸೆನಯನ್ನು ನೋಡಲಾರದೆ ಚೆನ್ನಮ್ಮ 'ಬೆಳ್ಳಿಲೋಟದ' ಬೆಲೆ ತೆತ್ತವರೆಗೂ ಜೀತ ಮಾಡುವುದಾಗಿ ಹೇಳಿ ಮಗನನ್ನು ಮುಕ್ತಗೊಳಿಸಿದಳು. ಆದರೆ ಒಡಲೊಳಗೆ ಅತೀವ ದುಃಖ ಮಡುಗಟ್ಟಿತ್ತು. ಚೆನ್ನಮ್ಮನ ನೋವು ಸಂಕಟಗಳಿಗೆ ಹೊಳೆ ಅನುಕಂಪ ತೋರಿತೊ ಎಂಬ ರೀತಿಯಲ್ಲಿ ಕಾಲಕಳೆದಂತೆ ಧಣಿಯ ಹೊಲದ ಹೂಳೆತ್ತುವ ಸಂದರ್ಭದಲ್ಲಿ ಆಕಸ್ಮಿಕವಾಗಿ ಬೆಳ್ಳಿ ಲೋಟ ಸಿಕ್ಕಿತ್ತು. ಆದರೆ ಈ ಲೋಟದ ಸಲುವಾಗಿ ಅನುಭವಿಸಿದ ನೋವು, ಸಂಕಟಗಳು, ಹಿಂಸಿಸಿದ ಧಣಿಗಳ ಮೇಲೆ ಪ್ರತಿಕಾರ ತೀರಿಸಿಕೊಳ್ಳುವಂತೆ ಇದೇ ಲೋಟವಲ್ಲವೆ ತನ್ನ ಬೆವರಿನ ಬೆಲೆ ಕಳೆದದ್ದು, ಕಳ್ಳತನದ ಕಿರೀಟವನ್ನು ತನ್ನ ಮುರುಕಲು ಗುಡಿಸಲು ಚಾವಣಿಗೆ ಜೋಡಿಸಿದ್ದು, ಥೂ! ಬೆಳ್ಳಿಯದ್ದಾದರೇನಂತೆ... ಬುದ್ಧಿ ಮಣ್ಣಿಗಿಂತಲೂ ಬುರ್ನಾಸು ಮೂರ್ಕಾಸಿನದ್ದು! (ಪು.೨೪) ಎಂದು ಧಣಿಗಳ ಮೇಲಿದ್ದ ಕೋಪವನ್ನು ತೀರಿಸಿಕೊಳ್ಳುವಂತೆ ಬೆಳ್ಳಿಲೋಟವನ್ನು ಹೊಳೆಗೆ ಎಸೆಯುವುದರ ಮೂಲಕ ಮೌನ ಪ್ರತಿಭಟನೆಯನ್ನು ತೋರುತ್ತಾ ಮತ್ತೇನೂ ಮಾಡಲಾರದೆ ಅಸಾಹಯಕಳಾಗಿದ್ದಾಳೆ. ಹೀಗೆ ಜಮೀನ್ದಾರರು ಒಕ್ಕಲಿಗರ ಮೇಲೆ ನಡೆಸುವ ದೌರ್ಜನ್ಯವನ್ನು ಕಾಣಬಹುದಾಗಿದೆ. ಅಲ್ಲದೆ ಈ ದೌರ್ಜನ್ಯವನ್ನು ಅನುಭವಿಸುವ ದಲಿತರ ಅಸಹಾಯಕತೆಯನ್ನು ಇಲ್ಲಿ ಕಾಣಬಹುದಾಗಿದೆ.

'ತಾಯ್ತನ' ಕಥೆಯು ಮನುಷ್ಯ ಸಂಬಂದಗಳ ಸಂಕೀರ್ಣ ಚಿತ್ರಣವಿದೆ. ಈ ಸಂಬಂಧಗಳು ಕುಟುಂಬದ ಒಳಗೆ ಹಾಗೂ ಕುಟುಂಬದ ಹೊರಗಿನ ಸಂಬಂಧಗಳಾಗಿವೆ. ಇಲ್ಲಿ ಮೇಲು ಕೀಳು ಎಂಬ ಬೇಧ ಭಾವವಿಲ್ಲದೆ ಬ್ಯಾರಿಗಳು ಹಾಗೂ ಶೂದ್ರ ಜನಾಂಗದವರು ಪರಸ್ಪರ ಪ್ರೀತಿ, ವಿಶ್ವಾಸದಿಂದ ಬದುಕಿದ್ದು ಆದರೆ ಪಕ್ಕದ ಊರಿನಲ್ಲಿ ಮಸೀದಿಯ ಪಕ್ಕದಲ್ಲಿ ದೇವಸ್ಥಾನವೊಂದು ನಿರ್ಮಾಣಗೊಳ್ಳುತ್ತದೆ. ಎಂಬ ಸುದ್ದಿ ಹುಟ್ಟಿದ್ದು ಇದಕ್ಕೆ ಪ್ರತಿರೋದವನ್ನು ಒಡ್ಡಿದ್ದ ತಲೆಗಿಡುಕರಿಂದ ಊರಿನಲ್ಲಿ ಶಾಂತವಾತಾವರಣ ಕದಡಿ ಕೋಮುಗಲಭೆ ಉಂಟಾಗಿದ್ದು ಈ ಗಲಭೆಯಲ್ಲಿ ಎಲ್ಲರಿಗೂ ಪ್ರೀತಿ ಪಾತ್ರವಾಗಿದ್ದ ಮ್ಯಾದಿನ

ಬ್ಯಾರಿಯವರು ಸಾವನ್ನಪ್ಪಿದ್ದರು, ಈ ಪ್ರಕರಣದಿಂದ ಶೂದ್ರರಿಗೆ ತನ್ನ ತಪ್ಪಿನ ಅರಿವಾಗಿ ಪಶ್ಚಾತಾಪಗೊಂಡರು. ಇದೇ ಶೋಕದಲ್ಲಿ ಊರಿಗೆ ಊರೆ ರೋದಿಸುತ್ತಿರುವಾಗ ಶೂದ್ರ ಮನೆತನದ ಮೈರೆ ಮೈಲ್ಪಿಯ ಮಗಳಿಗೆ ಹೆರಿಗೆ ಸಾವಿನಿಂದ ರೋದಿಸುತ್ತಿದ್ದು ಈ ಸಂದರ್ಭದಲ್ಲಿ ಗಂಡನ್ನ ಕಳೆದುಕೊಂಡು 'ಇದತ' ಅವಧಿಗೆ ಸಿದ್ಧವಾಗುತ್ತಿದ್ದ ಐಸಂಬ್ಯಾರಿ ಸಂಪ್ರದಾಯ, ನಿಯಮ ಕಟ್ಟುಪಾಡುಗಳಿಗಿಂತ ಜೀವ ದೊಡ್ಡದ್ದು ಎಂದು ತನ್ನ ದುಃಖಕ್ಕೆ ಕಾರಣವಾದ ಶೂದ್ರ ಜನಾಂಗದ ಮೇಲೆ ಯಾವುದೇ ದ್ವೇಷವಿಲ್ಲದ ಸೂಲಗಿತ್ತಿಯಾಗಿ ತಾಯಿ ಮಗು ಜೀವ ಉಳಿಸಿ ಮಾನವೀಯತೆಯನ್ನು ಮೆರೆದಳು ಇದರಿಂದ ಶೂದ್ರ ಜನಾಂಗದ ತುಕ್ರ ಬಂಡಾರಿ ತಾವು ಮಾಡಿದ ಪಾಪಕೃತ್ಯಕ್ಕೆ ಪಶ್ಚಾತಾಪಗೊಂಡರು. ಹೀಗೆ ಇಲ್ಲಿಯ ಸಮುದಾಯಗಳ ವ್ಯಕ್ತಿಗಳಲ್ಲಿ ಮನುಷ್ಯತ್ವವನ್ನು ಕಾಣಬಹುದಾಗಿದೆ.

ನಾಗವೇಣಿಯವರು ಈ ಕಥಾ ಸಂಕಲನದಲ್ಲಿ ಕರಾವಳಿ ಪರಿಸರದ ದಟ್ಟ ಪ್ರಭಾವಿದ್ದು ಜೀವಂತಿಕೆಯ ಕಥೆಗಳಾಗಿವೆ. ಈ ಕಥೆಗಳಲ್ಲಿರುವ ಗಂಡು ಹೆಣ್ಣುಗಳು ಒಳ್ಳೆಯರು ಹಾಗೂ ಕೆಟ್ಟವರು ಆಗಿದ್ದಾರೆ. ಇಲ್ಲಿ ಕಥೆಗಾರ್ತಿ ಕರಾವಳಿ ಪ್ರದೇಶದಲ್ಲಿ ದಿನೇ ದಿನೇ ಕೋಮುಗಲಭೆ ಅಧಿಕವಾಗಿದ್ದು ಈ ಸಂದರ್ಭದಲ್ಲಿ ಕೋಮು ಸೌಹಾರ್ಧತೆಯನ್ನು ಸಮಾಜದ ಕೆಳ ಅಂಚಿನ ಜನರಲ್ಲಿ ಕಾಣಿಸಿದ್ದಾರೆ. ಕೆಳಸ್ತರದ ಜನರ ಜೀವನ ಹಾಗೂ ಮಾನವೀಯತೆಯನ್ನು ಕಾಣಬಹುದಾಗಿದೆ. ಗಂಡಸತ್ತ ದುಃಖದಲ್ಲೂ ಸುಂದರಿಯ ಮನೆಗೆ ಹೋಗಿ ಹೆರಿಗೆ ಮಾಡಿಬರುವ ಐಸಂಬ್ಯಾರ್ರಿ, ಬಾಣಂತಿಗೆ ನೀರು ಕಾಯಿಸಿ ಕೊಡುವ ಖಾದ್ರಿಬ್ಯಾರಿ, ತಾಯಿಸತ್ತ ಕೇಶವವನನ್ನು ತನ್ನದೇ ಹಾಲುಕುಡಿಸಿ ಸಾಕುವ ನಪೀಸಮ್ಮ, ಇತ್ಯಾದಿ ಪಾತ್ರಗಳು ಮನುಷ್ಯತ್ವವನ್ನು ಕಾಣಬಹುದಾಗಿದೆ. ಈ ಹಿಂದೆ ಕಥೆಗಾರ್ತಿಯ ಸಾಮಾಜಿಕ ಕಳಕಳಿ ವ್ಯಕ್ತವಾಗಿದೆ ಕಥೆಗಾರ್ತಿಯು ವಸಾಹತ್ತೋತ್ತರ ಮಾದರಿಯಲ್ಲಿ ಕಥೆಗಳು ರಚನೆಯಾಗಿವೆ. ಈ ಕಾಲಘಟ್ಟದಲ್ಲಿ ಸ್ತ್ರೀಯರು ಸ್ವಾತಂತ್ರ್ಯರಾಗಿದ್ದು ಕೆಳವರ್ಗದ ಮಹಿಳೆಯರು ಆ ಸ್ವಾತಂತ್ರ್ಯವನ್ನು ಕಂಡಿಲ್ಲವಾಗಿದೆ ಇಲ್ಲಿನ ಕಥೆಯ ನಾಯಕಿಯರು ಬಡತನ, ಅನಕ್ಷರತೆ, ನಿರುದ್ಯೋಗಗಳು ಕಾಡತೊಡಗಿವೆ, ಅಲ್ಲದೆ ಇಲ್ಲಿನ ಸ್ತ್ರೀಯರು ಹಿಂಸೆ, ಅವಮಾನಗಳನ್ನು ಸಹಿಸದೆ ಪ್ರತಿರೋಧ ವ್ಯಕ್ತಪಡಿಸುವ ದಿಟ್ಟತನದ ಮಹಿಳೆಯರಿದ್ದಾರೆ. 'ಒಡವೆ' ಕಥೆಯಲ್ಲಿ ದಾರು ತನನ್ನು ನಿರ್ಲಕ್ಷಿಸಿದ, ಗಾಂಧಿಗೆ ಕೊಡಲು ಒಡವೆ ಸಂಗ್ರಹ ಮಾಡುವುದರಲ್ಲಿ ಬದುಕನ್ನೇ ಸವೆಸಿದ ಗಂಡನಿಗೆ ಆಭರಣಗಳನ್ನು ಕೊಡುವುದರ ಮೂಲಕ ಹೆಣ್ಣಿನ ಹೆಣ್ತನವನ್ನು ತಿಳಿಸುವುದರ ಮೂಲ ಪುರುಷ ಕೇಂದ್ರಿತ ಚಿಂತನೆಯ ವಿರುದ್ಧ ಪ್ರತಿರೋಧ ವ್ಯಕ್ತಪಡಿಸುತ್ತಾಳೆ. 'ಸೇವಂತಿ' ಕಥೆಯಲ್ಲಿ ನಾಯಕಿ ತನ್ನನ್ನು ಪ್ರೀತಿಸಿ ಮೋಸಮಾಡುವ ಗಂಗಯ್ಯ ಶೆಟ್ಟಿಯ ವಜ್ರದೋಲೆಯನ್ನು ಹೂಳೆಯಲ್ಲಿ ಎಸೆಯುವುದರ ಮೂಲಕ ಪ್ರತಿಭಟಿಸುತ್ತಾಳೆ. 'ಧಣಿಗಳ ಬೆಳ್ಳಿಲೋಟ' ಕಥೆಯಲ್ಲಿ ತನ್ನ ಕುಟುಂಬವನ್ನು ಕಳ್ಳರು ಎಂದು ಅಪಮಾನಿಸಿದ 'ಧಣಿಗಳ ಬೆಳ್ಳಿಲೋಟ'ವನ್ನು ಹೊಳೆಗೆ ಹಾಕುವುದರ ಮೂಲಕ ಪ್ರತಿರೋಧ ವ್ಯಕ್ತಪಡಿಸುತ್ತಾಳೆ. ಅದೇ ರೀತಿ ತನ್ನನ್ನು ತಿರಸ್ಕರಿಸಿ ಅನೈತಿಕ ಸಂಬಂಧ ಬೆಳಸಿದ ಗಂಡನನ್ನು ತೊರೆದು ತನ್ನಿಚ್ಛೆಯ ಗಂಡನನ್ನು ಪಡೆದುಕೊಳ್ಳುವುದರ ಮೂಲಕ ಸಿರಿ

ಪ್ರತಿಭಟನೆ ವ್ಯಕ್ತಪಡಿಸುತ್ತಾಳೆ. ಇಲ್ಲಿನ ಸ್ತ್ರೀಯರಿಗೆ ಸ್ವಾತಂತ್ರ್ಯವಿಲ್ಲ, ಅವರ ಮೂಲ ಧ್ಯೇಯ್ಯ ಬದುಕುವ ತಮ್ಮ ಅಸ್ತಿತ್ವವನ್ನು ಕಾಪಾಡಿಕೊಳ್ಳುವ ಆಸೆ ಈ ಕಥೆಗಳಲ್ಲಿ ಎದ್ದು ಕಾಣುತ್ತದೆ. ಅಲ್ಲದೆ ಇಲ್ಲಿ ಕಥೆಗಾರ್ತಿ ಕರಾವಳಿಯ ಕೆಳಸ್ತರದ ವಿವಿಧ ಜಾತಿಗಳಾದ ಮುಸ್ಲಿಂ, ಶೂದ್ರರ ಬದಲಾದ ಜನಜೀವನ, ಕೋಮು ಸೌಹಾರ್ದತೆಯನ್ನು ಕಥೆಗಾರ್ತಿ ಈ ಕಥೆಗಳಲ್ಲಿ ವ್ಯಕ್ತಪಡಿಸಿದ್ದಾರೆ.

ಒಟ್ಟಾರೆ ನಾಗವೇಣಿಯವರು, ಶಕ್ತಕಥೆಗಾರ್ತಿಯಾಗದ್ದು ಕೌಟುಂಬಿಕ ಸಮಸ್ಯೆಗಳನ್ನು ಕಥೆಯ ವಸ್ತುವಾಗಿರಿಸದೆ ಸಾಮಾಜಿಕ ಸಮಸ್ಯೆಗಳು ಸ್ತ್ರೀಯರ ಸಮಸ್ಯೆಗಳನ್ನು ಕುರಿತು ಚಿಂತನೆಯನ್ನು ಮಾಡಿರುವುದು ಗಮನಾರ್ಹವಾಗಿದೆ.

ಹೀಗೆ ಹೊಸ ತಲೆಮಾರಿನ ಕಥೆಗಾರ್ತಿಯರು ಜಾಗತೀಕರಣ, ವಲಯದಲ್ಲಿ ಮಹಿಳೆಯರ ವಿವಿಧ ಸಮಸ್ಯೆಗಳನ್ನು ಕುರಿತು ತಮ್ಮದೇ ಆದ ದೃಷ್ಟಿಧೋರಣೆಯನ್ನು ಈ ಅಧ್ಯಯನದಲ್ಲಿ ಗುರುತಿಸಲಾಗಿದೆ.

ಅಡಿಟಿಪ್ಪಣಿ

೦೧. ವಿನಯ, ಊರ ಒಳಗಣ ಬಯಲು, ೨೦೦೪, ಪು.೧೦,೧೧,೧೭,೩೧,೬೧.

೦೨. ಸುನಂದಾ ಪ್ರಕಾಶ ಕಡಮೆ, ಗಾಂಧೀಚಿತ್ರದ ನೋಟು, ೨೦೦೪, ಪು.೧೦,೮೩,೯೧

೦೩. ವೇದ ಎಂ.ಎಸ್, ಪ್ರೀತಿ ಮತ್ತು ಸಾವು, ಪು.೧೨೩

೦೪. ವೇದ ಎಂ.ಎಸ್, ಪಾಲು , ಪು.೧೫,೧೮,೧೯,೧೨೭

೦೫. ಜಾಹ್ನವಿ ಬಿ.ಟಿ, ಕಳೆದುಕೊಂಡವಳು ಮತ್ತು ಇತರ ಕಥೆಗಳು, ೧೯೯೯, ಪು.೬೩,

೦೬. ಜಾಹ್ನವಿ ಬಿ.ಟಿ, ಹುಡುಕಾಟ, ೨೦೦೭, ಪು.೧,೨,೧೦

೦೭. ಕೋಡಿಬೆಟ್ಟು ರಾಜಲಕ್ಷ್ಮೀ, ಒಂದು ಮುಷ್ಟಿ ನಕ್ಷತ್ರ, ಪು.೨೦,೨೧,೪೨,೯೧

೦೮. ಸಂಧ್ಯಾ ಹೊನಗುಂಟಿಕರ, ಹರಿದ ಹಾಸಿಗೆ ಹಂಬಲ, ೨೦೦೮, ಪು.೯,೧೧,೨೦,೨೪,೪೫,೫೫

೦೯. ಸುಮಂಗಲಾ, ಜುಮುರುಮಳೆ, ೨೦೦೫, ಪು.೧೦೫

೧೦. ರೇಖಾರಾಣಿ, ಪ್ರೀತಿಯಲ್ಲಿ ಕ್ಷಮೆಯಿರಲಿ, ಪು. ೧೦೫

೧೧. ಶಾಂತಕುಮಾರಿ, ಮುಟ್ಟು, ಪು.೧೭,೨೬,೪೯

೧೨. ನಾಗವೇಣಿ ಎಚ್.ಎಸ್, ನಾಕನೇ ನೀರು, ಪು.೧೯೯,೧೩೪

೧೩. ನಾಗವೇಣಿ ಎಚ್.ಎಸ್, ಮೀಯುವ ಆಟ, ಪು.೫೦,೨೪

ಅಧ್ಯಾಯ - ಐದು

ಕಥಾ ಸಾಹಿತ್ಯದ ಕಥನ ವಿನ್ಯಾಸಗಳು

ಅಧ್ಯಾಯ - ಐದು

ಕಥಾ ಸಾಹಿತ್ಯದ ಕಥನ ವಿನ್ಯಾಸಗಳು

ಕಥನ ವಿನ್ಯಾಸ ಎಂದರೆ ಕತೆ ಹೇಳುವ ಕ್ರಮ ಅಥವಾ ವಿಧಾನ ಎಂದೇ ಅರ್ಥ. ಸಾಮಾನ್ಯವಾಗಿ ಕಥನ ತಂತ್ರ ಎಂದು ಗುರುತಿಸಲಾಗುತ್ತದೆ. ಒಬ್ಬ ಕತೆಗಾರರನಿಗೆ ತನ್ನ ಕಥೆಯನ್ನು ಹೇಳುವುದು ಯಾವತ್ತೂ ಸುಲಭವಾಗಿ ಕಾಣುವುದಿಲ್ಲ. ಹೇಳುವಾಗ ಕಥೆಯನ್ನು ನಿಚ್ಚಳವಾಗಿ ತೊಡಕಿಲ್ಲದೆ, ಪರಿಣಾಮಕಾರಿಯಾಗಿ ಹೇಳುವ ಹಂಬಲವಿರುತ್ತದೆ. ಕಥೆಗಾರ ಪರಿಣಾಮಕಾರಿಯಾಗಿ ಹೇಳುವ ಹಂಬಲವಿರುತ್ತದೆ. ಕಥೆಗಾರ ಪರಿಣಾಮಕಾರಿಯಾಗಿ ಕಥೆಯನ್ನು ರಚಿಸುವ ಅಥವ ಕಟ್ಟುವ ಕೆಲಸದಲ್ಲಿ ತೊಡಗಿದಾಗಲೇ ಆ ಕಥೆಯ ವಸ್ತು ಒಂದು ತಂತ್ರವನ್ನು ವಿನ್ಯಾಸವನ್ನು ಅಂತರಾತ ಮಾಡಿಕೊಳ್ಳುತ್ತದೆ. ಕಥೆಯೇ ಒಂದು ತಂತ್ರವನ್ನು ರೂಪಿಸಿಕೊಳ್ಳುತ್ತದೆ.ಸಾಮಾಜಿಕ ವಾಸ್ತವವನ್ನು ಕಲಾ ವಾಸ್ತವಕ್ಕೆ ಪರಿವರ್ತಿಸುವ ಗುಣ ಮುಖ್ಯವಾಗಿ ಬೇಕಾಗುತ್ತದೆ. ಲೋಕದ ವಾಸ್ತವ ಬೇರೆ ಲೋಕದ ವಾಸ್ತವವನ್ನು ಕಲೆಯ ವಾಸ್ತವಕ್ಕೆ ರೂಪಾಂತರಿಸುವ ಕೌಶಲ್ಯ ಸಿದ್ಧಿಸಿಕೊಳ್ಳಬೇಕಾಗುತ್ತದೆ. ಸಮಾಜವನ್ನು ನೋಡುವ ದೃಷ್ಟಿಕೋನ ಒಂದು ಕಲಾಕೃತಿಯಲ್ಲಿ ಒಡಮೂಡಬೇಕಾದರೆ ತಂತ್ರವನ್ನು ಅಳವಡಿಸಿಕೊಳ್ಳಬೇಕಾಗುತ್ತದೆ. ಕಥೆಯನ್ನು ಹೇಳುವ, ಭಾಷೆಯಲ್ಲಿ ನಿರೂಪಿಸುವ ವಿಧಾನವೇ ತಂತ್ರಗಾರಿಕೆಯಾಗಿದೆ.

ಹೊಸ ತಲೆಮಾರಿನ ಕಥೆಗಾರ್ತಿಯರ ಕಥೆಗಳನ್ನು ಗ್ರಹಿಸುವ ಮುನ್ನ ಕನ್ನಡ ಮಹಿಳಾ ಕಥಾಸಾಹಿತ್ಯವನ್ನು ಪೀಠಿಕೆಯಾಗಿ ಗ್ರಹಿಸುವ ಅಗತ್ಯವಿದೆ. ಮಹಿಳೆ ಸಾಹಿತ್ಯ ರಚಿಸುವ ಸಾಹಸಕ್ಕೆ ನಿಂತದ್ದೇ ದೊಡ್ಡ ಸಾಧನೆಯಾಗಿದೆ. ಕನ್ನಡದಲ್ಲಿ ಸಾಹಿತ್ಯ ಚಲಿಸುವುದಕ್ಕೆ ಮಹಿಳೆಗೆ ಅವಕಾಶಸಿಕ್ಕದ್ದೇ ೧೨ನೇ ಶತಮಾನದಲ್ಲಿ ಶಕ್ತ ಮಹಿಳಾ ವಚನ ಸಾಹಿತ್ಯ ಸೃಷ್ಟಿಯಾಯಿತು. ಪುರುಷನ ಆಲೋಚನೆಗೆ ಸರಿಸಮನಾಗಿ ಯೋಚಿಸಿದರು ಎಂಬ ಮಾತು ಸರಿ ಆದರೆ ಪುರುಷ ಪ್ರಧಾನ ವ್ಯವಸ್ಥೆಯನ್ನು ಪ್ರಶ್ನಿಸಿದರು ಎಂಬ ಮಾತು ಮಹತ್ವದ್ದು. ಇದರ ಅಗತ್ಯವಿತ್ತೇ? ಎಂಬ ಪ್ರಶ್ನೆ ಬರುತ್ತದೆನೋ ಸಾಹಿತ್ಯ ರಚನೆಯಾಗುವುದೇ ವ್ಯವಸ್ಥೆಯನ್ನು ಪ್ರಶ್ನಿಸುವುದಕ್ಕೆ. ಆರಂಭದ ಮಹಿಳಾ ಸಾಹಿತ್ಯದ ಅಭಿವ್ಯಕ್ತಿ ಪ್ರಶ್ನಿಸುವುದರ ಜತೆಗೆ ಲೋಕದ ಬಗ್ಗೆ

ತಮ್ಮ ಚಿಂತನೆಗಳನ್ನು ವಚನಗಳಲ್ಲಿ ವ್ಯಕ್ತ ಮಾಡಿದರು. ಕುತೂಹಲದ ಸಂಗತಿಯೆಂದರೆ ೧೨ನೇ ಶತಮಾನದಲ್ಲಿ ಕಾಣಿಸಿಕೊಂಡ ಮಹಿಳೆಯ ಸಾಹಿತ್ಯಭಿವ್ಯಕ್ತಿಯನ್ನು ಗಮನಿಸಿದರೆ ಮುಂದಿನ ಶತಮಾನಗಳಲ್ಲಿ ಮಹಿಳಾ ಅಭಿವ್ಯಕ್ತ ಹೆಚ್ಚಾಗುತ್ತ ಬಲಗೊಳ್ಳುತ್ತ ಸಾಗಬೇಕಾಗಿತ್ತು. ಆದರೆ ನಿಂತೇ ಹೋದದ್ದು ಸಾಹಿತ್ಯಕ್ಕೆ ಆದ ನಷ್ಟವೆಂದೇ ಹೇಳಬೇಕು. ಇದಕ್ಕೆ ಕಾರಣ ಅವಕಾಶ ವಂಚನೆಯಾದದ್ದು, ೧೩ನೇ ಶತಮಾನದಿಂದ ಕನ್ನಡ ಚರಿತ್ರೆ ಮತ್ತು ಸಂಸ್ಕೃತಿಯಲ್ಲಿ ಆದ ಬದಲಾವಣೆಯಗಳು ಕಾರಣವಾದವು. ವಚನ ಸಂಕಲನ ಮತ್ತು ಸಂಗೋಪನ ಎಂದು ಕರೆಯುವ ಕಾಲವಧಿಯಲ್ಲಿಯೇ ಮಹಿಳೆಯನ್ನು ಮುಖ್ಯವಾಹಿನಿಯಿಂದ ದೂರವಿಡಲಾಯಿತು. ವಚನ ಸಂಕಲನ ಕ್ರಿಯೆಯಲ್ಲಿಯೂ ಮಹಿಳೆಗೆ ಅವಕಾಶವಿಲ್ಲದಷ್ಟು ವಾತಾವರಣ ಸೃಷ್ಟಿಗೊಂಡಿತ್ತು. ಹೀಗಾಗಿ ೨೦ನೇ ಶತಮಾನದವರೆಗೆ ಮಹಿಳೆ ತನ್ನ ಅಭಿವ್ಯಕ್ತಿಗಾಗಿ ಕಾಯಬೇಕಾಯ್ತು ನಡುವೆ ಸಂಚಿ ಹೊನ್ನಮ್ಮ, ಹರಪನಹಳ್ಳಿ ಭೀಮವ್ವ ಎಂಬ ಮಹಿಳೆ ಕಾಣಿಸಿದ್ದು ಬಿಟ್ಟರೆ ೮೦೦ ವರ್ಷಗಳ ಅವಧಿಯಲ್ಲಿ ಮಹಿಳಾ ಅಭಿವ್ಯಕ್ತಿ ಎಂಬುದೇ ಇರಲಿಲ್ಲ.

೨೦ನೇ ಶತಮಾನದಲ್ಲಿ ಬ್ರಿಟೀಷರ ವಸಾಹತು ಪರಿಣಾಮದಿಂದ ಆಧುನಿಕ ಶಿಕ್ಷಣ ಪದ್ಧತಿ ಜಾರಿಯಾದಾಗ ಮೇಲ್ವರ್ಗದ ಸಮುದಾಯ ಅಕ್ಷರ ಕಲಿಯಲು ಆರಂಭಿಸಿತು. ಆಧುನಿಕ ಶಿಕ್ಷಣ ಕಲಿಕೆಯಲ್ಲಿ ಮೇಲ್ವರ್ಗದ ಸಮುದಾಯದ ಪುರುಷರ ಸಂಖ್ಯೆ ಹೆಚ್ಚಿದ್ದರೂ ಮಹಿಳೆಯರೂ ಕಲಿಯಲು ನಿಂತದ್ದು ಒಂದು ಅನನ್ಯ ಬೆಳವಣಿಗೆ, ಸಾಮಾಜಿಕವಾಗಿ ಇಂದೊದು ಪರಿವರ್ತನೆಯ ಶತಮಾನ ಎಂದು ಹೇಳಬಹುದು. ಮಹಿಳೆಯರು ಶಿಕ್ಷಣ ಪಡೆದು, ಹೊಸ ತಿಳುವಳಿಕೆಯನ್ನ ಪಡೆದು ಆಧುನಿಕ ಸಮಾಜದಲ್ಲಿ ನಡೆಯುವ ಪರಿವರ್ತನೆಯಲ್ಲಿ ಪಾಲ್ಗೊಂಡರು. ಆಧುನಿಕ ಸಾಹಿತ್ಯ ರಚನೆಯಲ್ಲಿ ಅನೇಕ ಮಹಿಳೆಯರು ತೊಡಗಿದರು. ತಿರುಮಲಾಂಬ, ಕೊಡಗಿನ ಸಾರಮ್ಮ, ಕಲ್ಯಾಣಮ್ಮ ಸರಸ್ವತಿ ಬಾಯಿ ರಾಜವಾಡೆ, ಶಾಮಲಾ, ಬೆಳಗೆರೆ ಜಾನಕಮ್ಮ ಮುಂತಾದವರು ಮೊದಲ ತಲೆಮಾರಿನ ಮಹಿಳಾ ಕಥನಗಾರರಾಗಿ ಬೆಳೆದು ನಿಂತಿದ್ದಾರೆ. ಮಹಿಳಾ ಅಭಿವ್ಯಕ್ತಿಗೆ ಉತ್ತೇಜನ ಇಲ್ಲದ ಕಾಲವದು. ಓದುಗರಾಗಲಿ, ವಿಮರ್ಶಕರಾಗಲಿ ಮಹಿಳೆಯರ ಸಾಹಿತ್ಯವನ್ನು ಮಕ್ತವಾಗಿ ಸ್ವಾಗತಿಸಲಿಲ್ಲ, ಅವರ ಅನುಭಾವಗಳು ಸೀಮಿತ, ಮನೆ ಕುಟುಂಬದ ಒಳಗೇ ಸುತ್ತುತ್ತವೆ ಎಂಬ ಮಾತುಗಳು ಕೇಳಿಬಂದವು. ಆದರೂ ಮಹಿಳೆಯರು ತಮ್ಮ ಅಭಿವ್ಯಕ್ತಿಯನ್ನು ಪ್ರಾಮಾಣಿಕವಾಗಿ ಮುಂದವರಿಸಿಕೊಂಡು ಬಂದರು.

ಅನುಭವದ 'ಮಿತಿ'ಯೊಳಗೇ ವರದಕ್ಷಿಣೆ, ವಿಧವಾ ಸಮಸ್ಯೆ, ಬಾಲ್ಯವಿವಾಹ ಮುಂತಾದ ಸಮಸ್ಯೆಗಳನ್ನು ಸುಧಾರಿಸುವ, ತಿಳುವಳಿಕೆ ನೀಡುವ ನೆಲೆಯಲ್ಲಿ ತಮ್ಮ ಸಣ್ಣಕತೆಗಳಲ್ಲಿ ಅಭಿವ್ಯಕ್ತಿಸಿದ್ದಾರೆ. ಕಥಾವಸ್ತು ಅಂದಿನ ಸಮಾಜದ ಜ್ವಲಂತ ಸಮಸ್ಯೆಗಳ ಸುತ್ತ ಇರುತ್ತಿತ್ತು. ಆರ್.ಕಲ್ಯಾಣಮ್ಮ ಅವರು ಕೌಟುಂಬಿಕ, ಸಾಮಾಜಿಕ, ಮೂಡನಂಬಿಕೆಗಳ ಬಗ್ಗೆ ಬರೆಯುತ್ತ ಮಾನವೀಯ ಸಂಬಂಧಗಳನ್ನು ಶೋಧಿಸಿದರು. ಈ ಕಾಲದಲ್ಲಿ ಗಾಂಧೀಜಿಯ ಪ್ರಭಾವ ಹೆಚ್ಚಾಗಿದ್ದರಿಂದ ಗಾಂಧೀ ವಿಚಾರಗಳನ್ನು ಪ್ರತಿಪಾದಿಸುವ ನೆಲೆ ಅವರ ಕಥೆಗಳ ವಿನ್ಯಾಸದಲ್ಲಿ ಕಾಣುತ್ತೇವೆ. ಶ್ಯಾಮಲಾ ಬೆಳಗಾಂವಕರ ಅವರು

ಅಪರೂಪದ ಕಥೆಗಾರ್ತಿ, ಅವರ ಕಥೆಗಳ ವಿನ್ಯಾಸದಲ್ಲಿ ಪ್ರಗತಿಶೀಲತೆ ಕಂಡು ಬರುತ್ತದೆ. ವ್ಯವಸ್ಥೆಯ ಕಪಿಮುಷ್ಟಿಯಲ್ಲಿ ಸಿಕ್ಕು ಜೀವವನ್ನೇ ಕಳೆದುಕೊಳ್ಳುವ ಅಬಲೆಯರು ಇದ್ದಾರೆ. ವ್ಯವಸ್ಥೆಯಿಂದ ಬಿಡುಗಡೆ ಪಡೆಯಲು ಯತ್ನಿಸಿ ಸಫಲರಾಗುವ ಮಹಿಳೆಯರಿದ್ದಾರೆ. ಮದುವೆ ಎಂಬ ಸಂಸ್ಥೆಯ ಕಟ್ಟುಪಾಡುಗಳಿಗೆ ಸಿಲುಕಿದವರ ಬವಣೆಗಳೂ ಇವೆ. ಸಮಸ್ಯೆಗಳ ಸುಳಿಯಲ್ಲಿದ್ದರೂ ಅದನ್ನು ನಿಭಾಯಿಸಿಕೊಂಡು ಬದುಕುವ ಚಿತ್ರಣಗಳೂ ಇವೆ. ಸೀಮಿತ ಅನುಭವದ ಒಳಗೇ ಇರುವ ಸಮಸ್ಯೆಗಳ ಆಳ ಅಗಲಗಳನ್ನು ಕಾಣುವ ವಿನ್ಯಾಸದ ಕಥೆಗಳನ್ನು ಶ್ಯಾಮಲಾ ಬೆಳಗಾಂವಕರ ಬರೆದಿದ್ದಾರೆ.

ಸರಸ್ವತಿ ಬಾಯಿ ರಾಜವಾಡೆ ಅವರು ದಕ್ಷಿಣ ಕನ್ನಡದವರು. ಬಡತನಕ್ಕೆ ಕಾರಮವಾಗುವ ಸಮಸ್ಯೆಗಳನ್ನು ಕಥೆಯಾಗಿಸಿದ್ದಾರೆ. ಫ್ಯೂಡಲ್ ವ್ಯವಸ್ಥೆಯ ಅನೇಕ ಮುಖಗಳನ್ನು ಕಥೆಯಲ್ಲಿ ಚಿತ್ರಿಸಿದ್ದಾರೆ. ಅಸ್ಪೃಶ್ಯತೆಯ ಕರಾಳ ವ್ಯವಸ್ಥೆಯನ್ನು ವಿಧವಾ ಸಮಸ್ಯೆಯು ವೇಶಾಸಮಸ್ಯೆಗೆ ದಾರಿಯಾಗುವುದನ್ನು ಕಥೆಯಲ್ಲಿ ತೋರಿದ್ದಾರೆ. ಸಾಮಾಜಿಕ ವಾಸ್ತವವನ್ನು ತಮ್ಮದೆ ಗ್ರಹಿಕೆಯಲ್ಲಿ ಚಿತ್ರಿಸಿದ್ದಾರೆ. ಕಥೆಯ ವಿನ್ಯಾಸದಲ್ಲಿ ಸರಳ ನಿರೂಪಣೆಯನ್ನು ತಂದಿದ್ದಾರೆ. ಸಾತ್ವಿಕ ಸಿಟ್ಟು ಕಾಣಿಸುತ್ತದೆ. ನಿರೂಪಣೆಯಲ್ಲಿ ಮಾತುಕತೆಯಲ್ಲಿಯೇ ಸಮಸ್ಯೆಯ ಅನಾವರಣ ಕಂಡುಬರುತ್ತದೆ. ವ್ಯಂಗ್ಯವೂ ಕಾಣುತ್ತದೆ.

ಕೊಡಗಿನ ಗೌರಮ್ಮನವರ ಕಥೆಗಳಲ್ಲಿ ಹಲವು ತಂತ್ರಗಳು ಕಂಡು ಬರುತ್ತವೆ. ವಸ್ತು ವೈವಿಧ್ಯತೆಗಳಿವೆ. ವೈಧವ್ಯ, ವರದಕ್ಷಣೆ, ಬಡತನ, ಅಂತರ್‌ಜಾತಿ ಸಂಬಂಧಗಳು, ವೈಶ್ಯರ ಬಾಳಿನ ಗೋಳು ಎಲ್ಲವೂ ಮಾನವೀಯ ನೆಲೆಯಲ್ಲಿ ಗ್ರಹಿಸಲಾಗಿದೆ. ಪತ್ರಗಳಲ್ಲಿ ಕಥೆ ಕಟ್ಟುವ ಕಲೆ ಇದೆ. ಪ್ರಥಮ ಪರುಷ ನಿರೂಪಣೆಯಿದೆ. ಹಲವು ತಂತ್ರಗಳಿಂದ ಕಥೆಯನ್ನು ಪರಿಣಾಮಕಾರಿಯಾ ಮಾಡಲು ಯತ್ನಿಸಿ ಸಫಲರಾಗಿದ್ದಾರೆ. ಮಹಿಳೆ ಮಸನಸ್ಸಿನ ಸೂಕ್ಷ್ಮತೆಯನ್ನು ಆತಂಕ, ತಲ್ಲಣಗಳನ್ನು ಬಿಂಬಿಸುವ ಕಥೆಗಳು ಮನಮುಟ್ಟುತ್ತವೆ.

ಹೀಗೆ ಮೊದಲ ತಲೆಮಾರಿನ ಕಥೆಗಾರ್ತಿಯರು ಸಣ್ಣಕಥೆಯನ್ನು ಕಟ್ಟಿ ಬಲವಾದ ಬುನಾದಿಯನ್ನು ಹಾಕಿದ್ದಾರೆ. ಈ ಕಾಲದ ಸಂಪ್ರದಾಯ ಮತ್ತು ಆಧುನಿಕತೆಗಳ ನಡುವಣ ಸಂಘರ್ಷವನ್ನು ಕಥೆಯ ವಿನ್ಯಾಸದಲ್ಲಿ ಅಳವಡಿಸಿಕೊಂಡಿರುವುದು ವಿಶೇಷವಾಗಿದೆ.

ಸುಮಾರು ಐವತ್ತರ ದಶಕದಲ್ಲಿ ಆರಂಭವಾದ 'ನವ್ಯ' ಸಾಹಿತ್ಯ ಪಂಥದಲ್ಲಿ ಮಹಿಳೆಯರ ಕೊಡುಗೆ ಕಡಿಮೆ ವ್ಯಕ್ತಿಕೇಂದ್ರಿತ, ನೈತಿಕ ಸಮಸ್ಯೆ ಸಂಪ್ರದಾಯ ವಿರೋದಿ ನೆಲೆ ಹಾಗೂ ಆತ್ಮರತಿ ಕೇಂದ್ರಿತ ಕಥೆಗಳನ್ನು ಕಟ್ಟಲು ಮಹಿಳೆಯರಿಗೆ ಸಾಧ್ಯವಾಗಲಿಲ್ಲ. ಸಂಪ್ರದಾಯ ಮೀರುವ ಗುಣಗಳು ಇಲ್ಲಿ ಪುರುಷ ಕೇಂದ್ರಿತವಾಗಿ ಬಂದಿದ್ದರಿಂದ ಮಹಿಳೆಯ ಮನಸ್ಥಿತಿಯನ್ನು ಅರಿಯುವ ಪ್ರಮಾಣ ಕಡಿಮೆಯಾಯಿತು. ಆದರೂ ಈ ಕಾಲದಲ್ಲಿ ಶಾಂತಿನಾಥ ದೇಸಾಯಿ ಆಧುನಿಕ ಮಹಿಳೆಯನ್ನು ಸಮರ್ಥವಾಗಿ ಚಿತ್ರಿಸಿದ್ದಾರೆ. ಮಹಿಳೆಯರಲ್ಲಿ ರಾಜಲಕ್ಷ್ಮಿ ಎನ್.ರಾವ್ ಮತ್ತು ವೀಣಾ ಶಾಂತೇಶ್ವರ ನವ್ಯ ಸಾಹಿತ್ಯ ಚಳುವಳಿಯ ಕಾಲದಲ್ಲಿ ಬರೆದದ್ದು ಗಮನಾರ್ಹವಾಗಿದೆ. ಮಹಿಳೆಯ ನೈತಿಕತೆಯನ್ನು ಹೊಸ ಕಾಲದಲ್ಲಿ ವ್ಯಾಖ್ಯಾನಿಸುವ ಅಂಶ ಇವರ ಕಥೆಗಳಲ್ಲಿ ಕಾಣಬಹುದು.

೭೦ರ ದಶಕದಲ್ಲಿ ಹುಟ್ಟಿಕೊಂಡ ಬಂಡಾಯ ಮತ್ತು ದಲಿತ, ಸಾಹಿತ್ಯ ಚಳುವಳಿಯ ಕಾಲದಲ್ಲಿ ಮಹಿಳಾ ಅಭಿವ್ಯಕ್ತ ಹೆಚ್ಚಾಯಿತು. ಈ ಹೊತ್ತಿಗಾಗಲೇ ಕೆಳವರ್ಗದ ಸಮುದಾಯಗಳು, ಅಂಚಿನಲ್ಲಿರುವ ಸಮುದಾಯಗಳು ಅಕ್ಷರ ಕಲಿತು, ವಿದ್ಯೆಯ ಬಲದಿಂದ ತಮ್ಮ ಸಾಂಸ್ಕೃತಿಕ ಚರಿತ್ರೆಯನ್ನು ಅರಿತು, ಅದನ್ನು ತಮ್ಮದೇ ಆದ ನೆಲೆಯಲ್ಲಿ ರಚಿಸಿಕೊಳ್ಳಲು ಪ್ರಯತ್ನಿಸಿದರು ತಮ್ಮ ಮೇಲಾದ ಗಾಯಗಳಿಗೆ ಕಾರಣವಾದ ಚಾರಿತ್ರಿಕ ಸಂಗತಿಗಳನ್ನು ಬಯಲು ಮಾಡಲು ಪ್ರಯತ್ನಿಸಿದರು. ಇದರ ಕಾರಣದಿಂದ ಈ ಕಾಲದಲ್ಲಿ ಹೆಚ್ಚು ಮಹಿಳೆಯರು ಸಾಹಿತ್ಯಾಭಿವ್ಯಕ್ತಿಯಲ್ಲಿ ತೊಡಗಿದರು. ಶೋಷಣೆ, ಕ್ರೌರ್ಯ, ದಮನ ಮತ್ತು ಅಸಹಾಯತೆಗಳು ಕಥೆಯ ವಿನ್ಯಾಸವನ್ನು ಪಡೆದವು. ಬಿ.ಟಿ.ಲಲಿತಾನಾಯಕ, ಬಾನುಮುಸ್ತಾಕ್, ಸಾರಾ ಅಬೂಬಕ್ಕರ್, ಗೀತಾ ನಾಗಭೂಷಣ ಮುಂತಾದವರು ಹೆಣ್ಣಿನ ಮೇಲಾಗುವ ಆಕ್ರಮಣ, ಅದಕ್ಕೆ ಕಾರಣರಾದ ಮೇಲ್ವರ್ಗದ ಪುರುಷರು, ಜಮೀನ್ದಾರಿ ಮನೋಭಾವ ಮುಂತಾದ ಅಮಾನವೀಯ ಅಂಶಗಳನ್ನು ಚಿತ್ರಿಸಿದರು. ಈ ಕಾಲದಲ್ಲಿ ಕಥೆಯ ಜೊತೆಗೆ ಕವಿತೆಗಳ ಸಾಹಿತ್ಯವೂ ಗಮನಾರ್ಹವಾಗಿ ಬಂದಿತು.

ಹೀಗೆ ಮೊದಲ ತಲೆಮಾರಿನಿಂದ ಅಂದರೆ ನವೋದಯ ನವ್ಯ, ಬಂಡಾಯ ಮತ್ತು ದಲಿತ ಸಾಹಿತ್ಯ ಪಂಥಗಳ ಕಾಲಾವಧಿಯಲ್ಲಿ ಕಾಲದ ಧರ್ಮವನ್ನು ಗ್ರಹಿಸಿ ಸಾಹಿತ್ಯ ರಚನೆಯಾಗಿದೆ. ಪ್ರಗತಿಶೀಲ ಸಾಹಿತ್ಯ ಚಳುವಳಿಯಲ್ಲಿಯೂ ತ್ರಿವೇಣಿ, ಅನುಪಮಾ ನಿರಂಜನ, ವಾಣಿ ಮುಂತಾದವರು ವರ್ಗ ಪ್ರಜ್ಞೆ ಹಿನ್ನೆಲೆಯಲ್ಲಿ ದುಡಿವ ವರ್ಗದ ಪರವಾಗಿ, ಬಂಡವಾಳಗಳ, ಭೂಮಾಲಿಕರ ವಿರೋಧಿ ನೆಲೆಯಲ್ಲಿ ಕಥೆಗಳನ್ನು ರಚಿಸಿದರು. ಶೋಷಿತರ ಪರ, ಶೋಷಕರ ವಿರುದ್ಧ ತಮ್ಮ ನಿಲುವುಗಳನ್ನು ಕಥೆಯಲ್ಲಿ ಕಟ್ಟಿದ್ದರು.

ಕಳೆದ ೨೦ ವರ್ಷಗಳಿಂದ ಬಂಡಾಯ ದಲಿತ ಸಾಹಿತ್ಯ ಚಳುವಳಿ ನಿಲುಗಡೆಯಾಯಿತು. ಎಂದು ಹೇಳಬಹುದು. ಎರಡು ದಶಕಗಳಿಂದ ಸಾಹಿತ್ಯ ಚಳುವಳಿ ಎಂದು ಗುರುತಿಸಿಕೊಂಡ ಒಂದು ಪಂಥ ಹುಟ್ಟಿ ಬೆಳೆಯಲಿಲ್ಲ. ಆದರೂ ಬೇರೆ ಬೇರೆ ವಲಯಗಳಲ್ಲಿ ಚಳುವಳಿಗಳು ನಡೆಯುತ್ತಿವೆ. ಸಮಾಜದಲ್ಲಿ ಜಾಗತೀಕರಣದಿಂದ ಹೊಸ ಸಂಚಲನೆ ಮೂಡಿ ಬೆರಗಾಗುವಂತೆ ಬೆಳವಣಿಗೆಯಾಗಿದೆ. ತಂತ್ರಜ್ಞಾನ, ವಿದ್ಯೂನ್ಮಾನ ಕ್ಷೇತ್ರಗಲ್ಲಿ ಕಳೆದ ಹತ್ತು ವರ್ಷಗಳಲ್ಲಿ ಬೆಳೆದಷ್ಟು ವೇಗ ಹಿಂದೆ ಆಗಿರಲಿಲ್ಲ ಖಾಸಗೀಕರಣ, ಉದಾರೀಕರಣಗಳಿಂದ ಸಮಾಜದಲ್ಲಿ ಆದ ಬದಲಾವಣೆಗಳು, ಪರಿಣಾಮಗಳು ಯಾರಿಗೆ ಲಾಭ, ಯಾರಿಗೆ ಕಷ್ಟ ಎಂಬ ಚರ್ಚೆಯೂ ತೀವ್ರವಾಗಿ ನಡೆಯುತ್ತಿದೆ. ಗಣಿಗಾರಿಕೆ, ಪರಿಸರ ನಾಶ, ರೈತರಸಾವು, ಶಿಕ್ಷಣದ ವ್ಯಾಪಾರ ಮುಂತಾದವುಗಳಿಂದ ಸಾಮುದಾಯಗಳು ಕಷ್ಟನಷ್ಟ ಅನುಭವಿಸಿದೆ. ಇಂಥ ಬೆಳವಣಿಗೆಗಳ ಹಿನ್ನೆಯೆಲ್ಲಿ ಸಾಹಿತ್ಯವೂ ರಚನೆಗೊಂಡಿದೆ. ಅದರ ತಾತ್ವಿಕತೆಯನ್ನು ಗ್ರಹಿಸುವ ಕಾರ್ಯಯೂ ನಡೆದಿದೆ. ಈ ಹಿನ್ನೆಲೆಯಲ್ಲಿ ಹೊಸ ತಲೆಮಾರಿನ ಕತೆಗಾರ್ತಿಯರ ಕಥೆಗಳ ವಿನ್ಯಾಸವನ್ನು ಗುರುತಿಸುವ ಪ್ರಯತ್ನ ಇಲ್ಲಿ ಮಾಡಲಾಗಿದೆ. ಹೊಸತಲೆಮಾರು ಎಂದರೆ ೯೦ರಿಂದ ಬರೆಯಲಾರಂಭಿಸಿದ

ಕಥೆಗಾರರು ಎಂದು ಗುರುತಿಸಿಕೊಂಡಿದೆ. ಎಚ್.ನಾಗವೇಣಿ, ಶಾಂತಕುಮಾರಿ, ಸುಮಂಗಲ, ರೇಖಾರಾಣಿ, ರಾಜಲಕ್ಷ್ಮಿ.ಕೆ, ವಿನಯಾ, ಸುನಂದ ಪ್ರಕಾಶ ಕಡಿಮೆ, ಜಾನ್ಹವಿ ಮುಂತದಾವರು ಉತ್ತಮ ಕಥಾ ಸಾಹಿತ್ಯ ರಚಿಸಿದ್ದಾರೆ.

ಎಚ್.ನಾಗವೇಣಿ ಅವರು ಕರಾವಳಿ ಪ್ರದೇಶದಿಂದ ಬಂದವರು. ದ.ಕ.ಜಿಲ್ಲೆ ಎಂದರೆ ಶಿವರಾಮ ಕಾರಂತರು ನೆನಪಾಗುತ್ತಾರೆ. ಅವರ ಕಾದಂಬರಿಗಳನ್ನು ಕನ್ನಡದ ಓದುಗರು ಮರೆಯಲು ಸಾಧ್ಯವಿಲ್ಲ. ಶಿವರಾಮ ಕಾರಂತರ ಕಾದಂಬರಿಗಳು ವೈದಿಕ ಸಂಸ್ಕೃತಿಯನ್ನು ಅದರೆಲ್ಲ ದುಃಖ ಸುಖಗಳೊಂದಿಗೆ ಮಾನವೀಯ ಕಾಳಜಿಯೊಂದಿಗ ಕಾದಂಬರಿಯ ವಿನ್ಯಾಸ ರೂಪಿಸಿಕೊಂಡಿವೆ. ಎಚ್.ನಾಗವೇಣಿ ಅವರ ವಿಶೇಷವೆಂದರೆ, ವೈದಿಕೇತರ ಸಂಸ್ಕೃತಿಯನ್ನು ಕಥೆಗಳಲ್ಲಿ ಚಿತ್ರಿಸಿದ್ದಾರೆ. ಸಮಾಜದ ಅಂಚಿನಲ್ಲಿ ಬದುಕುವ ಸಮುದಾಯಗಳ ಜೀವಂತಿಕೆಯನ್ನು, ಅವರ ಮಾನವೀಯತೆಯನ್ನು ಅವರು ಅನುಭವಿಸುವ ನೋವುಗಳನ್ನು ತಮ್ಮ ಕಥೆಗಳಲ್ಲಿ ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ. ಕರಾವಳಿಯ ಪರಿಸರ ಕಥೆಗಳಲ್ಲಿ ಜೀವಪಡೆದಿದೆ. ಪರಿಸರದೊಂದಿಗೆ ಬದುಕುವ ಮೇಲ್ವರ್ಗದ ಸಮುದಾಯಗಳು, ಅದೇ ಪರಿಸರದಲ್ಲಿ ಬದುಕುವ ಕೆಳವರ್ಗದ ಸಮುದಾಯಗಳ ನಡುವಿನ ಬದುಕಿನ ಸಂಬಂಧಗಳಲ್ಲಿ ಕಾಣುವ ಕ್ರೌರ್ಯ ಮತ್ತು ಮಾನವೀಯ ಮುಖಗಳನ್ನು ಯಾವ ಆಕ್ರೋಶಗಳಿಲ್ಲದೆ ಚಿತ್ರಿಸಿದ್ದಾರೆ. ಕಥೆಯ ವಿನ್ಯಾಸದಲ್ಲಿ ಎರಡು ಸಮುದಾಯಗಳ ಮುಖಾಮುಖಿಯಲ್ಲಿ ಹುಟ್ಟುವ ಜೀವಂತಿಕ, ಮಾನವೀಯ ನೆಲೆ ಕಾಣಿಸುತ್ತದೆ.

ಸುನಂದ ಪ್ರಕಾಶ ಕಡಿಮೆ ಉತ್ತಮ ಕಥೆಗಳನ್ನು ಬರೆದು ಹೆಸರು ಮಾಡಿದ್ದಾರೆ. ಅವರ ಕಥೆಗಳು ದೊಡ್ಡ ಸಂಗತಿಗಳನ್ನು ಹೇಳುವುದಿಲ್ಲ. ನಿತ್ಯ ಬದುಕಿನ, ಒಂದು ಕುಟುಂಬದ ಒಳಗೇ ನಡೆಯುವ ಘಟನೆಗಳನ್ನು ಅವು ವ್ಯಕ್ತಿ ಕುಟುಂಬದ ಮೇಲೆ ಉಂಟುಮಾಡುವ ಪರಿಣಾಮಗಳನನು ಸೂಕ್ಷ್ಮವಾಗಿ, ಆಳವಾಗಿ ಶೋಧಿಸುತ್ತಾರೆ. ಅತಿ ಸಣ್ಣ ವಿಷಯಗಳನ್ನು ಆಳವಾಗಿ ಗ್ರಹಿಸಿ ನಿರೂಪಿಸುವ ವಿಧಾನ ಬೆರಗನ್ನುಂಟು ಮಾಡುತ್ತದೆ. ಒಂದು ರೀತಿಯಲ್ಲಿ ಕಾದಂಬರಿಯಲ್ಲಿ ಕಾಣಿಸುವ ನಿರೂಪಣೆಯನ್ನು ಕಥೆಯ ವಿನ್ಯಾಸದಲ್ಲಿ ತರುತ್ತಾರೆ. ನಡೆಯುವುದನ್ನು ತೋರಿಸುತ್ತಾರೆಯೇ ಹೊರತು ಹೇಳುವ ವಿಧಾನ ಇಲ್ಲಿನ ಕಥೆಗಳಲ್ಲಿ ಇಲ್ಲ.

> 'ದೊಡ್ಡ ಅರಿಯುವ ಕಲ್ಲಿನಲ್ಲಿ ಇಷ್ಟೇ ಇಷ್ಟು ಪಡುವಲಕಾಯಿ ಗೊಜ್ಜು
> ಅರೆಯಲು ಹಾಕಿಕೊಂಡು ಕೂತಿದ್ದು, ಅದು ಅತ್ತಿತ್ತ ಸಿಡಿಯುವ
> ರಭಸಕ್ಕೆ ಅಸಮಧಾನಗೊಂಡಿದ್ದ ಶಾಲಿನಿ, 'ಅವಸರ ಮಾಡಿದರೆ ಯಾವುದೂ
> ನನ್ನ ಕೈಲಾಗೊಲ್ಲ, ಹೊರಗೆ ಹೋಗಿ ನೀವು' ಎಂದು ಅತ್ತೆಯ ಮುಖದ
> ಮೇಲೆ ಹೊಡೆದಂತೆ ಹೇಳಿಬಿಟ್ಟಳು. ಅದೇ ಅವಮಾನದ, ಸೆಡವು ಹೊತ್ತು
> ಯಮುನಜ್ಜಿ 'ಈಗೀಗ ಬಂದು ಹೊಕ್ಕವರಿಗೆಲ್ಲ ಎಂಥಹಾತಾಶ ನೋಡು
> ಎಂದು ಗೊಣಗುತ್ತ ಹೊರನಡೆದಳು. ಪ್ರತಿಸಲದ ತಿಥಿಗೂ ಏನಾದರೊಂದು
> ಇದ್ದದ್ದೇ ಇವರದು' ಎಂದುಕೊಳ್ಳುತ್ತಲೇ ಶಾಲಿನಿ, ಗೊಜ್ಜನ್ನು ಪಾತ್ರೆಯಲ್ಲಿ

ತೆಗೆಯುತ್ತ ಅರೆಯುವ ಕಲ್ಲನ್ನು ಅಗತ್ಯಕ್ಕಿಂತ ಹೆಚ್ಚೇ ಗಡನಾಡ ಸದ್ದು
ಮಾಡಿ ತೊಳೆದಳು. ಅತ್ತೆ ಸೊಸೆಯ ಮದ್ಯೆ ತನ್ನದೊಂದು ಯಾಕೆ ರಾಮಾಯಣ
ಅಂತ ಯೋಚಿಸುತ್ತ ಸಧಾನಂದ ಏನೊಂದೂ ಕೇಳಿಸಿಕೊಳ್ಳದವನಂತೆ
ಗಂಟೆ ಆರತಿಗಳನ್ನು ಅಗರಬತ್ತಿ ಅರಿಸಿಣಕೊಂಬುಗಳನ್ನು ಹೂವಿನತಟ್ಟೆ ಹಾಗೂ
ಮಣೆಗಳನ್ನು ಜೋಡಿಸಿಟ್ಟು, ಎಲ್ಲ ಸರಿಯಾಗಿದೆಯೇ ಅಂತ ಇನ್ನೊಮ್ಮೆ
ಪರೀಕ್ಷಿಸಿದ ಏನೋ ನೆನಪಾದವರಂತೆ ಥಟ್ಟನೆ ಎದ್ದು 'ಶಾಲಿ ಸ್ವಲ್ಪ
ನವಧಾನ್ಯಹಾಕಿ ತಂದಿಡು ಭಟ್ಟರಿಗೆ ಕೊಡಲು ಎಂದು ಗೋಗರೆಯುವ
ಧಾಟಿಯಲ್ಲಿ ಹೇಳಿದ. ನನ್ನ ಕೈ ಖಾಲಿ ಇಲ್ಲ ಇಲ್ಲಿ, ನೀವೇ ನೋಡಿ ತೆಗೆದಿಡಿ
ಶಾಲಿನಿ ಒಳಗಿನಿಂದಲೇ ಗುಡುಗು ಹಾಕಿದಳು (ಪುಟು-೧೦)

ಹೇಳುವ ಧಾಟಿಗಿಂತ ತೋರಿಸುವ ಧಾಟಿ ಇವರ ಕಥೆಗಳ ವಿನ್ಯಾಸದಲ್ಲಿದೆ. ನಿತ್ಯದ ತಾಪತ್ರಗಳ ಒಳಗೇ ಜೀವನ ಪ್ರೀತಿಯನ್ನು ಕಾಣಿಸುವ ಕಲೆಗಾರಿಕೆ ಈ ಕಥೆಗಳಲ್ಲಿದೆ.

ಶಾಂತಕುಮಾರಿ ಅವರ ಕಥೆಗಳಲ್ಲಿ, ಗಂಡು ಹೆಣ್ಣಿನ ಸಂಬಂಧಗಳು ಪ್ರೇಮ ಕಾಮದ ಸುತ್ತ ಸುತ್ತುವುದನ್ನು ಕಾಣಬಹುದು. ಒಂದು ಹಂತದವರೆಗಿನ ಈ ಭಾವನೆಗಳು ಪಕ್ವಗೊಳ್ಳುವ ಮುನ್ನಿನ ಅವಸ್ಥೆಗಳಾಗಿವೆ. ಕಥೆಗಳಿಗೆ ಒಳಗಾಗುವ ಬದುಕಿನ ಕ್ಷಣಗಳಲ್ಲಿ ತಾಜಾತನಬೇಕು. ಲೋಕ ಗ್ರಹಿಕೆಯಲ್ಲಿ ಹೊಸತನವಿದ್ದರೆ ಈ ಬದುಕಿನ ಕ್ಷಣಗಳಿಗೆ ಭಿನ್ನ ನಿರೂಪಣೆ ಪ್ರಾಪ್ತವಾಗುತ್ತದೆ. ಶಾಂತಕುಮಾರಿ ಅವರ ಕಥೆಗಳು ನೋವಿಗೆ, ಮನಸ್ಸಿನ ತಲ್ಲಣಗಳಿಗೆ, ಬದುಕಿಗೆ ವ್ಯಾಖ್ಯಾನ ಪಡೆಯುತ್ತವೆ. ಇದೂ ಒಂದು ವಿನ್ಯಾಸ ಇಲ್ಲಿದೆ.

ಕಿಬ್ಬೊಟ್ಟೆಯಲ್ಲಿ ಹಿಂಡಿಬಿಟ್ಟಂತೆ, ಕೆಲವೊಮ್ಮೆ ಗರಗಸದಿಂದ
ಸೀಳಿದಂತೆ ಸೊಂಟದಲ್ಲಿ ಶುರುವಾದ ಏಳುಕು ಹಾಗೇ ತೊಡೆಯಲ್ಲಿ
ಇಬ್ಭಾಗವಾಗಿ ಸೀಳಿ ಹರಿದು ಸಣ್ಣ ನಡುಕು ಮೊಣಕಾಲುಗಳು ಚಾಮುಂಡಿ
ಬೆಟ್ಟ ಹತ್ತಿ ಇಳಿದಂತೆ ಭಾರ ಈ ಮುಟ್ಟಿನ ದಿನಗಳು ಬಂದರೆ ಹಾಗೇ (ಪು.೧)

ನಿರೂಪಡೆಯಲ್ಲಿ ನೋವಿಗೆ ವ್ಯಾಖ್ಯಾನ ನೀಡುವ ಗುಣ ಇಲ್ಲಿ ಕಾಣುತ್ತದೆ. ಇವರ ಕಥೆಗಳು ಕೇವಲ ವರ್ತಮಾನದಲ್ಲಿ ಕಳೆದುಹೋಗದೆ ಭವಿಷ್ಯದ ಕಡೆ ನಡೆಯುವ ಸಾಧ್ಯತೆಗಳನ್ನು ಹೇಳುತ್ತವೆ. ಹಾಗೆ ಮಾಡಲು ವಾಸ್ತವದ ಅರಿವಿನಷ್ಟೇ ಕಲ್ಪನೆಯೂ ಮುಖ್ಯವಾಗುತ್ತದೆ. ಜೀವನದಲ್ಲಿಇರಬಹುದಾದ ನಮಗೆಲ್ಲರಿಗೆ ಅಥವಾ ಕತೆಗಾರನಿಗೆ ಪರಿಚಿತವಾದ ಸಂಗತಿಗಳ ಮರುನಿರೂಪಣೆಯಲ್ಲ ಬದಲಾಗಿ ಒಂದು ಹೊಸ ಸಣ್ಣ ವೇಶವನ್ನೇ ಕಾಣುವ, ಕಟ್ಟುವ ಶಕ್ತಿಯು 'ವಾಸನೆ', 'ಮೀಸೆ' ಮುಂತಾದ ಕಥೆಗಳಲ್ಲಿ ಕಾಣುತ್ತೇವೆ.

ಸುಮಂಗಲ ಅವರು ಶಕ್ತ ಕತೆಗಾರ್ತಿ ಎಂದು ಗುರುತಿಸಿಕೊಂಡಿದ್ದಾರೆ. ಅವರ ಕಥೆಗಳಲ್ಲಿ ಸ್ವಗತ ಮಾದರಿ ಕಂಡುಬರುತ್ತದೆ. ಇದೊಂದು ರೀತಿಯ ಜನಪ್ರಿಯ ಕ್ರಮ. ಜೊತೆಗೆ ಮನಸ್ಸಿನ ಭಾವನೆಗಳನ್ನು

ನಿರೂಪಿಸಲು ಅಡೆತಡೆಗಳು ಇರುವುದಿಲ್ಲ. ಹುಟ್ಟು ಭಾವನೆಗಳು ನಿರಂತರವಾಗಿ ಹುಟ್ಟುತ್ತಲೇ ಇರುವುದನ್ನು ನಿಯಂತ್ರಿಸುವ ಕಲೆಗಾರಿಕೆ ಇಲ್ಲಿ ಇದೆ. ಆದರೂ ಸಾಮಾಜಿಕ ವಸ್ತು, ವಿಷಯಗಳು ಇವರ ಕಥೆಗಳಲ್ಲಿ ಇವೆ. ಮನುಷ್ಯ ಸಂಬಂಧಗಳು ಜಾತಿ ಮೀರಿಯೂ ಮಿಡಿಯುತ್ತವೆ. ಕುಟುಂಬದ ಒಳಗಿನ ರಾಗ ದ್ವೇಷಗಳ ನಡುವೆ ಪ್ರೀತಿ ಜಿನುಗುವಂತೆ ಹೊರ ಸಂಬಂಧಗಳಲ್ಲಿಯೂ ಇದು ಕಾಣುತ್ತದೆ. ಸಮಾಜದಲ್ಲಿ ಕಾಣುವ ಅನೇಕ ಮುಖಗಳು ಇವರ ಕತೆಯಲ್ಲಿ ಬರುತ್ತವೆ. ಕೇವಲ ಕುಟುಂಬದ ಒಳಗೇ ಸುತ್ತುವುದಿಲ್ಲ. ಸಮಾಜದಲ್ಲಿ ವ್ಯಕ್ತವಾಗುವ ಸಾಮಾನ್ಯ ಅನ್ನಿಸುವ ಬದುಕಿನ ಘಟನೆಗಳನ್ನು ಕಥೆಯಾಗಿರುವ ಕಲೆ ಇವರಿಗೆ ದಕ್ಕಿದೆ. ಹೀಗಾಗಿ ಕುಟುಂಬ, ಸಮಾಜ ಹಾಗೂ ವ್ಯಕ್ತಿಗತಿ ವಿಷಯಗಳನ್ನು ಒಂದು ಮಾನವೀಯ ನೆಲೆಯಲ್ಲಿ ಮುಕ್ತಾಯಗೊಳಿಸುವ ಕ್ರಮ ಮೆಚ್ಚುವಂತದ್ದು.

ಇವರ ಹಾಗೆ ಇನ್ನೊಬ್ಬ ಮುಖ್ಯ ಕಥೆಗಾರರು ರಾಜಲಕ್ಷ್ಮಿ ಕೋಡಿಬೆಟ್ಟು. ಇದರೂ ಕರವಾಳಿಯ ಪ್ರಾದೇಶಿಕತೆಯನ್ನು ಕಥೆಯಲ್ಲಿ ಮೂಡಿಸಿದ್ದಾರೆ. ಕರಾವಳಿ ಪ್ರಾಂತ್ಯದ ಸಂಘರ್ಷಗಳೂ ಇವರ ಕಥೆಗಳಲ್ಲಿ ವ್ಯಕ್ತವಾಗಿವೆ. ಬದುಕಿನ ಅನುಭವಗಳಿಗೆ ಎರಡು ಆಯಾಮಗಳಿರುತ್ತವೆ. ಸಾಮಾಜಿಕವಾದದ್ದು, ವೈಯಕ್ತಿಕವಾದದ್ದು, ಹಾಗೆ ನೋಡಿದರೆ ಇವೆರಡು ಅಭಿನ್ನವಾಗುವ ಸಾಧ್ಯತೆಗಳಿವೆ. ಭಿನ್ನವಾಗುವ ಸಾಧ್ಯತೆಗಳೂ ಇವೆ. ರಾಜಲಕ್ಷ್ಮಿ ಅವರ ಕಥೆಗಳಲ್ಲಿ ಅಭಿನ್ನತೆ ಇದೆ. ಆದರೂ ಒಂದು ಗೆರೆ ಕಂಡರೂ ಅದು ಡಾಳವಾಗಿಯಲ್ಲಿ ಅಂತಿಮವಾಗಿ ಅನುಭವ ಸಾಮಾಜಿಕವಾದದ್ದೇ ಇರಲಿ, ವೈಯಕ್ತಿಕವಾದದ್ದೇ ಇರಲಿ, ಮಾನವೀಯತೆ ಕಾಣುವುದೇ ಇಲ್ಲಿನ ಕಥೆಗಳ ವಿರೋಧ. ಕರಾವಳಿಯ ಕೋಮು ಸಂಘರ್ಷವನ್ನು ಮುಚ್ಚಿಡುವ ಮನಸ್ಸುಗಳಿರುತ್ತವೆ. ಆದರೆ ಈ ಕಥೆಗಳಲ್ಲಿ ಅದೂ ವ್ಯಕ್ತವಾಗುತ್ತದೆ. ಪರ ವಿರೋಧದ ನೆಲೆಯಲ್ಲಿ ಅಲ್ಲ. ಅದರೊಳಗಿನ ಮಾನವೀಯ ಮುಖವನ್ನು ಕಥೆ ತೋರಿಸುತ್ತದೆ. ಇದು ಈ ಕಥೆಗಳ ವಿನ್ಯಾಸದಲ್ಲಿದೆ.

ವಿನಯ, ಸಂಧ್ಯಾ ಹೊನಕುಂಟೆಕರ್ ಅವರು ತಮ್ಮ ಕತೆಗಳಲ್ಲಿ ಮಹಿಳಾ ಕಾಳಜಿಗಳು ಎದ್ದು ಕಾಣುತ್ತವೆ. ಸಾಮಾಜಿಕ ಸಂದರ್ಭದಲ್ಲಿಯಾಗಲಿ, ವೈಯಕ್ತಿಕ ನೆಲೆಯಲ್ಲಿಯಾಗಲಿ ಮಹಿಳೆ ತನಗಾಗುವ ಮುಜುಗರಗಳನ್ನು ಬಹುಸೂಕ್ಷ್ಮವಾಗಿ ಚಿತ್ರಿಸಿದ್ದಾರೆ.

ಅಡಿಟಿಪ್ಪಣಿ

೦೧. ಸುನಂದಾ ಪ್ರಕಾಶ ಕಡಮೆ, ಗಾಂಧೀ ಚಿತ್ರದ ನೋಟು, ಛಂದ ಪುಸ್ತಕ ಪ್ರಕಾಶನ, ೨೦೦೮, ಪು.೧೦

೦೨. ಶಾಂತ ಕುಮಾರಿ, ಮುಟ್ಟು, ಸುಮುಖ ಪ್ರಕಾಶನ, ಪು.೦೧

ಅಧ್ಯಾಯ - ಆರು

ಸಂದರ್ಶನ

ಅಧ್ಯಾಯ - ಆರು

ಸಂದರ್ಶನ

ಎಚ್.ನಾಗವೇಣಿ ೦೧.೧೦.೨೦೦೮

ಸಂದರ್ಶಕರು ಶಕೀಲಾ .ಕೆ

೧. ನಿಮ್ಮ ಬಾಲ್ಯದ ಅನುಭವಗಳು ನಿಮ್ಮ ಕಥೆಗಳಲ್ಲಿ ಮರು ಸೃಷ್ಟಿಯಾದ ಬಗೆಯನ್ನು ತಿಳಿಸುವಿರಾ?

☞ ಇದುವರೆಗೆ ನಾನು ತಮಣಿಸಿದ ಬದುಕಿನ ಕಾಲಘಟ್ಟಗಳಲ್ಲಿ ನನಗೆ ಇಷ್ಟವಾದ ಕಾಲಘಟ್ಟವೆಂದರೆ ನನ್ನ ಬಾಲ್ಯ, ಅದು ಇಂದಿಗೂ ಬರಿದಾಗದ ಅವಿಸ್ಮರಣೀಯ ಸಂಗತಿ- 'ವಿಸ್ಮಯಗಳ ಗಣಿ ನನ್ನ ಸೃಜನಶೀಲ ಅಭಿವ್ಯಕ್ತಿಯ ಸಂದರ್ಭದಲ್ಲಿ ನಾನು ಕಂಡುಂಡು ಅನುಭವಿಸಿದ ಬಾಲ್ಯದ ಪರಿಸರ ಪಾತ್ರಗಳು ನನಗೆ ಆಪ್ತಮಿತ್ರತ್ವವಾಗಿ ನನ್ನ ಮನದಂಗಳದಿಂದ ದಿಗಿಣ ತೆಗೆದು ನೆಗೆದು ಬರುತ್ತಿವೆಯೇ ವಿನಹ ಅವು ಪ್ರಜ್ಞಾಪೂರಕವಾದ ಮರುಸೃಷ್ಟಿಯಲ್ಲ.

೨. ನಿಮ್ಮ ಬಾಲ್ಯದ ಪರಿಸರ ಅಂದರೆ ಹುಟ್ಟಿ ಬೆಳೆದ ಪ್ರದೇಶದ ಜೀವನ ವಿಧಾನ ನಿಮ್ಮ ಕತೆಗಳಲ್ಲಿ ತುಂಬಿಕೊಂಡಿದೆ ಎಂದು ಅನಿಸುತ್ತದೆ. ಬಾಲ್ಯವನ್ನು ಮೀರಿ ಈಗ ಬದುಕುತ್ತಿರುವ ಪರಿಸರ ನಿಮ್ಮ ಕತೆಗಳಲ್ಲಿ ಕಂಡುಬರುವುದು ಕಡಿಮೆ. ಇದು ನಿಮ್ಮ ಸಮಸ್ಯೆಯ ಬಹುತೇಕ ಕಥೆಗಾರರ ಸಮಸ್ಯೆ ಇದಕ್ಕೆ ನಿಮ್ಮ ಅಭಿಪ್ರಾಯವೇನು?

☞ ನಾನು ನನ್ನ ನೆಲದ ಎಲ್ಲ ಸಂವೇದನೆ ವಿಶಿಷ್ಟತೆಯನ್ನು ಹೀರಿಕೊಂಡು ಬೆಳೆದವಳು... ಅದೇ ಸಂವೇದನೆಯನ್ನು ಇಟ್ಟುಕೊಂಡು ಕಲಾ ಸೃಷ್ಟಿಗೂ ಹೊರಟವಳು.

ಯಾವುದೇ ನೆಲದ ಸರಕನ್ನು ಹಿಡಿದು ಕಾಥಸೃಷ್ಟಿಗೆ ತೊಡಗಿದಾಗ ಅಲ್ಲಿನದೇ ಭಾಷೆ, ನುಡಿಗಟ್ಟು, ಪರಿಸರ, ಸಂಸ್ಕೃತಿ ಬದುಕುವ ಕ್ರಮ... ಹೀಗೇ ಎಲ್ಲವೂ ಆ ನೆಲದ್ದೆ ಆಗಿದ್ದರೆ ಮಾತ್ರ ಆ ಹುಟ್ಟುವ ಕತೆಗೆ ಸಹಜತೆ ಮತ್ತು 'ಆರೋಗ್ಯ' ಪ್ರಾಪ್ತಿಯಾಗುತ್ತದೆ. ಎಂಬುದು ಎಲ್ಲ ಕತೆಗಾರರಿಗೂ ತಿಳಿದದ್ದೆ.

ನನ್ನಂತಹ ಅಂದರೆ ತನ್ನ ಹುಟ್ಟುನೆಲವನ್ನು ಮಾತ್ರವೇ ಉತ್ಕಟವಾಗಿ ಹುಚ್ಚಿಕೊಳ್ಳುವ ದೌರ್ಬಲ್ಯವಿರುವ ಕತೆಗಾರರು, ಬೇರೆ ನೆಲದಲ್ಲಿ ನಿಂತು ಆ ಪರಿಸರದ ಕತೆಯನ್ನು ಬರೆಯುವಾಗ ಹೊಸ ಪರಿಸರದಲ್ಲಿ ಕತಾ ಸೃಷ್ಟಿಯ ಸಹಜತೆಗೆ ಮೇಲೆ ಹೇಳಿರುವಂತಹ ಹಲವು ಅಡ್ಡಿ ಆತಂಕಗಳು ಬಂದೊದಗುವ ಸಾಧ್ಯತೆಗಳಿರುವುದರಿಂದ 'ಅನ್ಯ ಪರಿಸರ'ವನ್ನು ನಮ್ಮ ಕತೆಗಳಲ್ಲಿ ಕಾಣಿಸುವುದು ಸ್ವಲ್ಪ ಕಡಿಮೆ ಎಂದೇ ನಾನು ಒಪ್ಕೋತೀನಿ.

ಆದರೂ, ನಾನು ಹುಟ್ಟೂರು ಬಿಟ್ಟು ಗಟ್ಟವೇರಿ ಸುಮಾರು ಹದಿನೇಳು ವರುಷಗಳು ಕಳೆದು ಇದೀಗ 'ಹೊಸ ನೆಲ'ದ ಪರಿಚಯ ಸಾಕಷ್ಟು ಆಗಿರುವುದರಿಂದ ಈಗ ಬದುಕುತ್ತಿರುವ ಪರಿಸರದಲ್ಲಿ ಸಿಗುವ ಕತಾ ವಸ್ತುವನ್ನು ನಾನು ನಿರ್ವಹಿಸಲು ಪಳಗಿದ್ದೇನೆ. ಅದು ನನಗಿಲ್ಲ ಸಮಸ್ಯೆ.

೩. ಸಮಕಾಲೀನ ಬದುಕು ಕತೆಯಲ್ಲಿ ಮರು ಸೃಷ್ಟಿಸುವುದು ಸಮಸ್ಯೆಯ ವಿವರಿಸಿ?

☞ ಯಾವುದೇ ಕತೆಗಾರನಿಗೆ ಸಮಕಾಲೀನ ಬದುಕನ್ನು ಕತೆಯಲ್ಲಿ ಮರುಸೃಷ್ಟಿಸುವುದು ಯಾಕೆ ಸಮಸ್ಯೆ ಅಥವಾ ಕಷ್ಟ ಆಗ್ಬೇಕು?! ನಿನ್ನೆಯ ಬದುಕನ್ನು ಸೃಜನಶೀಲವಾಗಿ ದಾಖಲಿಸಲು ನಾನು ಸಮರ್ಥಳಿರುವಾಗ ಈಗಿನ ಬದುಕನ್ನು ಮರುಸೃಷ್ಟಿಸಲು ನನಗೆ ಸಾಮರ್ಥ್ಯ ಇಲ್ಲವೆ?! ಈ ಸಮಕಾಲೀನ ಬದುಕಿನ ವ್ಯಂಗ್ಯ-ದ್ವಂದ್ವ-ಅಸಹನೆ-ತಲ್ಲಣಗಳನ್ನು ನಾನು ಸೃಜನಶೀಲವಾಗಿ ಅಭಿವ್ಯಕ್ತಿಸಲು ನಾನು ಸದಾ ಕಾತರಳಾಗಿರುತ್ತೇನೆ. ವರ್ತಮಾನದ ತಲ್ಲಣಗಳನ್ನು ನನ್ನ ಕತೆಯಲ್ಲಿ ಮರುಸೃಷ್ಟಿಸುವುದು ನನಗೆ ಇಷ್ಟದ ವಿಚಾರ.

೪. ಮಹಿಳೆಗೆ ತನ್ನ ಅನುಭವಗಳ ಅಭಿವ್ಯಕ್ತಿಗೆ ಒಂದು ಭಾಷೆ ಇದೆ. ಅದು ಪುರುಷ ಭಾಷೆ ಹೆಣ್ಣಿನ ಭಾಷೆಯನ್ನು ರೂಪಿಸಿಕೊಳ್ಳಲು ಪ್ರಯತ್ನಿಸಿದ್ದೀರೇನು ಅಥವಾ ಇದನ್ನು ಹೇಗೆ ಗ್ರಹಿಸುತ್ತೀರಿ?

☞ ಇದು ಪುರುಷ ಭಾಷೆ ಅದು ಹೆಣ್ಣಿನ ಭಾಷೆ ಎಂದು ಪರಂಪರೆಯಿಂದಲೇ ಒಂದು ಭಾಷಾ ಚೌಕಟ್ಟನ್ನು ಈ ಪುರುಷ ಪ್ರಧಾನ ಸಮಾಜ ನಮಗೆ ಹಾಕಿಕೊಟ್ಟಿದ್ದೂ ನಿಜ..., ಕೆಲವು ಬರಹಗಾರ್ತಿಯರು ತಮ್ಮ ಅನುಭವಗಳ ಅಭಿವ್ಯಕ್ತಿಗೆ ಆ 'ಭಾಷಾ ಚೌಕಟ್ಟ'ನ್ನು ಒಪ್ಪಿಕೊಂಡಿದ್ದೂ ನಿಜ. ಆದರೆ ಈಗ ಕಾಲ ಬದಲಾಗಿದೆ. ನಾನು ಭಾಷೆಯಲ್ಲಿನ 'ಲಿಂಗಭೇದ'ವನ್ನು ಎಂದೂ ಒಪ್ಪದಿರುವ ಕಾರಣ ನನ್ನ ಸೃಜನಶೀಲ ಅಭಿವ್ಯಕ್ತಿಗೆ... ನನ್ನ ಆಲೋಚನೆಗೆ-ಅನುಭವ-ವಸ್ತು-ಪಾತ್ರ ಸನ್ನಿವೇಶಕ್ಕೆ ತಕ್ಕಂತೆ ಈ ಪುರುಷ ಪ್ರಧಾನ ವ್ಯವಸ್ಥೆಯಲ್ಲಿನ ಭಾಷೆಯನ್ನು ನಿರ್ಭಿಡೆಯಿಂದ ಬಳಸಿದ್ದೇನೆ. ಬಳಸುತ್ತೇನೆ ಹೆಣ್ಣಿನ ಭಾಷೆಯನ್ನು ರೂಪಿಸಿಕೊಳ್ಳುವ ಅಗತ್ಯ ನನಗೆ ಬಂದೇ ಇಲ್ಲ ಬರುವುದೂ ಇಲ್ಲ.

೫. ಪರಂಪರೆಯನ್ನು ಗ್ರಹಿಸಿ ಅಥವಾ ಓದಿನಿಂದ ಪಡೆದು ಬರೆಯುತ್ತೀರಾ ಅಥವಾ ಹಿಂದಣ ಹೆಜ್ಜೆಗಳ ಹಂಗು ಬೇಡ ಎನ್ನುತ್ತೀರಾ?

☞ ಹಿಂದಣ ಹೆಜ್ಜೆಗಳ ಹಂಗು ಬೇಡ ಎನ್ನಲಾದೀತೆ? ಹಿಂದಣ ಹೆಜ್ಜೆಗಳ ಆಳ ಅಗಲ ನೋಡಿ ಕೊಂಡೇ ನಾನು ಸೃಜನಶೀಲವಾಗಿ ಮುಂದಣ ಹೆಜ್ಜೆ ಇಟ್ಟವಳು. ಪರಂಪರೆಯ ವಿಚಾರಗಳನ್ನು

ಹಿಂದಣ ಹೆಜ್ಜೆಗಳ ಮೂಲಕವೇ ಅರಿತುಕೊಂಡು ಅವುಗಳನ್ನು ಆಧುನಿಕ ದೃಷ್ಟಿಕೋನದಲ್ಲಿಟ್ಟು ತೂಗುವುದು ನನಗೆ ಪ್ರಿಯವಾದ ವಿಚಾರ. ಸಾಹತ್ಯದ ವಿಚಾರದಲ್ಲಂತು ಪರಂಪರೆಯನ್ನು ಸಾರಾಸಗಟಾಗಿ ತಳ್ಳಿ ಹಾಕಲು ನನ್ನಿಂದ ಸಾಧ್ಯವೇ ಇಲ್ಲ. ನಾನು ಪರಂಪರೆಯನ್ನು ಓದಿನಿಂದ ಮತ್ತು ಹಳೆಯ ತಲೆಮಾರಿನವರಿಂದ ತಿಳಿದುಕೊಂಡು ಬರೆದವಳು.

೬. ಸಮಕಾಲೀನ ಮಹಿಳಾ ಅಭಿವ್ಯಕ್ತಿ ನಿಮ್ಮ ಅನಿಸಿಕೆಗಳೇನು?

☞ ಮಹಿಳೆಯ ಗ್ರಹಿಕೆ ಆಲೋಚನೆಯ ದಿಕ್ಕು ಈಗ ಬದಲಾಗಿದೆ. ಆಕೆಯ ಅನುಭವ ಲೋಕವೂ ವಿಸ್ತಾರಗೊಂಡಿದೆ. ಪುರುಷಭಯದಿಂದ ಆಕೆ ಸ್ವಲ್ಪ ಮುಕ್ತಳಾಗಿದ್ದಾಳೆ. ಎಂದನಿಸುತ್ತೆ. ಈ ಹಿನ್ನಲೆಯಲ್ಲಿ ಮಹಿಳೆಯರು ವಿಭಿನ್ನವಾಗಿ ಮತ್ತು ಧೈರ್ಯವಾಗಿ ತಮ್ಮ ಆಲೋಚನೆ ಅಂತರಂಗವನ್ನು ಅಭಿವ್ಯಕ್ತಿಸಿಕೊಳ್ಳುತ್ತಿದ್ದಾರೆ. ಇದುವರೆಗೂ ಅಡುಗೆ ಮನೆಯಲ್ಲಿದ್ದ ಮಹಿಳೆ ಮೇಲಂಗಳಕ್ಕೆ ಬಂದು ಬರೆಯತೊಡಗಿದ ನಂತರ ಸಾಕಷ್ಟು ಮಹತ್ವದ ಕೃತಿಗಳು ಪ್ರಕಟಗೊಳ್ಳತೊಡಗಿದೆ.

೭. ವೃತ್ತಿ ಜೀವನ ಹಾಗೂ ಬದಲಾವಣೆ ಇವುಗಳ ಸಂಬಂಧವನ್ನು ಹೇಗೆ ಗ್ರಹಿಸುತ್ತೀರಿ?

☞ ವೃತ್ತಿಜೀವನ ಮಹಿಳೆಗೆ 'ಹೊಸ ಲೋಕ'ವನ್ನು ಪ್ರಾಪ್ತಿ ಮಾಡಿದೆ. ಆ ಲೋಕವನ್ನು ಮಹಿಳೆ ತನ್ನ ಸೃಜನಶೀಲ ಬರವಣಿಗೆ ಸಂದರ್ಭದಲ್ಲಿ ದಾಖಲಿಸದಿದ್ದರೆ ಹೇಗೆ ವೃತ್ತಿ ಜೀವನ ನನ್ನ ಸೃಜನಶೀಲ ಸಮಯವನ್ನು ನುಂಗಿಹಾಕುತ್ತಿದೆ. ಎಂಬ ಅಸಮಧಾನ ಇದ್ದರೂ ಅದು ನೀಡಿರುವ ಆರ್ಥಿಕ ಸ್ವಾತಂತ್ರ್ಯ ವಿಶಿಷ್ಟ ಅನುಭವ ನನ್ನ ಬರವಣಿಗೆ ಮತ್ತು ಆಲೋಚನೆಯ ವ್ಯಾಪ್ತಿಯನ್ನು ಸಾಕಷ್ಟು ಹಿಗ್ಗಿಸಿದೆ.

ಕೋಡಿಬೆಟ್ಟು ರಾಜಲಕ್ಷ್ಮಿ

೧. ನಿಮ್ಮ ಬಾಲ್ಯದ ಅನುಭವಗಳು ನಿಮ್ಮ ಕಥೆಗಳಲ್ಲಿ ಮರುಸೃಷ್ಟಿಯಾದ ಬಗೆಯನ್ನು ತಿಳಿಸುವಿರಾ?

☞ ನನ್ನ ಕತೆಗಳ ಒಟ್ಟು ಹೊರಣದ ಬಗ್ಗೆ ಚರ್ಚೆಯಾಗಿದ್ದು ಸಂಕಲನ ಬಿಡುಗಡೆಯಾದ ನಂತರ ಹುಟ್ಟೂರಿನಿಂದ ಬೆಂಗಳೂರಿಗೆ ಬಂದ ಮೇಲೆ ಕತೆಗಳನ್ನು ಬರೆಯಲು ಶುರುಮಾಡಿದ್ದರಿಂದ ಸಹಜವಾಗಿಯೇ ನನ್ನ ಬಳಿ ಇದ್ದ ಅನುಭವ ಬಾಲ್ಯಕ್ಕೆ ಸಂಬಂಧಿಸಿದ್ದೇ ಆಗಿತ್ತು. ಬಹುಶಃ ೨೦-೨೫ರ ವಯಸ್ಸಿನಲ್ಲಿ ಕತೆ ಬರೆಯಲು ಶುರು ಮಾಡುವ ಹೆಚ್ಚಿನವರಿಗೆ ಈ ಸ್ಥಿತಿ ಸಾಮಾನ್ಯ ಎನಿಸುತ್ತದೆ. ಹಾಗೆಯೇ ಅನುಭವಗಳನ್ನು ನನ್ನ ಅವಲೋಕನದ ಪರಿಮಾಣಕ್ಕೆ ತಕ್ಕಂತೆ ಮರುಸೃಷ್ಟಿಯಾಗಿರಬಹುದು ಅನಿಸುತ್ತದೆ.

೨. ನಿಮ್ಮ ಬಾಲ್ಯದ ಪರಿಸರ ಅಂದರೆ ಹುಟ್ಟಿ ಬೆಳೆದ ಪ್ರದೇಶದ ಜೀವನ ವಿಧಾನ ನಿಮ್ಮ ಕತೆಗಳಲ್ಲಿ ತುಂಬಿಕೊಂಡಿದೆ ಎಂದು ಅನಿಸುತ್ತದೆ. ಬಾಲ್ಯವನ್ನು ಮೀರಿ ಈಗ ಬದುಕುತ್ತಿರುವ ಪರಿಸರ ನಿಮ್ಮ ಕತೆಗಳಲ್ಲಿ ಕಂಡುಬರುವುದು ಕಡಿಮೆ. ಇದು ನಿಮ್ಮ ಸಮಸ್ಯೆಯ ಬಹುತೇಕ ಕಥೆಗಾರರ ಸಮಸ್ಯೆ ಇದಕ್ಕೆ ನಿಮ್ಮ ಅಭಿಪ್ರಾಯವೇನು?

☞ ಇದು ಸಮಸ್ಯೆಯಲ್ಲ, ಅತ್ಯಂತ ಸಹಜವಾದ ಪ್ರಕ್ರಿಯೆ, ಪ್ರತಿ ದಿನವೂ ಹೊಸದು, ಪ್ರತಿದಿನವೂ ಭಿನ್ನವೇ ಆದರೆ ವೈಚಿತ್ರ್ಯ ಭಿನ್ನತೆಯನ್ನು ಬದುಕು ಕ್ಷಣ ಕ್ಷಣವೂ ಗ್ರಹಿಸುತ್ತಲೇ ಇರುತ್ತದೆ. ಈ ಗ್ರಹಿಕೆ ಅಂತರಾಳದಲ್ಲಿ ತೀರಾ ನಿಧಾನವಾದ ಆದರೆ ತೀರಾ ನಿರಂತರವಾದ ಬದಲಾವಣೆಯೊಂದನ್ನು ರೂಪಿಸುತ್ತಾ ಸಾಗುತ್ತದೆ. ಈ ಅಂತರಾಳದಲ್ಲಿಯೇ ಬದುಕಿನ ಪ್ರತಿಕ್ರಿಯಾತ್ಮಕ ರೂಪದ ಸಾಹಿತ್ಯ ಪ್ರತಿಮೆಗಳು ಹುಟ್ಟುತ್ತೇವೆ ಎನಿಸುತ್ತದೆ. ಅಂದ ಮೇಲೆ ಪ್ರಸ್ತುತ ಬದುಕುತ್ತಿರುವ ಪರಿಸರ ತಕ್ಷಣವೇ ಕಥಾ ರೂಪ ಪಡೆಯುವುದು ವಿರಳ. ಪ್ರಸ್ತುತ ಅನುಭವಗಳು ಮಾಗುವಷ್ಟು ಹೊತ್ತು ಕಾಯಲೇಬೇಕು ಸಂದರ್ಭವೊಂದಕ್ಕೆ ಆಯಾಕ್ಷಣದಲ್ಲೇ ಪ್ರತಿಕ್ರಿಯೆ ಬಯಸುವುದು ಸಾಹಿತ್ಯ ಸಂದರ್ಭದಲ್ಲಿ ಸರಿಯಲ್ಲ.

೩. ಸಮಕಾಲೀನ ಬದುಕು ಕತೆಯಲ್ಲಿ ಮರುಸೃಷ್ಟಿಸುವುದು ಸಮಸ್ಯೆಯ ವಿವರಿಸಿ

☞ ಸಾಹಿತ್ಯ ಬದುಕಿನ ಪ್ರತಿಬಿಂಬ ಎಂದ ಮೇಲೆ ಅಲ್ಲಿ ಬದುಕು ಇರಲೇಬೇಕಲ್ಲವೇ? ನಾವು ಬದುಕುತ್ತಿರುವುದು ವರ್ತಮಾನವನ್ನು ನಿರ್ಲಕ್ಷಿಸುವುದು ಯಾರಿಂದಲಾದರೂ ಹೇಗೆ ಸಾಧ್ಯ. ನಮ್ಮ ಬದುಕನ್ನು ಬದುಕಿನ ತವಕ ತಲ್ಲಣಗಳನ್ನು ಬೇರೆ ಬೇರೆ ರೂಪದಲ್ಲಿ ಸೃಷ್ಟಿಸಿಕೊಳ್ಳುತ್ತವೆ. ಸಾಹಿತ್ಯ, ಪೇಟಿಂಗ್, ಸಿನಿಮಾ, ಕನಸು ಯಾವ ರೂಪದಲ್ಲಾದರೂ.

೪. ಮಹಿಳೆಗೆ ತನ್ನ ಅನುಭವಗಳ ಅಭಿವ್ಯಕ್ತಿಗೆ ಒಂದು ಭಾಷೆ ಇದೆ. ಅದು ಪುರುಷ ಭಾಷೆ, ಹೆಣ್ಣಿನ ಭಾಷೆಯನ್ನು ರೂಪಿಸಿಕೊಳ್ಳಲು ಪ್ರಯತ್ನಿಸಿದ್ದಿರೇನು ಅಥವಾ ಇದನ್ನು ಹೇಗೆ ಗ್ರಹಿಸುತ್ತೀರಿ?

☞ ನನಗೆ ಅನಿಸಿದ್ದನ್ನು ನನ್ನ ಭಾವನೆಗಳನ್ನು ಗಮನಿಸಿಕೊಂಡು ಬರೆಯುವಾಗ ಅದರ ತೀವ್ರತೆ ಅಕ್ಷರಗಳಲ್ಲಿ ವ್ಯಕ್ತವಾಗಿದೆ ಎಂಬ ಬಗ್ಗೆಯಷ್ಟೆ ಎಚ್ಚರ ವಹಿಸಿದ್ದೇನೆ. ಅದು ನನ್ನದೇ ಭಾಷೆ ತೀವ್ರತೆಯಾಗಲಿ, ಪ್ರತಿಕ್ರಿಯೆಗೆ ಸಂಬಂಧಿಸಿದಂತಾಗಲಿ, ನಾನು ಬೆಳೆದು ಬಂದಾಗ ನನ್ನಲ್ಲಿಯೇ ರೂಪಿಸಲ್ಪಟ್ಟ ಭಾಷೆ ಮತ್ತು ಶೈಲಿ ನನಗೆ ಮೆಚ್ಚಿನಿಸುತ್ತದೆ. ಅಲ್ಲಿ ಸ್ತ್ರೀ ಪುರುಷ ಭಾಷೆ ಎನ್ನುವ ಪ್ರಜ್ಞಾಪೂರ್ವಕ ಆಯ್ಕೆಯನ್ನು ನಾನು ಮಾಡಿಲ್ಲ. ಅಂಥ ಪ್ರತ್ಯೇಕ ಭಾಷೆಗಳಿವೆ ಎಂದೂ ನನಗನಿಸಿಲ್ಲ.

೫. ಪರಂಪರೆಯನ್ನು ಗ್ರಹಿಸಿ ಅಥವಾ ಓದಿನಿಂದ ಪಡೆದು ಬರೆಯುತ್ತೀರಾ? ಅಥವಾ ಹಿಂದಣ ಹೆಜ್ಜೆಗಳ ಹಂಗು ಬೇಡ ಎನ್ನುತ್ತೀರಾ?

☞ ಪರಂಪರೆಯ ಓದು ನಮ್ಮ ಚಿಂತನಾ ವ್ಯಾಪ್ತಿಯನ್ನು ಸದಾ ಹಿಗ್ಗಿಸುತ್ತದೆ. ಅದರ ಹಂಗು ಬೇಡ ಎನ್ನಲಾಗದು.

೬. ಸಮಕಾಲೀನ ಮಹಿಳಾ ಅಭಿವ್ಯಕ್ತಿ ನಿಮ್ಮ ಅನಿಸಿಕೆಗಳೇನು?

☞ ಮಹಿಳೆ ಬದುಕಿನ ಹರವು ಈಗ ಹಿಗ್ಗಿದೆ, ಅನುಭವಗಳ ವ್ಯಕ್ತಿಯೂ ಕೂಡ ಸ್ಪರ್ಧೆಯ ಒಘುದಲ್ಲಿ ಅನಗತ್ಯ ವಿಚಾರಗಳಿಗೂ ತೆರೆದುಕೊಳ್ಳುವಂತಾಗಿದೆ. ಆದರೆ ವಿಸ್ತಾರ ಇನ್ನಷ್ಟು ಹರುಳು

ಗಟ್ಟಿದಾಗ ಪ್ರಭಾವಶಾಲಿ ಅಭಿವ್ಯಕ್ತಿ ಸಾಧ್ಯ ಎನಿಸುತ್ತದೆ. ಆದರೆ ಈಗಿನ ವೇಗದ ಯುಗದಲ್ಲಿ ಎಲ್ಲ ಕ್ಷೇತ್ರಗಳಲ್ಲಿಯೂ ಅಸ್ತಿತ್ವ ಹೊಂದಿರುವ ಮಹಿಳೆ ಸಾಕಷ್ಟು ಉತ್ತಮ ಕೃತಿಗಳನ್ನು ನೀಡಿದ್ದಾಳೆ.

೭. ವೃತ್ತಿ ಜೀವನ ಹಾಗೂಬ ಬರವಣಿಗೆ ಇವುಗಳ ಸಂಬಂಧವನ್ನು ಹೀಗೆ ಗ್ರಹಿಸುತ್ತಿರಿ?

☞ ವೃತ್ತಿ ಜೀವನ ಬರಹಕ್ಕೆ ಪೂರಕ ಎನಿಸುತ್ತದೆ. ವೃತ್ತಿ ಬದುಕಿನ ಆಯಾಮ ನೀಡುವ ಅನುಭವಗಳು ಬರವಣಿಗೆಗಳ ವ್ಯಾಪ್ತಿಯನ್ನು ವಿಸ್ತರಿಸುತ್ತವೆ.

ಸುಮಂಗಲಾ

೧. ನಿಮ್ಮ ಬಾಲ್ಯದ ಅನುಭವಗಳು ನಿಮ ಕಥೆಗಳಲ್ಲಿ ಮರು ಸೃಷ್ಟಿಯಾದ ಬಗೆಯನ್ನು ತಿಳಿಸುವಿರಾ?

☞ ನನ್ನ ಈ ವರಗಿನ ಕಥೆಗಳನ್ನು ಓದಿದರೆ ಬಾಲ್ಯದ ಅನುಭವಗಳು ಕಥೆಯಲ್ಲಿ ಅನಾವರಣಗೊಂಡಿದ್ದು ಕಡಿಮೆ ಎಂದು ನಿಮಗೇ ಗೊತ್ತಾಗುತ್ತದೆ. ಅಲ್ಲಿ ಇಲ್ಲಿ ಆ ಅನುಭವಗಳು ಹೊಳಹು ಇದೆ. ಇಲ್ಲವೇ ಇಲ್ಲವೆನ್ನಲಾರೆ. ಆದರೆ ಆ ಅನುಭವಗಳು ಪ್ರಸ್ತುತ ಬದುಕಿಗೆ ಕೊಂಡಿಯಾಗಿಯೇ ಬಂದಿದೆ ಎಂದು ನನ್ನ ಅಭಿಪ್ರಾಯ

೨. ನಿಮ್ಮ ಬಾಲ್ಯದ ಪರಿಸರ ಅಂದರೆ ಹುಟ್ಟಿ ಬೆಳೆದ ಪ್ರದೇಶದ ಜೀವನ ವಿಧಾನ ನಿಮ್ಮ ಕಥೆಗಳಲ್ಲಿ ತುಂಬಿಕೊಂಡಿದೆ ಎಂದು ಅನ್ನಿಸುತ್ತದೆ. ಬಾಲ್ಯವನ್ನು ಮೀರಿ ಈಗ ಬದುಕುತ್ತಿರುವ ಪರಿಸರ ನಿಮ್ಮ ಕಥೆಗಳಲ್ಲಿ ಕಂಡು ಬರುವುದು ಕಡಿಮೆ. ಇದು ನಿಮ್ಮ ಸಮಸ್ಯೆಯಲ್ಲಿ, ಬಹುತೇಕ ಕಥೆಗಾರರ ಸಮಸ್ಯೆ. ಇದಕ್ಕೆ ನಿಮ್ಮ ಅಭಿಪ್ರಾಯವೇನು?

☞ ನೀವು ಪ್ರಾಯಶ ನನ್ನ ಎರಡೂ ಕಥಾ ಸಂಕಲನಗಳನ್ನು ಸಮಗ್ರವಾಗಿ ಗ್ರಹಿಸಿದ್ದರೆ ಈ ಪ್ರಶ್ನೆಯನ್ನು ನನಗೆ ಕೇಳುತ್ತಿರಲಿಲ್ಲ ಎನ್ನಿಸುತ್ತದೆ. ಜುಮುರುಮಳೆ ಕಥಾ ಸಂಕಲನದಲ್ಲಿಯಾಗಲೀ (ಅಥವಾ ಅದಕ್ಕಿಂತ ಮೊದಲಿನ ೮ ಕಥೆಗಳ ಸೀತಾಳೆ ಹೂ ಮತ್ತು ಇತರ ಕಥೆಗಳು ಸಂಕಲನದಲ್ಲಿ) ಅಥವಾ ಇತ್ತೀಚೆಗೆ ಪ್ರಕಟವಾದ ಕಾಲಿಟ್ಟಲ್ಲಿ ಕಾಲುದಾರಿ ಸಂಕಲನದ ಕಥೆಗಳಲ್ಲಿ ಮತ್ತು ಪ್ರಕಟವಾದ ಆದರೆ ಈ ಮೂರು ಸಂಕಲನದಲ್ಲಿ ಇಲ್ಲದ ಕಥೆಗಳಲ್ಲಿ ಬಾಲ್ಯವನ್ನು ಮೀರಿದ ಈಗ ನಾನು ಬದುಕುತ್ತಿರುವ ಪರಿಸರ ಮೂಡಿ ಬಂದಿದೆ ನನ್ನ ಮಾದಲಿನ ಎರಡು ಕಥಾ ಸಂಕಲನಗಳಲ್ಲಿ ಆಗ ನಾನಿದ್ದ ಕಾಲಘಟ್ಟದ ಬಿಜಾಪುರದ ಸುತ್ತಮುತ್ತಲಿನ ಪರಿಸರದಲ್ಲಿ ಕಥೆಗಳು ಹುಟ್ಟಿದ್ದರೆ ಕಾಲಿಟ್ಟಲ್ಲಿ ಕಾಲು ದಾರಿಯಲ್ಲಿ ಈಗ ನಾನು ಇರುವ ಬೆಂಗಳೂರು (ಅಥವಾ ಇಂಥ ಮತ್ತಾವುದೇ ಮಹಾನಗರದ) ಬದುಕು ಚಿತ್ರಣಗೊಂಡಿದೆ. “ಬಾಲ್ಯವನ್ನು ಮೀರಿ ಈಗ ಬದುಕುತ್ತಿರುವ ಪರಿಸರ ನಿಮ್ಮ ಕಥೆಗಳಲ್ಲಿ ಕಂಡುಬರುವುದು ಕಡಿಮೆ ಇದು ನಿಮ್ಮ ಸಮಸ್ಯೆಯಲ್ಲ ಬಹುತೇಕ ಕಥೆಗಾರರ ಸಮಸ್ಯೆ ಎಂಬ ವಾಕ್ಯ ನಿಮ್ಮ ಪ್ರಶ್ನೆಯಲ್ಲಿದೆ ಈಗ ಬದುಕುತ್ತಿರುವ ಪರಿಸರ ಕಥೆಗಳಲ್ಲಿ ಕಂಡು ಬಾರದಿರುವುದು ಒಂದು ಸಮಸ್ಯೆ” ಹೇಗೆ ಎನ್ನುವುದು

ನನಗೆ ನಿಜಕ್ಕೂ ಅರ್ಥವಾಗ್ತಿಲ್ಲ, ಕಥೆಗಾರರ್ತಿಯೊಬ್ಬರು ತಮಗೆ ತಟ್ಟದ ತಾವು ಮತ್ತೊಬ್ಬರಲ್ಲಿ ಹೇಳಲೇಬೇಕಾದ ಅನುಭವಗಳನ್ನು ಚಿತ್ರಿಸಲು ಕಥೆ ಬರೆಯುವಾಗ ಸಹಜವಾಗಿಯೇ ಬರೆಯುತ್ತಾರೆ. ಅದು ಬಾಲ್ಯದ ಪರಿಸರವೇ ಇರಬಹುದು ಅಥವಾ ಅವರು ಈಗ ಬದುಕುತ್ತಿರುವ ಪರಿಸರವೇ ಇರಬಹುದು. ಅದು ಸಮಸ್ಯೆ ಹೇಗೆ ಮತ್ತು ಸಮಸ್ಯೆ ಯಾರಿಗೆ ಬರಹಗಾರರಿಗಾ ಅಥವಾ ಓದುಗರಿಗಾ ಅಥವಾ ವಿಮರ್ಶಕರು, ಸಂಶೋಧಕರಿಗಾ?

೩. ಸಮಕಾಲೀನ ಬದುಕು ಕಥೆಯಲ್ಲಿ ಮರುಸೃಷ್ಟಿಸುವುದು ಸಮಸ್ಯೆಯೆ ವಿವರಿಸಿರಿ?

☞ ಸಮಕಾಲೀನ ಬದುಕು ಕಥೆಯಲ್ಲಿ ಮರುಸೃಷ್ಟಿಸುವುದು ಸಮಸ್ಯೆ ಎಂದು ನಾನು ಬಾವಿಸಿಲ್ಲ. ಸಮಸ್ಯೆಯಲ್ಲ, ಸ್ವಲ್ಪ ಮಟ್ಟಿಗೆ ಸವಾಲು ಎನ್ನಿಸಬಹುದು. ನೀವು ಹೇಳುವ ಸಮಕಾಲೀನ ಬದುಕು ಇಂದು ಗ್ರಾಮೀಣ ಪ್ರದೇಶ, ಅರೆನಗರ, ಪಟ್ಟಣಗಳು, ಮಹಾನಗರಗಳಲ್ಲಿ ತುಂಬ ಭಿನ್ನವಾಗಿದೆ. ಎಲ್ಲ ಕಡೆ ಬದಲಾವಣೆ ತುಂಬ ತ್ವರಿತಗತಿಯಲ್ಲಿ ಆಗುತ್ತಿದೆ. ಆಯಾಮ ಸ್ತರದ ಅಥವಾ ಪ್ರದೇಶದ ಸಮಕಾಲೀನ ಬದುಕನ್ನು ಮರುಸೃಷ್ಟಿಸಲು ಆಯಾ ಸ್ತರಗಳ ಅಥವಾ ಪ್ರದೇಶಗಳ ಪ್ರಸ್ತುತ ಬದುಕು ಅವರ ತಲ್ಲಣಗಳು ದುಗಡ ದುಮ್ಮಾನಗಳು, ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ವ್ಯವಸ್ಥೆ ಬದುಕನ್ನು ಪ್ರಭಾಸುತ್ತಿರುವ ತಂತ್ರಜ್ಞಾನದ ವಿಚಾರಗಳು, ಆಯಾ ಪ್ರದೇಶಗಳು ಜಾಗತೀಕರಣಕ್ಕೆ ತೆರೆದುಕೊಳ್ಳುತ್ತಿರುವ ಬಗೆ, ಮುಖ್ಯವಾಗಿ ಬದಲಾಗುತ್ತಿರುವ ಸಂಬಂಧಗಳು ಹೀಗೆ ಹತ್ತು ಹಲವು ವಿಚಾರಗಳನ್ನು ಸಮಗ್ರವಾಗಿ ಒಳಗಣ್ಣಿನಿಂದ ಗ್ರಹಿಸುವ ಸಾಮರ್ಥ್ಯ ಬೇಕಾಗುತ್ತದೆ ಎಂದ ನನ್ನ ಭಾವನೆ ನಮ್ಮ ಅನುಭವಗಳನ್ನು ಕೂಡ ಅಷ್ಟೇ ಸಮಗ್ರ ದೃಷ್ಟಿಕೋನದಿಂದ ಗ್ರಹಿಸುವ ಅಗತ್ಯವಿದೆ. ಹಾಗಾಗಿ ಇದು ಸವಾಲಿನ ಕೆಲಸ.

೪. ಮಹಿಳೆಗೆ ತನ್ನ ಅನುಭವಗಳ ಅಭಿವ್ಯಕ್ತಿಗೆ ಒಂದು ಭಾಷೆ ಇದೆ ಹೇಗೆ ಅದು ಪುರುಷ ಭಾಷೆ ಹೆಣ್ಣಿನ ಭಾಷೆಯನ್ನು ರೂಪಿಸಿಕೊಳ್ಳಲು ಪ್ರಯತ್ನಿಸಿದ್ದಿರೇನು? ಅಥವಾ ಇದನ್ನು ಹೇಗೆ ಗ್ರಹಿಸುತ್ತೀರಿ?

☞ ಹೆಣ್ಣಿನ ಭಾಷೆ ಎನ್ನುವುದೇ ಬೇರೆ ಇರುತ್ತದೆ. ಅಥವಾ ಇರಬಲ್ಲದು ಎಂಬ ಬಗ್ಗೆ ನಾನು ಅಷ್ಟೇನೂ ತೀವ್ರವಾಗಿ ಯೋಚಿಸಿಲ್ಲ ಭಾಷೆಯಲ್ಲಿ ಸ್ತ್ರೀಲಿಂಗ ಬಳಸಿದಾಕ್ಷಣ ಅದು ಹೆಣ್ಣಿನ ಭಾಷೆಯಾಗುವುದೇ ನನಗೆ ಈ ಬಗ್ಗೆ ಸ್ಪಷ್ಟವಾಗಿ ಗೊತ್ತಿಲ್ಲ ಮತ್ತು ನಾನು ಬರೆಯುವಾಗ ಸಹಜವಾಗಿ ಭಾಷೆ ಬಳಸುವುದರಿಂದ ಪ್ರಯತ್ನ ಪೂರ್ವಕವಾಗಿ ರೂಢಿಸಿಕೊಳ್ಳಲು ಪ್ರಯತ್ನಿಸಿಲ್ಲ. ನಾವು ಸಾಮಾನ್ಯವಾಗಿ ಬಳಸುವ ಭಾಷೆಯಲ್ಲಿ (ಸೃಜನಶೀಲ ಸಾಹಿತ್ಯವಲ್ಲದೆ ಸಾಹಿತ್ಯದ ಬೇರೆ ಪ್ರಕಾರಗಳು ಮತ್ತು ಸೃಜನೇತರ ಬರವಣಿಗೆಗಳಲ್ಲಿ) ಲಿಂಗ ಸಾಮನ್ಯವಾಗಿ ಪುಲ್ಲಿಂಗದ ರೂಪದಲ್ಲಿ ಇರುತ್ತದೆ. ಉದಾಹರಣೆಗೆ ವ್ಯಕ್ತಿ ಅಥವಾ ಮನುಷ್ಯ ಮಾಡುತ್ತಾನೆ. ಬರೆಯುತ್ತಾನೆ. ಎಂಬಂಥ ಪ್ರಯೋಗಗಳು ಇಂಥದಲ್ಲಿ ಪುಲ್ಲಿಂಗ ಮೇಲ್ನೋಟಕ್ಕೆ ಕಂಡು ಬಂದರೂ ನಾವು ಅದನ್ನು ಒಟ್ಟಾರೆಯಾಗಿ ಪುರುಷ ಮಹಿಳೆಯರನ್ನು

ಒಳಗೊಂಡಂತೆ ಎಂಬಂತೆ ಗ್ರಹಿಸುತ್ತೇವೆ ಆದರೆ ಭಾಷೆಯನ್ನು ಬಳಸುವಾಗ ಮುಖ್ಯವಾಗಿ ಕೆಲವು ಪದಗಳನ್ನು ಬಳಸುವಾಗ ಲಿಂಗಸಂವೇದಿಯಾಗಿರಬೇಕು ಎಂದು ನನಗೆ ತೀವ್ರವಾಗಿ ಅನ್ನಿಸುತ್ತದೆ.

೫. ಪರಂಪರೆಯನ್ನು ಗ್ರಹಿಸಿ ಅಥವಾ ಓದಿನಿಂದ ಪಡೆದು ಬರೆಯುತ್ತೀರಾ ಅಥವಾ ಹಿಂದಣ ಹೆಜ್ಜೆಗಳ ಹಂಗು ಬೇಡ ಎನ್ನುವಿರಾ?

☞ ನಿಜವೆಂದರೆ ನನಗೆ ಹೀಗೆ ಹೇಳಿಕೊಳ್ಳಲು ನಾಚಿಕೆಯಾಗುತ್ತದೆ. ಪರಂಪರೆ ನನ್ನ ಓದು ಇಲ್ಲ ಎನ್ನುವಷ್ಟು ಅಲ್ಪವಿದೆ. ಹೀಗಾಗಿ ಓದಿನಿಂದ ಗ್ರಹಿಸಿ ಈ ವರೆಗೆ ಬರೆದಿಲ್ಲ ಮುಂದೆ ಗೊತ್ತಿಲ್ಲ. ಆದರೆ ಹಿಂದಣ ಹೆಜ್ಜೆಗಳ ಹಂಗು ಬೇಡ ಎನ್ನುವ ದುರಂಹಕಾರ ಖಂಡಿತಕ್ಕೂ ನನಗಿಲ್ಲ, ನನಗೆಹೆಚ್ಚು ಓದಲು ಸಾಧ್ಯವಾಗದೇ ಇರುವುದು ನನ್ನ ಮಿತಿಗಳಿಂದಾಗಿ ಸೋಮರಿತನಗಳಿಂದಾಗಿ ಮಾತ್ರ ಹಿಂದಿನವರ ಓದು ಬೆಳಕಾಗುತ್ತದೆ ನಮಗೆ ಆದರಿಂದ ಪಡೆದುಕೊಂಡು ಬರೆಯಲು ಮಾತ್ರವಲ್ಲ, ಬದುಕನ್ನು ಇನ್ನಷ್ಟು ಅರ್ಥ ಮಾಡಿಕೊಳ್ಳಲು, ಹೊಸ ಗ್ರಹಿಕೆಗಳನ್ನು ನಮ್ಮದಾಗಿಸಿಕೊಳ್ಳಲು ಜೊತೆಗೆ ನಮ್ಮ ಅಹಂಕಾರವನ್ನು ಪೂರ್ಣವಾಗಿ ಕಳೆದುಕೊಳ್ಳಲು ಹೀಗೆ ಹಿಂದಿನವರ ಬರಹಗಳನ್ನು ಓದುವ ಅಗತ್ಯ ಇದ್ದೇ ಇದೆ.

೬. ಸಮಕಾಲೀನ ಮಹಿಳಾ ಅಭಿವ್ಯಕ್ತಿ ಬಗ್ಗೆ ನಿಮ್ಮ ಅನಿಸಿಕೆಗಳೇನು?

☞ ಕೆಲವು ಸಲ ಇಂಥ ಪ್ರಶ್ನೆಗಳೇ ಈಗ ಒಂದು ಕ್ಲೀಷೆಯಾಗಿದೆ ಎನ್ನಿಸುತ್ತದೆ ಮಹಿಳಾ ಅಭಿವ್ಯಕ್ತಿ ಸಾಕಷ್ಟು ಚೆನ್ನಾಗಿ ಹೊರಹೊಮ್ಮುತ್ತಿದೆ. ಇನ್ನೂ ಉತ್ತಮಗೊಳ್ಳಬೇಕಾಗಿದೆ. ಅವಕಾಶಗಳು ಸಾಲದು ಇತ್ಯಾದಿ ಕ್ಲೀಷೆಯಂತಹ ಉತ್ತರಗಳನ್ನೇ ನೀಡಬಹುದು. ಮಹಿಳಾ ಅಭಿವ್ಯಕ್ತಿ ಇರಬಹುದು. ಪುರುಷ ಅಭಿವ್ಯಕ್ತಿ ಇರಬಹುದು ಒಟ್ಟಾರೆಯಾಗಿ ವ್ಯಕ್ತಿ ತನ್ನ ಅಭಿವ್ಯಕ್ತಿಯ ಹೊಸ ನೆಲೆಗಳನನು ಕಂಡುಕೊಳ್ಳಬೇಕಿದೆ. ಅಭಿವ್ಯಕ್ತಿ ಮಾಧ್ಯಮವನ್ನು ಹೊಸ ರೀತಿಯಲ್ಲಿ ದುಡಿಸಿಕೊಳ್ಳಬೇಕಿದೆ.

೭. ವೃತ್ತಿ ಜೀವನ ಮತ್ತು ಬರವಣಿಗೆ ಇವುಗಳ ಸಂಬಂಧವನ್ನು ಹೇಗೆ ಗ್ರಹಿಸುತ್ತೀರಿ?

☞ ವೃತ್ತಿ ಜೀವನ ಅದರಷ್ಟಕ್ಕೆ ಇರುತ್ತದೆ. ಮತ್ತು ಬರವಣಿಗೆ ಅದರಷ್ಟಕ್ಕೇ ಸಾಗುತ್ತದೆ. ವೃತ್ತಿ ಜೀವನ ನಮಗೆ ಬದುಕಿನ ಇನ್ನಷ್ಟು ಮುಖಗಳನ್ನು ತೋರಿಸುತ್ತದೆ. ನಮ್ಮ ದೃಷ್ಟಿಕೋನವನ್ನು ವಿಶಾಲಗೊಳಿಸಿ ಬದುಕಿನ ಇನ್ನಷ್ಟು ಅನುಭವಗಳನ್ನು ಕಟ್ಟಿಕೊಡುತ್ತದೆ. ವೃತ್ತಿ ಜೀವನದ ಅನುಭವಗಳು ನಮ್ಮ ಸುತ್ತಮುತ್ತನವರನ್ನು ಬದುಕನನು ಸಮಾಜವನ್ನು ಇನ್ನಷ್ಟು ಅರ್ಥ ಮಾಡಿಕೊಳ್ಳುವಂತೆ ಮಾಡಬಹುದು. (ಈ ಅರ್ಥ ಮಾಡಿಕೊಳ್ಳುವಿಕೆ ನಮ್ಮನ್ನು ಇನ್ನಷ್ಟು ಅಹಂಕಾರಿಯಾಗಿಯೂ ಮಾಡಬಹುದು ಅಥವಾ ಇನ್ನಷ್ಟು ಸಹೃದಯರಾಗಿಯೂ ಮಾಡಬಹುದು. ಆ ಮಾತು ಬೇರೆ ಆಗ ನಮ್ಮ ಅರ್ಥೈಸಿಕೊಳ್ಳಿವಿಕೆಯ ವಿಧಾನ ಅಷ್ಟು ಸರಿಯಿಲ್ಲ ಎನ್ನಬಹುದೇನೂ) ಈ ಅರ್ಥಮಾಡಿಕೊಳ್ಳುವಿಕೆ. ದಟ್ಟ ಅನುಭವಗಳ ಬರವಣಿಗೆಯಲ್ಲಿ ಮೂಡಿಬರಬಹುದು. ಆ ಮೂಲಕ ಬರವಣಿಗೆ ದ್ರವ್ಯವಾಗಬಹುದು.

ಹಾಗೆಯೇ ಬರವಣಿಗೆಯ ಮೂಲಕ ನಾವು ನಿಜಕ್ಕೂ ಅಹಂಕಾರ ಕಳೆದುಕೊಂಡು ಸುತ್ತಲಿನವರನ್ನು ಹೆಚ್ಚು ಸಹೃದಯತೆಯಿಂದ ಅರ್ಥಮಾಡಿಕೊಂಡು, ಮಾನವ ಸಂಬಂಧಗಳನ್ನು ಹೆಚ್ಚು ಸಹ್ಯಗೊಳಿಸುವ ಆಪ್ತವಾಗಿಸುವ ಸಾಧ್ಯತೆಯೂ ಇದೆ. ಈ ಎರಡರ ಸಂಬಂಧ ಎನ್ನುವುದು ಕೂಡ ಕಡೆಗೂ ನಾವು ವೈಯಕ್ತಿಕ ನೆಲೆಯಲ್ಲಿ ಹೇಗೆ ಗ್ರಹಿಸುತ್ತೇವೆ ಎನ್ನುವುದೇ ಅವಲಂಬಿಸಿದೆ.

ಸಂಧ್ಯಾ ಹೊನಗುಂಟಿಕರ್ ೦೭.೦೯.೨೦೦೯

೧. ನಿಮ್ಮ ಬಾಲ್ಯದ ಅನುಭವಗಳು ನಿಮ್ಮ ಕಥೆಗಳಲ್ಲಿ ಮರುಸೃಷ್ಟಿಯಾದ ಬಗೆಯನ್ನು ತಿಳಿಸುವಿರಾ?

☞ ಕೇವಲ ನನ್ನ ಬಾಲ್ಯವಲ್ಲ. ನನ್ನ ಅನುಭವಕ್ಕೆ ಹಾಗೂ ಗ್ರಹಿಕೆಗೆ ದಕ್ಕಿದ ಆ ದಿನಗಳನ್ನು ಹಿಡಿದಿಡುವ ಮತ್ತು ಇಂದಿನ ಮಕ್ಕಳ ಬಾಲ್ಯವನ್ನು ನೋಡಿದಾಗ ಹೋಲಿಕೆ, ಅಲ್ಲದೆ ಬಡತನ, ಬದುಕಿನ ಅನಿವಾರ್ಯತೆಯಿಂದ ಬಾಲ್ಯವನ್ನು ಕಳೆದುಕೊಳ್ಳುವ ಮಕ್ಕಳು, ನನ್ನನ್ನು ಕಾಡುವ ಸಂಗತಿಗಳು ಅಲ್ಲದೆ ನನ್ನ ಪ್ರಕಟವಾಗದ ಕತೆಗಳಲ್ಲಿ ಜಾಗತಿಕ ಸಂದರ್ಭದಲ್ಲಿ, ವೃತ್ತಿಪರ ಕೋರ್ಸುಗಳ ನೆಲೆಯಲ್ಲಿ ಬದಲಾಗುತ್ತಿರುವ ಶಿಕ್ಷಣ ವ್ಯವಸ್ಥೆಯಿಂದ ಮಕ್ಕಳ ಮನಸ್ಸು ಮತ್ತು ಬುದ್ಧಿಗಳ ಮೇಲಾಗುವ ಪರಿಣಾಮ ಈ ಸಂಗತಿಗಳಲ್ಲಿ ಕಥೆಗಳು ಸೃಷ್ಟಿಯಾಗಿವೆ. 'ಮರುಸೃಷ್ಟಿ' ಎಂದು ಕೇಳಿದ್ದೀರಿ. ಪ್ಲೇಟೋನ ಸಿದ್ಧಾಂತದಂತೆ ಕಲೆ ಎಂಬುದು ಪುನಃ ಸೃಷ್ಟಿಯೇ ಹೊರತು ಬೇರಲ್ಲ, ಇರುವುದನ್ನೇ ಕಣ್ಣಿಗೆ ಭಾವಕ್ಕೆ ಗೋಚರಿಸುವುದೇ ಕಲಾಕಾರ ಕತೆಗಾರನ ಕೆಲಸ ಎನ್ನಬಹುದು.

ಅನುಭವದೊಂದಿಗೆ ಸೃಜನಶೀಲತೆಯು ಬೆಸೆಗೊಂಡಾಗ ಕೃತಿಯ ನಿರ್ಮಾಣ ಸಾಧ್ಯ. ಹಾಗಾಗಿ ಬರೀ ಬಾಲ್ಯದ ಅನುಭವಗಳೇ ಅಲ್ಲ. ಇನ್ನು ಬಾಲ್ಯ ಅತ್ಯಂತ ಅಪರೂಪವಾದದ್ದು. ಬಹಶಃ ಎಲ್ಲ ಬರಹಗಾರರಿಗೆ ಗಟ್ಟಿ ಅನುಭವ ಕಟ್ಟಿಕೊಡುವ ಕಾಲ ಅದು ಆ ವಯಸ್ಸಿನ ಸೂಕ್ಷ್ಮ ಸಂವೇದನೆಗಳು ಬರವಣಿಗೆ ನಿಲುಕಿದಾಗ ಮುದ ನೀಡುವ ಸಂಗತಿ

೨. ನಿಮ್ಮ ಬಾಲ್ಯದ ಪರಿಸರ ಅಂದರೆ ಹುಟ್ಟಿ ಬೆಳೆದ ಪ್ರದೇಶದ ಜೀವನ ವಿಧಾನ ನಿಮ್ಮ ಕಥೆಗಳಲ್ಲಿ ತುಂಬಿಕೊಂಡಿದೆ ಎಂದು ಅನ್ನಿಸುತ್ತದೆ. ಬಾಲ್ಯವನ್ನು ಮೀರಿ ಈಗ ಬದುಕುತ್ತಿರುವ ಪರಿಸರ ನಿಮ್ಮ ಕಥೆಗಳಲ್ಲಿ ಕಂಡು ಬರುವುದು ಕಡಿಮೆ. ಇದು ನಿಮ್ಮ ಸಮಸ್ಯೆಯಲ್ಲಿ, ಬಹುತೇಕ ಕಥೆಗಾರರ ಸಮಸ್ಯೆ. ಇದಕ್ಕೆ ನಿಮ್ಮ ಅಭಿಪ್ರಾಯವೇನು?

☞ ಬಹುತೇಕ ನಮ್ಮ ಎರಡನೆ ಪ್ರಶ್ನೆಗೂ ಉತ್ತರ ಮೊದಲನೆಯದರಲ್ಲಿ ದೊರಕಿರಬಹುದು. ನನ್ನ ಮೊದಲನೆಯ ಕಥಾ ಸಂಕಲನದಲ್ಲಿ ನನ್ನ ಬಾಲ್ಯದ ಹಲವು ಮುಖಗಳನ್ನು ಕಾಣಬಹುದಾದರೂ ಎರಡನೇ ಸಂಕಲನದಲ್ಲಿ ಹಾಗಿಲ್ಲ. ಅಲ್ಲದೆ ನಾನು ಈಗೀಗ ಬರೆಯುವುದರಲ್ಲಿ ತೊಡಗಿರುವುದರಿಂದ ನಾನು ಕಂಡುಂಡ ಕ್ಷಣಗಳನ್ನು ಆ ಕಾಲಘಟ್ಟವನ್ನು ದಾಖಲಿಸುವುದು ಸಹಜ ಅಲ್ಲಿ ಹೆಜ್ಜೆ ಊರದೇ

ಮುಂದೆ ದಾಟಿದರೆ ಬಹುಶಃ ನಾನೇನೋ ಕಳೆದುಕೊಳ್ಳಬಹುದು ಎನಿಸುವುದು ಹಾಗಾಗಿ ಇಂದಿನ ಕತೆಗಳಿಗೂ ಹಿಂದಿನ ಅಂದರೆ ಬಾಲ್ಯದ ತಳಕು ಇರುವುದು ಸಾಮಾನ್ಯ.

೩. ಸಮಕಾಲೀನ ಬದುಕು ಕಥೆಯಲ್ಲಿ ಮರುಸೃಷ್ಟಿಸುವುದು ಸಮಸ್ಯೆಯೆ ವಿವರಿಸಿರಿ?

☞ ಸಮಕಾಲೀನ ಬದುಕು ಮರುಸೃಷ್ಟಿಸುವುದು ಸಮಸ್ಯೆಯೇನಲ್ಲ, ಬದುಕಿನ ಆಯಾ ಕ್ಷಣ, ಆಯಾ ಸನ್ನಿವೇಶ ನನ್ನನ್ನು ತಟ್ಟಿ ಕಾಡಿದಾಗ ನನ್ನಲ್ಲಿ ಸಂಚಲನೆ ಮೂಡಿಸಿದಾಗ ನಾನು ಆ ಘಟನೆಗೆ ಸ್ಪಂದಿಸಿರುತ್ತೇನೆ. 'ಉತ್ತರ ಎಲ್ಲಿ' ಕತೆಯಲ್ಲಿ ಒಬ್ಬ ಮೂಕ ಹುಡುಗಿಯಲ್ಲಿ ಇರುವ ಹತ್ತಾರು ಪ್ರಶ್ನೆಗಳಿಗೆ ಮಾತಿದ್ದವನೂ ಉತ್ತರಿಸಲಾರ ಅಂದ್ರೆ ಅಂತಹ ಪ್ರಶ್ನೆಗಳವು. ಅದು ನನ್ನನ್ನು ಕಾಡಿದಾಗ ಕಥೆಯಾಗಿ ಹೊಮ್ಮುತ್ತದೆ. ನಿರುದ್ಯೋಗದ ಕಾರಣದಿಂದ ಡಾಂಬಿಕ ಜಗತ್ತಿಗೆ ಪ್ರವೇಶಿಸುವ ಯುವಕ 'ಹೊಸ ಫ್ರೇಮ್' ಕತೆಯನ್ನು ಹುಟ್ಟುಹಾಕುತ್ತಾನೆ. ಹೀಗೆ ಸಮಕಾಲೀನತೆ ಸೃಷ್ಟಿಯಾಗಿಯೇ ಆಗುತ್ತದೆ.

೪. ಮಹಿಳೆಗೆ ತನ್ನ ಅನುಭವಗಳ ಅಭಿವ್ಯಕ್ತಿಗೆ ಒಂದು ಭಾಷೆ ಇದೆ ಹೇಗೆ ಅದು ಪುರುಷ ಭಾಷೆ ಹೆಣ್ಣಿನ ಭಾಷೆಯನ್ನು ರೂಪಿಸಿಕೊಳ್ಳಲು ಪ್ರಯತ್ನಿಸಿದ್ದಿರೇನು? ಅಥವಾ ಇದನ್ನು ಹೇಗೆ ಗ್ರಹಿಸುತ್ತೀರಿ?

☞ ಭಾಷೆ ಭಾವನೆಗಳ ಅಭಿವ್ಯಕ್ತಿಗೆ ಒಂದು ಮಾಧ್ಯಮ ಆ ವ್ಯಕ್ತಿಯ ಭಾವ ಮುಖ್ಯವೇ ಹೊರತು ಹೆಣ್ಣು ಗಂಡಲ್ಲ. ಸಿಟ್ಟು, ತಾಳ್ಮೆ, ಹಾಸ್ಯ ಎಲ್ಲವೂ ಇಬ್ಬರಲ್ಲೂ ಮಿಳಿತವಾದ ಭಾವ, ರಸ, ಅದನ್ನ ಅಭಿವ್ಯಕ್ತಿಸುವ ಸಂದರ್ಭಗಳು ಬೇರೆ ಸಂದರ್ಭಕ್ಕೆ ತಕ್ಕಂತೆ ಭಾವಕ್ಕೆ ತಕ್ಕಂತೆ ಭಾಷೆಯ ಅಳವಡಿಕೆಯಾಗಬೇಕು.

೫. ಪರಂಪರೆಯನ್ನು ಗ್ರಹಿಸಿ ಅಥವಾ ಓದಿನಿಂದ ಪಡೆದು ಬರೆಯುತ್ತೀರಾ ಅಥವಾ ಹಿಂದಣ ಹೆಜ್ಜೆಗಳ ಹಂಗು ಬೇಡ ಎನ್ನುವಿರಾ?

☞ ಹಿಂದಣ ಹೆಜ್ಜೆಗಳು, ಪರಂಪರೆ, ಅಧ್ಯಯನ, ಮತ್ತು ಗ್ರಹಿಕೆ ಎಲ್ಲವೂ ಸೃಷ್ಟಿಕ್ರೀಯೆಯಲ್ಲಿ ಸಮ್ಮಿಳಿತವಾದಾಗಲೇ ಉತ್ತಮ ಕೃತಿಯ ಸಾಧ್ಯ ಪರಂಪರೆಗಳಿರಬೇಕು ಆದರೆ ಪೂರ್ವಾಗ್ರಹವಿರಬಾರದು ಅದನ್ನು ಮೀರಿ ಹೊಸದನ್ನು ಹೇಳುವ ಪ್ರಯತ್ನ ಓದುಗನನ್ನು ಮುಟ್ಟುತ್ತದೆ.

೬. ಸಮಕಾಲೀನ ಮಹಿಳಾ ಅಭಿವ್ಯಕ್ತಿ ಬಗ್ಗೆ ನಿಮ್ಮ ಅನಿಸಿಕೆಗಳೇನು?

☞ ಒಳ್ಳೆಯ ಪ್ರಶ್ನೆ ಸಮಕಾಲೀನ ಮಹಿಳೆಯರು ಹೊಸದೊಂದು ಕಾಲಘಟ್ಟದಲ್ಲಿದ್ದಾರೆ. ಹೊಸ್ತಿಲ ಒಳಗೂ ಹೊರಗೂ ನಡೆಯುವ ಬದುಕಿನ ಸಂಘರ್ಷಗಳನ್ನು ಎದುರಿಸುವ ಅನಿವಾರ್ಯತೆ ಇದೆ. ಶೋಷಣೆ ಎಂಬ ಅವಸ್ಥೆಯ ರೂಪ ಬದಲಾಗಿದೆ. ಅಭಿವ್ಯಕ್ತಿಯಲ್ಲಿ ಮುಕ್ತತೆ ಕಲಾತ್ಮಕತೆ ರೂಢಿಸಿಕೊಳ್ಳುವ ಹಿಡಿತ, ಚೌಕಟ್ಟುಗಳನ್ನು ಮೀರುವ ದಾರ್ಢ್ಯತೆ ಬಲಗೊಳ್ಳಬೇಕು, ಹೆಣ್ಣುತನವನ್ನ ಬರವಣಿಗೆಯಲ್ಲಿ ಮೊದಲು ಮೀರುವ ಪ್ರಯತ್ನವಾದರೆ ತನ್ನನ್ನು ತಾನು ಮೀರಬಹುದು.

೨. ವೃತ್ತಿ ಜೀವನ ಮತ್ತು ಬರವಣಿಗೆ ಇವುಗಳ ಸಂಬಂಧವನ್ನು ಹೇಗೆ ಗ್ರಹಿಸುತ್ತೀರಿ?

☞ ನಾನು ಗೃಹಿಣಿ ಆದರೆ ಸಮಾಜಸೇವಕಿ, ಸಂಘಟಕಿ, ಸಮಾಜ, ವೃತ್ತಿ ಬದುಕಿನ ಒಂದೊಂದು ಭಾಗಗಳು ವೃತ್ತಿ ಜೀವನವು ಬರವಣಿಗೆಗೆ ಪೂರಕವಾಗುತ್ತದೆ. ಸಮಯದ ಅಭಾವ ಇರಬಹುದು. ಆದರೆ ಅದು ಕಟ್ಟಿಕೊಡುವ ಅನುಭವ ಬರವಣಿಗೆಯನ್ನು ಬಲಗೊಳಿಸುತ್ತದೆ. ಅನುಭವವೇ ಇಲ್ಲದೆ ಕಾಲ್ಪನಿಕ ಬರವಣಿಗೆ ಗಟ್ಟಿ ಎನಿಸುವುದಿಲ್ಲ ಮೂಡು ತರಿಸಿಕೊಂಡು, ದೂರದಲೆಲ್ಲೋ, ಎಲ್ಲರನ್ನೂ ತಳ್ಳಿ ಒಬ್ಬರೇ ಕುಳಿತು ಬರೆಯುವ ಸಂದರ್ಭ ಈಗಿಲ್ಲ. ಬಸ್ಸಿನ ನೂಕುನುಗ್ಗಲಲ್ಲಿ ಪುಟಿಯುವ ಕವನಕ್ಕೆ ಇರುವ ಲವಲವಿಕೆ ಎಸಿಕಾರಲ್ಲಿ ಕಿಟಕಿ ಗಾಜು ಹಾಕಿಕೊಂಡು ಹೊರಬರುವ ಕವನಕ್ಕೆ ಇರುವುದಿಲ್ಲ. (ಬಹುಶ "ಬಸ್ಸಿನ ಕವನ" ಉಂಡ ನಂತರ ಡೈಜೆಸ್ಟ್ ಆಗಿ ದೇಹದ ಎಲ್ಲ ಭಾಗಕ್ಕೆ ಪೂರೈಕೆಯಾಗುವ ಶಕ್ತಿಯಾದರೆ ಕಾರಲ್ಲಿಯ ಕವನ ಉಂಡು ವಾಪಸ್ಸಾಗುವ ಆಹಾರವಾಗಬಹುದು.) ಗಟ್ಟಿ ಅನುಭವಕ್ಕೆ ಬದುಕು ಒಡ್ಡಿಕೊಂಡಿರಬೇಕು ಬದುಕಿನಂತೆ ಬರಹ ಎಂಬ ಧೋರಣೆ ನನ್ನದು. ಬದುಕು ಬರವಣಿಗೆ ಬೇರೆ ಬೇರೆಯಿಲ್ಲ.

ಸುನಂದಾ ಪ್ರಕಾಶ ಕಡಮೆ **೨೫.೦೮.೨೦೦೯**

೧. ನಿಮ್ಮ ಬಾಲ್ಯದ ಅನುಭವಗಳು ನಿಮ ಕಥೆಗಳಲ್ಲಿ ಮರು ಸೃಷ್ಟಿಯಾದ ಬಗೆಯನ್ನು ತಿಳಿಸುವಿರಾ?

☞ ಬರವಣಿಗೆಗೆ ತೀವ್ರವಾಗಿ ಕಾಡಿ ಬಾಲ್ಯದ ಅನುಭವಗಳು ಗಟ್ಟಿತನವನ್ನು ತಂದುಕೊಡಬಲ್ಲದು ಎಂಬುದು ನನ್ನ ನಂಬಿಕೆ, ಹಾಗೆಯೇ ಅವುಗಳು ಅಷ್ಟೇ ಪ್ರಾಮಾಣಿಕವೂ ಸಹಜವೂ ಆಗಿರುತ್ತವೆ. ನನ್ನಿಂದ ಈಗಾಗಲೇ ಬರೆಸಿಕೊಂಡ ಸುಮಾರು ನಲವತ್ತೈದು ಕಥೆಗಳಲ್ಲಿ ಐದಾರು ಕಥೆಗಳನ್ನು ಹೊರತು ಪಡಿಸಿದರೆ ಬಹುತೇಕ ಕಥೆಗಳಲ್ಲಿ ಬಾಲ್ಯದ ಅನುಭವಗಳು ಮರುಸೃಷ್ಟಿಯಾಗರಿಬಹುದು ಅಂದುಕೊಂಡಿರುವೆ. ಅವು ನನಗೆ ಗೊತ್ತಾಗಿ ಮುದ್ದಾಮಾಗಿ ಬರೆದಿದ್ದಲ್ಲ. ಬರವಣಿಗೆಯ ಉತ್ಕಟ ಸಮಯದಲ್ಲಿ ಗೊತ್ತಾಗದೇ ಅವು ನನ್ನ ಕಥೆಗಳನ್ನು ಆಕ್ರಮಿಸಿಕೊಂಡಿವೆ. ಅಂದಿನ ಅನುಭವಗಳು ಸಂವೇದನೆಗಳು ನೆನಪುಗಳು ಘಟನೆಗಳು ಇದ್ದಕ್ಕಿದ್ದಂತೆಯೇ ಅಲ್ಲದಿದ್ದರೂ ಕಥೆಯ ವಸ್ತುವಿಗೆ ತಕ್ಕಂತೆ ಅವು ಬೇರೆ ರೂಪ ಅಥವಾ ಆಕೃತಿ ಪಡೆದು ಒಡಮೂಡಿರುತ್ತವೆ. ಅದು ನನ್ನ ಅರಿವಿಗೆ ಬರುವುದು ಬರೆದು ಮುಗಿದಾದ ಕೂಡಲೇ, ನಾನೊಬ್ಬಳು ಶುದ್ಧ ಓದುಗಳಾಗಿ ಕಥೆಯ ಹೊರನಿಂತು ಓದಿದಾಗ ಮಾತ್ರ. ಬಾಲ್ಯ ಎದುರುಗೊಂಡ ಅಥವಾ ಮುಖಾಮುಖಿಯಾದ ಸಂದರ್ಭಗಳು ಕಥೆಗಳಲ್ಲಿ ಪ್ರಾಪ್ತವಾದರೆ ಮಾತ್ರ ಅಂಥ ಬರಹ ನನಗೆ ವೈಯಕ್ತಿಕವಾಗಿ ಖುಷಿಕೊಡುತ್ತದೆ ಮತ್ತು ಸಮಾಧಾನ ತರುತ್ತದೆ.

೨. ನಿಮ್ಮ ಬಾಲ್ಯದ ಪರಿಸರ ಅಂದರೆ ಹುಟ್ಟಿ ಬೆಳೆದ ಪ್ರದೇಶದ ಜೀವನ ವಿಧಾನ ನಿಮ್ಮ ಕಥೆಗಳಲ್ಲಿ ತುಂಬಿಕೊಂಡಿದೆ ಎಂದು ಅನ್ನಿಸುತ್ತದೆ. ಬಾಲ್ಯವನ್ನು ಮೀರಿ ಈಗ ಬದುಕುತ್ತಿರುವ ಪರಿಸರ ನಿಮ್ಮ

ಕಥೆಗಳಲ್ಲಿ ಕಂಡು ಬರುವುದು ಕಡಿಮೆ. ಇದು ನಿಮ್ಮ ಸಮಸ್ಯೆಯಲ್ಲಿ, ಬಹುತೇಕ ಕಥೆಗಾರರ ಸಮಸ್ಯೆ. ಇದಕ್ಕೆ ನಿಮ್ಮ ಅಭಿಪ್ರಾಯವೇನು?

☞ ಅದನ್ನು ಕೆಲ ವಿಮರ್ಶಕರು ಅಥವಾ ಕೆಲ ಸ್ನೇಹಿತರು ಗುರುತಿಸಿದಂತೆ ನನ್ನ ಎರಡನೇ ಸಂಕಲನದ ಕೆಲ ಕಥೆಗಳು (ಜರಿಯಂಚಿನ ಫ್ರಾಕು, ನನ್ನ ಪೊರೆವ ತೊಟ್ಟಿಲು, ಅಪ್ಪಿ, ತಂಕಿ) ಸಮಕಾಲೀನ ಬದುಕನ್ನು ಪ್ರತಿನಿಧಿಸುತ್ತವೆಯೋ ನೀವೇ ಓದಿ ಗಮನಿಸಬಹುದು. ಇದರ ಕುರಿತು ಹೇಳಬೇಕಾಗಿರುವುದು ಗಾಢವಾಗಿ ಹಾಗೂ ತೀವ್ರವಾಗಿ ಬರೆಯಬೇಕೆಂದರೆ, ಆ ಸಮಸ್ಯೆಗಳು ತೀವ್ರವಾಗಿ ಅಷ್ಟೇ ಗಾಢವಾಗಿ ನಮ್ಮನ್ನು ತಟ್ಟಿರಬೇಕು, ತಲ್ಲಣಿಸಿರಬೇಕು. ನಾವು ನಮ್ಮ ಸ್ವಂತ ಕೌಟುಂಬಿಕ ಘಟನೆ ಸಮಸ್ಯೆಗಳಿಗೆ ತಲ್ಲಣಿಸಿದಷ್ಟು ಹೊರ ಪರಿಸರಕ್ಕೆ ಅಷ್ಟಾಗಿ ಸ್ಪಂದಿಸುತ್ತೇವೆ ಅನ್ನಿಸುವುದಿಲ್ಲ. ನಮ್ಮನ್ನು ಹೊರಜಗತ್ತು ತೀವ್ರವಾಗಿ ಕಾಡಿಸದ ಹೊರತು ಅದನ್ನು ಬರೀ ಬರವಣಿಗೆಯ ಉದ್ದೇಶಕ್ಕಾಗಿ ಮಾತ್ರ ಬರೆದೆವಾದರೆ, ಅದು ಅಪ್ರಾಮಾಣಿಕವಾಗಬಹುದು. ಅಥವಾ ಅಂತಹ ಬರಹವೊಂದು ಆತ್ಮವಿಲ್ಲದ ಬರಿ ಸುಂದರ ದೇಹವಾಗಬಹುದು. ಆ ಕಾರಣಕ್ಕಾಗಿ ಬರೆಯಲು ಕೊಂಚ ಹಿಂಜರಿಕೆ ಅಷ್ಟೇ.

೩. ಸಮಕಾಲೀನ ಬದುಕು ಕಥೆಯಲ್ಲಿ ಮರುಸೃಷ್ಟಿಸುವುದು ಸಮಸ್ಯೆಯೆ ವಿವರಿಸಿರಿ?

☞ ಸಮಕಾಲೀನ ಬದುಕನ್ನು ನಮ್ಮ ಕಥೆಯಲ್ಲಿ ಮರುಸೃಷ್ಟಿಸುವುದು ಅಂಥ ದೊಡ್ಡ ಸಮಸ್ಯೆ ಏನಲ್ಲ. ಬರೆಯಬಹುದು, ನಾವು ತೀವ್ರವಾಗಿ ಆ ಬದುಕನ್ನು ಕಾಡಿಸಿಕೊಳ್ಳಬೇಕು. ನೋಯಬೇಕು, ಆ ಕುರಿತು ಅಖಂಡವಾಗಿ ನಮ್ಮದೇ ಸಂಕಟವೆಂಬಂತೆ ತುಡಿಯಬೇಕು. ಸ್ವಂತ ಅನುಭವಿಸದೇ ಬರೆದುದು ಯಾಕೊ ಅಸಹಜ ಅನಿಸುತ್ತದೆ. ಅದು ಬರೆದವರಿಗೆ ಮೊದಲು ತೃಪ್ತಿ ತರಬೇಕಲ್ಲವೇ? ಬಾಲ್ಯದ ಸಂವೇದನೆಗಳು ಹಾಗೂ ಕೌಟುಂಬಿಕ ಅನುಭವಗಳು ಖಾಲಿಯಾಗಿವೆ ಅನ್ನಿಸಲು ಶುರುವಾದಾಗ ಖಂಡಿತ ಆ ಸಾಹಸಕ್ಕೆ ತೊಡುವ ವಿಶ್ವಾಸವಿದೆ.

೪. ಮಹಿಳೆಗೆ ತನ್ನ ಅನುಭವಗಳ ಅಭಿವ್ಯಕ್ತಿಗೆ ಒಂದು ಭಾಷೆ ಇದೆ ಹೇಗೆ ಅದು ಪುರುಷ ಭಾಷೆ ಹೆಣ್ಣಿನ ಭಾಷೆಯನ್ನು ರೂಪಿಸಿಕೊಳ್ಳಲು ಪ್ರಯತ್ನಿಸಿದ್ದಿರೇನು? ಅಥವಾ ಇದನ್ನು ಹೇಗೆ ಗ್ರಹಿಸುತ್ತೀರಿ?

☞ ನಮಗೆ ನಮ್ಮದೇ ಆದ ಒಂದು ಭಾಷೆಯಿದೆ ಒಪ್ಪುತ್ತೇನೆ ಇದನ್ನು ಸ್ತ್ರೀವಾದೀ ಸ್ತ್ರೀಸಂವೇದನೆ ಸ್ತ್ರೀ ಶೋಷಣೆ ಹಿನ್ನೆಲೆಯಲ್ಲಿ ಕೇಳುತ್ತಿರುವಿರೋ ಗೊತ್ತಾಗಲಿಲ್ಲ ಆದರೆ ನಮಗ ಬರವಣಿಗೆಯಲ್ಲಿ ಬೇರೊಂದೇ ಭಾಷೆಯಿದೆ, ಅದನ್ನು ರೂಪಿಸಿಕೊಳ್ಳಬೇಕು ಎಂಬ ಅರಿವಿನೊಂದಿಗೆ ನಾನು ಬರೆಯಲು ತೊಡಗಿದವಳ್ಳಲ್ಲ ಮೊದಲು ಮನೆಯಲ್ಲಿ ಕುಟುಂಬದಲ್ಲಿ ನಡೆವ ಒಂದಿಷ್ಟು ತಮಾಷೆಯ ಕುರಿತು ಕೆಲವು ಹಾಸ್ಯಲೇಖನಗಳನ್ನು ಬರೆದುಬಿಟ್ಟಿದ್ದೆ. ನಮ್ಮ ಸಂವೇದನೆಗಳೇ ಮುಖ್ಯ. ನಂತರ ಅದನ್ನು ಹೇಗೆ ಗ್ರಹಿಸುತ್ತೇವೆ ಎಂಬುದು. ಹಾಗಾಗಿ ನನ್ನ ಸುತ್ತ ನಡೆಯುತ್ತಿದ್ದ ವಿದ್ಯಮಾನಕ್ಕೆ ನಾನು ಯಾವ ರೀತಿ

ಸ್ಪಂದಿಸುತ್ತೇನೆಯೋ ಅದೇ ರೀತಿ ಬರೆಯುವ ಹವ್ಯಾಸ ಬೆಳೆಯಿತು. ಆ ಪ್ರತ್ಯೇಕ ಭಾಷೆಯ ಕುರಿತು ನಾನೆಂದೂ ಯೋಚಿಸಲಿಲ್ಲ. ಕೆಲ ವ್ಯವಸ್ಥೆಗಳನ್ನು ಹೆಣ್ಣಿನ ಸಮಸ್ಯೆಗಳನ್ನು ಸಕಾರಾತ್ಮಕವಾಗಿ ಗ್ರಹಿಸಿದೆ ಅಂತ ಈಗ ಅನಿಸುತ್ತದೆ. ಆದರೆ ಅದರಿಂದ ನನ್ನ ಬರವಣಿಗೆಯ ದಾರಿಗೇನೂ ತೊಂದರೆಯಾಗಲಿಲ್ಲ. ನಾನು ಬರವಣಿಗೆ ಶುರು ಮಾಡುವ ೨೦೦೦ ಇಸ್ವಿಯ ಈಚೆಗೆ ನಮ್ಮ ಸ್ತ್ರೀ ಬರಹ, ತನ್ನ ಮೊದಲಿನ ಸ್ತ್ರೀವಾದೀ ಚಳುವಳಿಯಿಂದ ಬಿಡಿಸಿಕೊಂಡು ಸ್ವತಂತ್ರ್ಯವಾಗಿತ್ತು ಅಂದುಕೊಂಡಿರುವೆ, ಸಾಹಿತ್ಯ ಕ್ಷೇತ್ರದ ಅರ್ಧಕ್ಕಿಂತ ಹೆಚ್ಚು ಸಹೃದಯರು ನನ್ನ ಬರವಣಿಗೆಯನ್ನು ಸ್ವಾಗತಿಸಿದ್ದಾರೆ ಅನ್ನಿಸಿದೆ. ಆ ಕುರಿತು ಹೆಮ್ಮೆ ಮತ್ತು ಅಭಿಮಾನವಿದೆ.

೫. ಪರಂಪರೆಯನ್ನು ಗ್ರಹಿಸಿ ಅಥವಾ ಓದಿನಿಂದ ಪಡೆದು ಬರೆಯುತ್ತೀರಾ ಅಥವಾ ಹಿಂದಣ ಹೆಜ್ಜೆಗಳ ಹಂಗು ಬೇಡ ಎನ್ನುವಿರಾ?

☞ ನನ್ನ ಓದು ಅನೇಕ ಪುರುಷ ಬರಹಗಾರರ (ಚಿತ್ತಾಲ, ಲಂಕೇಶ್, ತೇಜಸ್ವಿ, ಅನಂತಮೂರ್ತಿ, ಶಾಂತಿನಾಥ ದೇಸಾಯಿ, ಕುಂವೀ, ಜಯಂತ, ವಿವೇಕ, ನುಗಡೋಣಿ, ಮೊಗಳ್ಳಿ, ಶ್ರೀಧರ ಬಳಗಾರ, ವಸುಧೇಂದ್ರ, ಅಶೋಕ ಹೆಗಡೆ...) ಪ್ರಮುಖ ಕೃತಿಗಳಿಂದ ಮೊದಲ್ಗೊಂಡಿದ್ದರಿಂದಲೋ ಏನೋ ನನ್ನ ಯೋಚನಾ ಲಹರಿ ಅತ್ತ ಸರಿಯಲೇ ಇಲ್ಲ ಇತ್ತೀಚೆಗೆ ಯಾರಾದರೂ ಆ ಕುರಿತು ಕೇಳುತ್ತಾರೆಂದು ಕೊಡಗಿನ ಗೌರಮ್ಮ, ಎಂ.ಕೆ.ಇಂದಿರ, ವೀಣಾ ಶಾಂತೇಶ್ವರ, ವೈದೇಹಿ, ಸಾರಾ, ಬಾನು, ಮಾಲತಿ ಪಟ್ಟಣ ಶೆಟ್ಟಿ... ಇವರುಗಳನ್ನು ಓದಿಕೊಂಡಿದ್ದೇನೆ. ಪರಂಪರೆಯನ್ನು ಗ್ರಹಿಸಿದ್ದಕ್ಕಿಂತ ಓದಿನಿಂದ ಪಡೆದಿದ್ದೇ ಜಾಸ್ತಿ ಇರಬಹುದು ಅನ್ನಿಸುತ್ತದೆ. ಹಿಂದಣ ಹೆಜ್ಜೆಗಳ ಹಂಗು ನಮಗೇಕೆ ಕಾಲದ ಬದಲಾವಣೆಯಂತೆ, ನಮ್ಮ ಬದುಕಿನಲ್ಲೂ ಬದಲಾವಣೆಯಾಗಿದೆ ಅದಕ್ಕೆ ವ್ಯತಿರಿಕ್ತವಾಗಿ ನಮ್ಮ ಬರವಣೆಗೆಯಲ್ಲೂ ಬದಲಾವಣೆ ಆಗಬೇಡವೇ

೬. ಸಮಕಾಲೀನ ಮಹಿಳಾ ಅಭಿವ್ಯಕ್ತಿ ಬಗ್ಗೆ ನಿಮ್ಮ ಅನಿಸಿಕೆಗಳೇನು?

☞ ಸಮಕಾಲೀನ ಮಹಿಳಾ ಅಭಿವ್ಯಕ್ತಿ ಕುರಿತು ತುಂಬ ಆಶಾಭಾವವಿದೆ. ಕಥಾ ಪ್ರಕಾರಗಳಲ್ಲಿ ನೇಮಿಚಂದ್ರ, ನಾಗವೇಣಿ, ಜಾಹ್ನವಿ, ಕಸ್ತೂರಿ ಬಾಯಿರಿ, ವೇದಾ, ವಿನಯಾ, ಸುಮಂಗಲಾ... ಇವರುಗಳೆಲ್ಲಾ ಬಹಳ ಚೆನ್ನಾಗಿ ನಮ್ಮ ಬದುಕಿನ ಅವಸ್ಥಾಂತರಗಳನ್ನು ಹಿಡಿದಿಡುತ್ತಿದ್ದಾರೆ. ಅನೇಕ ಪ್ರಯೋಗಗಳಿಗೆ ಒಡ್ಡಿಕೊಳ್ಳುತ್ತಿದ್ದಾರೆ. ಹಿಂದಿನ ಯಾವುದೇ ಚಳುವಳಿ ವಾದಗಳನ್ನು ಇಟ್ಟುಕೊಂಡು ನಮಗೆ ನಾವೇ ಚೌಕಟ್ಟು ಹಾಕಿಕೊಳ್ಳದೇ ಅದನ್ನೆಲ್ಲ ನಾವು ದಾಟಿ ಮುಂದೆ ಬಂದಿದ್ದೇವೆ ಅನಿಸುತ್ತಿದೆ.

೭. ವೃತ್ತಿ ಜೀವನ ಮತ್ತು ಬರವಣಿಗೆ ಇವುಗಳ ಸಂಬಂಧವನ್ನು ಹೇಗೆ ಗ್ರಹಿಸುತ್ತೀರಿ?

☞ ನನ್ನ ವೃತ್ತಿ ಜೀವನವೆಂದರೆ ಗೃಹಿಣಿ, ಕೆಲವೊಂದು ದಿನ ಇಪ್ಪತ್ನಾಲ್ಕು ಗಂಟೆಯಲ್ಲಿ ಎಂಟು ಗಂಟೆಯ ನಿದ್ದೆಯ ಅವಧಿಯನ್ನು ಬಿಟ್ಟು ಉಳಿದ ಹದಿನಾರಿ ಗಂಟೆಗಳು ಹೇಗೆ ವೇಳೆ ಸರಿದು

ಹೋಗುತ್ತವೆಂದೇ ತಿಳಿಯುವುದಿಲ್ಲ. ಒಂದಿಡೀ ದಿನ ಏನನ್ನೂ ಓದಲೂ ಬರೆಯಲೂ ಸಾಧ್ಯವಾಗದಿದ್ದುದಕ್ಕೆ ತುಂಬ ಸಂಕಟವಾಗುತ್ತದೆ. ಆದರೆ ನನ್ನ ಈ ರೀತಿಯ ಪರಿಸರವೇ ನನ್ನ ಕಥೆಗಳ ಆಸ್ತಿ. ಕುಟುಂಬ ಸಂಬಂಧದಲ್ಲಿ, ಮನೆವಾರ್ತೆಯ ಸೂಕ್ಷ್ಮಗಳಲ್ಲಿ ಧ್ಯಾನಸ್ಥವಾಗದ ಮನಸ್ಸು ಅದು ಹೇಗೆ ನೈಜತೆಯನ್ನು ಸೃಷ್ಟಿಸೀತು ಈ ಇಂಥ ಬರವಣಿಗೆ ನನಗೊಂದು ಅಸ್ಥಿತ್ವ ತಂದು ಕೊಟ್ಟಿದೆ, ವ್ಯಕ್ತಿತ್ವ ರೂಪಿಸಿದೆ. ಬದುಕಿನಲ್ಲೊಂದು ನೆಮ್ಮದಿಯ ತಾಣ ನಿರ್ಮಿಸಿದೆ. ಆದರೂ ಇನ್ನು ಮುಂದೆ ಒಂದು ವೇಳಾಪಟ್ಟಿ ಹಾಕಿಕೊಂಡು ಓದು ಬರಹ ಮುಂದುವರೆಸುವ ಕುರಿತು ಯೋಚಿಸುತ್ತಿದ್ದೇನೆ.

ಶಾಂತಕುಮಾರಿ **೩೦.೦೮.೨೦೦೯**

೧. ನಿಮ್ಮ ಬಾಲ್ಯದ ಅನುಭವಗಳು ನಿಮ ಕಥೆಗಳಲ್ಲಿ ಮರು ಸೃಷ್ಟಿಯಾದ ಬಗೆಯನ್ನು ತಿಳಿಸುವಿರಾ?

☞ ನನ್ನ ಕಥಾಸಂಕಲನ ಮುಟ್ಟು ದಲ್ಲಿರುವ ಕತೆಗಳು ಸುಮಾರು ಹದಿನೇಳು ವರ್ಷಗಳ ಅವಧಿಯಲ್ಲಿ ಬರೆದಂಥವು. ಅದರಲ್ಲಿ ಎರಡು ಹಂತವನ್ನು ಗುರುತಿಸಬಹುದು. ೧೯೮೨ರಿಂದ ೮೭ರವರೆಗೆ ಬರೆದ ಕತೆಗಳಲ್ಲಿ ಕೆಲವು ಬಾಲ್ಯದ ಪರಿಸರ ಅನುಭವಗಳ ಹಿನ್ನೆಲೆಯಲ್ಲಿ ಬರೆದಂಥವು. ಕಂಡು ಕೇಳಿದ ಯಾವುದೋ ಘಟನೆ, ಕತೆ, ಮಾತು ಮನದ ಭಿತ್ತಿಯಲ್ಲಿ ಹಾಗೇ ಉಳಿದು ಕತೆಯ ರೂಪ ಪಡೆದಂಥವು. ಉದಾಹರಣೆಗೆ ನಿಂತು ಹೋದ ಗಡಿಯಾರ ಕತೆಯಲ್ಲಿ ನಮ್ಮ ಕೇರಿಯ ಎರಡು ಮನೆಗಳ ಬದುಕು, ವಿಚಾರ, ಜೀವನಶೈಲಿಯಲ್ಲಿರುವ ಅಜಗಜಾಂತರ ವ್ಯತ್ಯಾಸ ನನಗೆ ಬಾಲ್ಯದಲ್ಲಿ ಪ್ರಶ್ನೆಗಳಾಗಿದ್ದವು. ಬ್ರಾಹ್ಮಣ ಹೆಂಗಸರ ಬದುಕು ಮಡಿ ವ್ರತಗಳಲ್ಲಿ ನಿಂತ ನೀರಾಗಿದೆ ಎನಿಸುತ್ತಿತ್ತು. ಬಯಕೆಗಳನ್ನು ಅವುಡುಗಚ್ಚಿ ಮೆಟ್ಟಿನಿಂತು ನೀರಸವಾಗಿ ಬದುಕುವ ರೀತಿ ಅದೇ ಸಂದರ್ಭದಲ್ಲಿ ಶೂದ್ರರು ಎಂದು ಕರೆಸಿಕೊಳ್ಳುವವರು ಈ ಯಾವುದರ ಹಂಗೂ ಇಲ್ಲದೆ ಜೀವನವನ್ನು ಹಗುರವಾಗಿ ತೆಗೆದುಕೊಳ್ಳುತ್ತಾ ಬಂದ ಹಾಗೆ ಸ್ವೀಕರಿಸುತ್ತಾ ವಯಸ್ಸಿಗೆ, ಭಾವನೆಗೆ ಸ್ಪಂಧಿಸುತ್ತಾ ಬದುಕುವ ರೀತಿ ಅವರ ಬದುಕು ತೆಗೆದುಕೊಳ್ಳುವ ತಿರುವು ನನ್ನಲ್ಲಿ ಅಚ್ಚರಿಯನ್ನು ಉಂಟು ಮಾಡುತ್ತಿತ್ತು. ಮನುಷ್ಯ ನಾಗರಿಕನಾದ ಹಾಗೂ ತನಗೆ ತಾನೆ ತೊಡಿಸಿಕೊಳ್ಳುವ ಸಂಕೋಲೆ ಜಾತಿ ಧರ್ಮ ಪ್ರತಿಷ್ಠೆಗಳ ಹೆಸರಿನಲ್ಲಿ ಪೊಳ್ಳಾಗುವ ಬಗೆ ತಾನೆ ಹಾಕಿಕೊಂಡ ಕಟ್ಟುಪಾಡುಗಳಲ್ಲಿ ತಾನೇ ನರಳುವ ಬಗೆ ನನ್ನ ಮನಸ್ಸಿನಲ್ಲಿ ಗೊಂದಲಗಳನ್ನು ಹುಟ್ಟಿಹಾಕುತ್ತಿತ್ತು. ಯಾವತ್ತೂ ಮನುಷ್ಯ ಸಂಬಂಧಗಳೇ ನನ್ನ ಅಬ್ಸೇಷನ್. ಅದರಲ್ಲಿರುವ ಸ್ವಾರ್ಥ ಮತ್ತು ಕಾಮ (ವಿಶಾಲ ಅರ್ಥದಲ್ಲಿ ಕಾಮವೂ ಸ್ವಾರ್ಥವೇ ಸ್ವ ಕಾಮ ಸ್ವರತಿ) ನನ್ನನ್ನು ಬಹುವಾಗಿ ಕಾಡಿವೆ. ಮನುಷ್ಯ ಸಂಬಂಧಗಳಲ್ಲಿ ಹುದುಗಿರುವ ಕಾಮದ ವಾಸನೆ ಚಿಕ್ಕಂದಿನಿಂದಲೂ ಬಹುಬೇಗ ನನ್ನ ಗಮನಕ್ಕೆ ಬರುತ್ತದೆ. ಮನುಷ್ಯ ನೇರ, ಸರಳ ಹಾಗೂ ಮುಕ್ತವಾಗಿ ಬದುಕಬೇಕೆಂಬುದೇ ನನ್ನ ಅನುದಿನದ ಆಸೆ. ಈ ಹುಡುಕಾಟ ನನ್ನ ಕತೆಗಳಲ್ಲಿ ಕಂಡು ಬರುತ್ತದೆ. ಹಾಗಾಗಿಯೇ ಕೃಷ್ಣಿ ಪರಮೇಶಿ ಬಗ್ಗೆ ಬರುವ ಯೋಚನೆಗಳಿಗೆ ಬೆದರುವುದು ತಮ್ಮನನ್ನು ತಬ್ಬಿ ಅವನ ಕೈಯನ್ನು ತನ್ನ ಹೊಟ್ಟೆಯ ಮೇಲಿರಿಸಿಕೊಂಡು ಮಲಗುವುದು ಮನದೊಳಗೆ ಹುದುಗಿರುವುದನ್ನು ಪ್ರತಿಬಿಂಬಿಸುತ್ತದೆ.

ಹಾಗೇ 'ಜಾತಿ ಕೆಟ್ಟವರು' ಕತೆ ನಾನು ಕೇಳಿದ ಘಟನೆ. ಅದಕ್ಕೆ ನನ್ನದೇ ಕಲ್ಪನೆಯ ವಿವರಗಳನ್ನು ತುಂಬಿ ಕತೆಯಾಗಿಸಿದ್ದೇನೆ. ಅದರಲ್ಲಿ ಬರುವ ಪರಿಸರ, ಜನ ಎಲ್ಲ ನಾನು ಬಾಲ್ಯದಲ್ಲಿ ಕಂಡಂಥವರು. 'ಸಂಬಂಧ' ಕತೆ ನನ್ನ ಮಾವನ ಮನೆಗೆ ಹೋದಾಗ ನಾನು ಕೇಳಿದ ಒಂದೇ ವಾಕ್ಯ ಇವಳು ಸಣ್ಣಿ ಅಂಥಾ, ಇವಳ ಮಗು ಇವಳ ಗಂಡ ಸಂಸಾರ ಮಾಡ್ತಾ ಇದ್ದಾರೆ. ಇವಳನ್ನು ಮನೆಯಿಂದ ಹೊರಗೆ ಹಾಕಿದ್ದಾರೆ. ಅವರಿಗೆ ಮಕ್ಕಳಾಗಿವೆ ಗೊತ್ತಾ ಎಂದು ಮಾವನ ಮಗಳು ಹೇಳಿದಾಗ ನನಗೆ ಆಘಾತವಾಗಿತ್ತು. ಇದು ಎಂದಾದರೂ ಸಾಧ್ಯವೇ ಅಂತ. ಅದಿಷ್ಟು ಬಿಟ್ಟರೆ ಅವರ ಬಗ್ಗೆ ಯಾವುದೇ ವಿವರಗಳೂ ತಿಳಿದಿರಲಿಲ್ಲ. ಅಂತಹ ವಿಷಯಗಳ ಬಗ್ಗೆ ಮಾತನಾಡುವುದೂ ಆಗ ಅಪರಾಧ. ಹಾಗಾಗಿ ಸದಾ ನನ್ನನ್ನು ಕಾಡುತ್ತಿದ್ದ ಈ ಘಟನೆ ಕತೆಯಾಗಿ ಬಿಡುಗಡೆ ನೀಡಿತು. ಹೇಗೆ ಅಂತಹ ಸಂದರ್ಭ ಸೃಷ್ಟಿಯಾಗಿರಬಹುದು ಎನ್ನುವ ನನ್ನ ಕಲ್ಪನೆ ನನ್ನ ಕಾಡುತ್ತಿದ್ದ ಪ್ರಶ್ನೆಗಳಿಗೆ ನಾನೇ ಕಂಡುಕೊಂಡ ಉತ್ತರ. ಆದರೂ ಮನಸ್ಸು ಈ ಸತ್ಯವನ್ನು ಒಪ್ಪಿಕೊಳ್ಳದೆ ಅವಳು ರುಕ್ಕಿಯ ಮಗಳಾಗಿದ್ದರೂ ಸುಕ್ರನ ಮಗಳಲ್ಲದೇ ಇರಬಹುದು ಎಂಬ ಸಣ್ಣ ಅನುಮಾನವನ್ನು ಹುಟ್ಟು ಹಾಕಿದ್ದೇನೆ. ಮೋಯ್ನಿ ಹುಟ್ಟಿದಾಗ ರುಕ್ಕುಗೆ ಸನ್ನಿ ಹಿಡಿದದ್ದು ಮಗುವನ್ನು ಹತ್ತಿರ ತಂದರೆ ಅವಳು ತಿರಸ್ಕರಿಸುವುದು ಅವಳ ಮೇಲೆ ನಡೆದ ಯಾವುದೋ ಬಲವಂತದ ಸಂಕೇತ ಹಾಗೂ ಮೋಯ್ನಿಯ ರೂಪ ಚೆಲುವು ಅಪ್ಪ ಅಮ್ಮನಂತಿಲ್ಲದಿರುವುದು ಆ ಅವಧಿಯಲ್ಲಿ ಬರೆದ ಹದಿಹರಯದ ಕತೆಗಳು ಹರಯದಲ್ಲೇ ಬರೆದಂತವು. ಬಾಲ್ಯದ ನೆರಳು ಇಡೀ ಜೀವನದ ಉದ್ದಕ್ಕೂ ಇದ್ದೇ ತೀರುತ್ತದೆ ಹಸಿಗೋಡೆಯ ಮೇಲೆ ಬರೆದ ಚಿತ್ತಾರಂದಂತೆ ಹಾಗಾಗಿ ಹರಯದ ಭಾವನೆಗಳನ್ನು ನಿಯಂತ್ರಿಸುವಲ್ಲಿ ಬಾಲ್ಯದಲ್ಲಿ ನಾವು ಬೆಳೆದ ವಾತಾವರಣದ ಪ್ರಭಾವವಿರುತ್ತದೆ. ವಿಚಾರಗಳಿಗೂ ಬದುಕಿಗೂ ಇರುವ ಗೊಂದಲ ಆಗ ನಮ್ಮ ಗಮನಕ್ಕೆ ಬರುತ್ತದೆ. ಈ ಗೊಂದಲ ತಲ್ಲಣಗಳೇ ಕತೆಗಳಾಗಿವೆ.

೨. ನಿಮ್ಮ ಬಾಲ್ಯದ ಪರಿಸರ ಅಂದರೆ ಹುಟ್ಟಿ ಬೆಳೆದ ಪ್ರದೇಶದ ಜೀವನ ವಿಧಾನ ನಿಮ್ಮ ಕಥೆಗಳಲ್ಲಿ ತುಂಬಿಕೊಂಡಿದೆ ಎಂದು ಅನ್ನಿಸುತ್ತದೆ. ಬಾಲ್ಯವನ್ನು ಮೀರಿ ಈಗ ಬದುಕುತ್ತಿರುವ ಪರಿಸರ ನಿಮ್ಮ ಕಥೆಗಳಲ್ಲಿ ಕಂಡು ಬರುವುದು ಕಡಿಮೆ. ಇದು ನಿಮ್ಮ ಸಮಸ್ಯೆಯಲ್ಲಿ, ಬಹುತೇಕ ಕಥೆಗಾರರ ಸಮಸ್ಯೆ. ಇದಕ್ಕೆ ನಿಮ್ಮ ಅಭಿಪ್ರಾಯವೇನು?

☞ ನಿಮ್ಮ ಬಾಲ್ಯಾದ ಪರಿಸರ ಹುಟ್ಟಿ ಬೆಳೆದ ಪ್ರದೇಶದ ಜೀವನ ವಿಧಾನ ನಿಮ್ಮ ಕಥೆಗಳಲ್ಲಿ ತುಂಬಿಕೊಂಡಿದೆ. ಇಲ್ಲ. ನಾನು ಹವ್ಯಕ ಜಾತಿಯಲ್ಲಿ ಹುಟ್ಟಿದ್ದರೂ ಆ ಪರಿಸರ ನನ್ನ ಕತೆಗಳಲ್ಲಿ ಮೂಡಿದ್ದು ಕಡಿಮೆ. ಅದಕ್ಕೆ ಬದಲಾಗಿ ನಾನು ಬೆಳೆದ ಅಗ್ರಹಾರದ ಪರಿಸರ ಮಾಧ್ವ ಬ್ರಾಹ್ಮಣರ ಬದುಕಿನ ರೀತಿ ನೀತಿ ಮತ್ತು ಇತರೆ ಜಾತಿಯ ರುಕ್ಕಿ ಪಾತಿ ಮೋಯ್ನಿ ಇವರ ರೀತಿ ನೀತಿಗಳು ನನ್ನ ಕತೆಗಳಲ್ಲಿ ತುಂಬಿಕೊಂಡಿವೆ. ಬಾಲ್ಯವನ್ನು ಮೀರಿ ಈಗ ಬದುಕುತ್ತಿರುವ ಪರಿಸರ ನಿಮ್ಮ ಕತೆಗಳಲ್ಲಿ

ಕಂಡು ಬರುವುದು ಕಡಿಮೆ ಎಂದಿದ್ದೀರಾ ಆದರೆ ೧೯೯೮ ರಿಂದ ೨೦೦೬ ವರೆಗಿನ ಒಂಬತ್ತು ಕತೆಗಳು ಈಗಿನ ಪರಿಸರವನ್ನೇ ಕುರಿತಾದವು ಗಮನಿಸಿ. ಕತೆಗಾರರ ಸಮಸ್ಯೆ ಇದಕ್ಕೆ ನಿಮ್ಮ ಅಭಿಪ್ರಾಯವೇನು ಎಂದು ಕೇಳಿದ್ದೀರಿ ನನಗನಿಸುವ ಹಾಗೆ ಇದು ಸಮಸ್ಯೆಯಲ್ಲ ಜಸ್ಟ್ ಇಟ್ ಈಸ್ ಆ ಫ್ಯಾಕ್ಟ್ ಅಷ್ಟೇ. ಆದರೂ ಬಾಲ್ಯ ಅದ್ಭುತ ಅತ್ಯಂತ ದುಃಖಕರ ಈ ಏನೇ ಭಾವನೆಗಳಿದ್ದರೂ ಅದಕ್ಕೆ ಕಾರಣ ಬಾಲ್ಯವನ್ನು ನಾವು ತೀವ್ರವಾಗಿ ಬದುಕುವುದು, ಎಲ್ಲವನ್ನು ತೆರೆದ ಮನಸ್ಸಿನಿಂದ ನೋಡುವುದು, ಬಾಲ್ಯಕ್ಕಿರುವ ಅದ್ಭುತ ಗ್ರಹಿಕೆ, ಅರ್ಥವಾದ ಹಾಗೆ ಅರ್ಥವಾಗದ ಹಾಗೆ ಬದುಕು ಹುಟ್ಟಿಸುವ ಗೊಂದಲಗಳು ಹೇಗೆ ಚಿತ್ತಭಿತ್ತಿಯಲ್ಲಿ ಮೂಡಿಬಿಡುತ್ತವೆ ಎಂದರೆ ಅದರಿಂದ ನಮಗೆ ಬಿಡುಗಡೆಯೇ ಇಲ್ಲವೇನೋ ಎನಿಸುವ ಹಾಗೆ ಮುಂದಿನ ಪೂರ್ತಿ ಬದುಕು ಬಾಲ್ಯದ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವುದು, ಬಾಲ್ಯದ ಕನಸುಗಳನ್ನು ನನಸು ಮಾಡಿಕೊಳ್ಳುವುದು, ಬಾಲ್ಯದ ನೋವು ಅವಮಾನಗಳಿಗೆ ಯಾವುದೋ ರೀತಿಯಲ್ಲಿ ಮುಕ್ತಿ ಪಡೆದುಕೊಳ್ಳಲು ಯತ್ನಿಸುವುದು ಪ್ರತಿಯೊಂದನ್ನು ಬಾಲ್ಯದ ನೆನಪುಗಳೊಂದಿಗೆ ಸಮೀಕರಿಸಿ ನೋಡುವುದು ಈ ಎಲ್ಲ ಬಾಲ್ಯದ ನೆನಪಿನಿಂದ ಬಿಡುಗಡೆಯಾಗಲು ಮಾಡುವ ಯತ್ನವೋ ಇಲ್ಲ ಬಾಲ್ಯಕ್ಕೆ ಪರಿಹಾರವಾಗಿ ಇಡೀ ಜೀವಮಾನವೋ ಎಂಬ ಅನುಮಾನ ಸದಾ ನನ್ನನ್ನು ಕಾಡುತ್ತದೆ. ಆದರೆ ಇದನ್ನು ಮೀರುವುದು ನನಗೆಂದೂ ಸಮಸ್ಯೆ ಎನಿಸಿಲ್ಲ. ಏಕೆಂದರೆ ನನಗೆ ಸರಿ ಎನಿಸಿದನ್ನು ಮಾಡುವ ತಾಕತ್ತು ಮತ್ತು ಅದನ್ನು ಎಲ್ಲ ಪೂರ್ವಾಗ್ರಹಗಳಿಂದ ಬಿಡಿಸಿ ನೋಡಬಲ್ಲ ವಿವೇಚನೆ ಎರಡನ್ನೂ ಉಳಿಸಿಕೊಂಡಿದ್ದೇನೆ. ಅದನ್ನು ನನ್ನ ಸಾಕಷ್ಟು ಕತೆಗಳಲ್ಲಿ ನೀವು ಗಮನಿಸಿರಬಹುದು. ಆದರೆ ಇಂದಿಗೂ ನನ್ನನ್ನು ಕಾಡುವ ಬಾಲ್ಯದ ಘಟನೆಗಳಿವೆ. ಅವುಗಳೂ ಎಂದಾದರೂ ಕತೆಗಳಾಗಬಹುದು. ನಾವೆಲ್ಲ ನಿನ್ನೆ ಅಥವಾ ನಾಳೆಗಳಲ್ಲೇ ಬದುಕುವುದು ಹೆಚ್ಚು ತಾನೇ ಬಾಲ್ಯ ಬರೀ ಹೀರಿಕೊಳ್ಳುವುದನ್ನು ಅಭ್ಯಾಸ ಮಾಡಿಕೊಂಡಿರುತ್ತದೆ. ಬೆಳೆದಂತೆ ವಿಶ್ಲೇಷಿಸುವ ಮಾರ್ಗ ಕಂಡುಕೊಳ್ಳುತ್ತಾ ಹೋಗುತ್ತೇವೆ. ಬಾಲ್ಯ ಕಾಡಿದಂತೆ ಯೌವ್ವನ ಕೂಡಾ ಕಾಡುವುದಿಲ್ಲ.

೩. ಸಮಕಾಲೀನ ಬದುಕು ಕಥೆಯಲ್ಲಿ ಮರುಸೃಷ್ಟಿಸುವುದು ಸಮಸ್ಯೆಯೆ ವಿವರಿಸಿರಿ?

☞ ಸಮಕಾಲೀನ ಬದುಕು ಕತೆಯಲ್ಲಿ ಮರುಸೃಷ್ಟಿಸುವುದು ಖಂಡಿತಾ ಸಮಸ್ಯೆಯಲ್ಲ. ಆದರೆ ಎಷ್ಟರಮಟ್ಟಿಗೆ ಸಮಕಾಲೀನ ಬದುಕನ್ನು ಗ್ರಹಿಸುತ್ತೇವೆ ಮತ್ತು ಸಮಕಾಲೀನ ಬದುಕಿಗೆ ತೆರೆದುಕೊಳ್ಳುತ್ತೇವೆ ಎಂಬುದರ ಮೇಲೆ ಅವಲಂಭಿತವಾಗಿರುತ್ತದೆ. ಉದಾಹರಣೆಗೆ ಜಾಗತೀಕರಣ ಮತ್ತು ಮಾಹಿತಿ ಸಂಸ್ಕೃತಿಗೆ ನಾವು ಎಷ್ಟರಮಟ್ಟಿಗೆ ತೆರೆದುಕೊಂಡಿದ್ದೇವೆ ಇಂದಿನ ಮಾಹಿತಿಯುಗದಲ್ಲಿ ಆ ಅನುಭವಗಳು ಕತೆಯಲ್ಲಿ ಜೀವಪಡೆಯುವ ಸಾಧ್ಯತೆ ಎಷ್ಟಿದೆ? ಎಂದಾಗ ಬಹಳ ಕಡಿಮೆ ಎಂದೇ ಹೇಳಬೇಕಾಗುತ್ತದೆ. ಆ ದಿಕ್ಕಿನಲ್ಲಿ ಎಕ್ಸ್ ಪೋಜರ್ ನಮ್ಮ ಸಾಹಿತಿಗಳಲ್ಲಿ ಕಡಿಮೆ ಎಂದೇ ಹೇಳಬೇಕಾಗುತ್ತದೆ. ಇನ್ನೂ ನಾವು ಅದನ್ನು ನಮ್ಮ ಸಂಸ್ಕೃತಿಯ ಭಾಗವಾಗಿ ನೋಡುತ್ತಿಲ್ಲ ಯಾವುದೋ ಅಕ್ರಮಣ ಎಂದು ಭಾವಿಸುತ್ತಿದ್ದೇವೆ.

ಸಮಕಾಲೀನ ಬದುಕು ಮತ್ತು ಪ್ರಾಚೀನ ಸಂಸ್ಕೃತಿಯ ನಡುವಿನ ಕಂದಕವನ್ನು ಸಮಗ್ರವಾಗಿ ಗ್ರಹಿಸಲು ಸಾಧ್ಯವಾಗದಿರುವುದು ಒಂದು ಕೊರತೆಯಾಗಿದೆ.

೪. ಮಹಿಳೆಗೆ ತನ್ನ ಅನುಭವಗಳ ಅಭಿವ್ಯಕ್ತಿಗೆ ಒಂದು ಭಾಷೆ ಇದೆ ಹೇಗೆ ಅದು ಪುರುಷ ಭಾಷೆ ಹೆಣ್ಣಿನ ಭಾಷೆಯನ್ನು ರೂಪಿಸಿಕೊಳ್ಳಲು ಪ್ರಯತ್ನಿಸಿದ್ದಿರೇನು? ಅಥವಾ ಇದನ್ನು ಹೇಗೆ ಗ್ರಹಿಸುತ್ತೀರಿ?

☞ ಮಹಿಳೆ ಬದುಕುತ್ತಿರುವ ಪ್ರಪಂಚ ವ್ಯವಸ್ಥೆ ಭಾಷೆ ಎಲ್ಲವೂ ಪುರುಷ ನಿರ್ಮಿತ. ಹೆಣ್ಣು ಭಾಷೆಯನ್ನು ಬಳಸಿಕೊಳ್ಳುವ ಕ್ರಮ ಖಂಡಿತಾ ಬದಲಾಗಬೇಕು. ಈ ಜಗತ್ತು ಹೆಣ್ಣಿನ ದೃಷ್ಟಿಕೋನದಿಂದ ನಿರ್ಮಿತವಾದದ್ದೇ ಆದಲ್ಲಿ ಖಂಡಿತಾ ಭಿನ್ನವಾಗಿರುತ್ತಿತ್ತು. ಮತ್ತಷ್ಟು ಸುಂದರವಾಗಿರುತ್ತಿತ್ತು ಎಂದೇ ನನ್ನ ಅನಿಸಿಕೆ. ಆದ್ದರಿಂದ ಭಾಷೆಯೂ ಅಷ್ಟೇ ಮಹಿಳೆಗೆ ತನ್ನ ಅನುಭವಗಳನ್ನು ತನ್ನ ಮಾತುಗಳಲ್ಲೇ ಹಿಡಿದಿಡುವುದು ಸಾಧ್ಯವಾಗಬೇಕು. ಆಗ ನಿಜವಾದ ಮಹಿಳಾ ಸಾಹಿತ್ಯ ಚರಿತ್ರೆಯ ಪ್ರಾರಂಭ ಎನ್ನಬಹುದು.

೫. ಪರಂಪರೆಯನ್ನು ಗ್ರಹಿಸಿ ಅಥವಾ ಓದಿನಿಂದ ಪಡೆದು ಬರೆಯುತ್ತೀರಾ ಅಥವಾ ಹಿಂದಣ ಹೆಜ್ಜೆಗಳ ಹಂಗು ಬೇಡ ಎನ್ನುವಿರಾ?

☞ ಪರಂಪರೆಯ ಹಂಗಿಲ್ಲದೆ ವರ್ತಮಾನವಿಲ್ಲ. ಹಿಂದಣ ಹೆಜ್ಜೆ ಅರಿಯದೆ ಮುಂದಣ ಹಾದಿ ಸ್ಪಷ್ಟವಲ್ಲ. ಪರಂಪರೆಯನ್ನು ಗ್ರಹಿಸುವುದು ಮತ್ತು ಓದುವುದು ಎರಡೂ ಇಷ್ಟವೇ. ಆದರೆ ಅದರ ಪ್ರಭಾವದಿಂದಲೇ ಬರೆಯುತ್ತೇನೆ ಎನ್ನುವುದಿಲ್ಲ. ನನ್ನ ವ್ಯಕ್ತಿತ್ವೇ ಹಾಗೆ ಯಾವುದರ ಪ್ರಭಾವಕ್ಕೂ ಒಳಗಾಗುವುದಿಲ್ಲ. ಕಾದು ಕರಗಿದ್ದು ಕಬ್ಬಿಣವೋ, ಮೇಣವೋ, ಚಿನ್ನವೋ ಆದರೆ ಅದಕ್ಕೆ ಕೊಡಬಲ್ಲೆ ನನ್ನದೇ ರೂಪ ಆಕಾರ. ಇದು ಅಹಂ ಇರಬಹುದಾ ಗೊತ್ತಿಲ್ಲ ಆದರೆ ನನಗೆ ನಾನೇ ಸಾಟಿ. ಅಷ್ಟರಮಟ್ಟಿಗೆ ನಾನು ನನ್ನನ್ನು ನನ್ನ ವಿಚಾರಗಳನ್ನು ಪ್ರೀತಿಸುತ್ತೇನೆ. ನನ್ನ ವಿಚಾರ ಹಾಗೂ ನಿಲುವುಗಳ ಬಗ್ಗೆ ಸ್ಪಷ್ಟ ಅರಿವು ನನಗಿದೆ. ವರ್ತಮಾನವನ್ನು ಸಮಗ್ರವಾಗಿ ಗ್ರಹಿಸಬೇಕಾದರೆ ಪರಂಪರೆಯ ಅರಿವೂ ಮುಖ್ಯ ಹಾಗೂ ಅದರಿಂದ ಬಿಡಿಸಿಕೊಳ್ಳುವುದು ಅಷ್ಟೇ ಮುಖ್ಯ. ಮಹಿಳೆಯರು ಮಹಿಳಾ ಪರಂಪರೆಯನ್ನು ತಿಳಿಯಬೇಕಾದ ಅಗತ್ಯ ಹಿಂದೆಂದಿಗಿಂತಲೂ ಇಂದು ಅಗತ್ಯವಾಗಿದೆ. ಬದುಕಿನ ಅನಿವಾರ್ಯಗಳಲ್ಲಿ, ಸೀಮಿತ ಪರಿಧಿಯಲ್ಲಿ ಬದುಕಲಾರದ ಮತ್ತು ಬದುಕಬೇಕಿಲ್ಲದ ಸಂಕ್ರಮಣ ಸ್ಥಿತಿಯಲ್ಲಿ ಹೆಣ್ಣಿದ್ದಾಳೆ. ಇಂದಿನ ಪುರುಷ ನಿರ್ಮಿತ ಸ್ತ್ರೀ ತನ್ನ ಪಾತ್ರದಿಂದ ಹೊರಬಂದು ತನ್ನ ನಿಜ ವ್ಯಕ್ತಿತ್ವ ಅರಿಯಬೇಕಾದರೆ ಪರಂಪರೆಯ ಅರಿವು ಇಂದಿನ ಆಧುನಿಕ ಹೆಣ್ಣಿಗೆ ಬೇಕಾಗಿದೆ.

೬. ಸಮಕಾಲೀನ ಮಹಿಳಾ ಅಭಿವ್ಯಕ್ತಿ ಬಗ್ಗೆ ನಿಮ್ಮ ಅನಿಸಿಕೆಗಳೇನು?

☞ ಸಮಕಾಲೀನ ಮಹಿಳೆಯರಲ್ಲಿ ಕೆಲವರು ಬಹಳ ಚೆನ್ನಾಗಿ ಬರೆಯುತ್ತಿದ್ದಾರೆ. ಹಿಂದೆಂದಿಗಿಂತಲೂ ಸ್ತ್ರೀಪ್ರಜ್ಞೆ ಅವರ ಬರಹಗಳಲ್ಲಿ ಒಡಮೂಡಿದೆ. ಆದರೆ ನನ್ನನ್ನೂ ಒಳಗೊಂಡಂತೆ

ಅದ್ಭುತ ಎನಿಸುವಂತೆ ಯಾವ ಲೇಖಕಿಯೂ ಬರೆಯುತ್ತಿಲ್ಲ. ಮಹಿಳೆಯ ಎಲ್ಲ ಮಗ್ಗುಲುಗಳನ್ನು ಸಾವಧಾನವಚಿತ್ತದಿಂದ ನೋಡುವ ಆಳ ವಿಸ್ತಾರ ಈ ಬರಹಗಳಿಗಿಲ್ಲ. ಪರಂಪರೆಯಿಂದ ಮುಕ್ತವಾದ ಹೊಸ ಮಹಿಳೆಯ ಹುಟ್ಟು ಬೇಕಾಗಿದೆಯೇ? ಊಹೂಂ ಇನ್ನೂ ಏನೋ ಬೇಕಾಗಿದೆ. ಆ ಏನೋ ಎನ್ನುವುದರ ಹಿಂದೆ ಹೋಗಬೇಕಾಗಿದೆ.

೭. ವೃತ್ತಿ ಜೀವನ ಮತ್ತು ಬರವಣಿಗೆ ಇವುಗಳ ಸಂಬಂಧವನ್ನು ಹೇಗೆ ಗ್ರಹಿಸುತ್ತೀರಿ?

☞ ಬರವಣಿಗೆಯ ವ್ಯಾಪ್ತಿ ಬಹಳ ದೊಡ್ಡದು. ಅದಕ್ಕೆ ವೃತ್ತಿಜೀವನವೇನು ಬದುಕಿನ ಪ್ರತಿಕ್ಷಣವೂ ವಸ್ತುವೇ ವಿಷಯವೇ. ಎಲ್ಲವೂ ಬರಹಕ್ಕೆ ಪೂರಕವಾದುದೇ. ವೃತ್ತಿ ಜೀವನ ಬರವಣಿಗೆಗೆ ಬಹುಮುಖ್ಯ ಸೋರ್ಸ್ ಎಂದೇ ಭಾವಿಸುತ್ತೇನೆ. ಜೀವನದ ಇತರ ಕ್ಷೇತ್ರಗಳನ್ನು ನೋಡುವ ತಿಳಿಯುವ ಅದನ್ನು ಬರಹದಲ್ಲಿ ಬಳಸಿಕೊಳ್ಳುವ ಅವಕಾಶವಿದ್ದರೆ ಸಾಹಿತ್ಯಕ್ಷೇತ್ರ ಅನಂತರ ಸಾಫ್ಟ್ ವೇರ್ ಕಂಪನಿ ಪ್ರಾರಂಭಿಸಿ ಅದರ ಏಳುಬೀಳುಗಳನ್ನು ಅನುಭವಿಸಿ ಅಲ್ಲಿಂದ ರಿಯಲ್ ಎಸ್ಟೇಟ್ ಉದ್ಯಮಕ್ಕೆ ಕಾಲಿಟ್ಟು ಸಾಕಷ್ಟು ಹೊರಜಗತ್ತಿಗೆ ತೆರೆದುಕೊಂಡಾಯ್ತು. ಅವೆಲ್ಲ ನನ್ನ ಬರವಣಿಗೆಗೆ ವಸ್ತುವಾದರೆ ಅದೊಂದು ಅಪೂರ್ವ ಕೊಡುಗೆಯಾಗಬಲ್ಲದು. ಅದನ್ನು ಸಾಧ್ಯವಾಗಿಸಿಕೊಳ್ಳಬೇಕಿದೆ.

ರೇಖಾರಾಣಿ ೦೫.೧೦.೨೦೦೯

೧. ನಿಮ್ಮ ಬಾಲ್ಯದ ಅನುಭವಗಳು ನಿಮ ಕಥೆಗಳಲ್ಲಿ ಮರು ಸೃಷ್ಟಿಯಾದ ಬಗೆಯನ್ನು ತಿಳಿಸುವಿರಾ?

☞ ನನಗೆ ಯಾವಾಗಲೂ ಮಾಸ್ತಿ ವೆಂಕಟೇಶ ಅಯ್ಯಂಗಾರರ ನಾಟಕದ ಮಾತ್ತೊಂದು ಸದಾ ನೆನಪಿಗೆ ಬರುತ್ತಿರುತ್ತದೆ. ನೋವನ್ನು ಕಾಣದ ನಕ್ಕನಗೆಯೇ ನಗೆ,

"ನೊಂದು ನೋವನ್ನು ನುಂಗಿ, ಆಮೇಲೆ ನಗುವ ನಗು ನಗೆಯಲ್ಲ..."

ಈ ಸಾಲುಗಳನ್ನು ಬಾಲ್ಯದಲ್ಲಿಯೇ ಓದಿ ಅರಗಿಸಿಕೊಂಡಿದ್ದೆ ಎಂದರೆ ನಂಬುತ್ತೀರಾ.

ಬಹುಶಃ ಅದೇ ಕಾರಣಕ್ಕೆ ಏನೇ... ಅಂದರೆ ಸಣ್ಣ ವಯಸ್ಸಿನಲ್ಲಿಯೇ 'ಎಲ್ಲವೂ' ಅರ್ಥವಾಗುತ್ತಿದ್ದುದರಿಂದಲೊ ಏನೋ ನನ್ನ ೧೩ನೆಯ ವಯಸ್ಸಿಗೆ ಕಾದಂಬರಿ ಬರೆದು ಮುಗಿಸಿಬಿಟ್ಟಿದೆ.

ನನ್ನ ಬಾಲ್ಯ ಸವಿಸವಿಯಾದ ಬಾಲ್ಯ ಏನಲ್ಲ... ಬಾಲ್ಯಸವಿಯೂ ಮುಗ್ಧತೆ ಬೇಕು ನಾನು ಬಹಳ ಬೇಗ ಮುಗ್ಧತೆಯ ಮೊಟ್ಟೆಯನ್ನು ಸೀಳಿ ಹೊರಲೋಕಕ್ಕೆ ಬಂದುಬಿಟ್ಟೆ.

ಪಿ.ಲಂಕೇಶರು ನನ್ನ ಬಗ್ಗೆ ಬರೆದಿರುವಂತೆ ನನ್ನ ಅಪ್ಪ ನಿಜಕ್ಕೂ ದೋಸ್ತೊ ವಯಸ್ಕಿನಯಲ್ಲಿ ಬರುವ Underground ನಿಂದ ನೇರವಾಗ ಬಂದಂತಹ ಒಬ್ಬ ವ್ಯಕ್ತಿ, ಒಂದು ರೀತಿಯಲ್ಲಿ ಆತನೇ ನನಗೆ ಗುರು ಬಹುಶ ನನ್ನ ಅಪ್ಪನಷ್ಟು ಕೃತಕ, ನಾಟಕೀಯತೆ, Oppetunist ಈ ಜಗತ್ತಿನಲ್ಲಿ ಮತ್ತೊಬ್ಬ ಹುಟಲಾರ ನನಗೆ ನನ್ನ ಅಪ್ಪನ ಎಲ್ಲ ತಪ್ಪುಗಳೂ ಅರ್ಥವಾಗುತ್ತಿದ್ದರೂ ನಾನವರನ್ನು ಬಹುವಾಗಿ

ಮೆಚ್ಚಿದೆ. ಏಕೆಂದರೆ ನನ್ನ ಅಪ್ಪನಿಗೆ ನಾನೇ ಪ್ರೀತಿಯ ಮಗಳು. ಆ ಅಪ್ಪನ ಮೇಲಿನ ಪ್ರೀತಿಯೇ 'ಏನೀಗ? ಏನಂತಹಾ ಮಹಾಪರಾಧ ಆಗಿರೋದು' ಎನ್ನುವ Mentalityಗೆ ದಾರಿಯಾಯಿತು. ಈಗಲೂ ನನ್ನದು ಅದೇ ಸ್ವಭಾವ!

ಆದರೂ ಬೆಳೆಯುತ್ತಾ (ವಯಸ್ಸಿನಲ್ಲಿ) ಹೋದಂತೆಲ್ಲಾ ಸರಿ-ತಪ್ಪುಗಳ ವಿಮರ್ಶೆ ನನ್ನೊಳಗೆ ಪ್ರಾರಂಭವಾಯಿತು.

ಇಂದಿಗೂ ಬಹಳಷ್ಟು ವಿಷಯಗಳಿಗೆ (ನಮ್ಮ ಸಮಾಜಕ್ಕೆ ಅನುಗುಣವಾಗಿ) ಸರಿ-ತಪ್ಪುಗಳ ಲೆಕ್ಕಾಚಾರ ನನಗೆ ತಿಳಿಯುವುದೇ ಇಲ್ಲ. ಎಲ್ಲರಿಗೂ ತಪ್ಪು ಅಂತ ಅನ್ನಿಸಿದ್ದು ನನಗೆ ಸರಿ ಅಂತ ಅನ್ನಿಸುತ್ತಿರುತ್ತದೆ.

ಇವುಗಳೆಲ್ಲದರ ಮಧ್ಯೆ ನನಗೆ ನನ್ನ ತಾಯಿಯ ಸರಳ, ಶಾಂತ ಸ್ವಭಾವದ ಬಗ್ಗೆ ಕನಿಕರವಾಗುತ್ತಿತ್ತು. ಆಕೆಗೆ ಮೋಸವಾಗುತ್ತಿರಬಹುದೆಂಬ ಅನುಮಾನ ನನ್ನ ತಂದೆಯ ಆರ್ಭಟದಲ್ಲಿ ಕರಗಿಹೋಗುತ್ತಿತ್ತು. ಆಗೆಲ್ಲ ಅನ್ನಿಸುತ್ತಿದ್ದುದು... 'ನನ್ನ ತಂದೆ ಎಲ್ಲಾ ಹೆಣ್ಣು ಮಕ್ಕಳ ಹತ್ತಿರ ಸಲುಗೆಯಿಂದ ಮಾತನಾಡಿದರೆ ಸರಿಯಂತೆ... ಅವ್ವ ರಸ್ತೆಯಲ್ಲ ಎರಡಿಂಚು ತಲೆ ಎತ್ತಿ ನಕೆದರೆ, ಅದ್ಯಾಕೆ ಅಪ್ಪನಿಗಿಷ್ಟು ಕೋಪ? ಅದರಲ್ಲಿ ತಪ್ಪೇನಿದೆ?' ಎಂದು.

ಈ ಅನಿಸಿಕೆಗಳೇ ಮುಂದೆ ಗಟ್ಟಿಯಾಗುತ್ತಾ ಹೋಗಿ 'ಕಲ್ಪನಾ ಬರಲೇ' ಇಲ್ಲ ಕಥೆಯಾಗಿ ಮೂರ್ತಿ ಬಂತು ಕಾಲ್ಪನಿಕವಾಗಿ ನಾನು ಅಮ್ಮನ ಪರವಾಗಿ ಅಪ್ಪನ ವಿರುದ್ಧ ಸೇಡು ತೀರಿಸಿಕೊಂಡುಬಿಟ್ಟೆ.

ಬಾಲ್ಯದ ನೆನಪುಗಳಿಗೆ ಮಾನಸಿಕ ಗೋಡೆಗಳು ಬಹಳ ಕಡಿಮೆ, ಹೀಗಾಗಿ ಬಹಳ ದಟ್ಟವಾಗಿ ಅವು ಸದಾ ಮನಸ್ಸಿನ ಮೂಲೆಯಲ್ಲಿ ಎಂದೆಂದೂ Erase ಆಗದೆ ಕುಳಿತಿರುತ್ತವೆ. ಗಟ್ಟಿಪಿಂಡಗಳಾ!

೨. ನಿಮ್ಮ ಬಾಲ್ಯದ ಪರಿಸರ ಅಂದರೆ ಹುಟ್ಟಿ ಬೆಳೆದ ಪ್ರದೇಶದ ಜೀವನ ವಿಧಾನ ನಿಮ್ಮ ಕಥೆಗಳಲ್ಲಿ ತುಂಬಿಕೊಂಡಿದೆ ಎಂದು ಅನ್ನಿಸುತ್ತದೆ. ಬಾಲ್ಯವನ್ನು ಮೀರಿ ಈಗ ಬದುಕುತ್ತಿರುವ ಪರಿಸರ ನಿಮ್ಮ ಕಥೆಗಳಲ್ಲಿ ಕಂಡು ಬರುವುದು ಕಡಿಮೆ. ಇದು ನಿಮ್ಮ ಸಮಸ್ಯೆಯಲ್ಲ, ಬಹುತೇಕ ಕಥೆಗಾರರ ಸಮಸ್ಯೆ. ಇದಕ್ಕೆ ನಿಮ್ಮ ಅಭಿಪ್ರಾಯವೇನು?

☞ ಬಾಲ್ಯಾದ ಪರಿಸರ ಖಂಡಿತಾ ನನ್ನ ಕಥೆಗಳಲ್ಲಿ ಎದ್ದು ಕಾಣುತ್ತದೆ. ಏಕೆಂದರೆ ನನ್ನ ಪ್ರಕಾರ ಬಾಲ್ಯದ ನೆನಪುಗಳನ್ನು ಮೀರಿದ ಜೀವನ ಯಾವುದೂ ಇಲ್ಲ. ಬಾಲ್ಯ ಅಂದರೆ foundation ತಾನೇ.

ಇನ್ನು ನಾನು ಹುಟ್ಟಿ ಬೆಳೆದ ಪ್ರದೇಶದ ಜೀವನ ವಿಧಾನ ಕಥೆಗಳಲ್ಲಿ ಸಂಪೂರ್ಣ ಆವರಿಸಿಕೊಂಡಿರುವುದು ಸತ್ಯ.

ಕಥೆ ಅಂದರೆ ಏನು? ಒಂದು Compotment ನಿಂದ ಇನ್ನೊಂದು Compotment ಗೆ unload ಮಾಡೋದೆ ತಾನೆ ಕಥೆ.

ಎಲ್ಲೋ ಏನೋ ನೋಡಿದ್ದು, ಮತ್ತೆಲ್ಲೋ ಕೇಳಿದ್ದು ಇವೆಲ್ಲ ಮನಸ್ಸಿನೊಳಗೆ ಕುಳಿತು ಸ್ವಂತ ನೆನಪುಗಳ ಸಂಗ್ರಹದಿಂದ ನೂಲನ್ನು ತೆಗೆದು ಒಂದಕ್ಕೊಂದು ಘಟನೆಗಳನ್ನು, ಅನುಭವಗಳನ್ನು ಹೆಣೆಯುತ್ತಾ ಹೋಗಿ ವಿಚಿತ್ರವಾಗಿ ನನ್ನದೇ ಹೌದು ಆದರೆ ನನ್ನದಲ್ಲ ಎಂಬಂತೆ ಕಥೆಗಳು ಹುಟ್ಟಿಕೊಳ್ಳುತ್ತವೆ. ಅದನ್ನು ಮನಸ್ಸಿನ Compontment (ಬೋಗಿ) ಮತ್ತೊಂದು ರೂಪಕ್ಕೆ ಇಳಿಸುತ್ತೇವೆ. (ಪುಸ್ತಕ)

ನೀವು ಕೇಳಿರುವಂತೆ ನನ್ನ ಬಾಲ್ಯವೇ ನನ್ನ ಜೀವನವೇನಲ್ಲ. ಬಾಲ್ಯವನ್ನು ಮೀರಿ ನಾನು ಮೇಲೆ ಬಂದಿದ್ದೇನೆ. ಈಗ ಬದುಕುತ್ತಿರುವ ಪರಿಸರ ನನ್ನ ಕಥೆಗಳಲ್ಲಿ ಕಂಡು ಬರುತ್ತದೆ. ಮೊದಲೇ ಹೇಳಿದಂತೆ ಬಾಲ್ಯ Foundation ಈಗಿನ ಬದುಕು ಗೋಡೆಗಳು.

ಬಾಲ್ಯದಲ್ಲಿ ಕಂಡಿಲ್ಲದ, ಕೇಳಿಲ್ಲದ ಎಷ್ಟೋ ಅನುಭವಗಳು ಈಗಿನ ಜೀವನ ವಿಧಾನದಲ್ಲಿ ದಕ್ಕಿವೆಯಲ್ಲ... ಅದೇ ತಾನೇ 'ಅರ್ಥವಾಗದವರು' ಪ್ರೀತಿಯಲ್ಲಿ ಕ್ಷಮೆಯಿರಲಿ... ಎಲ್ಲಾ!

೩. ಸಮಕಾಲೀನ ಬದುಕು ಕಥೆಯಲ್ಲಿ ಮರುಸೃಷ್ಟಿಸುವುದು ಸಮಸ್ಯೆಯೆ ವಿವರಿಸಿರಿ?

☞ ಸಮಕಾಲೀನ ಬದುಕು ಕಥೆಯಲ್ಲಿ ಮರುಸೃಷ್ಟಿಸಲು ಯಾಕೆ ಸಮಸ್ಯೆ? ಎಲ್ಲರೂ ಸೃಷ್ಟಿಸುತ್ತಿದ್ದರಲ್ಲ... ನಾನಂತೂ ನನ್ನ ಬದುಕಿನ ಜೊತೆ ನಡೆಯುತ್ತಾ ಕಥೆಗಳಲ್ಲಿ ಬರವಣಿಗೆಗಳಲ್ಲಿ ಅದನ್ನು ಕುರಿತು ಕುಣಿದಾಡುತ್ತಾ ಬರೆಯುತ್ತಿದ್ದೀನಲ್ಲ...

ಸಮಕಾಲೀನ ಬದುಕನ್ನು ಕಥೆಯಲ್ಲಿ ಮರುಸೃಷ್ಟಿಸುವುದು ಸಮಸ್ಯೆಯಲ್ಲ. ಸಮಕಾಲೀನರ ಜೊತೆ ಬದುಕುವುದು ಸಮಸ್ಯೆ! ಸಮಕಾಲೀನರ ಜೊತೆ ಸ್ಪಂದಿಸುವುದು ಸಮಸ್ಯೆ. ಸಮಕಾಲೀನರ ಜೊತೆ ಅವರ ಬಗ್ಗೆ ಬರೆದು ಅವರನ್ನು ಒಪ್ಪಿಸುವುದು ಸಮಸ್ಯೆ.

ಕಥೆ ಬರೆದು ಸಮಕಾಲೀನರ ವಿಮರ್ಶೆ ಕೇಳಿದರೆ ಸಮಸ್ಯೆ

ಕಥೆಗಳಾ ಯಾರವ್ವನ ಸ್ವತ್ತು ಅಲ್ಲ. ಅದಕ್ಕೆ ಅರಸನ ಅಂಕೆಯಿಲ್ಲ. ದೆವ್ವದ ಕಾಟ ಇಲ್ಲ. ಅದಕ್ಕೆ ಅಲ್ಲವೇ ಜೀವನಕ್ಕಿಂತಾ ಕಥೆಗಳೇ ಅರ್ಥಪೂರ್ಣವಾಗಿ ಸುಂದರವಾಗಿರುವುದು. ಈ ವೇಗದ ಯುಗದಲ್ಲಿ ಸಮಕಾಲೀನ ಬದುಕನ್ನು ಕಥೆಯಲ್ಲಿ ಮರುಸೃಷ್ಟಿಸದಿದ್ದರೆ... ಕಥೆಗಳಿಗೆ ಬೆಲೆಯೇ ಇಲ್ಲ. ಸ್ವಾರಸ್ಯವೂ ಇರುವುದಿಲ್ಲ.

೪. ಮಹಿಳೆಗೆ ತನ್ನ ಅನುಭವಗಳ ಅಭಿವ್ಯಕ್ತಿಗೆ ಒಂದು ಭಾಷೆ ಇದೆ ಹೇಗೆ ಅದು ಪುರುಷ ಭಾಷೆ ಹೆಣ್ಣಿನ ಭಾಷೆಯನ್ನು ರೂಪಿಸಿಕೊಳ್ಳಲು ಪ್ರಯತ್ನಿಸಿದ್ದಿರೇನು? ಅಥವಾ ಇದನ್ನು ಹೇಗೆ ಗ್ರಹಿಸುತ್ತೀರಿ?

☞ ಮಹಿಳೆಗೆ ತನ್ನ ಅನುಭವಗಳ ಅಭಿವ್ಯಕ್ತಿಗೆ ಇರುವ ಭಾಷೆಯೇ ನನ್ನ ಪ್ರಕಾರ ಎಲ್ಲರ ಭಾಷೆ. ಬಹುಶಃ ಹಿಂದೆ ಗಾಡಿನ ಭಾಷೆ ಪುರುಷ ಭಾಷೆ ಅಂತ ಕರೆಸಿಕೊಳ್ಳುತ್ತೇನೊ... ನನಗೇನೋ ಈ ಎರಡೂ ಭಾಷೆಗಳಲ್ಲಿ ಅಂತಹ ವ್ಯತ್ಯಾಸ ಕಾಣುತ್ತಿಲ್ಲ. ಅಥವಾ ಭಾಷೆಗೆ ಗಂಡಿನ ಭಾಷೆ ಹೆಣ್ಣಿನ ಭಾಷೆ ಅಂತಿಲ್ಲ, ಇರೋದು ಒಂದೇ ಭಾಷೆ ಅದು ಅಭಿವ್ಯಕ್ತಿ ಭಾಷೆ, ಅಷ್ಟೇ.

ಹೆಣ್ಣಿನ ಭಾಷೆ ಅಂದರೇನು? ಅದನ್ನ ನಾನ್ಯಾಕೆ ರೂಪಿಸಿಕೊಳ್ಳಬೇಕು ಗಂಡು ಹೆಣ್ಣಿನ ಭಾಷೆ ಒಂದೇ ಆದ್ಮೇಲೆ ನಾನ್ಯಾಕೆ 'ಹೆಣ್ಣಿನ ಭಾಷೆ' ಅಂತ Separate ಆಗಿ ನನ್ನ ಭಾಷೆಯನ್ನು ಕರೆಯಲ್ಲಿ

ನಾನು ಬರೆದಿದ್ದು ನಿಮಗರ್ಥವಾದರೆ ಅದೇ ನನ್ನ ಭಾಷೆ ಅದೇ ವರ್ಣಮಾಲೆಯನ್ನು ಬಳಸಿ, ಅದೇ ಪದಗಳನ್ನು, ವಾಕ್ಯಗಳನ್ನು ಬಳಸಿ ನಾನು ಬರೆಯುತ್ತೇನೆ, ನಾನು ಗಂಡಿನ ಹೆಸರಲ್ಲಿ, ಹೆಣ್ಣಿನ ಹೆಸರಲ್ಲಿ ಏನೇ ಬರೆದರೂ ನಿಮ್ಮ ಮನಸ್ಸು ನಾನು ಬರೆದಿದ್ದು ಬಿಟ್ಟು ಬೇರೆ ಏನನ್ನಿದರೂ ಗ್ರಹಿಸಲು ಸಾಧ್ಯವೇ ಹಾಗಿರೋದ್ರಿಂದ ಅದನ್ನ ಬರೀ ಭಾಷೆ ಅಂತ ಕರೀರಿ ಸಾಕು, ಪುರುಷ ಭಾಷೆ ಅಂತೆಲ್ಲಾ ಕರೆದು ಪುರುಷರಿಗೆ ಕೋಡು ಮೂಡಿಸಬೇಡಿ.

೫. ಪರಂಪರೆಯನ್ನು ಗ್ರಹಿಸಿ ಅಥವಾ ಓದಿನಿಂದ ಪಡೆದು ಬರೆಯುತ್ತೀರಾ ಅಥವಾ ಹಿಂದಣ ಹೆಜ್ಜೆಗಳ ಹಂಗು ಬೇಡ ಎನ್ನುವಿರಾ?

☞ ಪರಂಪರೆಯನ್ನು ಬೇಕಬೇಕೆಂದರೂ ಮನಸ್ಸು ಗ್ರಹಿಸುತ್ತಾ ಹೋಗುತ್ತದೆ. ಓದು ಅದಕ್ಕೊಂದು ರೂಪ ನೀಡುತ್ತದೆ.

ನನ್ನ ಬರವಣಿಗೆಯನ್ನು ನಾನೇ ಗಮನಿಸಿದಾಗ ಪರಂಪರೆಯನ್ನು ಗ್ರಹಿಸಿ ಬರೆದದ್ದು ಹೆಚ್ಚು ಅಂತ ಸ್ಪಷ್ಟವಾಗಿ ಅನ್ನಿಸುತ್ತಿದೆ.

ಓದುವ ಅಭ್ಯಾಸ ಪ್ರಾರಂಭವಾದದ್ದು ತಡವಾಗಿ. ಅದಕ್ಕಿಂತ ಮೊದಲೇ ತಲೆಯಲ್ಲಿ ಪರಂಪರೆಯೊಳಗಿನ ಚಿತ್ರಣಗಳೂ, ಕಲ್ಪನೆಗಳು, ಆಕಾರಗಳು ಪುಂಖಾನುಪುಂಖವಾಗಿ ಮೂಗಿ ಕಥೆಯಾಗಿ ರೂಪುಗೊಂಡಿತ್ತಲ್ಲ...

೬. ಸಮಕಾಲೀನ ಮಹಿಳಾ ಅಭಿವ್ಯಕ್ತಿ ಬಗ್ಗೆ ನಿಮ್ಮ ಅನಿಸಿಕೆಗಳೇನು?

☞ ಸಮಕಾಲೀನ ಮಹಿಳೆಯರ ಬಗ್ಗೆ ಅತ್ಯಂತ ಪ್ರೀತಿಯಿದೆ, ಅಭಿಮಾನವಿದೆ.

ಮೊದಲಿನಂತೆ ಮಹಿಳೆಯರು ಸುತ್ತಿ ಬಳಸಿ ಮಾತನಾಡುವುದರಿಂದ ಹೊರ ಬಂದು ನೇರವಾಗಿ, ನಿಷ್ಠೂರವಾಗಿ ಗ್ರಹಿಸಿ ಬರೆಯುತ್ತಿದ್ದಾರೆ. ನನ್ನ ಪ್ರಕಾರ ಈ ಶತಮಾನದ ಅದ್ಭುತ ಕವಿಯತ್ರಿ, ಶ್ರೀಮತಿ ಪ್ರತಿಭಾನಂದಕುಮಾರ್ ಎಂತಹಾ ಮೊನಚಾದ, ಅರ್ಥಗರ್ಭಿತ ಪದ್ಯಗಳು.

ಈ ಮೊದಲಾದರೆ ಬರೆಯಲು ಹಿರಿಯರ ಒಪ್ಪಿಗೆ ಕೇಳಬೇಕಿತ್ತು. ಅವರೊಪ್ಪಿದ ನಂತರ ಪ್ರಕಾಶಕರೊಪ್ಪಬೇಕಿತ್ತು. ಇವೆಲ್ಲ ಕಥೆಗಳ ಮುಗಿದನಂತರ ಅದು ಪತ್ರಿಕೆಗಳಲ್ಲಿ, ಪುಸ್ತಕಗಳ ರೂಪದಲ್ಲಿ ಹೊರ ಹೊಮ್ಮುತ್ತಿತ್ತು.

ಈಗ ಕಾಲ ಬದಲಾಗಿದೆ. ಹೆಣ್ಣುಮಕ್ಕಳು ನೇರವಾಗಿ ಮಾತನಾಡಬಲ್ಲರು, ಯೋಚಿಸಬಲ್ಲರು, ಅವರ ಅಭಿವ್ಯಕ್ತಿಯ ನಾನಾ ಮುಖ್ಯಗಳಾ ಇಂದು ರೇಡಿಯೋ, ಟಿ.ವಿ, ಕಂಪ್ಯೂಟರ್ ನೆಟ್, ಬ್ಲಾಗ್ ಇತ್ಯಾದಿ ಮೂಲಕ ಸಂಪೂರ್ಣವಾಗಿ ಕಾಣಿಸುತ್ತಿದೆಯಲ್ಲ... ಸಮಕಾಲೀನ ಮಹಿಳೆ ಎಲ್ಲರಿಗೂ, ಎಲ್ಲ ಕಾಲಕ್ಕೂ ಸರಿಸಾಟಿಯಾದ ಮಹಿಳೆ.

೭. ವೃತ್ತಿ ಜೀವನ ಮತ್ತು ಬರವಣಿಗೆ ಇವುಗಳ ಸಂಬಂಧವನ್ನು ಹೇಗೆ ಗ್ರಹಿಸುತ್ತೀರಿ?

☞ ವೃತ್ತಿ ಜೀವನ ಮತ್ತು ಬರವಣಿಗೆ...

ಇವೆರಡೂ ಯಾವತ್ತೂ ಒಂದನ್ನೊಂದು ಬಿಟ್ಟು ಹೊರಗೆ ಹೋಗಿಯೇ ಇಲ್ಲವಲ್ಲ...

ನೋಡಿ, ಈ ಮೊದಲು ನಾನು ಪತ್ರಿಕೆಯಲ್ಲಿ ಕೆಲಸ ಮಾಡುತ್ತಿದೆ. ನನ್ನ ಬರವಣಿಗೆಗೆ ನನ್ನ ವೃತ್ತಿ ಸದಾ ಪೂರಕವಾಗಿಯೇ ಇತ್ತು.

ನಂತರ ನಾನು ಟಿ.ವಿ, ಮಾಧ್ಯಮ ಹಾಗೂ ಚಲನಚಿತ್ರಗಳಲ್ಲಿ ನನ್ನನ್ನು ತೊಡಗಿಸಿಕೊಂಡೆ. ನಿರ್ಮಾಪಕಿಯಾಗಿ, ನಿರ್ದೇಶಕಿಯಾಗಿ, ಲೇಖಕಿಯಾಗಿ ಹಲವಾರು ಧಾರಾವಾಹಿಗಳನ್ನು ನಿರ್ಮಿಸಿದೆ. ಇಲ್ಲೂ ನನ್ನ ವೃತ್ತಿ ಜೊತೆಗೆ ನನ್ನ ಬರವಣಿಗೆಗೂ ಪ್ರಮುಖ ಸ್ಥಾನಮಾನ ಇತ್ತು.

ಹೀಗಾಗಿ ನಾನು ಇದುವರೆಗೂ ನನ್ನ ಬರವಣಿಗೆಗೆ ಸಂಬಂಧಿಸಿದಂತೆಯೇ ಕೆಲಸ ಮಾಡಿಕೊಂಡು ಬರುತ್ತಿದ್ದೇನೆಯೇ ಹೊರತು, ಬೇರೆಯೇ ವೃತ್ತಿಜೀವನ ನನಗೆ ಗೊತ್ತಿಲ್ಲ.

ಮುಂದೆ ಕೂಡಾ ನನ್ನ ವೃತ್ತಿ ಮತ್ತು ಬರವಣಿಗೆ ಒಂದರ ಜೊತೆಗೆ ಒಂದು ಪ್ರಯಾಣಿಸುತ್ತದೆ. ಹೀಗಾಗಿ ನನ್ನ ವೃತ್ತಿಜೀವನ ಎನ್ನುವುದಕ್ಕಿಂತ ನೀವು ವೃತ್ತಿ ಬರವಣಿಗೆ ಜೀವನ ಎಂದು ಕರೆಯಬಹುದು.

ವಿನಯ **೦೬.೧೦.೨೦೦೯**

೧. ನಿಮ್ಮ ಬಾಲ್ಯದ ಅನುಭವಗಳು ನಿಮ ಕಥೆಗಳಲ್ಲಿ ಮರು ಸೃಷ್ಟಿಯಾದ ಬಗೆಯನ್ನು ತಿಳಿಸುವಿರಾ?

☞ ನನ್ನ ಕಥೆಗಳಲ್ಲಿ ಬಾಲ್ಯದ ಅನುಭವಲೋಕ ಅನಾವರಣಗೊಳ್ಳುತ್ತದೆ ಅನ್ನಿಸುತ್ತದಾದರೂ ಅದು ಬಾಲ್ಯದಲ್ಲಿ ಗ್ರಹಿಸಿದ ಅನುಭವವಲ್ಲ. ಇಂದು ಎಂಬ ಈ ವರ್ತಮಾನದಲ್ಲಿ ಅನ್ಯ ಕಾರಣಗಳಿಂದ ಚಿಂತನೆಗಳಿಂದ ರೂಪುಗೊಂಡ ಪ್ರಜ್ಞೆ ಬಾಲ್ಯದ ಅನುಭವವನ್ನು ಇಂದಿನ ಕಣ್ಣಿನಲ್ಲಿ ಪುನರ್‌ರೂಪಿಸಿಕೊಳ್ಳುತ್ತದೆ. ಸ್ತ್ರೀವಾದಿ ಚಿಂತನೆಯ ಸ್ಪರ್ಶವಿಲ್ಲದಿದ್ದರೆ, 'ಒಂದು ಖಾಸಗಿ ಪತ್ರ' ಬರೆಯಲು ಕೋಮುವಾದ ವಿರೋಧಿ ಪ್ರಜ್ಞೆಯ ಒತ್ತಡವಿಲ್ಲದಿದ್ದರೆ 'ಊರ ಒಳಗಣ ಬಯಲು' ಕಥೆಯನ್ನು ಬರೆಯುವುದು ಸಾಧ್ಯವಿರಲಿಲ್ಲ. ಬಾಲ್ಯದ ಅನುಭವದ ತುಣುಕುಗಳು ವರ್ತಮಾನವನ್ನು ಸಂವಹನಿಸುವ ಒತ್ತಾಸೆಗಳಾಗುತ್ತವೆ. ಕಥೆಗಳಲ್ಲಿ ಅನುಭವಗಳೇ ಮರುಸೃಷ್ಟಿಗೊಳ್ಳುತ್ತವೆ. ಆದ್ದರಿಂದ ಅದನ್ನು ಬಾಲ್ಯದ ಅನುಭವ ಎನ್ನಲು ಸಾಧ್ಯವಿಲ್ಲ. ಯಾಕೆಂದರೆ ಬಾಲ್ಯದಲ್ಲಿ ಅನುಭವದ ಗ್ರಹಿಕೆ ಈ ರೀತಿಯದಾಗಿರುವುದಿಲ್ಲ.

೨. ನಿಮ್ಮ ಬಾಲ್ಯದ ಪರಿಸರ ಅಂದರೆ ಹುಟ್ಟಿ ಬೆಳೆದ ಪ್ರದೇಶದ ಜೀವನ ವಿಧಾನ ನಿಮ್ಮ ಕಥೆಗಳಲ್ಲಿ ತುಂಬಿಕೊಂಡಿದೆ ಎಂದು ಅನ್ನಿಸುತ್ತದೆ. ಬಾಲ್ಯವನ್ನು ಮೀರಿ ಈಗ ಬದುಕುತ್ತಿರುವ ಪರಿಸರ ನಿಮ್ಮ ಕಥೆಗಳಲ್ಲಿ ಕಂಡು ಬರುವುದು ಕಡಿಮೆ. ಇದು ನಿಮ್ಮ ಸಮಸ್ಯೆಯಲ್ಲಿ, ಬಹುತೇಕ ಕಥೆಗಾರರ ಸಮಸ್ಯೆ. ಇದಕ್ಕೆ ನಿಮ್ಮ ಅಭಿಪ್ರಾಯವೇನು?

☞ ನಾನು ಹುಟ್ಟಿ ಬೆಳೆದ ಪರಿಸರವನ್ನು ಬಿಟ್ಟು ಬದುಕಬೇಕಾದ ಸಂದರ್ಭದಲ್ಲಿ ಅದರೊಂದಿಗಿನ ಗಾಢವಾದ ಸಂಬಂಧ ಅರಿವಿಗೆ ಬಂತು. ಒಂದು ಬಗೆಯ ಕಳಚಿಕೊಂಡ ಭಾವ ಸತಾಯಿಸಲು ಶುರುವಾಯ್ತು. ಅನುದಿನದ ಬದುಕಿನಲ್ಲಿ ಸಣ್ಣ ಸಣ್ಣ ಸಂಗತಿಗಳನ್ನೂ ಪ್ರಜ್ಞಾಪೂರ್ವಕವಾಗಿ ಒಗ್ಗಿಸಿಕೊಳ್ಳಬೇಕಾದಾಗ ಒಂಟಿತನ ಕಾಡಿತು. ಬಹುಶಃ ಈ ಭಾವದ ಕಾರಣದಿಂದ ಕಥೆಗಳಲ್ಲಿ ಅಲ್ಲಿಯ ವ್ಯಕ್ತಿ ಘಟನೆಗಳನ್ನು ಮರುಸೃಷ್ಟಿಸಿಕೊಳ್ಳುವ ಹಿತವನ್ನು ಹುಡುಕಿಕೊಂಡೆ.

೩. ಸಮಕಾಲೀನ ಬದುಕು ಕಥೆಯಲ್ಲಿ ಮರುಸೃಷ್ಟಿಸುವುದು ಸಮಸ್ಯೆಯೆ ವಿವರಿಸಿರಿ?

☞ ಯಾವುದೇ ಲೇಖಕ ತನ್ನ ಅಭಿವ್ಯಕ್ತಿಗೆ ಒಂದು ವಿಧಾನವನ್ನು ರೂಪಿಸಿಕೊಂಡಿರುತ್ತಾನೆ. ಅದು ಹೆಚ್ಚಾಗಿ ಬಾಲ್ಯದ ಜಗತ್ತಿನ ಪ್ರತ್ಯುತ್ಪನ್ನವಾಗಿರುತ್ತದೆ. ಸೃಜನಶೀಲತೆಯಲ್ಲಿ ಕಾಲದೂರ ಎನ್ನುವುದು ಸಂವೇದನೆಯ ಸಾಮೀಪ್ಯ ಎಂದಾಗುತ್ತದೆ. ಮತ್ತು ವ್ಯಕ್ತಿ ಸಂಬಂಧ ಲೋಕಸಂಬಂಧಗಳ ಜಂಜಡ ಕಡಿಮೆಯಾಗುತ್ತದೆ. ಅಲ್ಲದೇ ಅಭಿವ್ಯಕ್ತಿಯಲ್ಲಿ ಸಮಕಾಲೀನ ಸಂವೇದನೆ ಆಳದಲ್ಲಿ ಲೇಖಕ ರೂಪಿಸಿಕೊಂಡಿರುವ ಭಾಷಿಕ ನುಡಿಗಟ್ಟಿನೊಳಗೆ ಮಿಳಿತಗೊಳ್ಳುತ್ತದೆ. ಹಾಗಾಗಿ 'ಬಾಲ್ಯದ ಪರಿಸರದ ಕಥೆ', 'ಈಗಿನ ಪರಿಸರದ ಕಥೆ' ಎಂಬ ವರ್ಗೀಕರಣವೇ ಕಷ್ಟದ್ದು.

೪. ಮಹಿಳೆಗೆ ತನ್ನ ಅನುಭವಗಳ ಅಭಿವ್ಯಕ್ತಿಗೆ ಒಂದು ಭಾಷೆ ಇದೆ ಹೇಗೆ ಅದು ಪುರುಷ ಭಾಷೆ ಹೆಣ್ಣಿನ ಭಾಷೆಯನ್ನು ರೂಪಿಸಿಕೊಳ್ಳಲು ಪ್ರಯತ್ನಿಸಿದ್ದಿರೇನು? ಅಥವಾ ಇದನ್ನು ಹೇಗೆ ಗ್ರಹಿಸುತ್ತೀರಿ?

☞ ಸಮಕಾಲೀನ ಗ್ರಹಿಕೆಯಲ್ಲಿ ವ್ಯಕ್ತಿಪ್ರಜ್ಞೆ ಗಾಢವಾಗಿರುತ್ತದೆ. ತಾನೆಂಬುದಿಲ್ಲದ ನಿರ್ಲಿಪ್ತ ತೊಡಗಿಸಿಕೊಳ್ಳುವಿಕೆಗೆ ಸೃಜನಶೀಲ ತೀವ್ರತೆ ಬೇಕು. ಸಮಕಾಲೀನ ಬದುಕು ಕಥೆಯಲ್ಲಿ ಮರುಸೃಷ್ಟಿಗೊಳ್ಳುವಾಗ ತನ್ನ ಈಗಿನ ಐಡೆಂಟಿಟಿಯನ್ನು ಕಳೆದುಕೊಳ್ಳಬೇಕಾಗುತ್ತದೆ. ಆಗ ಇಂದಿನ ಅನುಭವ ಹಿಂದಿನ ಪರಿಸರದಲ್ಲಿ ಸಂಕರಗೊಳ್ಳುತ್ತದೆ. ಭಿನ್ನ ಆಕೃತಿಯಾಗುತ್ತದೆ. ಆ ಮೂಲಕ ಅದು ದೇಶ ಕಾಲಗಳನ್ನು ಹಿಗ್ಗಿಸಿಕೊಳ್ಳುತ್ತದೆ. ಹೀಗಾಗಿ ಕಥೆಗಳಲ್ಲಿ ಸಮಕಾಲೀನ ಬದುಕು ಮರುಸೃಷ್ಟಿಗೊಳ್ಳುತ್ತಲೇ ಇರುತ್ತದೆ.

೫. ಪರಂಪರೆಯನ್ನು ಗ್ರಹಿಸಿ ಅಥವಾ ಓದಿನಿಂದ ಪಡೆದು ಬರೆಯುತ್ತೀರಾ ಅಥವಾ ಹಿಂದಣ ಹೆಜ್ಜೆಗಳ ಹಂಗು ಬೇಡ ಎನ್ನುವಿರಾ?

ಭಾಷೆ ಪ್ರಧಾನ ಸಂವೇದನೆಯನ್ನು ಅವಲಂಭಿಸಿರುವುದರಿಂದ ಅದು ಪುರುಷ ಭಾಷೆ. ಆದರೆ ನುಡಿಗಟ್ಟುಗಳನ್ನು, ಲಯವನ್ನು, ಧ್ವನಿಯನ್ನು ವಿಭಜಿಸಿಕೊಳ್ಳುತ್ತ ಮಹಿಳೆ ತನ್ನ ಸಂವೇದನೆಯನ್ನು ರೂಪಿಸಿಕೊಳ್ಳುತ್ತಾನೆ. ಅನುನಯದ ಲಯವನ್ನು ವಿಶಿಷ್ಟತೆಯಾಗಿ, ಅಧೀನತೆಯನ್ನು ಅಭಿಮಾನವಾಗಿ ಪರಿವರ್ತಿಸಿಕೊಳ್ಳುತ್ತ ತನ್ನ ಭಾಷೆಯನ್ನು ಕಟ್ಟಿಸಿಕೊಳ್ಳಬೇಕಾಗುತ್ತದೆ. ಪುರುಷ ದೃಷ್ಟಿಕೋನದಿಂದ

ಬಿಡುಗಡೆಗೊಂಡ ಸಂವೇದನೆಯನ್ನು ರೂಪಿಸಿಕೊಂಡಾಗ ಮಹಿಳಾ ಭಾಷೆಯೊಂದು ರೂಪುಗೊಳ್ಳುತ್ತದೆ. ಆಗ ಮಾತಿನ ಧಾಟಿ, ಮೌನ, ಪ್ರಶ್ನೆ, ವಿರಾಮ, ತಪ್ತಧ್ವನಿಗಳೆಲ್ಲವೂ ಶಬ್ದಾರ್ಥಗಳ ಸಾಧ್ಯತೆಯನ್ನು ಬದಲಿಸುತ್ತವೆ.

೬. ಸಮಕಾಲೀನ ಮಹಿಳಾ ಅಭಿವ್ಯಕ್ತಿ ಬಗ್ಗೆ ನಿಮ್ಮ ಅನಿಸಿಕೆಗಳೇನು?

☞ ಪರಂಪರೆಯ ಓದು ಗ್ರಹಿಕೆಯ ವಿಸ್ತರಣೆಗೆ ಸಹಾಯಕ ನಿಂದ ನಿಲುವನರಿಯಲು ಹಿಂದಣ ಹೆಜ್ಜೆಗಳ ಅರಿವು ಬೇಕು. ಇದೊಂದು ಸಹಜ ಗ್ರಹಿಕೆಯ ವಿಧಾನ. ಇಂದಿನ ಬರವಣಿಗೆಯನ್ನು ಪರಂಪರೆಯ ಓದು ನಿರ್ವಹಿಸುತ್ತದೆ ಅಂತಿಲ್ಲ. ಇಂದಿನ ಬರವಣಿಗೆ ವರ್ತಮಾನಕ್ಕೆ, ದೃಷ್ಟಿಕೋನಕ್ಕೆ ಋಣಿಯಾಗಿ ಇರುತ್ತದೆ.

೭. ವೃತ್ತಿ ಜೀವನ ಮತ್ತು ಬರವಣಿಗೆ ಇವುಗಳ ಸಂಬಂಧವನ್ನು ಹೇಗೆ ಗ್ರಹಿಸುತ್ತೀರಿ?

☞ ಸಮಕಾಲೀನ ಮಹಿಳಾ ಅಭಿವ್ಯಕ್ತಿ ಪ್ರಧಾನ ಪರಂಪರೆಯೊಂದಿಗೆ ತನ್ನನ್ನು ಗುರ್ತಿಸಿಕೊಂಡಿದೆ. ಮಹಿಳಾ ಸಾಹಿತ್ಯ ಎಂಬ ಉಪೇಕ್ಷೆ ಮತ್ತು ಉದಾರತೆಗಳ ಅಗತ್ಯವಿಲ್ಲ. ಮಹಿಳಾ ಅಭಿವ್ಯಕ್ತಿ ಸ್ವಸಂವೇದನೆಯನ್ನು ರೂಪಿಸಿಕೊಂಡಿದೆ. 'ಮಹಿಳಾ ಸಂವೇದನೆ' ಎಂಬ ಪೂರ್ವ ನಿರ್ಧರಿತ ನಿಶ್ಚಿತ ಚೌಕಟ್ಟನ್ನು ಉಲ್ಲಂಘಿಸಿಕೊಂಡಿದ್ದು ಪ್ರಜ್ಞೆಯ ವಿಸ್ತರಣೆಯಾಗಿದೆ.

ವೃತ್ತಿಜೀವನ ಬರವಣಿಗೆಗೆ ಅಗತ್ಯವಾದ ಅನುಭವವನ್ನು ಒದಗಿಸುತ್ತದೆ. ಆದರೆ ಬರವಣಿಗೆಗೆ ಬೇಕಾದ ಕಾಲವನ್ನು ಕಬಳಿಸುತ್ತದೆ. ಬರವಣಿಗೆ ಮತ್ತು ವೃತ್ತಿಗಳಲ್ಲಿ ಆದ್ಯತೆ ಬರವಣಿಗೆಯದಾಗುತ್ತ, ಬರವಣಿಗೆಗೆ ಬೇಕಾದ ಧ್ಯಾನಸ್ಥ ಸ್ಥಿತಿ ಕಳೆದುಹೋಗುತ್ತದೆ. ಈ ಕಳೆದು ಕೂಡುವ ಕಸರತ್ತನ್ನು ಸರಿಯಾಗಿ ನಿರ್ವಹಿಸಬೇಕಾದ ಒತ್ತಡ ನಿರ್ಮಾಣವಾಗುತ್ತದೆ.

ವೇದಾ ಎಂ.ಎಸ್. **೨೮.೦೮.೨೦೦೮**

೧. ನಿಮ್ಮ ಬಾಲ್ಯದ ಅನುಭವಗಳು ನಿಮ ಕಥೆಗಳಲ್ಲಿ ಮರು ಸೃಷ್ಟಿಯಾದ ಬಗೆಯನ್ನು ತಿಳಿಸುವಿರಾ?

☞ ಯಾವೊಬ್ಬ ಲೇಖಕ ಅಥವಾ ಲೇಖಕಿಗೂ ಬಾಲ್ಯವೇ ಅನುಭವಗಳ ಮುಖ್ಯ ಆಕರ, ಆಗರ ಎರಡೂ ಆಗಿರುತ್ತದೆ. ಅದರಿಂದ ನಾನು ಮತ್ತು ನನ್ನ ಸಾಹಿತ್ಯವೂ ಹೊರತಾಗಿಲ್ಲ ಈ ತನಕದ ಬಹುತೇಕ ಕಥೆಗಳು ಮತ್ತು ಜಮೀನು ಕಾದಂಬರಿಯ ವಸ್ತು ನನ್ನ ಬಾಲ್ಯದ ಸುಮಾರು ಹನ್ನೆರಡರಿಂದ ಆರಂಭಿಸಿ ಹದಿನೇಳು ಹದಿನೆಂಟರ ಅವಧಿಯ ಬದುಕಿಗೆ ಸಂಬಂಧಿಸಿದ್ದೇ ಆಗಿದೆ. ಪ್ರಾಯಶಃ ಇನ್ನು ಮುಂದೂ ಅದರೊಳಗಿನ ಅನುಭವಗಳೇ ಕಥೆಗಳಾಗಬಹುದು, ಕಾದಂಬರಿಯಾಗಬಹುದು. ಶ್ರೀಮಂತ ಬಾಲ್ಯವೇ ಬರಹಗಾರನ 'ಕರಗದ ನಿಧಿ' ಎಂದು ಹೇಳಬಹುದು.

೨. ನಿಮ್ಮ ಬಾಲ್ಯದ ಪರಿಸರ ಅಂದರೆ ಹುಟ್ಟಿ ಬೆಳೆದ ಪ್ರದೇಶದ ಜೀವನ ವಿಧಾನ ನಿಮ್ಮ ಕಥೆಗಳಲ್ಲಿ ತುಂಬಿಕೊಂಡಿದೆ ಎಂದು ಅನ್ನಿಸುತ್ತದೆ. ಬಾಲ್ಯವನ್ನು ಮೀರಿ ಈಗ ಬದುಕುತ್ತಿರುವ ಪರಿಸರ ನಿಮ್ಮ

ಕಥೆಗಳಲ್ಲಿ ಕಂಡು ಬರುವುದು ಕಡಿಮೆ. ಇದು ನಿಮ್ಮ ಸಮಸ್ಯೆಯಲ್ಲ, ಬಹುತೇಕ ಕಥೆಗಾರರ ಸಮಸ್ಯೆ. ಇದಕ್ಕೆ ನಿಮ್ಮ ಅಭಿಪ್ರಾಯವೇನು?

☞ ನನ್ನ ಬದುಕಿನ ಸಂದರ್ಭದ ವಿಶೇಷತೆ ಒಂದಿದೆ. ನಾನು ಹುಟ್ಟಿ, ಬೆಳೆದದ್ದು ಎಲ್ಲ ಮೈಸೂರಿನಲ್ಲಿ, ಮೈಸೂರಿಗೆ ಎಂಟು ಮೈಲಿ ದೂರದಲ್ಲಿದ್ದ ಕೂಡನಹಳ್ಳಿ (ತಂದೆಯ ಕಡೆಯಿಂದ) ನನ್ನ ತಾತನ ಊರು. ನಂಜನಗೂಡು ಸಮೀಪ ಬರುವ ಹದಿನಾರು ಗ್ರಾಮ (ತಾಯಿಯ ಕಡೆಯಿಂದ) ತಾತನ ಊರು. ಆಧುನಿಕತೆಯ, ನಾಗರಿಕತೆಯ ಸ್ಪರ್ಶವನ್ನು ತಮ್ಮ ಶಿಕ್ಷಣದ ಮೂಲಕ ಪಡೆದುಕೊಂಡ ತಂದೆಯವರು ಪಟ್ಟಣ, ನಗರ ಪ್ರದೇಶದವರೇ ಎಂಟು ವರ್ಷಕ್ಕೇ ಮದುವೆಯಾಗಿ ಮೈಸೂರಿಗೆ ಬಂದಿದ್ದರೂ, ಪಟ್ಟಣದ ನಾಗರಿಕತೆಗೆ ತಮ್ಮನ್ನು ತೆರೆದುಕೊಂಡಿದ್ದರೂ ಅಮ್ಮ, ತಮ್ಮೊಳಗೆ ತಮ್ಮ ಹಳ್ಳಿಯನ್ನು ಜೀವಂತವಿರಿಸಿಕೊಂಡಿದ್ದವರಾಗಿದ್ದರು. ಈ ನಡುವೆ ತಂದೆ, ಕೂಡನಹಳ್ಳಿಯಲ್ಲಿಜಮೀನು ಮಾಡಿಸುತ್ತಿದ್ದದ್ದು, ಜಮೀನಿಗೆ ಹೋಗಿ ವಾರಗಟ್ಟಲೆ ಇದ್ದು ಬರುತ್ತಿದ್ದದ್ದು ನಾನು ಬದುಕುತ್ತಿದ್ದ ಪರಿಸರ ಬದುಕುತ್ತಿರುವುದು ಪಟ್ಟಣದ ಪರಿಸರವಾದರೂ ನನ್ನ ಬಾಲ್ಯದ, ನನ್ನೊಳಗಿನ, ನನ್ನಮ್ಮನ ಪರಿಸರ ಅನ್ಯವಾಗಿ ಉಳಿದಿಲ್ಲ, ಎಷ್ಟೋ ಬಾರಿ ನಗರದ ಪರಿಸರಕ್ಕೆ ನಾನು, ನನ್ನ ವ್ಯಕ್ತಿತ್ವ ಅನ್ಯವಾಗಿ ಉಳಿದು ಬಿಡಬಹುದಾದ ಸಂದರ್ಭವನ್ನೇ ನಾನು ಎದುರಿಸಿದ್ದೇನೆ.

ಬಾಲ್ಯವನ್ನು ಮೀರಿ ಈಗ ಬದುಕುತ್ತಿರುವ ಪರಿಸರ ಕಥೆಗಳಲ್ಲಿ ಕಂಡು ಬರದೇ ಇರುವುದು ಸಮಸ್ಯೆಯೇನಲ್ಲ. ವಸ್ತುವನ್ನು ಕುರಿತಂತೆ ಯಾವೊಬ್ಬ ಬರಹಗಾರರಿಗೂ ಒಂದು ಮಾನಸಿಕ ದೂರ ಮುಖ್ಯ ಎನ್ನಿಸುತ್ತದೆ. ಎಡ್ವರ್ಡ್ ಬುಲ್ಲೋನಾ ಆ ಮಾತುಗಳು ಒಪ್ಪುವಂಥದ್ದೇ, ಆ ಒಂದು ದೂರ ಕ್ರಮಿಸಿದಾಗ ಇವತ್ತಿನ ಅನುಭವಗಳೂ ಅಭಿವ್ಯಕ್ತವಾಗಬಹುದು. ಕಾದು ನೋಡಬೇಕಿದೆ ನಾನು

೩. ಸಮಕಾಲೀನ ಬದುಕು ಕಥೆಯಲ್ಲಿ ಮರುಸೃಷ್ಟಿಸುವುದು ಸಮಸ್ಯೆಯೆ ವಿವರಿಸಿರಿ?

☞ ಸಮಸ್ಯೆ ಅಂತ ಏನೂ ಅಲ್ಲ. ಆದರೆ ಅನುಭವ, ಅಭಿವ್ಯಕ್ತಿ ಎರಡೂ ಪಕ್ವವಾಗಿಲ್ಲದ ಆತಂಕವನ್ನು ಬರವಣಿಗೆ ಎದುರಿಸಬೇಕಾಗ್ತದೆ ಅಂತ ಅನ್ನಿಸುತ್ತದೆ. ನಮ್ಮ ಗ್ರಹಿಕೆಗಳು, ತೀರ್ಮಾನಗಳು, ವಿಶ್ಲೇಷಣೆಗಳು ಹುಸಿಯಾಗಬಹುದಾದ ಸಾಧ್ಯತೆಗಳೂ ಇರ್ತದೆ. ಆ ಬದುಕಿನಿಂದ ಒಂದಷ್ಟು ದೂರ ಕ್ರಮಿಸಿದ ಮೇಲೆ ಆ ಕಡೆ ಹೋದರೆ ಆ ಸಾಧ್ಯತೆ ಕಡಿಮೆಯಾಗ್ತದೆ.

೪. ಮಹಿಳೆಗೆ ತನ್ನ ಅನುಭವಗಳ ಅಭಿವ್ಯಕ್ತಿಗೆ ಒಂದು ಭಾಷೆ ಇದೆ ಹೇಗೆ ಅದು ಪುರುಷ ಭಾಷೆ ಹೆಣ್ಣಿನ ಭಾಷೆಯನ್ನು ರೂಪಿಸಿಕೊಳ್ಳಲು ಪ್ರಯತ್ನಿಸಿದ್ದಿರೇನು? ಅಥವಾ ಇದನ್ನು ಹೇಗೆ ಗ್ರಹಿಸುತ್ತೀರಿ?

☞ ಯಾವುದೇ ಒಂದು ಭಾಷೆ ಸಾವಿರಾರು ವರ್ಷಗಳ ನಿರಂತರ ಪರವರ್ತನಾ ಪ್ರಕ್ರಿಯೆಯ ಫಲ. ಭಾಷೆ ಪುರುಷ ಪ್ರಧಾನ ವ್ಯವಸ್ಥೆಯಲ್ಲಿ, ಅದಕ್ಕೆ ತಕ್ಕಂತೆಯೇ ರೂಪುಗೊಂಡಿದ್ದು ಇತಿಹಾಸದ

ಸತ್ಯ ಕನ್ನಡ ಭಾಷೆಯನ್ನು ಅಭಿವ್ಯಕ್ತಿಗೆ ಬಳಸುವ ಅವಕಾಶ ಹೆಣ್ಣಿಗೆ ಸಿಕ್ಕಿದ್ದು ಶತಮಾನದಿಂದೀಚೆಗೆಷ್ಟೆ. ಅದಕ್ಕೂ ಹಿಂದೆ ವಚನಕಾರ್ತಿಯರು, ಅಕ್ಕ, ಹೊನ್ನಮ್ಮ... ಅಲ್ಲೊಂದು ಇಲ್ಲೊಂದು ಮಿಂಚುಗಳು, ಸಾಮಾಜಿಕ ಸಂವಹನ ಮಾಧ್ಯಮದ ಪ್ರಕ್ರಿಯೆಯಾಗಿರುವ ಭಾಷೆಯನ್ನ ಯಾರೋ ಒಬ್ಬರು, ಎಲ್ಲೋ ಒಂದು ಕಡೆ ಕುಳಿತು ಬರೆಯುವ ಮೂಲಕ ಸುಲಭವಾಗಿ ರೂಪಿಸಿಕೊಳ್ಳಲು ಸಾಧ್ಯವಿಲ್ಲ. ಮೊದಲಿಗೆ ಸಮಾಜದ ಆಲೋಚನಾ ಶೈಲಿ ಬದಲಾಗಬೇಕು. ಆಲೋಚನೆಗೆ ತಕ್ಕಂತೆ ಭಾಷೆಯೂ ಬದಲಾಗುತ್ತದೆ. ಇಲ್ಲದಿದ್ದರೆ ಮಹಿಳೆಯೇ ರೂಪಿಸಿಕೊಳ್ಳುವ ಭಾಷೆ 'ಪಾರಿಭಾಷಿಕ ಪದ'ದ ಸ್ಥಾನದಲ್ಲಿಯಷ್ಟೇ ವಿರಮಿಸಿಬಿಡುತ್ತದೆ. ನಾನು ಬದುಕುತ್ತಿರುವುದು ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ನನ್ನ ಅನುಭವಗಳು ಅಲ್ಲಿಂದ ಹೊರತಾದದ್ದಲ್ಲ. ಅದರ ಅಭಿವ್ಯಕ್ತಿಗೆ ಅದರೊಳಗಿನ ಭಾಷೆಯನ್ನೇ ಬಳಸುವುದು ಅನಿವಾರ್ಯಸ್ಥಿತಿ. ಕಥನ ನನ್ನ ಅಭಿವ್ಯಕ್ತಿಯ ಮುಖ್ಯ ಪ್ರಕಾರವಾಗಿರುವುದೂ ಅನಿವಾರ್ಯ ಸ್ಥಿತಿಯನ್ನು ಹಾಗೆಯೇ ಉಳಿಸಿದೆ. ಕಾವ್ಯದಲ್ಲಿ ತನ್ನದೇ ಭಾಷೆಯ ಹುಡುಕಾಟಕ್ಕೆ ಹೆಚ್ಚು ಅವಕಾಶವಿರುತ್ತದೆ. ಏಕೆದರೆ ಕಾವ್ಯ ತನ್ನ ಒಳಗಿನದರ ಜೊತೆಗೆ ವ್ಯವಹರಿಸುತ್ತದೆ. ಗದ್ಯ ತನ್ನ ಹೊರಗಿನದರ ಜೊತೆ ವ್ಯವಹರಿಸುತ್ತದೆ.

೫. ಪರಂಪರೆಯಸ್ನು ಗ್ರಹಿಸಿ ಅಥವಾ ಓದಿನಿಂದ ಪಡೆದು ಬರೆಯುತ್ತೀರಾ ಅಥವಾ ಹಿಂದಣ ಹೆಜ್ಜೆಗಳ ಹಂಗು ಬೇಡ ಎನ್ನುವಿರಾ?

☞ ಪರಂಪರೆ ಕುರಿತಂತೆ ಮಾತನಾಡುವಾಗ ಅಲ್ಲಮನ ಮಾತೊಂದು ನೆನಪಿಗೆ ಬರುತ್ತದೆ, "ಹಿಂದಣ ನೆಲೆಯನ್ನು ಅರಿತಲ್ಲದೆ ನಿಂದ ನೆಲೆಯನು ಅರಿಯಬಾರದು" ಯಾವುದೂ ಸ್ವಯಂ ಅಲ್ಲ. ಬರಹಗಾರನೂ ಅಷ್ಟೇ. ಪರಂಪರೆ ನನಗೆ ಬೇಕು. ನಾನು ಈಗ ಏನಾಗಿದ್ದೇನೋ ಅದರಲಿ ಪರಂಪರೆಯ ಪಾತ್ರದೂ ಇದೆ. ಕುವೆಂಪು, ಬೇಂದ್ರೆ, ಕಾರಂತ, ಅನಂತಮೂರ್ತಿ, ತೇಜಸ್ವಿ, ಚಿತ್ತಾಲ, ದೇವನೂರು, ವೈದೇಹಿ ಈ ಮುಂತಾದವರನ್ನೆಲ್ಲ ವಿಸ್ಮೃತಿಯಲ್ಲಿರಿಸಿ ನಾನು ಎಂಬುದು ಉಳಿಯಲು ಯಾವ ಬರಹಗಾರನಿಗೂ ಸಾಧ್ಯವಿಲ್ಲ. ಆಕಾಶದಲ್ಲಿ ಅರಳಿಕೊಂಡ ಹೂಗಳಿಗೆ ನೆಲದಾಳದ ಬೇರಿನ ಸತ್ವದ ಅರಿವು ಬೇಕ ಬೇಕು. ಅದು ಪ್ರಶ್ನಾರ್ಹ ಇಲ್ಲವೇ ಚರ್ಚೆಯ ವಿಷಯವೇ ಅಲ್ಲ.

೬. ಸಮಕಾಲೀನ ಮಹಿಳಾ ಅಭಿವ್ಯಕ್ತಿ ಬಗ್ಗೆ ನಿಮ್ಮ ಅನಿಸಿಕೆಗಳೇನು?

☞ ಹಿಂದೆಂದಿಗಿಂತಲೂ ಹೆಚ್ಚು ಬರಹಗಾರ್ತಿಯರು ವಿಶಿಷ್ಟವಾಗಿ, ವಿಭಿನ್ನವಾಗಿ ತಮ್ಮನ್ನು ಅಭಿವ್ಯಕ್ತಿಯಲ್ಲಿ ತೊಡಗಿಕೊಂಡಿದ್ದಾರೆ. ಸಂಖ್ಯೆಯಷ್ಟೇ ಗುಣವೂ ಸಹ ಬರಹಗಳಲ್ಲಿ ಕಂಡು ಬರುತ್ತಿದೆ. ಮಹತ್ವದ ಲೇಕಿಯರ ಸಂಖ್ಯೆ ಬೆರಳೆಣಿಕೆಯನ್ನು ಮೀರಿ ಬೆಳೆಯುತ್ತಿದೆ. ಆದರೆ ಸಾಕಷ್ಟು ಚರ್ಚೆಯಾಗುತ್ತಿಲ್ಲವಷ್ಟೆ. ಮಹಿಳಾ ಅಭಿವ್ಯಕ್ತಿಯನ್ನು ಪ್ರಾಮಾಣಿಕವಾಗಿ ಬರೆಗೆ ಹಚ್ಚುವ ಕೆಲಸ ಸಾಕಷ್ಟುನಡೆದಿಲ್ಲ. ನಡೆದಾಗ ಸಾಧನೆ ಪರಿಮಿತಿಗಳೇನು ಎಂಬುದೂ ಗುರುತಾಗುತ್ತದೆ.

೭. ವೃತ್ತಿ ಜೀವನ ಮತ್ತು ಬರವಣಿಗೆ ಇವುಗಳ ಸಂಬಂಧವನ್ನು ಹೇಗೆ ಗ್ರಹಿಸುತ್ತೀರಿ?

☞ ಅವೆರಡೂ ಬೇರೆ ಎನ್ನಿಸಿಲ್ಲ. ಕನ್ನಡ ಭಾಷೆ ಮತ್ತು ಸಾಹಿತ್ಯ ಬೋಧಿಸುವ ವೃತ್ತಿ! ವೃತ್ತಿಯಲ್ಲೂ ಸಾಹಿತ್ಯ ಪ್ರವೃತ್ತಿಯಲ್ಲೂ ಸಾಹಿತ್ಯ. ಪ್ರತಿವರ್ಷ ಹೊಸ ಹೊಸದಾಗಿ ಬರುವ ಮಕ್ಕಳು ನನ್ನ ಜೀವಭಾವಗಳಿಗೂ ಹೊಸತನ ತರುತ್ತಾರೆ. ಉಳಿದಂತೆ ಮನೆಗೆಲಸ, ಕಾಲೇಜಿನ ಕೆಲಸ, ಬರಹ ಇವೆಲ್ಲದರ ನಡುವೆ 'ಒತ್ತಡ' ಆಗಾಗ ತಲೆ ಹಾಕುವಂಥದ್ದೇ ಕೆಲಸ ಯಾವುದೇ ಇರಲಿ ಅದನ್ನು 'ಪ್ರೀತಿ'ಸುವ ಮನಸ್ಥಿತಿ ಇದ್ದರೆ ಒತ್ತಡವನ್ನು ನಿಭಾಯಿಸುವುದು ತೀರಾ ಕಷ್ಟವಲ್ಲ ಎನ್ನಿಸುತ್ತದೆ.

ಒಟ್ಟಾರೆಯಾಗಿ ಈ ಎಲ್ಲಾ ಕಥೆಗಾರ್ತಿಯರು ಸಮಂಜಸವಾಗಿ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸುತ್ತಾ ತಮ್ಮ ಬರವಣಿಗೆಯ ಸಾಧ್ಯತೆಗಳನ್ನು ವಿವಿಧ ರೀತಿಯಲ್ಲಿ ತೆರೆದಿಟ್ಟಿದ್ದಾರೆ. ಇಲ್ಲಿನ ಬಹುಪಾಲು ಕಥೆಗಾರ್ತಿಯರಿಗೆ ಬಾಲ್ಯದ ದಟ್ಟ ಅನುಭಗಳೆ ಉತ್ತಮ ಕಥೆಗಳಾಗಿ ಮೂಡಿಬಂದಿದೆ. ಶಾಂತಕುಮಾರಿಯವರು ತಮ್ಮ 'ನಿಂತು ಹೋದ ಗಡಿಯಾರ', 'ಜಾತಿಕೆಟ್ಟವರು', 'ಸಂಬಂಧ' ಇತ್ಯಾದಿ ಕಥೆಗಳಲ್ಲಿ ಬಾಲ್ಯದ ಅನುಭವಗಳು ಸಾಕ್ಷಿಯಾಗಿದ್ದು ಎರಡು ವಿಭಿನ್ನ ವರ್ಗಗಳ ಹೆಣ್ಣಿನ ಜೀವನವನ್ನು ಅನಾವರಣಗೊಳಿಸಿದ್ದಾರೆ. ಅಲ್ಲದೆ ಸುನಂದಾ ಅವರು ಬಾಲ್ಯವನ್ನು ಮೀರಿ ಸಮಕಾಲಿನ ಬದುಕಿನ ಚಿತ್ರಣವನ್ನು 'ತಂಕಿ', 'ಅಪ್ಪಿ', 'ಎನ್ನ ಪೂರವ ತೊಟ್ಟಿಲು' ಕಥೆಯಲ್ಲಿ ಕಾಣಿಸಿದ್ದಾರೆ. ಅಲ್ಲದೆ ರೇಖಾರಾಣಿಯರಿಗೆ ಬಾಲ್ಯದ ಮುಗ್ಧತೆ ದೊರೆಯದೆ ಹೋದರು ತಮ್ಮ ಕುಟುಂಬದಲ್ಲೇ ಸ್ವತಃ ತಂದೆ ತನ್ನ ತಾಯಿಯ ಮೇಲೆ ನಡೆಸಿದ ದೌರ್ಜನ್ಯವನ್ನು 'ಕಲ್ಪನೆ ಬರಲೇ ಇಲ್ಲ' ಕಥೆಯಲ್ಲಿ ಮೂಡಿಸಿದ್ದಾರೆ. ಅಲ್ಲದೆ ಇವರು ಸಹಾ ಸಮಕಾಲೀನ ಬದುಕನ್ನು ಕಥೆಯಲ್ಲಿ ಮರುಸೃಷ್ಟಿಸಿದ್ದಾರೆ ಇದು ಅವರಿಗೆ ಸಮಸ್ಯೆಯಾಗಿ ಕಂಡಿಲ್ಲ ಇದಕ್ಕೆ ಅವರ 'ಅರ್ಥವಾಗದವರು', 'ಪ್ರೀತಿಯಲ್ಲಿ ಕ್ಷಮೆಯಿರಲಿ' ಕಥೆ ಸಾಕ್ಷಿಯಾಗಿದೆ. ಆದರೆ ಸುಮಂಗಲಾ ಅವರಿಗೆ ಬಾಲ್ಯದ ದಟ್ಟ ಅನುಭವಗಳು ಕಥೆಯಾಗಿ ಮೂಡಿಬರದೆ ಸಮಕಾಲೀನ ಬದುಕಿನ ಅನುಭವಗಳನ್ನು ಕತೆಯಾಗಿಸಿದ್ದಾರೆ. ವೇದಾ ಅವರಿಗೆ ಬಾಲ್ಯದ ದಟ್ಟ ಅನುಭವಗಳು ಕಥೆಯಾಗಿ ಮೂಡಿ ಬಂದಿದೆ. ಹಾಗೂ ರಾಜಲಕ್ಷ್ಮೀಯವರಿಗೂ ಸಹಾ ಬಾಲ್ಯದ ಅನುಭವಗಳನ್ನು ಕಥೆಯಾಗಿ ಮೂಡಿಸಿದ್ದಾರೆ. ಇಲ್ಲಿ ಬಾಲ್ಯದ ಅನುಭವಗಳು ಕಥೆಯಾಗಿ ಮೂಡಿಸಿದ್ದಾರೆ. ಹೀಗೆ ಇಲ್ಲಿ ಬಾಲ್ಯದ ಅನುಭವಗಳ ಜೊತೆಗೆ ಕಂಡು ಕೇಳದ ಘಟನೆಗಳು, ಸಮಕಾಲೀನ ಬದುಕಿನ ದಿನನಿತ್ಯದ ಘಟನೆಗಳನ್ನು ಕಥೆಯಾಗಿ ರಚಿಸಬಹುದು. ಆದರೆ ಬಾಲ್ಯದ ಅನುಭವಗಳಿಂದ ಕೂಡಿದ ಕಥೆಗಳು ಹೆಚ್ಚು ನೈಜತೆಯನ್ನು ಪಡೆದಿರುತ್ತವೆ. ಅಲ್ಲದೆ ಕಥೆಗಾರ್ತಿಗೆ ಹಿಂದಿನ ಪರಂಪರೆಯ ಓದಿನ ಅವಶ್ಯಕತೆಯಿದ್ದು, ಅದನ್ನು ಹೆಚ್ಚು ಬಳಸಿಕೊಂಡು ಸೃಜನಶೀಲ ಕಥೆ ಮೂಡಲು ಸಾಧ್ಯ ಆದರೆ ಪರಂಪರೆಯ ಛಾಯೆಯಿಲ್ಲದೆ ತನ್ನದೇ ಆದ ಸಮಕಾಲೀನ ಬದುಕಿನ ಬದಲಾವಣೆಗಳನ್ನು ಕಥೆಯಾಗಿಸಿದ್ದಾರೆ. ಅಲ್ಲದೆ ಇಂದಿನ ಮಹಿಳಾ ಲೇಖಕಿಯರು ಬರವಣಿಗೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದು ಮತ್ತಷ್ಟು ಆಳವಾದ ವಿಚಾರಗಳನ್ನು

ಒಳಗೊಂಡು ನೈಜ ಅಭಿವ್ಯಕ್ತಿ ಮೂಡಿ ಬರಲು ಆಶಾವಾದವನ್ನು ಕಥೆಗಾರ್ತಿಯರು ವ್ಯಕ್ತಪಡಿಸಿದ್ದು, ಅಲ್ಲದೆ ಇಂದು ಮಹಿಳೆಯರು ಯಾವುದೇ ಹಂಗಿಲ್ಲದೆ ನಿರ್ಭಿಡೆಯಿಂದ ತಮ್ಮ ದೃಷ್ಟಿ, ಅನುಭವಗಳಿಗೆ ತಕ್ಕಂತೆ ಬರವಣಿಗೆಯನ್ನು ಮೂಡಿಸಿದ್ದು ಆದರೆ ಇಂತಹ ಬರವಣಿಗೆಗಳು ಸಾಕಷ್ಟು ಚರ್ಚೆಗೆ ಒಳಪಡಿಸದೆ ಇರುವುದು ವಿಷಾದದ ಸಂಗತಿಯಾಗಿದೆ. ಅಲ್ಲದೆ ನಾಗವೇಣಿಯವರು ತಮ್ಮ ಕಥೆಗಳಲ್ಲಿ ಬಾಲ್ಯದ ದಟ್ಟ ಅನುಭಗಳು ಮೂಡಿದ್ದು 'ತಾಯ್ತನ' ಕಥೆ ಸಾಕ್ಷಿಯಾಗಿದೆ ಅಲ್ಲದೆ ಮಹಿಳಾ ಭಾಷೆ, ಪುರುಷನ ಭಾಷೆ ಎಂಬ ಪ್ರತ್ಯೇಕವಾಗಿರದೆ ತನ್ನ ಸಹಜ ರೀತಿಯನ್ನು ತಮಗೊದಗಿದಂತೆ ಭಾಷೆಯನ್ನು ಕಥೆಯನ್ನು ಕಥೆಗಾರ್ತಿಯರು ಮೂಡಿಸಿದ್ದಾರೆ. ಹಿಂದಿನಿಂದಲೂ ಪುರುಷ ಭಾಷಾ ಚೌಕಟ್ಟಿನಲ್ಲಿ ಬರವಣಿಗೆ ಮೂಡಿದ್ದು ಇಂದಿನ ಮಹಿಳೆಯರು ಪ್ರತ್ಯೇಕ ಮಹಿಳಾ ಅಭಿವ್ಯಕ್ತಿಯ ಭಾಷೆಯ ಆಶಾವಾದವನ್ನು ವ್ಯಕ್ತಪಡಿಸಿದಂತೆ ಕಂಡುಬರುತ್ತದೆ. ಅಲ್ಲದೆ ಇಂದಿನ ಬಹುಪಾಲು ಕಥೆಗಾರ್ತಿಯರಿಗೆ ವೃತ್ತಿ ಜೀವನ ಬರವಣಿಗೆಗೆ ಪೂರಕವಾಗಿದ್ದು ಮತ್ತಷ್ಟು ಅನುಭವಗಳನ್ನು, ವಿಚಾರಗಳನ್ನು ಬದುಕಿನ ವಿವಿಧ ಮುಖಗಳನ್ನು ಕಂಡು ಕೊಳ್ಳಲು ಸಾಧ್ಯವಾಗುತ್ತದೆ.

ಹೀಗೆ ಕಥೆಗಾರ್ತಿಯರು ತಮ್ಮದೇ ಆದ ಅಭಿವ್ಯಕ್ತಿಯಲ್ಲಿ ಸಮಕಾಲೀನ ಮಹಿಳೆಯರ ತುಮುಲಗಳನ್ನು ತಮ್ಮದೇ ಆದ ವಿವಿಧ ಅನುಭಗಳಿಂದ ಮೂಡಿಸಿದ್ದಾರೆ ಎಂದು ಅಭಿಪ್ರಾಯಪಡುತ್ತೇನೆ.

ಅಧ್ಯಾಯ - ಏಳು

ಸಮಾರೋಪ

ಅಧ್ಯಾಯ - ಏಳು

ಸಮಾರೋಪ

ಈ ಪ್ರಬಂಧದ ಚರ್ಚೆಯಲ್ಲಿ ಸೇರಿಕೊಂಡಿರುವ ಕಥೆಗಾರರನ್ನು, ಅವರ ಧೋರಣೆಗಳನ್ನು ವಿವರಿಸಲಾಗಿದೆ. ೯೦ರ ದಶಕದಿಂದ ಈಚೆಗೆ ಬರೆಯುತ್ತಿರುವ ಕಥೆಗಾರ್ತಿಯವರ ಸಂಖ್ಯೆ ಹೆಚ್ಚಾಗುತ್ತಿದೆ. ಸಂಕಲನ ರೂಪದಲ್ಲಿ ಕಥೆಗಳು ಹೊರ ಬಂದಿವೆ. ಬರೆಯುತ್ತಿರುವವರ ಸಂಕಲನಗಳು ಹೊರ ಬರಲಿರುವವು. ಇವುಗಳನ್ನೆಲ್ಲ ಗಮನಿಸಿದಾಗ ಆರಂಭದ ಕಥೆಗಾರ್ತಿಯವರಿಗೆ ಇದ್ದ ಮುಖ್ಯ ಕಾಳಜಿಗಳು ವಿಧವ ಸಮಸ್ಯೆ ವರದಕ್ಷಿಣೆ ಸಮಸ್ಯೆ, ಬಾಲ್ಯವಿವಾಹ ಸಮಸ್ಯೆ ಮುಂತಾದವು ಆ ನಂತರದ ಕಥೆಗಾರ್ತಿಯರಿಗೆ ಇರಲಿಲ್ಲ. ಯಾಕೆಂದರೆ ಆಧುನಿಕತೆ ಕಾಲಿಟ್ಟ ಸಂದರ್ಭದಲ್ಲಿ ಸಂಪ್ರದಾಯಿಕ ಜೀವನ ಶೈಲಿಗೆ ಕೆಲವು ಸಮಸ್ಯೆಗಳು ಎದುರಾದವು. ಬ್ರಿಟೀಶ್ ಹೊಸ ಶಿಕ್ಷಣ ಪದ್ಧತಿಯಿಂದ ಮೂಢನಂಬಿಕೆಗಳು, ಅಂಧಾಚರಣೆಗಳು ಪ್ರಶ್ನಾರ್ಹವಾಗಿ ಕಂಡವು. ಅದರಲ್ಲೂ ಭಾರತದಲ್ಲಿ ನಡೆದ ಸುಧಾರಣ ಚಳುವಳಿ ಸಮಾಜದ ಮೇಲೆ ಪ್ರಭಾವ ಬೀರಿದವು. ವೈಚಾರಿಕತೆ, ವಿಚಾರವಾದ, ಪ್ರಗತಿಪರ ವಿಚಾರಗಳು ಸಂಪ್ರದಾಯವನ್ನು ಅಣಕಿಸಿದವು. ಬಾಲ್ಯವಿವಾಹ, ವಿಧವಾ ಸಮಸ್ಯೆ, ವರದಕ್ಷಿಣೆ ಮುಂತಾದವು ಮಹಿಳೆಗೆ ಸಂಬಂಧಿಸಿದ್ದವು. ಈ ಕಾರಣದಿಂದ ಮೊದಲ ತಲೆಮಾರಿ ಕಥೆಗಾರ್ತಿಯರು ಸಾಮಾಜಿಕ ಸಮಸ್ಯೆಗಳತ್ತ ಹೆಚ್ಚು ಕಾಳಜಿ ತೋರಿಸಿದರು.

ಸ್ವಾತಂತ್ರ್ಯ ನಂತರ ಭಾರತ ರಾಜಕೀಯ ಸ್ವಾತಂತ್ರ್ಯ ಪಡೆಯಿತು. ತನ್ನನ್ನು ತಾನು ಸ್ವತಂತ್ರವಾಗಿ ಮುನ್ನಡೆಯುವ ಜವಾಬ್ದಾರಿ ದೇಶಕ್ಕೆ ಬಂತು. ಪ್ರಜಾಪ್ರಭುತ್ವದಲ್ಲಿ ಪ್ರಜೆಗಳ ಸಮಸ್ಯೆ ಮುಖ್ಯ. ಆದರೆ ರಾಜ್ಯದ, ದೇಶದ ಆಳ್ವಿಕೆ ನಡೆಸುವ ಸರ್ಕಾರಗಳು ಪ್ರಜೆಗಳಿಗೆ ಯಾವ ಬೆಲೆ ಕೊಟ್ಟರು? ಬಡತನದ ಸಮಸ್ಯೆಯನ್ನು ಯಾವ ರೀತಿಯಲ್ಲಿ ಪರಿಹರಿಸಿದರು? ಇಂಥ ಮುಖ್ಯ ಪ್ರಶ್ನೆಗಳು ಸಮಾಜದಲ್ಲಿಕಂಡು ಬಂದವು. ಪ್ರಗತಿಶೀಲ ಸಾಹಿತ್ಯ ಚಳುವಳಿಯಲ್ಲಿ ತೊಡಗಿದವರು ಬಡತನವನ್ನು, ಅದರ ಸಮಸ್ಯೆಗಳನ್ನು ಎಳೆಎಳೆಯಾಗಿ ತಮ್ಮ ಕಥೆಗಳಲ್ಲಿ ಚಿತ್ರಿಸಿದರು. ಅನುಪಮಾ ನಿರಂಜನ, ಶ್ಯಾಮಲ ಬೆಳಗಾವಕರ, ವಾಣಿ,

ತ್ರಿವೇಣಿ ಮುಂತಾದವರು ಸಾಮಾಜಿಕವಾಗಿ, ಕೌಟುಂಬಿಕ ನೆಲೆಯಲ್ಲಿ ಪ್ರಗತಿಶೀಲ ಮನೋಧರ್ಮ ಹೊಂದಿ ಅದನ್ನು ಪ್ರತಿಪಾದಿಸಿದರು. ಸಾಹಿತ್ಯದಿಂದ ಸಮಾಜದ ಸುಧಾರಣೆ ತಕ್ಕಮಟ್ಟಿಗೆ ಆದೀತು ಎಂಬ ನಂಬಿಕೆಯಿಂದ ಬರೆದರು.

ಈ ನಡುವೆ 'ನವ್ಯ' ಸಾಹಿತ್ಯ ಪಂಥ ಕಾಣಿಸಿಕೊಂಡಿತು. ಸಮಾಜದ ಸಮಸ್ಯೆಗಳು ಎಷ್ಟು ಮುಖ್ಯವೋ ಅಷ್ಟೇ ಮುಖ್ಯ ವ್ಯಕ್ತಿಯ ಅಸ್ತಿತ್ವದ ಪ್ರಶ್ನೆ ಎಂದು ಪರಿಗಣಿಸಿತು. ಸಮಾಜವು ಅದರಲ್ಲಿರುವ ವ್ಯಕ್ತಿಗಳು ಸಿದ್ಧ ಮಾದರಿಯ ಜೀವನ ನಡೆಸುವವರು ಅವರಿಗೆ ಅಸ್ತಿತ್ವವೇ ಇಲ್ಲ. ಸಾಂಸ್ಥಿಕ ಜೀವನದಲ್ಲಿ ವ್ಯಕ್ತಿಗೆ ಸ್ವಾತಂತ್ರ್ಯವೇ ಇಲ್ಲಿ ಹೀಗಾಗಿ ಧರ್ಮ ದೇವರು, ಮದುವೆ, ಸಂಸಾರ ಎಲ್ಲವೂ ಸಾಂಸ್ಥೀಕರಣಗೊಂಡು ಸಿದ್ಧ ಸಾಂಪ್ರದಾಯಿಕ ಶೈಲಿಯಲ್ಲಿ ಜೀವನ ನಡೆಸಿಕೊಂಡು ಹೋಗುತ್ತಿವೆ. ಅವುಗಳಿಗೆ ಅಸ್ತಿತ್ವವೇ ಇಲ್ಲಿವೆಂದು ಸಿದ್ಧ ಜೀವನ ವಿಧಾನವನ್ನು ಪ್ರಶ್ನಿಸಿದರು. ಮನಷ್ಯನ ಅಸ್ತಿತ್ವ, ಸ್ವಾತಂತ್ರ್ಯ ಮುಖ್ಯವೆಂದು ಅವುಗಳನ್ನು ಪಡೆಯಲು ಹೋರಾಟ ನಡೆಸಿದರು. ನೈತಿಕತೆಗೆ ಹೊಸ ಅರ್ಥ ನೀಡಲು ಪ್ರಯತ್ನಿಸಿದರು. ಇದರ ಫಲವಾಗಿ ಕನ್ನಡದಲ್ಲಿ ಅಸ್ತಿತ್ವವಾದರ ಹಿನ್ನೆಲೆಯಲ್ಲಿ ನವ್ಯ ಸಾಹಿತ್ಯ ಪಂಥ ಬೆಳೆಯಿತು. ರಾಜಲಕ್ಷ್ಮಿ ಎನ್.ರಾವ್, ವೀಣಾಶಾಂತೇಶ್ವರ ಮುಂತಾದ ಕಥೆಗಾರ್ತಿಯರು ಮಹಿಳೆಯ ಅಸ್ತಿತ್ವವನ್ನು ಕುರಿತು ಆಲೋಚಿಸಿದರು ಈ ಸಂದರ್ಭದಲ್ಲಿ ಹೆಚ್ಚಿನ ಮಹಿಳೆಯರು ಕಥಾ ಸಾಹತ್ಯವನ್ನು ಬಲಪಡಿಸಲಿಲ್ಲ. ಅದಕ್ಕೆ ಅನೇಕ ಕಾರಣಗಳಿದ್ದವು. ಮಹಿಳೆ ಸ್ವಾತಂತ್ರ್ಯದಿಂದ ಇರುವುದೆಂದರೇನು? ಎಂಬ ಪ್ರಶ್ನೆ ಎದುರಾಯಿತು.

೭೦ ದಶಕದಿಂದ ಸಮಾಜದ ಕೆಳವರ್ಗದ ಸಮುದಾಯಗಳಿಗೆ ವಿದ್ಯೆ ಕಲಿಯುವ ಅವಕಾಶಗಳು ಹೆಚ್ಚು ಲಭಿಸಿದವು. ತಮ್ಮ ಚರಿತ್ರೆಯನ್ನು ಗ್ರಹಿಸುವ ಅವಕಾಶಗಳು ಎದುರಾದವು. ಅಂಬೇಡ್ಕರ್, ಪೆರಿಯಾರ್, ಲೋಹಿಯಾ ಮುಂತಾದವರ ಚಿಂತನೆಗಳು ಕೆಳವರ್ಗ, ಜಾತಿ ಸಮುದಾಯಗಳಿಗೆ ಬೆಂಬಲವಾಗಿ ನಿಂತವು. ಪ್ರಭಾವಿಸಿದವು. ಈ ಸಂದರ್ಭದಲ್ಲಿಯೂ ಜಾತಿ, ಧರ್ಮಗಳು ಪ್ರಶ್ನಾರ್ಹವಾಗಿ ಕಂಡವು. ಶೋಷಣೆಗೆ ಕಾರಣವಾಗುವ ವ್ಯವಸ್ಥೆಗಳನ್ನು ಪ್ರಶ್ನಿಸಲಾಯಿತು. ಇವು ದಲಿತ ಬಂಡಾಯ ಸಾಹಿತ್ಯ ಚಳುವಳಿಗೆ ಕಾರಣವಾದವು. ಈ ಸಂದರ್ಭದಲ್ಲಿ ಮಹಿಳೆಯರು ಸಾಹಿತ್ಯಿಯ ರಚನೆಯಲ್ಲಿ ಹೆಚ್ಚೆಚ್ಚು ತೊಡಗಿಸಿಕೊಂಡರು. ಮಹಿಳೆ, ದಲಿತರು, ಮುಸ್ಲಿಮರು ಎಲ್ಲ ದಮನೀತ ಸಮುದಾಯಗಳು ಎಚ್ಚೆತ್ತವು ಸಾಹಿತ್ಯದಲ್ಲಿ ಜವಾಬ್ದಾರಿ ಕಂಡು ಬಂತು. ಕಾವ್ಯ, ಕಥೆ, ವೈಚಾರಿಕ ಚಿಂತನೆ ಎಲ್ಲ ಪ್ರಕಾಶಗಳಲ್ಲಿ ಸಾಹಿತ್ಯ ರಚನೆಯಾಯಿತು.

೯೦ ರಿಂದ ಈಚೆಗೆ ಗ್ರಾಮೀಣ ಭಾಗದಿಂದ ಸಾಹಿತ್ಯ ವಲಯಕ್ಕೆ ಬಂದವರ ಧೋರಣೆಗಳು ಬೇರೆ ನಗರ ವಲಯದಲ್ಲಿದ್ದು ಅದೂ ಖಾಸಗೀ ವಿದೇಶಿ ಕಂಪನಿಗಳಲ್ಲಿ ಉದ್ಯೋಗಿಯೋಗಿಸುವವರು ಸಾಹಿತ್ಯ ವಲಯಕ್ಕೆ ಬಂದವರ ಧೋರಣೆಗಳ ನಡುವೆ ಭಿನ್ನತೆಗಳು ಕಂಡು ಬರುತ್ತಿವೆ. ಸಾಹಿತ್ಯದಿಂದ ಸಮಾಜದ ಸುಧಾರಣೆ, ಬದಲಾವಣೆ ಸಾಧ್ಯ ಎಂಬ ವಿಶ್ವಾಸದಿಂದ ಬರೆಯುವವರು ಇರುವಂತೆ, ಸಾಧ್ಯವಿಲ್ಲ ಎಂಬ

ಧೋರಣೆಯುಳ್ಳವರು ಇದ್ದಾರೆ. ಸಾಹಿತ್ಯ ರಚನೆಯಿಂದ ಸಮಾಜದಲ್ಲಿ ಕ್ರಾಂತಿಯಾಗುವುದಿಲ್ಲ ಎಂಬ ನಂಬಿಕೆ ಇರುವವರು ಸಾಹಿತ್ಯವು ರಸಾನಂದವನ್ನುಂಟು ಮಾಡುತ್ತದೆ. ಅದನ್ನು ಸವಿಯಬೇಕು ಎಂಬಿ ಒಲವು ಉಳ್ಳವರು ಆದರೆ ಸಾಹಿತ್ಯ ರಚನೆಯ ಹಿಂದೆ ಒಂದು ಉದ್ದೇಶ ಇರುತ್ತದೆಂದು ಎಲ್ಲರೂ ನಂಬಿರುವವರೆ. ಆದರೂ ಸಾಹಿತ್ಯ ಮನುಷ್ಯನ ಕಷ್ಟ ಸುಖಗಳಿಗೆ ದಾರಿದೀಪವಾಬಲ್ಲದೆಂಬ ನಂಬಿಕೆ ಇರುವರೇ ಹೆಚ್ಚಾಗಿದ್ದಾರೆ. ಜಾಗತೀಕರಣದಿಂದ ಸಮಾಜ ವೇಗವಾಗಿ ಬದಲಾಗಿದೆ. ಎಲ್ಲರಲ್ಲೂ ಶ್ರೀಮಂತರಾಗಬೇಕು. ಐಶಾರಾಮಿ ಜೀವನ ನಡೆಸಬೇಕು ಎಂಬ ಚಪಲ ಹೆಚ್ಚಾಗಿದೆ. ಕೊಳ್ಳುವ ದಾಹ ಹೆಚ್ಚಾಗಿದೆ. ಅಗತ್ಯಕ್ಕಿಂತ ಹೆಚ್ಚು ಅನುಕೂಲ ಹೊಂದಬೇಕೆಂಬ ಹಂಬಲ ಬಂದಿದೆ. ಇದರ ನಡುವೆ ಕೋಮುವಾದ, ಭಯೋತ್ಪಾದನೆಗಳು ಜ್ವತಂತ ಸಮಸ್ಯೆಗಳಾಗಿ ನಿಂತಿವೆ ಇಂಥ ಸಮಾಜವನ್ನು ಗ್ರಹಿಸಿ ಬರೆಯುವುದು ಕಷ್ಟವೇ, ಕರ್ನಾಟಕದ ಭಿನ್ನ ಭಿನ್ನ ಪ್ರಾಂತ್ಯಗಳಿಂದ ಹುಟ್ಟಿಕೊಂಡ ಕಥೆಗಾರ್ತಿಯರ ಸಮಸ್ಯೆಗಳು ಭಿನ್ನವಾಗಿರುತ್ತವೆ. ಅವುಗಳಿಗೆ ಕಾರಣವೆಂದರೆ ಸ್ಥಳೀಯ ಸಮಸ್ಯೆಗಳೇ ಕಾರಣವಾಗಿರುತ್ತವೆ. ಜಾತಿ, ಅಂತಸ್ತು, ಧೋರಣೆಗೆ ಅನುಗುಣವಾಗಿ ಸಾಹಿತ್ಯ ಹುಟ್ಟುತ್ತದೆ.

ಈ ಹಿನ್ನೆಲೆಯಲ್ಲಿ ಈ ಪ್ರಬಂಧದಲ್ಲಿ ಚರ್ಚೆಗೆ ಒಳಗಾದವರ ಈ ಕಾಲದ ಬಿಕ್ಕಟ್ಟುಗಳನ್ನು ತಮ್ಮ ಕಥೆಗಳಲ್ಲಿ ಕಟ್ಟಿದ್ದಾರೆ. ದ.ಕ.ಜಿಲ್ಲೆಯವರಾದ ಎಚ್.ನಾಗವೇಣಿ ಮತ್ತು ರಾಜಲಕ್ಷ್ಮಿ ಅವರ ಸಮಸ್ಯೆಗಳು, ಧೋರಣೆಗಳು ಭನ್ನವಾಗಿದೆ. ಪ್ರಾದೇಶಿಕತೆ ಕೂಡ ಭಿನ್ನ, ಕೋಮುವಾದ, ಶೋಷಣೆ, ಮಹಿಳಾ ಸ್ವಾತಂತ್ರ್ಯ ಮುಂತಾದ ಅಂಶಗಳು ಇವರ ಕಥೆಗಳಲ್ಲಿವೆ. ವಿನಯ, ಸಂಧ್ಯಾ, ಹೊನಕುಂಟೆಕರ್, ಸುಮಂಗಲಾ, ರೇಖಾರಾಣಿ, ಶಾಂತಕುಮಾರಿ ಇವರೆಲ್ಲ ತಮ್ಮ ಅನುಭವ ಧೋರಣೆಗೆ ಅನುಗುಣವಾಗಿ ಕಥೆಗಳನ್ನು ಬರೆದಿದ್ದಾರೆ. ಒಟ್ಟಿನಲ್ಲಿ ಈ ಕಾಲದ ಬಿಕ್ಕಟ್ಟುಗಳು ತಲ್ಲಣಗಳು ಆತಂಕಗಳು ಇದರ ಕಥೆಗಳಲ್ಲಿ ಮೂಡಿವೆ ಇವರೆಲ್ಲ ಇನ್ನೂ ಕಥಾ ಸಾಹಿತ್ಯವನ್ನು ರಚಿಸುವವರಿದ್ದಾರೆ. ಹೊಸ ತಲೆಮಾರಿನವರಾಗಿ ಜಾಗತೀಕರಣದಿಂದ ಉದ್ಭವಿಸಿದ ಸಮಸ್ಯೆಗಳಿಗೆ ಅವು ಸಾಮಾಜಿಕವಾಗಿ ಇರಲಿ, ಕೌಟುಂಬಿಕವಾಗಿ ಇರಲಿ, ವ್ಯಕ್ತಿಗತವಾಗಿ ಇರಲಿ ಅವುಗಳಿಗೆ ಮುಖಾಮುಖಿಯಾಗಿ ತಮ್ಮದೇ ಧೋರಣೆಯನ್ನು ಕಥೆಗಳಲ್ಲಿ ವ್ಯಕ್ತ ಪಡಿಸಿದ್ದಾರೆ.

ಅನುಬಂಧಗಳು

೧. ಮೂಲ ಪತ್ರಗಳು

೨. ಪರಾಮರ್ಶನ ಗ್ರಂಥಗಳು

೩. ನಿಯತಕಾಲಿಕೆಗಳು

ಮೂಲ ಪಠ್ಯಗಳು

೦೧. ಕೋಡಿಬೆಟ್ಟು ರಾಜಲಕ್ಷ್ಮಿ, ಒಂದು ಮುಷ್ಟಿ ನಕ್ಷತ್ರ, ಅಭಿನವ ಪ್ರಕಾಶನ, ಬೆಂಗಳೂರು.

೦೨. ಜಾಹ್ನವಿ ಬಿ.ಟಿ, ಕಳೆದುಕೊಂಡವಳು ಮತ್ತು ಇತರ ಕತೆಗಳು, ಪತ್ರಿಕೆ ಪ್ರಕಾಶನ, ಬೆಂಗಳೂರು, ೧೯೯೬

೦೩. ಜಾಹ್ನವಿ ಬಿ.ಟಿ, ಹುಡುಕಾಟ, ಮಾತಂಗ ಪ್ರಕಾಶನ, ಮೈಸೂರು. ೨೦೦೭

೦೪. ನಾಗವೇಣಿ, ನಾಕನೇ ನೀರು, ಪ್ರಕಾಶಕರು, ಕನ್ನಡ ಸಂಘ ಕ್ರೈಸ್ಟ್ ಕಾಲೇಜ್, ಬೆಂಗಳೂರು, ೨೦೦೫.

೦೫. ವಿನಯಾ ಊರ ಒಳಗಣ ಬಯಲು, ಛಂದ ಪುಸ್ತಕ ಪ್ರಾಕಾಶನ, ಬೆಂಗಳೂರು. ೨೦೦೪

೦೬. ವೇದಾ ಎಂ.ಎಸ್, ಪ್ರೀತಿ ಮತ್ತು ಸಾವು, ಸಂವಹನ, ಪ್ರಕಾಶನ, ಮೈಸೂರು.

೦೭. ವೇದಾ ಎಂ.ಎಸ್,ಪಾಲು, ಸಂವಹನ, ಪ್ರಕಾಶನ, ಮೈಸೂರು.

೦೮. ಶಾಂತಕುಮಾರಿ, ಮುಟ್ಟು, ಸುಮುಖ ಪ್ರಕಾಶನ, ಬೆಂಗಳೂವರು, ೨೦೦೬.

೦೯. ಸುನಂದಾ ಪ್ರಕಾಶ ಕಡಮೆ, ಪುಟ್ಟ ಪಾದದ ಗುರುತು, ಛಂದ ಪುಸ್ತಕ ಪ್ರಕಾಶನ, ಬೆಂಗಳೂರು, ೨೦೦೫

೧೦. ಸುನಂದಾ ಪ್ರಕಾಶ ಕಡಮೆ, ಗಾಂಧೀ ಚಿತ್ರದ ನೋಟು, ಛಂದ ಪುಸ್ತಕ ಪ್ರಕಾಶನ, ಬೆಂಗಳೂರು, ೨೦೦೮

೧೧. ಸಂಧ್ಯಾ ಹೊನಗುಂಟಿಕರ್, ಹರಿದ ಹಾಸಿಗೆ ಹಂಬಲ, ಲೇಖಕಿಯರ ವೇದಿಕೆ, ಸಂಗಮೇಶ್ವರ ಮಹಿಳಾ ಮಂಡಳ, ಗುಲ್ಬರ್ಗಾ, ೨೦೦೮

೧೨. ಸುಮಂಗಲಾ, ಜುಮುರು ಮಳೆ, ಛಂದ ಪುಸ್ತಕ ಪ್ರಕಾಶನ, ಬೆಂಗಳೂರು, ೨೦೦೫

ಪರಾಮರ್ಶನ ಗ್ರಂಥಗಳು

೦೧. ಅಮರೇಶ ನುಗಡೋಣಿ: ಕನ್ನಡ ಸಂಶೋದನೆಯ ವೈಧಾನಿಕತೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮

೦೨. ಆರ್ಶಿಯಸ್ ಸುಂದರಂ, ಎನ್.ಎಸ್.ತಾರಾನಾಥ (ಸಂ): ಸಂಶೋಧನ ಪಥ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ೨೦೦೬

೦೩. ಉಷಾದೇವಿ ಸಿ.ಜಿ: ಮಹಿಳಾ ಸಾಹಿತ್ಯ ಸಮೀಕ್ಷೆ, ಪ್ರ.ಸಂ, ಆರ್ಯಾಂಬ ಪಟ್ಟಾಭಿ, ಸಂವಹನ ಪ್ರಕಾಶನ, ೨೦೦೪

೦೪. ಕನ್ನಡ ವಿಷಯ ವಿಶ್ವಕೋಶ: ಕರ್ನಾಟಕ (ಪರಿಷ್ಕೃತ) ಸಂಪುಟ-೧, ಮೈಸೂರು ವಿಶ್ವವಿದ್ಯಾಲಯ, ೨೦೦೫

೦೫. ಕನ್ನಡ ವಿಷಯ ವಿಶ್ವಕೋಶ: ಕರ್ನಾಟಕ (ಪರಿಷ್ಕೃತ) ಸಂಪುಟ-೨, ಮೈಸೂರು ವಿಶ್ವವಿದ್ಯಾಲಯ, ೨೦೦೫

೦೬. ಕರೀಗೌಡ ಬೀಚನಹಳ್ಳಿ: ಶತಮಾನದ ಸಣ್ಣಕಥೆಗಳ ಸಮೀಕ್ಷೆ, ಕರ್ನಾಟಕ ಸಾಹಿತ್ಯ ಆಕಾಡೆಮಿ, ಬೆಂಗಳೂರು, ೨೦೦೩

೦೭. ಗಿರಡ್ಡಿ ಗೋವಿಂದ ರಾಜ, ಸಣ್ಣಕಥೆ ಸಾಹಿತ್ಯ ಭಂಡಾರ, ಹುಬ್ಬಳ್ಳಿ

೦೮. ಗಿರಡ್ಡಿ ಗೋವಿಂದ ರಾಜ: ಕಲ್ಪಿತ ವಾಸ್ತವ, ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ, ೨೦೦೯

೦೯, ಗಿರಿಜಾ ಶಾಸ್ತ್ರಿ, ಅಧುನಿಕ ಕನ್ನಡ ಸಣ್ಣ ಕತೆಗಳು, ಒಂದು ಸ್ತ್ರೀವಾದಿ ಅಧ್ಯಯನ, ಮಂಟಪ ಮಾಲೆ -೭೯, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬

೧೦. ಜನಾರ್ದನ ಭಟ್ ಬಿ: ದಕ್ಷಿಣ ಕನ್ನಡದ ಶತಮಾನದ ಕತೆಗಳು, ಕರ್ನಾಟಕ ಸಂಘ, ಪುತ್ತೂರು, ೨೦೦೩

೧೧. ಪ್ರಸಾದ ಸ್ವಾಮಿ ಎಸ್: ಕಥೆಕಥನ, ದಾತ್ರಿ ಪುಸ್ತಕ ಪ್ರಕಾಶನ, ಬೆಂಗಳೂರು.

೧೨. ಮಲ್ಲಿಕಾ ಘಂಟಿ: ಕನ್ನಡದಲ್ಲಿ ಮಹಿಳಾ ಕಥಾ ಸಾಹಿತ್ಯ ಯಮಲೋಕ ಪ್ರಕಾಶನ, ಧಾರವಾಡ, ೧೯೯೪

೧೩. ಮೀರಾ ಎಲ್.ಜಿ: ಸ್ತ್ರೀ ಸಂವೇದನೆಯಲ್ಲಿ ಕನ್ನಡ ಕಥನ, ಶಕ್ತಿ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್, ಬೆಂಗಳೂರು, ೨೦೦೪

೧೪. ರಹಮತ್ ತರೀಕೆರೆ (ಸಂ): ಹೊಸ ತಲೆಮಾರಿನ ತಲ್ಲಣ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮

೧೫. ವೀಣಾ ಶಾಂತೇಶ್ವರ, (ಸಂ) ಶಾಂತಾ ಇಮ್ರಾಪುರ: ನಿರ್ದಿಗಂತ, ಸಂಪುಟ-೧,೨, ವೀಣಾ

೧೬. ಶ್ರೀಮತಿ ಎಚ್.ಎಸ್ (ಸಂ): ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬

೧೭. ಶೇಷಗಿರಿರಾವ್ ಎಲ್.ಎಸ್: ಹೊಸಗನ್ನಡ ಸಾಹಿತ್ಯ ಚರಿತ್ರೆ, ಅಂಕಿತ ಪ್ರಕಾಶನ, ಬಸವನ ಗುಡಿ, ಬೆಂಗಳೂರು, ೨೦೦೨

ಅನುಬಂಧ - ३

ನಿಯತಕಾಲಿಕೆಗಳು

೦೧. ಅಮೂರ ಜಿ.ಎಸ್: ಪ್ರೀತಿಯ ಮೂಲ ಲಯ, ದೇಶಕಾಲ

೦೨. ಅವಿನಾಶ್ ಟಿ: ಬದುಕಿನ ಪರಾಮರ್ಶೆಯ ಪ್ರಪಂಚ, ವಿಕ್ರಾಂತ ಕರ್ನಾಟಕ, ಸೆಪ್ಟಂಬರ್ ೨೬.೨೦೦೮

೦೩. ಗಿರೀಶ ವಿ.ವಾಘ: ಬದುಕಿಗೆ ಬದ್ಧವಾದ ಕಥೆಗಳು, ದ ಸಂಡೆ ಇಂಡಿಯನ್, ಜುಲೈ ೨೦, ೨೦೦೮

೦೪. ಚಂದ್ರಶೇಖರ ಪಾಟೀಲ (ಸಂ): ಸಂಕ್ರಮಣ, ಸಂಕ್ರಮಣ ಪ್ರಕಾಶನ, ಮೇ, ಜೂನ್, ೨೦೦೫

೦೫. ನಾಗಭೂಷಣ ಸ್ವಾಮಿ: ಕಾಮನಬಿಲ್ಲಿನ ಬಣ್ಣ, ದೇಶಕಾಲ

೦೬. ನೇಮಿಚಂದ್ರ: ಬದುಕು ಪ್ರೀತಿಯ ಕಥೆಗಳು

೦೭. ಬೈರಮಂಗಲ ರಾಮೇಗೌಡ: ಆಪ್ತವಾಗಿ ತಟ್ಟುವ ಗೃಹಿಣಿ ಗೀತ, ಪ್ರಜಾವಾಣಿ, ಜುಲೈ ३೧ ೨೦೦೫

೦೮. ಮುರಳೀಧರ ಉಪಾಧ್ಯ ಹಿರಿಯಡಕ: ನೆಮ್ಮದಿ ನೀಡುವ ಕಥೆಗಳು, ಉದಯವಾಣಿ, ಜೂನ್ ೦೧.೨೦೦೮

೦೯. ರಂಗನಾಥ ರಾವ್: ಪ್ರೀತಿ ಸಂಬಂಧಗಳ ಪ್ರಬುದ್ಧ ದೃಷ್ಟಿ, ದ ಸಂಡೆ ಇಂಡಿಯನ್, ಜುಲೈ ೨೦, ೨೦೦೮

೧೦. ರಂಗನಾಥ ರಾವ್ ಜಿ.ಎನ್: ಸಾಹಿತ್ಯ ಲೋಕದ ಭರವಸೆಯ ನೋಟ, ದ ಸಂಡೆ ಇಂಡಿಯನ್, ಸೆಪ್ಟಂಬರ್ ೦೭.೨೦೦೮

೧೧. ರಹಮತ್ ತರೀಕೆರೆ: ತುಳುಸಂಸ್ಕೃತಿಯ ಜಗತ್ತು, ಮಯೂರ, ಆಗಸ್ಟ್, ೨೦೦೫

೧೨. ರಾಮಚಂದ್ರನ್ ಸಿ.ಎನ್: ಭರವಸೆಯ ಪ್ರಥಮ ಸಂಕಲನ, ಸಾಪ್ತಾಹಿಕ ಪುರವಣಿ, ಪ್ರಜಾವಾಣಿ, ಸೆಪ್ಟಂಬರ್ ೨೦.೨೦೦೯

೧೩. ಲಂಕೇಶ್ ಪತ್ರಿಕೆ ಜನವರಿ ೧೫, ೧೯೯೭

೧೪. ವಿದ್ಯಾರಶ್ಮಿ ಪೆಲತ್ತಡ್ಕ: ಮನೆಮನದಿ ಕತೆಗೆ ಅಕ್ಕರಿಯ ಕುಸುರಿ.

೧೫. ವಿವೇಕ ಶಾನಭೋಗ: ಪ್ರಸ್ತಾವನೆ, ೨೦೦೮

೧೬. ವೀರಣ್ಣ ಮಡಿವಾಳ: ಭಾವ ಸಮೀಕರಣದ ವಿಶಿಷ್ಟ ಸಾಧ್ಯತೆಗಳು, ಲಂಕೇಶ್ ಪತ್ರಿಕೆ, ಸೆಪ್ಟಂಬರ್ ೨೦.೨೦೦೮

೧೭. ಸಬಿಹಾ: ಮೀಯುವ ಆಟ, ಹೊಸತು, ನವಕರ್ನಾಟಕ ಪ್ರಕಾಶನ, ೨೦೦೫

೧೮. ಸುಜಾತ ಲಕ್ಷ್ಮೀಪುರ: ಹೊಸತು ಮಾಸ ಪತ್ರಿಕೆ, ಆಗಸ್ಟ್ ೨೦೦೮,